UNIVERSAL LIBRARY
OU_200397
UNIVERSAL LIBRARY

ಮನೋಹರ ಗ್ರಂಥಮಾಲೆಯ ನಾಲ್ವನೆಯ ಕುಸುಮ.

# ಬಾಳುರಿ

ಅಥವಾ

# ಜೀವನ ಜ್ವಾಲೆ

**ರಂಗನಾಥ ಶ್ರೀ. ಮುಗಳಿ**

ಎಂ. ಎ. ಬಿ. ಟಿ.

ಫೆಬ್ರುವರಿ ೧೯೩೪ | [ ಬೆಲೆ ೧೨ ಆಣೆ

ಮುದ್ರಕರು:-
**ಬಳವಂತ ನಾರಾಯಣ ಬಾಗಲವಾಡಿ**
ಮೋಹನ ಮುದ್ರಣಾಲಯ,
ಧಾರವಾಡ

ಸಂಪಾದಕರು:-
**ಬೆಟಗೇರಿ ಕೃಷ್ಣ ಶರ್ಮ**
**ಗೋವಿಂದ ಭೀ. ಜೋಶಿ**

ಪ್ರಕಾಶಕರು:-
**ಗೋವಿಂದ ವೆಂಕಟೇಶ ಚುಳಕಿ**
ಮನೋಹರ ಗ್ರಂಥಮಾಲಾ ಕಾರ್ಯಾಲಯ
ದೇಸಾಯಿ ಓಣಿ, ಧಾರವಾಡ

# ಬಿನ್ನಹ

ಮುದ್ರಣಾಲಯದಲ್ಲಿ ಒದಗಿದ ಆಕಸ್ಮಿಕವಾದ ಅಡಚಣೆಗಳಿಂದ 'ಬಾಳುರಿ'ಯು ಹೊರಕ್ಕೆ ಹೊರಡಲು ೧೦-೧೫ ದಿನಗಳ ತಡೆಯಾಯಿತು. ಓದಲು ಆತುರರಾಗಿ ಕುಳಿತವರನ್ನು ದಾರಿಕಾಯಲು ಹಚ್ಚಿದುದಕ್ಕಾಗಿ ಕ್ಷಮೆಯನ್ನು ಕೋರುತ್ತೇವೆ. ಐದನೆಯ ಕುಸುಮವನ್ನು ಏಪ್ರಿಲ್ ೧ನೆಯ ತಾರೀಖಿಗೆ ವಾಚಕರ ಕೈಯಲ್ಲಿ ಕೊಟ್ಟೇತೀರಬೇಕೆಂದು ನಮ್ಮ ಸಂಕಲ್ಪವಿದೆ. ಆ ಬಗೆಯ ಏರ್ಪಾಡನ್ನೂ ಮಾಡಲಾಗಿದೆ.

"ಬಾಳುರಿ"ಯು ಇಂದಿನ ಸುಶಿಕ್ಷಿತ ತರುಣರ ಮುಂದೆ ಭೀಕರವಾಗಿ ನಿಂತಿರುವ ನಿರುದ್ಯೋಗಪ್ರಶ್ನೆಯದೊಂದು ವಾಸ್ತವಚಿತ್ರ. ನಿರುದ್ಯೋಗದ ತೊಡಕನ್ನು ಬಿಡಿಸುವಂತಹ ಸುಶಿಕ್ಷಣವು ನಮಗಿಂದು ಬೇಕಾಗಿದೆ. ಅಂತಹ ಯಾವ ಕ್ರಮವನ್ನು ನಾವಿಂದು ಅನುಸರಿಸಬೇಕೆಂಬುದನ್ನು ನಮ್ಮ ನಾಡಿನ ಹಿರಿಯ-ಕಿರಿಯರು ಅವಶ್ಯವಾಗಿ ವಿಚಾರ ಮಾಡಬೇಕಾಗಿದೆ. 'ಬಾಳುರಿ' ಅಂತಹ ವಿಚಾರಪ್ರಚೋದನೆಗೆ ಕಾರಣವಾದರೆ ಸಾಕು ! ಆಗದಿರದೆಂದು ನಮ್ಮ ಭರವಸೆ.

ಶ್ರೀ. ರಂಗನಾಥ ಮುಗುಳಿಯವರು ನಮ್ಮ ಗ್ರಂಥಮಾಲೆಯ ತೀರ ಬಳಿಯ ಬಳಗಕ್ಕೆ ಸೇರಿದವರು. ಮಾಲೆಯ ಉನ್ನತಿ-ಅವನತಿಗಳಿಂದಾಗುವ ಆನಂದ-ವ್ಯಸನಗಳಲ್ಲಿ ಅವರೂ ಒಬ್ಬರು ಪಾಲುಗಾರರು. ಅವರು ನಮ್ಮ ಅಭಿನಂದನೆಗಳನ್ನಪೇಕ್ಷಿಸದಿದ್ದರೂ– ಈ ಗ್ರಂಥವನ್ನೊದವಿಸಿ ಕೊಟ್ಟುದಕ್ಕಾಗಿ– ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳನ್ನು ಸಲ್ಲಿಸದಿದ್ದರೆ ನಾವು ನಮ್ಮ ಕರ್ತವ್ಯವನ್ನು ಮೀರಿ ನಡೆದಂತೆ.

ನಮ್ಮ ಮೂರನೆಯ ಕುಸುಮವಾದ '**ತ್ರಿಪುರದಹನ**'ವನ್ನು ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರು ಎಲ್ಲ ಪಾಠಶಾಲೆಗಳ ವಾಚನಾಲಯಗಳ ಉಪಯೋಗಕ್ಕಾಗಿ ನಿಯಮಿಸಿರುವುದೊಂದು ಸಂತೋಷದ ಸಂಗತಿ. ಇದಕ್ಕಾಗಿ ಅವರಿಗೆ ತುಂಬ ಅಭಿನಂದನೆ.

ಸಾಧನಕೇರಿ, ಧಾರವಾಡ
ತಾ. ೨೫-೩-೧೯೩೪

**ಸಂಪಾದಕರು**
ಮನೋಹರ ಗ್ರಂಥಮಾಲಾ

# ಕನ್ನಡಿಗರಲ್ಲಿ ಅರಿಕೆ

ಕರ್ನಾಟಕದಲ್ಲಿಯ ಎಲ್ಲ ಭಾಗದಿಂದಲೂ ಜಾನಪದ ಕಥೆಗಳನ್ನು ಆಯ್ದು, ಅದರದೊಂದು ಸಂಗ್ರಹವನ್ನು ನಮ್ಮ ಮಾಲೆಯ ಮುಖಾಂತರವಾಗಿ ಪ್ರಕಟಿಸಬೇಕೆಂದಿದ್ದೇವೆ. ಇದಕ್ಕಾಗಿ ಬೇರೆ ಬೇರೆ ಭಾಗಗಳಲ್ಲಿರುವ ಕನ್ನಡಿಗರ ನೆರವು ನಮಗೆ ಬೇಕಾಗಿದೆ. ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ರೂಢವಾಗಿರುವ ಹಳ್ಳಿಯ ಕಥೆಗಳನ್ನು, ಹಳ್ಳಿಗರ ಭಾಷಾ ಸಂಪ್ರದಾಯವನ್ನು ಮೀರದ ಹಾಗೆಯೆ ಸಂಗ್ರಹಿಸಿ ಬರೆದು, ನಮ್ಮ ಕಡೆಗೆ ಕಳುಹಿಸಬೇಕು. ನಗೆ, ಅಳುವು, ಅಚ್ಚರಿ, ಪ್ರೀತಿ, ತುರುವು ಈ ಭಾವಗಳು ಸುಂದರವಾಗಿ ಬೆಳೆದು ಬಂದ ಕತೆಗಳನ್ನೇ ಸಂಗ್ರಹಿಸಬೇಕು. ಅಶ್ಲೀಲತೆಯನ್ನೊಳಗೊಂಡ ಕತೆಗಳಿರಲಾಗದು. ಬಂದಕತೆಗಳಲ್ಲಿ ನಮಗೆ ಯುಕ್ತವೆಂದು ತೋರಿದುವುಗಳನ್ನು ಆರಿಸಿ ಪ್ರಕಟಿಸುವೆವು. ಪ್ರಕಟಿಸಿದ ಕತೆಗಳನ್ನು ಕಳುಹಿಸಿದವರಿಗೆಲ್ಲ ಒಂದೊಂದರಂತೆ ಆ ಕಥಾಸಂಗ್ರಹವನ್ನು ಉಚಿತವಾಗಿ ಕಳುಹಿಸುವೆವು. ಕನ್ನಡಿಗರೆಲ್ಲರೂ ನಮ್ಮ ಕಾರ್ಯಭಾರಕ್ಕೆ ಕೈಹಚ್ಚಬೇಕಾಗಿ ಪ್ರಾರ್ಥನೆ.

ಸಂಪಾದಕರು

**ಮನೋಹರ ಗ್ರಂಥಮಾಲಾ ಧಾರವಾಡ**

# ಮುನ್ನುಡಿ

ಹೊಟ್ಟೆಯ ಬೇಗೆಯು ಭೂಮಿಯ ಸುತ್ತೆಲ್ಲ ಹಬ್ಬಿದೆ- ಅನೇಕ ಮುಖವಾಗಿ, ಅಗಾಧಸಮಸ್ಯೆಯಾಗಿ. ಹೊಟ್ಟೆಗಿದ್ದವರು ಇದ್ದಾರೆ, ಹೊಟ್ಟೆಗಿಲ್ಲದವರು ಹೆಚ್ಚುತ್ತಿದ್ದಾರೆ. ಆ ಹೆಚ್ಚುವವರ ಗೋಳು ಜಗದ ಮನೆಯನ್ನು ಅಮಂಗಲಗೊಳಿಸಿದೆ. ಇದೇನು, ಯಾಕೆ ಇಲ್ಲಿರಬೇಕೆಂದು ರುಷ್ಟಜೀವವು ಕೇಳುತ್ತಿದೆ. ಸಾವಿನಮನೆಯ ಔತಣವನ್ನು ಬಯಸಿ ದಿನವೂ ಕೂಗುವ ಬಾಯಿಗಳೆಷ್ಟೋ! ಇಂಥಲ್ಲಿ ಕರುಳುಳ್ಳ ಯಾವನಾಗಲಿ ತನಗೆ ದೊರೆವ ತುತ್ತು ಅನ್ನವನ್ನು ತಣಿದುಂಡು ತೇಗಲಾರ. ತನ್ನ ಸುತ್ತು ಸುಖದ ಕೋಟೆಯನ್ನು ಕಟ್ಟಿಕೊಂಡು ತಾನು ಭದ್ರನೆಂದು ಇರಲಾರ. ನಾಲ್ಕು ಕಣ್ಣೀರನ್ನಾದರೂ ಇಡುವನು. ಎದೆಕರಗಿ ತನ್ನ ತುತ್ತಿನ ಒಂದು ಪಾಲನ್ನು ಇನ್ನೊಬ್ಬರಿಗೆ ಕೊಡುವನು. ಅದು ಸಾಲದೆ 'ಕ್ರೂರಭವ್ಯಸೃಷ್ಟಿಯೇ!' ಎಂದು ಒರಲುವನು. ಅಂಥ ಒಂದು ಒಡಲ ಬೇಗೆಯಿಂದ ಈ 'ಜಾಳುರಿ' ಹೊರಹೊಮ್ಮಿದೆ.

ಆದರೆ ಕೊನೆಯಿಲ್ಲದ ಗಾಳಿಯನ್ನು ಕೊಡವೊಂದು ಎಷ್ಟು ತುಂಬಿ ತೋರಬಲ್ಲದು? ಅಂತೇ ಇಲ್ಲಿ ಆ ಹೊಟ್ಟೆಯ ಪ್ರಶ್ನೆಯ ಒಂದು ಬಗೆಯು ರೂಪುಗೊಂಡಿದೆ. ಅದೆಂದರೆ, ಹೊಸಪೀಳಿಗೆಯ ಕಲಿತ ತರುಣರ ನಿರುದ್ಯೋಗ, ನೌಕರಿಯೆಂಬ ಜೀವನನೌಕೆಯ ಶೋಧಸಾಹಸ, ಮುಖ್ಯವಾಗಿ ತೊಳಲುವ ಬಡವ (ಜಗನ್ನಾ), ಜಾಣ ಅರಸಿಗ (ಅನಂತ), ಪೌಲಿನ ಉಡಾಳ (ಕಾಮಣ್ಣಾ), ನಿಶ್ಚಿಂತ ಸೋಮಾರಿ (ಜಯರಾಯ) ಎಂಬ ತರುಣಜೀವನದ ನಾಲ್ಕು ಪ್ರಕಾರಗಳನ್ನು ಚಿತ್ರಿಸಲು ಯತ್ನಮಾಡಿದೆ. ಇವರಲ್ಲಿ ಜಗನ್ನಾನ ಕತೆಯೇ ಹೆಚ್ಚು. ಅವನೊಡನೆ ಸಂಬಂಧ ಬರುವ ಕುಬೇರರಾಯರ ಪ್ರಪಂಚಚಿತ್ರವು ಉಪಕಥೆಯಂತಾಗಿ, ಸಮಗ್ರ ಕರುಣೆಗೆ ನೆರವಾಗಲೆಂದು ಇದೆ.

ಇಲ್ಲಿ ಬಳಸಿದ ಭಾಷೆಯು ಪ್ರಯೋಗರೂಪವಾಗಿದೆ. ಉತ್ತರ ಕರ್ಣಾಟಕದ ಮನೆಮಾತಿಗೆ ಒಂದು ಕಟ್ಟಳೆಯ ಮೇರೆಗೆ ತಿದ್ದಿದ ಮಾತಿನ

ರೂಪಕೊಡುವುದೇ ಅದರ ಉದ್ದಿಷ್ಟ. ಆ ಕಟ್ಟಳೆಯೆಂದರೆ: ಲೇಖಕನು ತಾನಾಡುವಾಗ, ಪ್ರೌಢತೆಯ ತೋರಿಕೆಯಿಂದ ಸ್ವಾಭಾವಿಕವಾದ ಕಥನ ಸರಣಿಯು ಅಳಿಯದಂತೆ ಮಾತು ತಿಳಿಯಾಗಬೇಕು, ಮುಕ್ಕಾಲು ಪಾಲು ಶುದ್ಧೀಕೃತವಾಗಿ ನಿಲ್ಲಬೇಕು. ಆದರೆ ಪಾತ್ರಗಳು ಆಡುವಾಗ, ಅವರವರ ಶಿಕ್ಷಣ ಸಂಸ್ಕೃತಿಗಳ ಪ್ರಕಾರ ಆ ತಿಳಿಯು ಹೆಚ್ಚುಕಡಿಮೆ ಯಾಗುತ್ತ ಒಮ್ಮೊಮ್ಮೆ ಬಳಕೆಯನ್ನೆ ಅನುಕರಿಸಬಹುದು. ಪಾತ್ರಗಳ ಬಾಯಲ್ಲಿ ಯಾವಾಗಲೂ ರೂಢಶೈಲಿಯನ್ನೇ ತರುವುದರಿಂದ ಇಡಿಯ ಕನ್ನಡಜನಕ್ಕೆ ಅದರ ಸೊಲ್ಲು ಕೇಳದು, ಶೈಲಿಯ ವೈವಿಧ್ಯವು ತೋರದು. ಇಲ್ಲಿ ಬೇಕಾದುದು ಪ್ರೌಢತೆ ಸಹಜತೆಗಳ ನಡುವಣ ಸಮತೆ. ಅದಕ್ಕಾಗಿ ಪ್ರಯೋಗವನ್ನು ಹೂಡಿದೆ. ಕೆಲವುಕಡೆಗಳಲ್ಲಿ ಬೇಡಾದ ಪ್ರೌಢತೆ ಬಂದಿರಬಹುದು, ಬೇರೆಕಡೆ ತಿದ್ದಬಹುದಾದ ಸಹಜತೆ ಇರಬಹುದು. ಇನ್ನೂ ಕೆಲವೆಡೆ, ಎರಡರ ಮಿಶ್ರಣವಾಗಿ ವಿಷಮತೆಯು ಒಡೆದು ತೋರುತ್ತಿರಬಹುದು. ಹೀಗಾಗಿ ಉಳಿದ ಕೊರತೆಗಳಿಗೆ ಓದುಗರ ಕ್ಷಮೆ ಕೋರುವೆನು.

ಇದನ್ನು ಪ್ರಕಟಿಸಿ ರಸಿಕಕುಲಕ್ಕೆ ಅರ್ಪಿಸಿದ್ದಕ್ಕಾಗಿ ಮನೋಹರ ಗ್ರಂಥಮಾಲೆಯವರಿಗೆ ನಾನು ಬಹಳ ಕೃತಜ್ಞನಾಗಿರುವೆನು.

ವಿಲಿಂಗ್ಡನ್ ಕಾಲೇಜ, ಸಾಂಗಲಿ.
ತಾ. ೯-೨-೩೪

ರಂ. ಶ್ರೀ. ಮುಗಳಿ.

# ಬಾಳುರಿ

ವರ್ಷದಲ್ಲಿ ಸುಮಾರು ೧೫೦ ಪುಟಗಳುಳ್ಳ ಆರು ಸರಸಗ್ರಂಥಗಳು

ವಾರ್ಷಿಕ ಚಂದಾ ಅಂಚೆಯವೆಚ್ಚ ಸೇರಿ ೩-೮-೦

ಮನೋಹರ ಗ್ರಂಥಮಾಲೆಯ ಐದನೆಯ ಕುಸುಮ

ವಂಗ ಸಾಹಿತ್ಯ ಸಮ್ರಾಟರಾದ

**ಶ್ರೀಶರಚ್ಚಂದ್ರ ಚಟ್ಟರ್ಜಿಯವರ**

# ಬ್ರಾಹ್ಮಣರ ಹುಡುಗಿ

ಎಂಬ

**ಸಾಮಾಜಿಕ ಕಾದಂಬರಿ**

ಅನುವಾದಿಸಿದವರು:

**ಆರ್. ವ್ಯಾಸರಾಯರು ಬೆಂಗಳೂರು.**

# ಬಾಳುರಿ

## ೧ನೆಯ ಕಿಡಿ

೧೯೩೧ನೆಯ ವರ್ಷದ ಖಾನೇಸುಮಾರಿಯ ಕಾಲ. ಕೆಲಸವಿಲ್ಲದೆ ತಿರುಗುವ ಕೆಲ ಜನರ ಮೋರೆ ಹಿಗ್ಗಿದೆ; ಎಷ್ಟೋ ಜನ್ಮಗಳಿಂದ ತಾವು ಬೇಡುತ್ತ ಬಂದ ಸರಕಾರದ ಹುದ್ದೆಗಾರಿಕೆಯು-ಎಷ್ಟೋ ಆಗಲಿ-ದೊರೆಯಿತಲ್ಲ, ಈ ಮೊಳಕೆ ಮರವಾದೀತು ಎಂಬ ಭಾವನೆಯಿಂದ ಇರಬಹುದು. ಇದ್ದ ಕೆಲಸ ಬಿಟ್ಟು ಖಾನೇಸುಮಾರಿಯಲ್ಲಿ ತೊಡಗಿದ ಬೇರೆ ಕೆಲವರು 'ಇದೇನು ಬಂದಿತು ರಿಪಿ!' ಎಂದು ಅದು ತೀರುವ ದಿನದ ದಾರಿ ನೋಡುತ್ತ ಓಣಿಓಣಿ ತಿರುಗುತ್ತಿರುವರು. ಈ ಸರಕಾರೀ ಸ್ವಯಂ ಸೇವಕರಲ್ಲಿ ಗೆಲವೂರಿನ ಜಗಣ್ಣನೊಬ್ಬನು. ಹೆಚ್ಚುಕಡಿಮೆ ಅವನು ಮೊದಲನೆಯ ತರದವನು, ನೌಕರಿ ಎಂಬ ಬಿಸಿಲುಗುದುರೆಗಾಗಿ ಇದೇ ಮೊದಲು ಓಡತೊಡಗಿದ ಅಚ್ಚುಹರೆಯದ ಕುದುರೆ!

ಗೆಲವೂರು ಸಣ್ಣದಲ್ಲ, ಜಿಲ್ಲೆಯ ಸ್ಥಳ, ಜನವಸತಿ ನಾಲ್ವತ್ತುಸಾವಿರದ ವರೆಗೆ ಎಂದು ಹೇಳುತ್ತಾರೆ. ಹಾಗೆ ಹೇಳುವವರೆಲ್ಲ ತಮ್ಮ ತಮ್ಮ ಮನಸ್ಸಿನಲ್ಲಿ ಕಾಯಾಸದ ಲೆಕ್ಕಣಿಕೆ ಹಿಡಿದು, ಕೇಳಿದಾಗೊಮ್ಮೆ ಖಾನೇಸುಮಾರಿ ಮಾಡಿಯೇ ಹೇಳುತ್ತಾರೆ, ಅದು ಬಾಯಿಬಾಯಿಗೆಲ್ಲ ಬೇರೆ ಬೇರೆಯಾಗುತ್ತದೆ. ಬೇರೆಯಾದರೂ ಅವರಿಗೇನು ದುಃಖವಿಲ್ಲ, ಇದ್ದೀತು ಸಾವಿರ ಹೆಚ್ಚು ಸಾವಿರ ಕಡಿಮೆ. ಕ್ಷಣಕ್ಕೊಮ್ಮೆ ಜನರು ಹುಟ್ಟುತ್ತಾರೆ, ಸಾಯುತ್ತಾರೆ. ಅವರ ಲೆಕ್ಕವನ್ನು ಇಟ್ಟು ಎಷ್ಟು ಪೂರೈಸೀತು, ಮಳೆಹುಳಗಳನ್ನು ಎಣಿಸಿದಂತೆ. ಇವರ ಕಣ್ಣಿಗೆ ಈ ಖಾನೇ

ಸುಮಾರಿಯು ಸಣ್ಣಹುಡುಗರ ಮಣ್ಣುಗುಂಪಿನ ಆಟದಂತೆ ತೋರಿತು. 'ಎಲ್ಲಾ ಖಾಲೀ ಕೆಲಸ!' ಎಂದು ಇವರು ಬೊಳ್ಳನೆ ನಕ್ಕುಬಿಡುವದೇ ಬಹಳ. ಆದರಂತೆ, ಕಾಲಕ್ಕೆತಕ್ಕ ಶಿಷ್ಟಾಚಾರವೆಂದು ಖಾನೇಸುಮಾರಿಯ ಮಹಾಗ್ರಂಥಗಳನ್ನು ಹೊತ್ತು ಮನೆಗೆ ಹೋಗುವದೂ ಬಹಳ.

ಆದರೆ ಜಗಣ್ಣನಿಗೆ ಅದೇಕೊ ಜನಗಣನೆಯ ಹೊಸರೀತಿಯಲ್ಲಿ ಒಂದು ಮೋಹವುಂಟಾಗಿದೆ. ಅವನು ಬುದ್ಧಿ ಬಲಿತ ಮೇಲೆ ಕಂಡ ಮೊದಲನೆಯ ಖಾನೇಸುಮಾರಿಯಿದು. ಈಗ ಆತನಿಗೆ ಹದಿನೆಂಟು ವರುಷಗಳು; ಹತ್ತು ವರುಷಗಳ ಹಿಂದೆ ಬಂದುಹೋದ ಈ ಹೊಸಕಾಲದ ಕನ್ಯಾಗತವು ಅವನಿಗೆ ತಿಳಿಯದೆ ಹೋದದ್ದೇನು ಆಶ್ಚರ್ಯವಲ್ಲ. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ನಪಾಸಾಗಿ, ಮುಳುಮುಳು ಅತ್ತು, ಫೇಲೆಂಬ ಬೇನೆಯು ಬೆನ್ನಟ್ಟಿದವನಂತೆ ಹೊರಗೆ ಮೋರೆ ತೋರಿಸಲಾರದೆ ಮನೆ ಹಿಡಿದು ಕುಳಿತ ಹುಡುಗನವನು; ಹಾಗೆ ಒಂದೆರಡು ತಿಂಗಳು ಕಳೆದ ಮೇಲೆ ಹೊರಬೀಳಲು ಮನಸ್ಸಾಗಿ, ಸಾಲೆಯ ಕಟ್ಟೆಯನ್ನು ಮಾತ್ರ ಏರುವ ಮನಸ್ಸಿಲ್ಲದೆ, ನೌಕರಿಯ ಹುಚ್ಚಿನಿಂದ ಊರೂರು ತಿರುಗಿ, ಸಿಕ್ಕವರ ಕಾಲುಹಿಡಿದು ಏನೂ ಸಿಗದೆ, ಕಾಶಿಗೆ ಹೋಗಿ ಕಾಸು ಪುಣ್ಯವು ಕೂಡ ದೊರೆಯದೆ ಬಂದ ಯಾತ್ರಿಕನಂತೆ ಆದವನು. ಇಂಥವನಿಗೆ ಖಾನೇಸುಮಾರಿಯ ಕೆಲಸವು ಹಸಿದವನ ಬಾಯಲ್ಲಿ ಹಣ್ಣುಬಿದ್ದಂತೆ ಆಗಿರಬೇಕು. ಅಂತೂ ಅದರಲ್ಲಿ ಅವನಿಗಿದ್ದ ಹೊಸ ಹುರುಪು ಗೆಲವೂರಲ್ಲಿ ಇನ್ನೊಬ್ಬರಿಗಿರಲಿಲ್ಲ ಎಂಬದು ನಿಜ.

ಊರಲ್ಲಿ ಜನಗಣನೆಗೆ ಸರಿಹೋಗುವಂತೆ ಎಷ್ಟೋ ಭಾಗಗಳನ್ನು ಮಾಡಿ, ಜಗಣ್ಣನಿಗೆ ಒಂದು ವಾರ್ಡನ್ನು ಒಪ್ಪಿಸಿದ್ದರು. ಉಳಿದನೇಕರು ತಮ್ಮ ಬಿಡುವೇಳೆಯಲ್ಲಿ ತಮ್ಮ ಭಾಗದ ಕೆಲಸವನ್ನು ಮಾಡುತ್ತಿದ್ದರು. ಆದರೆ ಜಗಣ್ಣನು ಮಾತ್ರ ಏಕತಾನಿ. ಮುಂಜಾನೆ ಎದ್ದು ಸ್ನಾನ ಸಂಧ್ಯೆ ತೀರಿಸಿ, ಪುರಾಣಕ್ಕೆ ಹೋಗುವ ಪೆನ್ಶನ್ ಜನರ ಲಾಲಸೆಯಿಂದ ತನ್ನ ಕೆಲಸಕ್ಕೆ ಹೋಗುತ್ತಿದ್ದನು. ಅವನ ಹುಚ್ಚು ದಕ್ಷತೆಯನ್ನು ನೋಡಿ ನಗದವರು ಇಲ್ಲ. 'ಆಯ್ತು, ಬಡ ಹುಡುಗ, ಮುಂದೆ ಫಾಯದೇ

ಆದೀತು; ಪ್ರಪಂಚ ಕೊರಳಿಗೆ ಬೀಳುವದು.' ಎಂದು ಅವನು ಮನೆಯ ಮುಂದೆ ಹಾದು ಹೋಗುವಾಗ ಅವನನ್ನು ಕಂಡು, ಬಾಯೊಳಗಿನ ತಂಬಾಕದ ಕಾರಂಜಿಯನ್ನು ಹೊರಗೆ ಬಿಡುತ್ತ, ಒಬ್ಬ ಹಿರಿಯ ಅನುಭವಿ ಕರು ಕುಳಿತವರಿಗೆ ಹೇಳುತ್ತಿದ್ದರು. ಜಗನ್ನಾಸಿಗೆ ಅವರ ಆಶೀರ್ವಾದವು ಬೇಕೇ ಇತ್ತು; ಅವರ ಪ್ರಸಾದವಂತೂ ಆತನ ಹಿಂದೆ ಕೆಂಪು ಥಳಿಯಾಗಿ ಬೀಳುತ್ತಲೇ ಇತ್ತು!

ಜಗನ್ನಾಸಿಗೆ ಮೊನ್ನೆಮೊನ್ನಿನ ಅನುಭವದ ಚುರುಕಿನಿಂದ ಜಗತ್ತು ಹೇಗಿದೆ ತಿಳಿದುಕೊಳ್ಳಬೇಕೆಂಬ ಕಡೆ ಒಲವು ಹರಿದಿದೆ. ಅದಕ್ಕೆ ಜನಗಣನೆಯ ಕೆಲಸದಲ್ಲಿ ಸಹಜವಾಗಿ ಪುಟದೊರೆಯಿತು. ಒಂದೊಂದು ಮನೆ ಹೊಕ್ಕೊಡನೆ, ನಿಯಮದಂತೆ ಕೇಳಿ ಬರೆದುಕೊಳ್ಳಬೇಕಾದ ಹೆಸರು–ದಸೆಗಳನ್ನು ಕೇಳುವಾಗ ಅದೆಂಥ ಕುತೂಹಲವು ಅವನಲ್ಲಿ! ತಾನು ಇರುವಷ್ಟು ಹೊತ್ತು ಆ ಮನೆಯನ್ನು ಮೈತುಂಬ ಕಣ್ಣುಗಳಿಂದ ನೋಡಬೇಕೆಂಬ ಉತ್ಸಾಹ ಎಂಥದು! ಮುಂದೆ ಮನೆಯಿಂದ ಮನೆಗೆ ಹೋಗುವಾಗ ರಾಷ್ಟ್ರಕಾರ್ಯವೊಂದನ್ನು ಕೈಕೊಂಡು ಹಣದಬಿಕ್ಕೆಗೆ ಹೊರಟ ತರುಣನಂತೆ ಕಾಲಹೆಜ್ಜೆಗಳ ವೇಗವೆಷ್ಟು!

ಜನಗಣನೆಯ ಕಡೆಯ ದಿನ–ಮಾರ್ಚ ಹದಿನೆಂಟು–ಬಂದಿತು, ಕಡೆಯ ರಾತ್ರಿಯೂ ಬಂದಿತು. ಕೆಲಸಗಾರರಿಗೆ ಅದು ಕತ್ತಲರಾತ್ರಿಯೇ ಆಗಿ ಬಂದಿತು, ಬೆಳದಿಂಗಳ ದಿವಸಗಳಿರಲಿಲ್ಲ. 'ಆಯಿತು, ಇದೊಂದು ರಾತ್ರಿ ದುಡಿದರೆ ಮುಗಿಯಿತಲ್ಲ, ಮುಂದೆ ಖಾನೇಸುಮಾರಿಯನ್ನು ಮುಗಿದು, ಸತ್ಯನಾರಾಯಣ ಪೂಜೆಯೇ ಮಲಗೋಣ' ಎಂದು ಅದರ ಕೈಯಲ್ಲಿ ಸಿಕ್ಕ ಜೈನೀಪ್ರಿಯರು ರಾತ್ರಿಯ ಊಟ ತೀರಿಸಿ, ಮೇಲೆ ಚಹಾ ಕುಡಿದು ನಿದ್ದೆಗೆಡುವ ಸಿದ್ಧತೆ ಮಾಡಿಕೊಂಡರು. ಕೆಲಸವೆರಡೇತಾಸಿನದಿರಲಿ, ಜಾಗರಣೆಯ ಸಿದ್ಧತೆ ಇರಬೇಕೆಂದು ಅವರ ಜಾತಿತತ್ತ್ವ. ನಿದ್ದೆಯ ಹೊತ್ತು ಮೀರಿದ ಮೇಲೆ ಕೆಲಸ ತೀರಿದರೇನು ತೀರದಿದ್ದರೇನು, ಬೆಳಗಿನ ವರೆಗೆ ಗೊಂದಲ ಹಾಕಿ, ಸುಟ್ಟ ಚುಟ್ಟಗಳ ರಾಸಿಯಿಂದ ಐಷಆರಾಮದ ಅಧಿದೇವತೆಯಾದ ಭೂಲೋಕದ ಭವಾನಿಯನ್ನು—ಚಹಾ

ದೇವಿಯನ್ನು— ತಣಿಸಬೇಕೆಂದು ಅವರ ಯೋಚನೆ. ಈ ಸಂಘದಲ್ಲಿ ಜಗಣ್ಣನ ಸಾಲೆಯ ಸ್ನೇಹಿತನಾದ ಜಯರಾಯನೂ ಇದ್ದನು.

ಜಯರಾಯನು ಇಂಗ್ಲಿಷ ನಾಲ್ಕನೆಯ ಈಯತ್ತೆಯ ವರೆಗೆ 'ವಶೀಲಿ' ಎಂಬ ಈಸ-ಗುಂಬಳದಿಂದ ಈಸಿ, ಮುಂದೆ ಕೈಸೋತು ಸಾಲೆ ಬಿಟ್ಟ ಶ್ರೀಮಂತ ಹುಡುಗನು. ನಾಲ್ಕನೆಯ ಈಯತ್ತೆಯಲ್ಲಿ ಸಂಸ್ಕೃತದ ಮೊಸಳೆ ಗಂಟುಬಿದ್ದಿತು. ಆಗಂತೂ ಅವನು ನಿಶ್ಚಯ ಮಾಡಿದನು: 'ತನ್ನ ಕೈಯಿಂದ ಈ ಶಿಕ್ಷಣದ ಸಾಗರವು ದಾಟಲಿಕ್ಕೆ ಆಗದಂಥದು ಸಂಸಾರ ಸಾಗರವೇ ಅದಕ್ಕೂ ಸುಲಭವೆಂದು' ಹದಿನಾರು ಹದಿನೇಳುವರ್ಷಕ್ಕೆ ಮದುವೆಯನ್ನು ಮಾಡಿಕೊಂಡು, ತಂದೆ ತೀರಿದ್ದರಿಂದ ಮನೆತನಕ್ಕೆ ತಾನೇ ಮಾಲಕನಾಗಿ ಸುಖವಾಗಿದ್ದನು. ನಿಜವಾಗಿಯೇ ಜಯರಾಯನು ಸುಖಪುರುಷನು; ತಾಯಿಯೊಮ್ಮೆ ಪ್ರಾಣಾಂತಿಕವಾಗಿ ಮಲಗಿದಾಗ ಮಂದಿ ಬಂದು 'ಎಂಥ ಒಳ್ಳೆಯ ಮುದುಕಿ!' ಎಂದು ಅತ್ತು ಹೋದರೆ ಹೊರತು, ಇವನು ಪಿಟ್ಟೆಂದು ಅಳಲಿಲ್ಲ. ಯಥಾಪ್ರಕಾರವಾಗಿ ತನ್ನ ಚಹಾ-ಚುಟ್ಟಗಳ ಪ್ರಪಂಚದಲ್ಲಿ ಇರುತ್ತಿದ್ದು, ಕೇಳಿದವರಿಗೆ 'ಅವಳಿಗೆ ಏನಾಗಿದೆ ಏಳ್ರಿ!' ಎಂದು ಹೇಳಿ ಹಾರಿಸಿ ಬಿಡುತ್ತಿದ್ದ. ಹಾಗೆ ಆಗಿಯೂ ಆಯಿತು, ತಾಯಿ ಬದುಕಿದಳು. ಜಯರಾಯನ ಜೋಡಿಯಿದ್ದವರಿಗೆ ಚಿಂತೆಮುಂಬಳಿಯ ಮಾತು ಆಡುವ ಪರವಾನಿಗೆಯೇ ಇರಲಿಲ್ಲ. ಆಡಿದರೆ ಸಿನೇಮಾ ಸರ್ಕಸ್ಸು ಮೊದಲಾದ ಸುಖಸಾಧನಗಳ ಸುದ್ದಿ.

ಹೀಗೆ ಇರುತ್ತಿರಲು, ಈ ಸೆನ್ಸಸ್ಸು ಬಂದಿತು. ಜಯರಾಯನ ಹರಟೇಸಂಘದಲ್ಲಿ ಮಾತಿಗೆ ಮಾತು ಹೊರಟು ಜಗಣ್ಣನ ನೆನಪಾಗಿ, ಜನಗಣನೆಯ ನೆನಪಾಯಿತು. 'ನಾವೂ ಒಬ್ಬಿಬ್ಬರು ಅದರಲ್ಲಿ ಸೇರಬಾರದೇಕೆ ಜಯರಾಯಾ?' ಎಂದೊಬ್ಬ ಕೇಳಿದನು. 'ಹೌದು, ನಾ ಮೊದಲು ಕೈಯೆತ್ತುವೆ' ಎಂದು ಜಯರಾಯನು ತನ್ನ ಸಮ್ಮತಿ ತೋರಲು, ಠರಾವು ಪಾಸಾಗಿ ಬಿಟ್ಟಿತು. ಜಯರಾಯನ ಮತಕ್ಕೆ ಅಂಥ ಬಲವಿತ್ತು. ಆಯ್ತು, ತಾವಾಗಿಯೇ ಹೆಸರು ಕೊಟ್ಟು ಸೇರಿದರು. ಆದರೆ ಅದು ಹೇಗೆ ಎನಿಸಿತೆಂಬದರ ಪೂರ್ಣ ಕಥೆಯನ್ನು – ಸಪ್ತಾಹ ಮಾಡಿ–

ಜಯರಾಯನಿಂದಲೇ ಕೇಳಬೇಕು. ಯಾರಾದರೂ ಆ ಸುದ್ದಿಯೆತ್ತಿದರೆ, ಅವನು ಎರಡೂ ಗಲ್ಲಬಡಿದುಕೊಂಡು 'ತೋಬಾ, ತೋಬಾ' ಎಂದು ನಕ್ಕುಬಿಡುತ್ತಿದ್ದ. ಅಂತೂ ಕಡೆಯ ರಾತ್ರಿ ಬರಲು, ಖಾನೇಸುಮಾರಿಯ ಮಂಗಳ ಮಾಡಲಿಕ್ಕೆಂದು ಜಯರಾಯನು ತನ್ನ ಮನೆಯಲ್ಲಿ ತಮ್ಮ ಸಂಘದ ಚಹಾಪಾರ್ಟಿಯನ್ನು ಹೂಡಿದನು. ಕಡೆಯ ದಿನದ ಘೋರತಪಾ ಸಣೆಗೆ ಜನವೆಲ್ಲ ನಡೆದಿತು.

ಜಗಣ್ಣನು ಪ್ರತಿನಿತ್ಯದ ಜನಗಣನೆಯನ್ನು ಮುಗಿಸಿ ಮೂರು ನಾಲ್ಕು ದಿನಗಳಾಗಿದ್ದವು. ಕಡೆಯ ರಾತ್ರಿಯ ಕೆಲಸವೊಂದೇ ಉಳಿದಿತ್ತು. ತನ್ನ ಹುಟ್ಟಿದ ದಿನವನ್ನು ಇದಿರು ನೋಡುವಂತೆ ಅವನು ಆ ರಾತ್ರಿಯ ಬರವಿಗಾಗಿ ಕಾದನು. ಮೊದಲ ರಾತ್ರಿಗಳಲ್ಲಿ, ಅದು ಬಂದು ಹೋದ ಹಾಗೆಯೂ ತಾನು ಕೈಯಲ್ಲಿದ್ದ ಕಂದೀಲನ್ನು ಕೆಡವಿ ಒಡೆದುಕೊಂಡು, ಎಡವುತ್ತ ಮುಗ್ಗುತ್ತ ಯಾವುದೋ ತಗ್ಗಿನಲ್ಲಿ ಹೋಗಿ ಬಿದ್ದ ಹಾಗೆಯೂ ತರತರದ ಕನಸುಗಳನ್ನು ಕಂಡನು. ಕಡೆಗೆ ಆ ರಾತ್ರಿ ಬಂದಿತು. ಸಂಜೆಯಲ್ಲಿ ಬಹು ದೂರದವರೆಗೆ ಆ ಈ ವಿಚಾರದಲ್ಲಿ ತಿರುಗಾಡಿ ಬಂದು ಮನೆ ಹೊಕ್ಕನು. ಯಾಕೋ ಮನೆಯಲ್ಲಿ ವಿಚಿತ್ರವಾದ ಸದ್ದಿತ್ತು. ತಂಗೆ ತಮ್ಮಂದಿರು ಸಿಕ್ಕದ್ದನ್ನು ಸುತ್ತಿಕೊಂಡು ಹರಕು ಗುಡಾರದ ಮೇಲೆ ಗುರುಗುರ್ರೆಂದು ನಿದ್ದೆ ನಡೆಸಿದ್ದಾರೆ. ಅದೊಂದೇ ಕೇಳಬರುವ ಸಪ್ಪಳವು. ತಂದೆಯವರಂತೂ ಶಾಲಿನ ಮುಸುಕು ಹಾಕಿ, ಅಸ್ತವ್ಯಸ್ತವಾಗಿ ಜಗಣ್ಣನ ಹಾಸಿಗೆಯ ಮೇಲೆಯೆ ಮಲಗಿಬಿಟ್ಟಿದ್ದಾರೆ. ಒಳಗೆ ಅಡಿಗೆಯ ಮನೆಯಲ್ಲಿ ಒಲೆಯ ಮುಂದೆ ತೂಕಡಿಸುತ್ತ ಕುಳಿತ ವಳು ತಾಯಿಯೊಬ್ಬಳು ಅರೆಯೆಚ್ಚರಿದ್ದಾಳೆ. ಜಗಣ್ಣನು ಕೋಟು ಕಳೆದು 'ಅವ್ವಾ, ನನಗೆ ಬಡಿಸು' ಎನ್ನುತ್ತ ಬಚ್ಚಲಮನೆಗೆ ಹೋದನು. ತಾಯಿ ಗೋದವ್ವನು ಗಡಬಡಿಸಿ ಕಣ್ಣೊರಸಿಕೊಂಡು ಬಡಿಸಲಿಕ್ಕೆ ಎದ್ದಳು. ಜಗಣ್ಣನು ಕಾಲು ತೊಳೆದು ಎಲೆಯ ಮೇಲೆ ಕೂಡಲು ಬರುತ್ತ 'ಯಾಕೆ ಅವ್ವ, ಅಪ್ಪ ಮಲಗಿದ್ದಾನೆ ಗಪ್ಪುಗಡದ್ದಾಗಿ?' ಎಂದು ಕೇಳಿದನು. ಗೋದವ್ವನು ತಡವರಿಸುತ್ತ 'ಒಮ್ಮೊಮ್ಮೆ ಹಾಗೇ ಮಾಡತಾರೇಳು. ಖೋಡಿ

ಕೆಲಸ. ದುಡಿದು ದುಡಿದು ಸತ್ತುಕೆಟ್ಟು ಹೋಗಬೇಕು. ದಣಿದು ಮುಲ ಗ್ಯಾರ ಕಾಣತ್ವದ' ಎಂದಳು. ಇದ್ದೀತೆಂದು ಜಗನ್ನಾಸು ಸುಮ್ಮನಾದನು.

'ನಿನ್ನ ಖಾನೇಸುಮಾರಿಯು ಜಾಗರಣೆ ಏನಪ್ಪಾ ಈವತ್ತು?' ತಾಯಿ ಕೇಳಿದಳು.

'ಹೌದವ್ವ, ಇದೊಂದು ರಾತ್ರಿ ಓಡಾಡಿ ಬಂದರೆ ಮುಗಿ ದಂತಾಯ್ತು.'

'ಆತು ಬಿಡಪ್ಪಾ ಸಾರಾದಿ. ಏನು ಕೆಲಸೋ ಖೋಡಿ ಕೆಲಸ! ಕೊಡೂ ಹಾಂಗಿಲ್ಲ ಕೊಸೆಯೂ ಹಾಂಗಿಲ್ಲ ಮನಿಮನಿಗೆ ಹೋಗಿ ವಯ ಸ್ಸೇನು? ಆಯುಷ್ಯ ಎಷ್ಟು? ಅಂತ ಕೇಳೋದು. ಇದೆಲ್ಲಾ ಕಾರಭಾರ ಸರಕಾರಕ್ಕ ಯಾಕ ಬೇಕೋ ಏನು?'

'ನಿನಗೆ ತಿಳಿಯುಲಾರದು ಅವ್ವ ಅದರ ಮಹತ್ತ್ವ. ಅದರಿಂದ ನಾನು ಬಹಳ ಬುದ್ಧಿಗಲಿತೆ. ಜನರು ಹೇಗೆ ಹೇಗೆ ಇರತಾರೆ ಸ್ವಲ್ಪ ತಿಳಕೊಂಡೆ. ಇಂಥಾ ಖಾನೇಸುಮಾರಿ ವರ್ಷಕ್ಕೊಂದು ಬಂದರೂ ಬೇಕು.'

'ತಗೊಂಡೇನು ಸುಡೋದು ಅದನ್ನ? ನೌಕರೀ ಅಲ್ಲ, ಚಾಕರೀ ಅಲ್ಲ. ಹೊಟ್ಟಿ ತುಂಬೋ ಕೆಲಸ ಬೇಕಪ್ಪ. ಸಂಸಾರ ಬೆಳಿಯಿತು.'

ಗೋದವ್ವ ದೊಡ್ಡದಾಗಿ ಉಸಿರುಬಿಟ್ಟಳು. ಏನೋ ಹೇಳುವ ದನ್ನು ಗಟ್ಟಿಗಟ್ಟಿಮನದಿಂದ ಒಳಬಳಗೆ ನುಂಗಿಕೊಂಡು, ಉಸಿರಿನಲ್ಲಿ ಅದರ ಸೂಚನೆಯನ್ನು ತೇಲಿಸಿ ಸುಮ್ಮನಾದಳು. ಜಗನ್ನಾನ ಊಟವಾಯಿತು, ತನ್ನ ಬಡ ಉಡುಪು ಹಾಕಿಕೊಂಡು, ಖಾನೇಸುಮಾರಿಯು ಉದ್ದಹೊತ್ತಿಗೆ ಯೊಡನೆ ಸರಕಾರದ ಕಂದೀಲವೊಂದನ್ನು ಹಿಡಿದುಕೊಂಡು ೯–೧೦ ಗಂಟೆಗೆ ಹೊರಬಿದ್ದನು. ಹೋಗುವಾಗ 'ಅವ್ವಾ, ಬಾಗಿಲ ಹಾಕಿಕೊ, ನಾನು ತಾಸೆರಡು ತಾಸಿನಲ್ಲಿ ತಿರುಗಿ ಬರತೀನಿ; ಅಪ್ಪನನ್ನು ಊಟಕ್ಕೆ ಎಬ್ಬಿಸು.' ಎಂದಂದು ಮುಂದಡಿಯಿಟ್ಟನು. ಗೋದವ್ವನಿಂದ ಹೂ ಕಾರವು ಬರಲೇ ಇಲ್ಲ.

ಹಾದಿಯಲ್ಲಿ ಜಗನ್ನಾನು ಬಗೆದನು 'ಮೊದಲು ಹೋದ ಮನೆಗಳಿಗೇ ಈಗ ಮತ್ತೆ ಹೊಸಬರು ಯಾರಾದರೂ ಬಂದಿದ್ದರೆ, ಮೊದಲಿದ್ದವರಲ್ಲಿ

ಯಾರಾದರೂ ಉಳಿದವರಿದ್ದರೆ, ಈಗವರ ಸಂಗತಿಗಳನ್ನು ಕೂಡಿಸಬೇಕಲ್ಲವೆ? ಕೆಲಸ ಮಾಡಿಸಿಕೊಳ್ಳುವದರಲ್ಲಿ ಎಷ್ಟು ಚೊಕ್ಕುಜನರು ಈ ಬಳಿಯರು!' ಮುಂದೆ ಕೆಲವು ಹೆಜ್ಜೆ ನಡೆದು 'ಜಗತ್ತಿನ ತುಂಬೆಲ್ಲ ಇದೇ ದಿನ, ಈ ರಾತ್ರಿ, ಈ ಹೊತ್ತಿಗೆ ಈ ಖಾನೇಸುಮಾರಿಯು ಕೊನೆಗೆಲಸವೆಂದು ಆಫೀಸರು ಹೇಳಿದರಲ್ಲವೇ? ಇದೆಂಥ ಸೋಜುದಿವಸ!' ಆತನ ಮೈ ಜುಮ್ಮೆಂದಿತು. 'ಯಾವೊಂದು ಹಬ್ಬವೂ, ಉತ್ಸವವೂ ಹೀಗೆ ಎಲ್ಲ ಕಡೆಗೆ ಒಂದೆ ಹೊತ್ತಿಗೆ ನಡೆಯುವದೆ? ಇದೊಳ್ಳೆ ಹಬ್ಬ! ಒಂದೇ ಕೆಲಸದಲ್ಲಿ ಕೋಟ್ಯಾವಧಿ ಜನರು ಮನಸ್ಸು ತೊಡಗಿಸಿರುವದು ಇದೊಂದೇ ಅಲ್ಲವೇ?' ಜಗದ ಪ್ರೀತಿ ಅವನಲ್ಲಿ ಎದೆತುಂಬಿ ಬಂದಿತು.

'ನನ್ನಂತೆ ಹೀಗೆ ತಿರುಗುವವರೂ ಇದ್ದಾರು, ಈ ಭವ್ಯಜಗತ್ತಿನ ಸಂದಿಗೊಂದಿಗಳಲ್ಲಿ ಈಗ ಈ ಸದ್ಯ!' ಕಣ್ಣಲ್ಲಿ ನೀರು ಕೇಳದೆ ಚಿಮ್ಮಿತು. ನಡೆಯುತ್ತಿದ್ದವನು ನಿಂತನು. ಸುತ್ತ ನೋಡಿದನು. ತನ್ನ ಓಣಿಯನ್ನು ದಾಟಿ ಬಂದಿರುವೆನೆಂದು ತಿಳಿಯಿತು. ಹಿಂದಿರುಗಿ ಒಂದೊಂದೆ ಮನೆ ಹೊಕ್ಕು 'ಕೆತ್ತೀಬಜೀ ಕಾರಭಾರ'ವನ್ನು (ಖಾನೇಸುಮಾರಿಗೆ ಕುಚೇಷ್ಟೆಗಾರರು ಕೊಟ್ಟ ಹೆಸರು) ಆರಂಭಿಸಿದನು.

ಮೊದಲಿನೆರಡು ಮನೆಗಳಲ್ಲಿ ಹೊಸಬರು ಯಾರೂ ಬಂದಿರಲಿಲ್ಲ. ಬೇಗನೆ ಮುಂದರಿದನು. 'ಹೀಗೇ ಎಲ್ಲಕಡೆಗೆ ಆಗಿಬಿಟ್ಟರೆ ನಾನು ಹತ್ತು ಮಿನಿಟುಗಳಲ್ಲಿ ತಿರುಗಿ ಮನೆ ಕಾಣಬಹುದು. ಅಪ್ಪನು ಊಟಕ್ಕೆ ಎದ್ದನೊ ಇಲ್ಲವೊ? ನಾನು ಮಾತಾಡಿಸದೆ ಬಂದೆನಲ್ಲ!' ಮುಂದಿನ ಮನೆಯೆದುರಿನಲ್ಲಿ ಟಾಂಗೆಯೊಂದು ನಿಂತಿತ್ತು. ಯಾರೋ ಸದ್ಗೃಹಸ್ಥರು ಕೆಳಗಿಳಿದು ಮನೆಹೊಕ್ಕು ಉಸ್ಸೆಂದು ಕುಳಿತರು. 'ಸಾಮಾನು ತಂದಿಡೋ' ಎಂದು ಟಾಂಗೆಯವನಿಗೆ ಗದ್ದರಿಸಿದ್ದು ಜಗಣ್ಣನಿಗೆ ಕೇಳಿಸಿತು. ತಾನೂ ಮನೆಹೊಕ್ಕನು.

'ತಮ್ಮ ಖಾನೇಸುಮಾರಿ ತೆಗೆದುಕೊಳ್ಳಲೇ?'

ಅದೇ ಕಾಲು ಚಾಚಿದ ರಾಯರನ್ನು ಕೇಳಿದನು; ಸುಮ್ಮನಿದ್ದರು. ಮತ್ತೆ ಎತ್ತರದ ದನಿಯಲ್ಲಿ ಕೇಳಿದನು. ಏನೋ ಬೇಡಲಿಕ್ಕೆ ಬಂದ

ಪೋರನೆಂದಿಷ್ಟು ಅರ್ಥವಾಗಿ ಅಡಿಗೆಯುವುನೆಯುತ್ತ ನೋಡಿ 'ಏ, ಈ ಹುಡುಗನಿಗೇನು ಬೇಕು ಕೊಟ್ಟು ಕಳಿಸು' ಎಂದು ಕಣ್ಣು ಮುಚ್ಚಿದರು.

'ಇಲ್ಲ ರಾಯರೇ ತಮ್ಮ ಹತ್ತಿರ ಕೆಲಸವದೆ.'

ರಾಯರು ಒಮ್ಮೆಲೆ ರೇಗಿದರು.

'ಸಾಕಾತು ಜನ್ಮ, ಈ 'ಹತ್ತಿರ ಕೆಲಸ' ವೆನ್ನುವವರ ಕಾಲೊಳಗೆ ಸಾಕಾತು! ನನ್ನ ಹತ್ತಿರ ಏನು ಕೆಲಸವಿದೆ ಮಣ್ಣು? ನನ್ನ ಕೆಲಸವೇ ಹೋಗಲಿಕ್ಕೆ ಕೂತಿದೆ.'

'ಹಾಗಲ್ಲ, ಮೊನ್ನೆ ಬಂದಾಗ ನೀವಿದ್ದಿಲ್ಲ. ಈವತ್ತು ಖಾನೇ ಸುಮಾರಿಯು ಕಡೇ ರಾತ್ರಿ'

'ಹೀಗೇನು? ನೆಟ್ಟಗಾಯ್ತು, ನನ್ನದೂ ಕಡೀ ರಾತ್ರಿ! ಬರ ಕೊಳ್ಳಪ್ಪ ಹೆಸರನ್ನು; ನೌಕರಿ, ಸಾವಿನ ಮನಿ ಚಾಕರಿ ಅನ್ನು....'

ಇಲ್ಲದ ಬಡಬಡಿಕೆಗೆ ಮೊದಲಾಯ್ತು. ರಾಯರ ಹೆಂಡತಿ ಹೊರಗೆ ಬಂದಳು. ಹಾಗೆ ಹೀಗೆ ಮಾಡಿ ರಾಯರ ಮಾಹಿತಿಯನ್ನು ದೊರಕಿಸಿ ಜಗಣ್ಣನಿಗೆ ಹೊರಗೆ ಬರುವದೇ ಒಂದು ಜೂಗವಾಯ್ತು. ಅದೊಂದೇ ಮನೆಯಲ್ಲಿ ಅರ್ಧತಾಸು ಕಳೆಯಿತು. 'ಹೀಗೆ ನಡೆದರೆ ಬೆಳಿಗ್ಗೇ ಮನೆ ಕಾಣಬೇಕು' ಎಂದು ಮನಸ್ಸಿನಲ್ಲಿ ಅಂದುಕೊಂಡ. ಬೇರೆ ವಿಚಾರ ಗಳೂ ಸುಳಿದವು. "ರಾಯರು ಹೇಳಿದ 'ಸಾಕಾತು ಜನ್ಮ'ವನ್ನು ಬರೆದುಕೊಳ್ಳಲು ಖಾನೇಸುಮಾರಿಯಲ್ಲಿ ಖಾನೆಯೇ ಇಲ್ಲವಲ್ಲ! ಸರಕಾ ರಕ್ಕೆ ಈ ಮಾಹಿತಿಯಿಂದ ಉಪಯೋಗವಿಲ್ಲವೆ? ಹೌದು, ಏನು ಉಪ ಯೋಗ? ಹೀಗೆ ನರಳುವವರು ಎಷ್ಟು ಜನರಿದ್ದಾರೆ? ಬೆರಳಿನಿಂದೆಣಿಸು ವಷ್ಟು....ಅದಿರಲಿ, ರಾಯರಿಗೆ ಮಾತ್ರ ಕೇಡುಗಾಲವು. ಮೊದಲನೇ ಸಾರೆ ಅವರಲ್ಲಿಗೆ ಹೋದಾಗ 'ಮನೆಯವರು ಊರಲ್ಲಿಲ್ಲ. ಕೆಲಸದ ಮೇಲೆ ಹೋಗಿದ್ದಾರೆ.' ಎಂದವರ ಹೆಂಡತಿಯು ಎಷ್ಟು ಉಬ್ಬಿನಿಂದ ಹೇಳಿದ್ದರಲ್ಲ. ಆ ಕೆಲಸವೇ ಈಗ ಹೋಗಬೇಕೇ"

ಜಗಣ್ಣನು ಇಷ್ಟೊತ್ತಿಗೆ ಬೇರೆ ಮನೆ ಹೊಕ್ಕನು. ಅದೊಬ್ಬ ಮುಸಲ್ಮಾನ್ ಆಫೀಸರರ ಮನೆ. ಮೊದಲಲ್ಲಿ ಆತ ಹೋದಾಗ ಎಷ್ಟು

ಅಂಜಿ ಅಂಜಿ ಮುಂಜರಿದಿದ್ದನೋ ಅದರ ಹತ್ತುಪಟ್ಟು ಹೆದರಿಕೆ ಈಗ. ಹಿಂದಿನ ಮನೆಯ ಅನುಭವವು ಬೇರೆ ತಲೆಯಲ್ಲಿ. ಈ ಮನೆಯಲ್ಲಿ ಬಾಗಿಲಕ್ಕೆಲ್ಲ ಪಡದೆಗಳು,ಹೊರಬದಿಯಲ್ಲಿ ಒಬ್ಬರೂ ಇಲ್ಲ.ಕೇಳುವ ಎದೆಯಾಗದೆ ಹಾಗೆಯೇ ಹೊರಟನು. ಒಳಕೋಣೆಯೊಳಗಿಂದ ಫಟ್ಟೆಂದು ಹೊಡೆದ ಸಪ್ಪಳವೂ 'ಅಮ್ಮಾಗs!' ಎಂಬ ಹೆಂಗಸಿನ ಕೆಟ್ಟ ಕೂಗೂ ಕೇಳಿಸಿದವು. ಎದೆ ಧಸ್ಸೆಂದಿತು. ನಿಲ್ಲಲಾಗದೆ ಮುಂದಲೆದನು. ಮುಂದಿನ ಒಂದೆರಡು ಮನೆಗಳಿಗೆ ಕೀಲಿ ಬಿದ್ದಿತ್ತು. ಮೊದಲನೆಯ ಸಲ ಬಂದಾಗಲೆ ಅಲ್ಲಿ ಯಾವ ಸೋಟರಿದ್ದರೆಂಬದು ಅವನಿಗೆ ಗೊತ್ತಾಗಿತ್ತು. ಆ ಮುಂದೆ ಆವಸಿಗೊಳ್ಳೇಪ್ರೀತಿಯ ಒಬ್ಬ ಬಡಒಕ್ಕಲಿಗನ ಮನೆ. ಹೊರಗೆ ದನಕಟ್ಟಿದ್ದಾರೆ. ಸೆಗಣಿ-ಸೀರಿಸ ಸರೋವರದಲ್ಲಿ ಚಿಮಣಿಯ ಅರುಣಕಿರಣವು ಮೈದೊಳೆಯುತ್ತ ಹೊಳೆಯುತ್ತಿದೆ. ದಿಕ್ಕಿಗೊಬ್ಬರು ಮಲಗಿ 'ಗೊರ್‌ಗೊರ್' ನಿದ್ದೆ ನಡೆಸಿದ್ದಾರೆ. 'ಈ ನಿದ್ದೆ ಕೆಡಿಸಿ ಯಾವ ಪಾಪವನ್ನು ಕಟ್ಟಿಕೊಳ್ಳಲಿ?' ಎಂದು ಜಗನ್ನಾನು ಮುಕ್ಕಟೆಯಾಗಿ ಮುಂದೆ ಸಾಗಿದನು.

ಮತ್ತೆರಡು ಮೂರು ಮನೆಗಳಾದವು. ಒಂದರಲ್ಲಿ ಅತ್ತೆಮನೆಯಿಂದ ತವರುಮನೆಗೆ ಬಂದ ಸೊಸೆಯು 'ನನ್ನ ಬಾವಿಯಲ್ಲಿ ನೂಕುಬೇಕಾದರೆ, ಆ ಮನೆಗೆ ಇನ್ನು ಕಳಿಸಬೇಡ, ಮರ್‍ಯೋ ಬೇಡ' ಎಂದು ತಾಯಿಯೆದುರು ತೋಡಿಕೊಂಡು ಅಳುತ್ತಿದ್ದಳು; ಇನ್ನೊಂದರಲ್ಲಿ ಹೊರಗೆ ಹೋದ ಪತಿರಾಯರ ಕೂಡ ರಂಬಾಟ ಮಾಡಿ, ಕಟ್ಟೆಯಮೇಲೆ ಬಿದ್ದ ಹೆಂಡತಿಯನ್ನು ಗಂಡನ ತಾಯಿ —ಶಾಂತಿಕಾರಿಣಿ— ಸಮಾಧಾನ ಮಾಡುತ್ತಿರಲು: 'ನಾನೊಲ್ಲೆ, ಈ ಬಾಳುವಿ ರಗಡಾಯ್ತು, ಕುತ್ತಿಗೆಗೆ ಬಂದಿತು, ಹೀಗೇ ನಾನೂ ಹಾಳಾಗಿ ಹೋಗುತ್ತೇನೆ' ಎಂದು ಆಕೆ ಹುಯ್ಯಲಿಡುತ್ತಿದ್ದಳು; ಮೂರನೆಯದರಲ್ಲಿ ಜಡ್ಡಿನಲ್ಲಿ ಹಡೆದ ಹೆಂಗಸೂ ಕೂಸೂ ಮತ್ತಿಷ್ಟು ಜ್ವರ ಬಂದು, ಆಗೋ ಈಗೋ ಎನ್ನುವಂತೆ ಮಲಗಿರಲು, ಡಾಕ್ಟರರೂ ಆಪ್ತರೂ ಓಡಾಡಹತ್ತಿದ್ದಾರೆ.

ಜಗನ್ನಾನಿಗೆ ತಲೆ ದಿಮ್ಮೆಂದಿತು. ಅವನ ಸೆನ್ನಸ್ಸು ಎಲ್ಲೋ ಪಾತಾಳದಲ್ಲಿ ಕೂತುಬಿಟ್ಟಿತು. 'ಏನಿದು?' ಎಂಬ ಅಗಾಧ ಪ್ರಶ್ನೆಯು ಅವನ ರೋಮರಂಧ್ರಗಳನ್ನು ಹೊಕ್ಕುನಿಂತಿತು. ಇಷ್ಟಕ್ಕೆ ಗಾಬರಿಯಾಗ

ಬಾರದು. ಆದರೆ ಅವನು ಎಳೆಕಸಲ್ಲವೆ ? 'ಎಲ್ಲರೂ ಸಾವಿನ ಮನೆಯ ಆತಿಥ್ಯವನ್ನೇ ಬೇಡುತ್ತಾರಲ್ಲ ! ಈ ಜಗತ್ತು ಇಷ್ಟು ಬೇಸರ ಬರುವಂತ ಹದೆ ? ನಾನೆಷ್ಟು ಇದನ್ನು ಪ್ರೀತಿಸುವೆನಲ್ಲ ! ಬೇಸರ ಬಂದರೂ ಪ್ರೀತಿ ಕುಂದದಿರಬೇಕೆ ?' ಏನೇನೊ ಸರಳಮನದ ಸಂಶಯಗಳು ತಮ್ಮ ಸುತ್ತು ತಾವೇ ಸುತ್ತಾಡಿದವು. ಕಡೆಗೆ ಗೆಲವೂರಿಗೆ ಹೆಸರಾದ ವಕೀಲರಾದ ಕಳಸದ ಕುಬೇರರಾಯರ ಮೂರಟ್ಟದ ಮನೆ ಬಂದಿತು.

ಹನ್ನೆರಡು ಗಂಟೆಯು ಸಮೀಪಕ್ಕೆ ಬಂದಿತ್ತು.'ಅಯ್ಯೊ, ಈ ಮನೆಗೆ ನಿತ್ಯವೂ ನೂರಾರು ಪಕ್ಷಕಾರರು ಹೋಗುವವರು ಬರುವವರು ಇರ ಬಹುದು. ಇಲ್ಲಿ ಎಷ್ಟು ಬರೆದುಕೊಳ್ಳಬೇಕೋ !' 'ಆಗಲಿ ಕಟ್ಟಕಡೆಯ ಕೊಡ' ಎನ್ನುವವರಂತೆ ಮನೆಯ ಬಳಿ ಬಂದನು. ಮೂರನೆಯಟ್ಟದಲ್ಲಿ, ಕಿಡಿಕಿಗಳೊಳಗಿಂದ ಗ್ಯಾಸಿನ ದೀಪಗಳ ಥಳಕು ಹೊರಸೂಸುತ್ತಿತ್ತು. ಗೋಡೆಯ ಮೇಲೆ ಬಹಳ ತಲೆಗಳ ನೆರಳು ಕಾಣಿಸಿಕೊಂಡವು.'ಆಯಿತು, ಇಲ್ಲಿ ಬೆಳತನಕ ಕೂಡುವ ಪಾಳಿ ಬಂದಿತು' ಎಂದು ಹೊಸತಿಲದೊಳಗೆ ಕಾಲಿಟ್ಟನು. ವಕೀಲರ ಕಾರಕೂನರಲ್ಲಿ ಒಬ್ಬನಾದ ಬಸವಣ್ಣೆಯು ಬಾಗಿ ಲಲ್ಲಿ ನಿಂತಿದ್ದನು. 'ಹಾ, ಸೆನ್ಸಸ್ಸು ಬಂತು' ಎಂದು ಹಾಸ್ಯಮಾಡಿದನು.

'ಹೌದು ಹೇಳಿರಿ, ಯಾವ ಯಾವ ಹೊಸಮೋರೆ ಈವತ್ತು ಬಂದಿವೆ ?' ಜಗಣ್ಣ ಕೇಳಿದನು.

'ಬಹಳ ಬಹಳ ಅವೆ. ನಿಮಗೆ ನೋಡಲಿಕ್ಕೆ ಒಂದು ಮಿನಿಟು ಸಿಗಲಾರವು. ತಿರುಗಿ ಹೊರಡಿರಿ.'

'ಅದೇಕೆ ?'

'ಯಾಕೆ ? ನಾನು ಬಾಗಿಲಲ್ಲಿ ಯಾಕೆ ನಿಂತಿರುವೆ ಮತ್ತೆ ?'

'ಅಂದರೆ ?'

'ಗಾನಾ ಅದೆ, ನಾಚು ಅದೆ.'

ಬಸವಣ್ಣೆಯು ಬಾಗಿಲ ಹಾಕುವದಕ್ಕೆ ಸಿದ್ಧನಾದನು. ಜಗಣ್ಣನೂ ನಿಂದಿರದೆ ಹಿಮ್ಮೋರೆಯಾದನು. ಮನಸ್ಸಿನಲ್ಲಿ ಮಾತ್ರ 'ಎಲ್ಲ ಇದೆ, ನಾಚಿಕೆಯೊಂದು ಇಲ್ಲ ಕಾಣುತ್ತದೆ ! ಹೋಗಲಿ, ನನ್ನ ಕೆಲಸ ಹಗು ರಾಯ್ತು' ಎಂದು ತನ್ನ ಮನೆಯ ಹಾದಿ ಹಿಡಿದನು.

ಹನ್ನೆರಡು ಹೊಡೆದು ಹೋಗಿತ್ತು. ರಾತ್ರಿಯ ಗಾಡಿಗಾಗಿ ನಿದ್ದೆ-ಗಣ್ಣಿನಲ್ಲಿ ತಿರುಗಾಡುವ ಟಾಂಗೆಗಳ ಹೊರತು ಬೇರೆ ಅಲುಗಾಟವಿಲ್ಲ. ಉಳಿದ ವಾರ್ಡುಗಳ ಸೆನ್ಸಸ್ಸುಗಾರರು ಯಾವಾಗಲೋ ಮನೆ ಕಂಡು ಎರಡು ಮೂರು ನಿದ್ದೆ ಕಂಡಿದ್ದರು. ಜಗನ್ನಾನೊಬ್ಬನೇ ಒಣಿಗುಂಟ ನಡೆದಿದ್ದಾನೆ. 'ಹಿಡಿದ ಕೆಲಸವನ್ನು ಮನಸ್ಸುಗೊಟ್ಟು ಮಾಡಿದಂತಾಯ್ತು' ಎಂಬ ಸಮಾಧಾನ. ಆದರೂ ಈ ಕಡೆಯ ದಿನವೆಲ್ಲಿಯೋ ತಪ್ಪಿದೆನೆಂಬ ಎಳನೋವು. 'ಹೋಗಲಿ, ನಾಳಿನಿಂದೇನು?' ಎಂಬ ಕೆಣಕುವ ಪ್ರಶ್ನೆ ನಡು ನಡುವೆ. ಈ ಎಲ್ಲದರ ಒಳಒಳಗೆ ಅಡಗಿ ಕುಳಿತು, ತಿಳಿಯದೆ ಕಡಿಯುವ ಕಟ್ಟಿಗೆಯ ಹುಳದ ಹಾಗೆ ಬೇರೊಂದು ವಿಚಿತ್ರದುಃಖ, ಇಲ್ಲದ ಚಡಪಡಿಕೆ. ಮೊದಲು ಖಾನೇಸುಮಾರಿಗೆ ಸೋತು ಹೋದ ಮನಸ್ಸು ಈಗ ಅದನ್ನು ಹರಿದು ತಿನ್ನಹತ್ತಿದೆ. ಅವನು ತನ್ನಷ್ಟಕ್ಕೇ ಕೇಳಹತ್ತಿದನು.

'ಈ ಖಾನೇಸುಮಾರಿಯಿಂದ ಏನಾದಂತೆ ಆಯ್ತು? ಜೊಳ್ಳು, ಬರೀ ಜೊಳ್ಳು ಕೂಡಿಸಿದಂತೆ. ಕಾಳು ತಿಪ್ಪೆಗೆ ಹಾಕಿ ಜೊಳ್ಳಿನ ರಾಶಿ ಮಾಡಿ ಬಂಡಿಗೆ ಹೇರಿ ಮನೆಗಟ್ಟಿದಂತೆ. ಹೆಸರಂತೆ, ವಯೋಮಾನವಂತೆ. ಜಾತಿಯಂತೆ, ಲಿಂಗವಂತೆ........ ಇನ್ನೂ ಏನೇನೋ........ ಎಲ್ಲಾ ನಿರುಪಯೋಗಿ. ಈ ಮಾಹಿತಿಯನ್ನು ಹೇಳುವ ಕೇಳುವ ಯಾವ ಜೀವಕ್ಕೆ ಸಮಾಧಾನದ ತಟಗುಜೇನು ಸಿಕ್ಕಿದೆ? ಉರಿಯಲ್ಲಿ ಬಿದ್ದವರಿಗೆ 'ಕೈಬೆರಳು ಎಣಿಸಿ ಹೇಳಿರಿ' ಎಂದ ಹಾಗೆ ಇದೆಲ್ಲ! ಕೇಳಿದರೆ ಕೇಳಬೇಕು, ಜೀವದ ಕಥೆಯನ್ನು; ಸಾಕಾತು ಎಂದಿರದವರನ್ನು; ಬೇಕಾತು ಎಂದಿರುವವರನ್ನು. ಕೊರಗುವ ಜೀವಕ್ಕೆ, ಬಂದು ಜೀವಕ್ಕೆ, ಆರೈಕೆಯ ಕೈಕೊಟ್ಟರೆ ಸಾವಿರ ಖಾನೇಸುಮಾರಿಗಳಿಗಿಂತ ಅದು ಲೇಸು.'

ಜಗನ್ನಾನ ಕಣ್ಣು ಕೆಂಪಾಗಿದ್ದವು, ಹುಚ್ಚು ಆವೇಶವು ಮೈಯ್ಯೇರಿತ್ತು. 'ನೋಡೋಣ. ಮುಂದಿನ ಸೆನ್ಸಸ್ಸು ಬರಲಿ. ನಾನೆಲ್ಲ ಬದಲಿಸುವೆ. ಬೇಕಾಗಿ ಇರುವವರು ಯಾರು? ಬೇಡಾಗಿ ಯಾರು? ಇಂದು ಹೊಸದೊಂದನ್ನು ಕೇಳಬೇಕೆಂಬ ಕಟ್ಟಪ್ಪಣೆ....' ಈ ಪ್ರತಿಜ್ಞೆ ಮಾಡುವ ಹೊತ್ತಿಗೆ ಜಯರಾಯನ ಮನೆಯು ಮುಂಬದಿ ಬಂದಿತು. ಅಕಸ್ಮಾತ್ತಾಗಿ ಹೊರಗೆ ಬಂದ ಜಯರಾಯನು 'ನಮಸ್ಕಾರ, ಸೆನ್ಸಸ್ ಸಾಧುಗಳೇ'

ಎಂದು ಕೈ ಹಿಡಿದು ಜಗಣ್ಣನನ್ನು ನಿಲ್ಲಿಸಿಬಿಟ್ಟನು. ಅತಿ ವೇಗದ ಗಾಡಿಗೆ ತತ್‍ಕ್ಷಣದ 'ಬ್ರೇಕು' ಹಾಕಿದಂತಾಯ್ತು. ಅರ್ಧ ನಿಮಿಷ ಜಗಣ್ಣನು ಬೆಳ್ಳಸಂತೆ ಮಾಡಿದನು.

'ಏನು ಜಗಣ್ಣಾ, ಖಾನೇಸುಮಾರಿಯು ಮಾರಿ ಮೈಹೊಕ್ಕಿದ್ದಾಳೇನು?'

'ಇಲ್ಲ, ಆದರೆ, ನೀನು ಇಲ್ಲಿ ಯಾಕೆ?'

'ನನ್ನ ಮನೆಯಪ್ಪಾ ಇದು. ಒಳಗೆ ನಮ್ಮ ಕಂಪೂ ಭರ್ತಿ ಕೂಡಿದೆ. ನಡೆಯಲ್ಲ. ಖಾನೇಸುಮಾರಿಯು ಸತ್ತ ಸತ್ಯನಾರಾಯಣ!'

ಜಗಣ್ಣನು ಈಗ ಎಚ್ಚರ ಹೊಂದಿ ತುಸು ನಕ್ಕನು. ಜಯರಾಯನು ಅಲ್ಲಿಂದ ನಡೆನಡೆಯೆಂದು ಒಳಗೆ ಜಗ್ಗತೊಡಗಲು 'ಇಲ್ಲ, ಜಯಾ, ಮನೆಗೆ ಲಗೂನೆ ಹೋಗಲೇಬೇಕು. ಅಪ್ಪನಿಗೆ ಜಡ್ಡಾಗಿದೆ' ಎಂದು ಕೊಸರಿಕೊಂಡು ಮನೆಗೆ ಓಟಬಿಟ್ಟನು. ಒಂದು ಕೂಗಿಗೇ ತಾಯಿ ಬಾಗಿಲ ತೆರೆದಳು. ಚಿಮಣಿ ಹಾಗೆಯೇ ಉರಿಯುತ್ತಿತ್ತು. ಜಗಣ್ಣನು ಗಾಬರಿಯಾಗಿ 'ಮಲಗೇ ಇಲ್ಲವೆ?' ಎಂದು ಹೆದರುತ್ತ ಕೇಳಿದನು.'

'ಎಲ್ಲಿಯ ನಿದ್ದೆಯಪ್ಪಾ! ನಿನ್ನ ಕೆಲಸವೊಮ್ಮೆ ತೀರಿತೆ? ಅವರು ಕಣ್ಣಿಗೆ ಕಣ್ಣು ಹಚ್ಚಿಲ್ಲ.'

'ಯಾಕೆ? ಜ್ವರ-ಗಿರ ಬಂದಿರುವವೇ?'

'ಇಲ್ಲ.'

'ತಲೆಸೂಲಿಯೇ?'

'ಅದೂ ಇಲ್ಲ.'

'ಮತ್ತೇನಾಯ್ತು ಅವ್ವ?'

ಗೋದವ್ವನು ಕೂಡಲೆ ತಡೆದುಕೊಳ್ಳಲಾರದೆ, ಬಾಗಿಲ ಹತ್ತಿರವೇ ಜಗಣ್ಣನ ಕೊರಳಿಗೆ ತೆಕ್ಕೆಬಿದ್ದು 'ಜಗಣ್ಣಾ, ಏನು ಹೇಳಲಿ? ಅವರ ನಾಕೇದ ನೌಕರಿ.... ಹೋತು..' ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದಳು. 'ಹೋತೇ?' ಎಂದು ಆತನ ಅಳುವಿಗೂ ಸೆಲೆಯೊಡೆಯಿತು. ಹಾಗೆಯೇ ಇಬ್ಬರೂ ಆಧಾರ ತಪ್ಪಿದ ಅಂತರಿಕ್ಷದಲ್ಲಿ ಜೋತಾಡುವಂತೆ, ಕಂಬನಿಯ ಗಂಗೆಯನ್ನು ಹರಿಸುತ್ತ ನಿಂತಲ್ಲಿ ನಿಂತರು.

# ೨ನೆಯ ಕಿಡಿ

ಜಯರಾಯನ 'ಸುಖಪುರುಷ ಸಮಾಜವು' ಹರಟೆ ಇಸ್ಪೀಟುಗಳಲ್ಲಿ ರಾತ್ರಿಯನ್ನೆಲ್ಲ ನಿರ್ವಿವಾದವಾಗಿ ನೂಕಿತು. ವೇಳೆಯನ್ನು ಕೊಲ್ಲುವ ದೆಂದು ವಿದೇಶೀಯರು ತಿರಸ್ಕಾರದಿಂದ ಹೇಳುತ್ತಿರಬಹುದು, ಇಂಥದಕ್ಕೆ. ಆದರೆ ಈ ಸಮಾಜದಲ್ಲಿ ವೇಳೆಯನ್ನು ಕೊಲ್ಲುವದೆಂದರೆ ಶೌರ್ಯದ ಮಾತು, ಹತ್ತತ್ತು ಹುಲಿಗಳನ್ನು ಒಂಟಿಗೈಯಿಂದ ಹಿಡುಕಿದಂತೆ. ಬೆಳ ಗಾಯಿತು, ಚಟಪಟ ಮಾಡಿಕೊಂಡು ಜನವು ತಮ್ಮ ಮನೆಗೆ ಹೋಯಿತು. ಜಯರಾಯನೂ ತಿರುಗಿ ಮಲಗಲಿಲ್ಲ ನಿದ್ದೆಗೆ ಹೆದರುವ ಪುಕ್ಕನು ಆವ ನಲ್ಲ. ಎಂದಿಲ್ಲದೊಮ್ಮೆ ನಾಟಕಕ್ಕೆ ಹೋಗಿ, ಹಗಲು ಹನ್ನೆರಡರವರೆಗೆ ಮಲಗಿ, ಇಡೀ ದಿನವೆಲ್ಲ ಸೆರೆಗುಡಕರ ಹಾಗೆ ಜೋಲೀ ಹೊಡೆಯುವ ರಾವಣನ ತಮ್ಮನೇನು ಅವನಲ್ಲ. ಹಾಗೆಯೇ ಚಟ್ಟನೆ ಎದ್ದು ಜಳಕ ಮಾಡಿ, ಮುಂಜಾವಿನ ಚಹ ತಗೊಂಡು ಹೊರಬಿದ್ದನು. ಅವನನ್ನು ನೋಡಿದವರೊಬ್ಬರೂ ನಿದ್ದೆಗೆಟ್ಟಿದ ಆಸಾಮಿಯೆಂದು ಗುರುತುಹಿಡಿ ಯುವ ಹಾಗೆ ಇರಲಿಲ್ಲ. ಇವೆಲ್ಲ ಅವನ ಸಮಾಜದ ಕೆಲವು ಹೇಳಿಕೊಳ್ಳು ವಂಥ ಸಿದ್ಧಿಗಳು! ಅವನ ನಿತ್ಯಕ್ರಮದಲ್ಲಿ ಸ್ನೇಹಿತರ ಕ್ಷೇಮ ಸಮಾಚಾರ ಕ್ಕಾಗಿ ಗ್ರಾಮಸಂಚಾರವೂ ಒಂದಾಗಿತ್ತು. ಹಾಗೆ ಹೋದಲ್ಲೆಲ್ಲ ನಕ್ಕು ನಗಿಸಿ ಬರುವ ಪದ್ಧತಿ ಅವನದು. ಅವನಿದುರು ಚಿಂತೆಗಿಂತೆ ನಿಲ್ಲುವಂತಿಲ್ಲ. ಪ್ರತಿಯೊಂದು ದಿಗಿಲಿಗೆ ಅವನು ಕೂಡಲೇ ಉತ್ತರವನ್ನು ಹೇಳಬಲ್ಲ. ಕೇಳಿದವರಿಗೆ ಆ ಕ್ಷಣದಲ್ಲಿ 'ಪ್ರಶ್ನೆಯೇನೂ ಬಿಗಿಯಿಲ್ಲ, ಯಾಕಿಷ್ಟು ಬಳಲಿ ದೆವೊ' ಎನಿಸುವ ಹಾಗೆ ಅವನ ಹೇಳಿಕೆ. ಅವನು ಹೋದ ಮೇಲೆ ಮತ್ತೆ ಆ ಮುದುಡಿದ ಮುಖವು ಇದ್ದದ್ದೇ.

ತನ್ನ ತಿರುಗಾಟವನ್ನು ತೀರಿಸಿಕೊಂಡು ಹತ್ತು ಗಂಟೆಗೆ ಅವನು ಜಗಣ್ಣನ ಮನೆಗೆ ಬಂದನು. ಬಾಗಿಲವಿನ್ನೂ ಇಕ್ಕಿತ್ತು. ಹೊರಗೆ ಹೊಸ ತಿಲಕ್ಕೆ ರಂಗವಲ್ಲಿಯ ಗೆರೆಗಳು ನಿನ್ನಿನವಾಗಿ ತೋರಿದವು. ಆದರೆ ಅವ ನೇನು ಸಂಶಯಕ್ಕೆ ಬಹಳ ಸಲಿಗೆ ಕೊಡುವ ಮನುಷ್ಯನಲ್ಲ. ಬಾಗಿಲನ್ನು ನೂಕುತ್ತ 'ಜಗಣ್ಣಾ, ಜಗಣ್ಣಾ' ಎಂದು ತನ್ನ ಗಡುಸುದನಿಯಲ್ಲಿ

ಕೂಗಿದನು. ಅಷ್ಟಕ್ಕೆ ಬಾಗಿಲು ತೆರೆಯಿತು. ಕಣ್ಣೊರಿಸುತ್ತ ಜಗಣ್ಣನು ಇದಿರು ನಿಂತನು. 'ಇದೇನೋ ಹನ್ನೆರಡಕ್ಕೆ ಮಲಗಿದವನು ಈಗ ಏಳುವದೇ? ಕನಸಿನಲ್ಲಿಯೂ ಖಾನೇಸುಮಾರಿ ಮಾಡಿದೆಯೋ ಹೇಗೆ?' ಜಯರಾಯನು ತನ್ನ ದಿನದ ಠೀವಿಯಲ್ಲಿ ಕೇಳಿದನು. ಕೂಡಲೆ 'ಒದರಬೇಡ, ಹೇಳುತ್ತೇನೆ ಇತ್ತ ಬಾ' ಎಂದು ಹಿತ್ತಲದಲ್ಲಿ ಅವನನ್ನು ಕರೆದೊಯ್ದು ತಂದೆಯ ಕೆಲಸ ಬಿಡುಗಡೆಯಾದ ಕತೆಯನ್ನು ಜಗಣ್ಣನು ಸ್ವಲ್ಪದರಲ್ಲಿ ಹೇಳಿದನು. ಅದಕ್ಕೆ ಜಯರಾಯನು 'ಇದೇ ಹೌದಲ್ಲೊ? ನಾನೆಲ್ಲಿ ಕೆಟ್ಟಬೇನೆ ಸೇರಿತೋ ಅವರಿಗೆಂದು ಮಾಡಿದ್ದೆ. ಇಷ್ಟಕ್ಕೆ ಹೆದರುತ್ತಾರೇ? ನಡೆ ಅವರನ್ನು ಎಬ್ಬಿಸೋಣ' ಎಂದು ಅವನನ್ನೆಳೆದುಕೊಂಡು ಒಳಕೋಣೆಗೆ ಹೋದನು. ಬಂಡೇರಾಯರನ್ನು ಎಬ್ಬಿಸುವದಾಯ್ತು. ಜಯರಾಯನನ್ನು ಕಂಡೊಡನೆ ಅವರು ತೆಕ್ಕೆಮುಕ್ಕೆ ಬಿದ್ದು ಅಳತೊಡಗಿದರು. 'ನನ್ನ ಛಪ್ಪರ ಕಡಕೊಂಡು ಬಿತ್ತೋ ಜಯಾ! ಇನ್ನೆಲ್ಲಿಗೆ ಹೋಗಲಿ ಈ ಹೆಂಡರು ಮಕ್ಕಳ ಜೋಡಿ?' ಎಂದು ಆಕ್ರೋಶನಡೆಯಲು ಜಯರಾಯನು ಅದಕ್ಕೆ ಮುಗದಾಣ ಹಾಕಿದನು.

'ಏನು ಹುಚ್ಚು ನೀವು ಬಂಡೇರಾಯರೇ. ನೌಕರಿ ಹೋದರೆ ಏನಾಯ್ತು? ಐದು ಹತ್ತು ವರುಷಗಳಲ್ಲಿ ನೀವೇ ಬಿಡುತ್ತಿದ್ದಿರಿ. ಈಗ ತಾನೇ ಹೋಗಿದೆ. ಹುಲಿಯಂಥ ಹುಡುಗನನ್ನು ಬೆಳೆಸಿದ್ದೀರಿ. ತಂದು ಹಾಕಲಿಕ್ಕೆ ಅವನು ಇಲ್ಲವೆ?'

'ಅವನೇನು ಹಾಕತಾನಪ್ಪಾ. ಕಲಿಯೋದು ಅಲ್ಲೇ ನಿಂತಿತು. ಸಿಗಬಾರದ ಕೆಲಸ ಸಿಕ್ಕರೆ ಹತ್ತುವರ್ಷಕ್ಕೊಮ್ಮೆ ಈ ಖಾನೇಸುಮಾರಿಯಂತಹ ಪುಕ್ಕಟೆ ಫೌಜದಾರನ ಕೆಲಸ. ಅಷ್ಟರೊಳಗ ಹೂಡಿದ ಸಂಸಾರ ಹುಡಿಯಾಗೋದೇ. ನನ್ನ ಬಾಳುವೆ ಹಳಸಿ ಹೋಯ್ತು.'

'ಹಾಗೆಲ್ಲಾ ಆಡಬಾರದು, ತಿಳಿದವರು ನೀವು. ಬೇಕಾದರೆ ಇನ್ನೊಮ್ಮೆ ಈಗ ಹೋಗಿ ಚೀಫ್ ಆಫೀಸರರ ಭೆಟ್ಟಿ ಆಗಿ ಬರ್ರಿ.'

'ಅದೆಲ್ಲಾ ಆಗಿ ಈ ಗತಿಗೆ ಬಂತು, ಜಯಾ. ಜಾತಿ! ನಾ ಹುಟ್ಟಿದ ಜಾತಿ ಜನಿವಾರದ ಜಾತಿ. ಅದರ ಬ್ರಹ್ಮಗಂಟು ಕಂಡರೆ ಹಿಂದೆ ಪಿಶಾಚಿ ಓಡುತ್ತಿದ್ದವಂತೆ, ಈಗ ನೌಕರಿ ಓಡುತ್ತವೆ ಹತ್ತು ಹರದಾರಿ ದೂರ!'

'ಅದೇನೋ ಖರೇ ಬಿಡಿರಿ. ಆದು ಹೋಗಲಿ, ಜಗಣ್ಣನು ಈವತ್ತು ಮಾಮುಲೇದಾರ ಕಚೇರಿಗಂತೂ ಹೋಗಲಿಕ್ಕೇ ಬೇಕs?–ನಿನ್ನಿನ ಕೆಲಸವನ್ನು ಒಪ್ಪಿಸಲಿಕ್ಕೆ. ನಾನೂ ಹೋಗತೇನೆ. ನಾನು ಹೇಗಾದರೂ ಮಾಡಿ ಮಾಮುಲೇದಾರ ಖಾವಂದರ ಭೆಟ್ಟಿ ಮಾಡಿಸತೇನಿ. ನೋಡೋಣ, ಅವರ ಹೊಟ್ಟೆಯಲ್ಲಿ ದೇವರು ಇದ್ದರೆ........'

'ಇರುವದಿಲ್ಲೋ ಇರುವದಿಲ್ಲ. ದೇವರನ್ನು ಪೆಟ್ಟಿಗೆಯೊಳಗೆ ಇಡಿಸಿ ಅವರೆಲ್ಲ ಕಚೇರಿಗೆ ಹೋಗಿರತಾರೆ, ಜಯರಾಯಾ! ಆದರೂ ನಿನ್ನ ಯತ್ನ..ಮಾಡು. ಆಗಬಾರದ್ದು ಆದೀತು. ನಾನಂತೂ ಕಾಲುಮುರಿದ ಕಾಲಾಳು ಆದೆ.'

'ಅಂಜಬೇಡ ಬಿಡಿರಿ. ಎಲ್ಲಾ ಹೋದರೆ ನಮ್ಮಲ್ಲಿ ತಳವೂರೀರಂತೆ, ಆಯ್ತೋ?'

ಜಯರಾಯನು ಕಚೇರಿಗೆ ೧–೨ ಗಂಟೆಗೆ ಬರುವ ಬಗ್ಗೆ ಜಗಣ್ಣನಿಗೆ ತಿಳಿಸಿ ಊಟಕ್ಕೆ ಹೋದನು. ಗೋದವ್ವನು ಅರಿವೆ ಒಗೆಯಲಿಕ್ಕೆಂದು ಬಾವಿಗೆ ಹೋಗಿ ಬಂದು, ಮನಸ್ಸಿಲ್ಲದೆ ಅನ್ನಕುದಿಸಿ ಎಲ್ಲರಿಗೆ ಊಟ ಕಾಣಿಸಬೇಕಾದರೆ ಎರಡು ಬಡಿಯಿತು. ಗಡಬಡಿಸಿಕೊಂಡು ಜಗಣ್ಣನು ಆಗ ಕಚೇರಿಗೆ ಹೋದನು. ಖಾಸೇಸುಮಾರಿಯ ಮಾಮೂಲಿಯ ಕೆಲಸವಾಯ್ತು. ಅವನು ಬರುವದರೊಳಗೆ ಜಯರಾಯನು ಮಾಮಲೇದಾರರ ಕೈಕೆಳಗಿನ ಮರಿ ಖಾವಂದರಿಗೆ ಚಹಕುಡಿಸಿ, ಸಿಗರೇಟು ಕೊಟ್ಟು, ಭೆಟ್ಟಿಯ ಹುಕುಮನ್ನು ಪಡೆದಿದ್ದನು. ತಮ್ಮ ದಿನದ ಫಾಯಿಲು ನೋಡುವದಾದ ಮೇಲೆ ಇನ್ನೇನು ಕೆಲಸವಿದೆಯೆಂದು ಚಾಳೀಸನ್ನು ನೆತ್ತಿಗೇರಿಸಿ ಅವರು ಕುಳಿತಿರಲು, ಕಾರಕೂನರು ಜಗಣ್ಣನನ್ನು ಅವರಿದಿರು ಬಿಟ್ಟು ತಾವು ಮರೆಯಾದರು.

ಹುಲಿಯ ಮುಂದೆ ಕುರಿಯನ್ನು ನಿಲ್ಲಿಸಿದಂತೆ ಆಯ್ತು. ಒಂದೆರಡು ಮಿನಿಟುಗಳವರೆಗೆ ಜಗಣ್ಣನು ನೆಟ್ಟಗೆ ಕಾಲುಸಡುಗಿಸುವ ಸರ್ಕಸ್ಸು ಮಾಡಿದನು. 'ಯಾರು ನೀನು?' ಎಂಬ ಗದ್ದರಿಕೆ ಕೇಳಿಯಂತೂ ಬೀಳತಕ್ಕವನು ಗೋಡೆಗೆ ಸರಿದು ಆತುನಿಂತನು. ತಡವರಿಸುವ ಗುಕ್ಕು–ಮಾತಿನಲ್ಲಿ ಅದು ಇದು ಹೇಳಿದ್ದಾಯ್ತು. ಜಯರಾಯನು ಅನೇಕ

ಮುದ್ದೆಗಳನ್ನು ತೆಗೆದು, ಬಾಯುರ್ಜಿಯನ್ನು ಸಿದ್ಧಪಡಿಸಿ ಕಳಿಸಿದ್ದನು. ಆದರೆ ಆ ಮುದ್ದೆಗಳೆಲ್ಲ ಹೊಯ್ದಾಡುವ ನೀರಿನಲ್ಲಿ ಬಿದ್ದ ಕಾಗದದಂತೆ ಮುದ್ದೆ-ಮುದುಡೆಯಾದವು. ಮಾಮಲೇದಾರರಿಗೆ ಇಂಥ ಪ್ರಸಂಗ ಗಳು ಸಾವಿರಾರು ಬಂದಿದ್ದವು. ಇತ್ಯರ್ಥವು ಅವರಿಗೆ ಯಾವಾಗಲೋ ತಿಳಿಯಿತು. ಪೆಚ್ಚುಮೋರೆಯು, ಸೊಟ್ಟುಟೊಪ್ಪಿಗೆಯು ಹುಡುಗರನ್ನು ಕಂಡ ಕ್ಷಣವೇ ಅವರ ಆಗಮನದ ಕಾರಣವು ಹಣೆಯಲ್ಲಿ ಬರೆದು ಬಿಟ್ಟಂತೆ ಕಾಣುತ್ತಿತ್ತು. ಮಾತಾಡಿಸುವದೆಲ್ಲ ಉಪಚಾರಕ್ಕೆ. ಎಲ್ಲ ಕೇಳುವದಾದ ಮೇಲೆ ಜಾತಿಯ ಪ್ರಶ್ನೆಯೊಂದನ್ನು ಕೇಳಿ, ಹಾರುವರು ಬಿಟ್ಟು ಬೇರೆ ಯಾಗಿದ್ದಲ್ಲಿ 'ಅರ್ಜೀ ಕೊಟ್ಟು ಹೋಗಿರಿ' ಎಂದು ಹೇಳುವದು ಅವರ ಪರಿಪಾಠ. ಬ್ರಾಹ್ಮಣರೆಂದು ಗೊತ್ತಾದರೆ ಹಣೆಗೆ ಕೈ ಹಚ್ಚಿ, ಆ ದುಂಡು ಅಕ್ಷತೆಯನ್ನು ತೋರಿಸಿ 'ನಿಮ್ಮ ಹಣೆಯಲ್ಲಿ ನೌಕರಿ ಇಲ್ಲ-ಈ ಖಗ್ರಾಸ ಇರೋವರೆಗೆ. ಈಗ ಇದ್ದ ನಾವು ಕೂಡ ಅಳಿಸುವ ಹೊತ್ತು ಬಂದಿದೆ' ಎಂದು ಶೋಕದ ಉತ್ತರಕೊಟ್ಟು ಕಳಿಸುತ್ತಿದ್ದರು. ಆದರೆ ಈ ಅಧಿ ಕಾರದ ನಿಷ್ಠುರತೆ ಬಹಳಾಗಿ ಒಪ್ಪೊಮ್ಮೆ ಅವರ ಎದೆಯು ಬಹಳವಾಗಿ ಕರಗುತ್ತಿತ್ತು. ತಂದೆಯು ನಿರಾಧಾರಿಯಾದನೆಂಬುದನ್ನು ಕೇಳಿ, ಜಗ ಣ್ಣಾನ ಬಗ್ಗೆ ಹಾಗೆ ಕನಿಕರವು ಅವರಿಗೆ-ಯಾಕೋ-ಹುಟ್ಟಿತು. 'ಮನೆಗೆ ಬಾ ಹೋಗು, ನಾಲ್ಕು ಗಂಟೆಗೆ' ಎಂದು ಹೇಳಿ ಕಳಿಸಿದರು.

ಮನೆಗೆ ಹೋದನು, ರಾಯರ ಈಗಿನ ನಡೆವಳಿಕೆಯೇ ಬೇರೆ. ತಾವು ಕುಳಿತ ಗಾದೆಯ ಹತ್ತಿರ—ಜಮಖಾನೆಯ ಮೇಲೆ—ಅವನಿಗೆ ಕೂಡಹೇಳಿದರು. ಅವನ ಮನೆತನದ ಸಂಗತಿಗಳನ್ನೆಲ್ಲ ಕೇಳಿಕೊಂಡರು. 'ದಿವಸಕಾಲ ಕೆಟ್ಟನಪ್ಪ' ಎಂದು ಉಸುರ್ಗರೆಯುತ್ತ ತಮ್ಮ ಕೂಡುವ ಸಣ್ಣ ಡೆಸ್ಕಿನೊಳಗಿಂದ ಕಾಗದವನ್ನು ತೆಗೆದು ಸಣ್ಣದೊಂದು ಪತ್ರಬರೆದು ಜಗಣ್ಣಾನ ಕೈಯಲ್ಲಿಟ್ಟು 'ಇದು ನೋಡು, ಈ ಪತ್ರ ತಕ್ಕೊಂಡು ಕುಬೇರ ರಾಯರ ಕಡೆಗೆ ಹೋಗು – ಕಳಸದ ಕುಬೇರರಾಯರು ಗೊತ್ತಿದೆಯೆ ?' ಎಂದರು. 'ಹೂಂ' ಎಂದು ಪೊಡಮಟ್ಟು ಜಗಣ್ಣಾನು ಹೊರಬಿದ್ದನು. ಮಾಮಲೇದಾರರು ಬಡವನಿಗೆ ಬಹಳ ಉಪಕಾರ ಮಾಡಿದೆವೆಂಬ ಉಬ್ಬಿ ನಲ್ಲಿ ತಮ್ಮ ಸಂಜೆಯ ಚಹವನ್ನು ಕುಡಿದರು. ಆದರೆ ಜಗಣ್ಣಾನಿಗೆ ಅದೆಲ್ಲದರ

ಅರ್ಥವಾಗಲಿಲ್ಲ. 'ಕುಬೇರರಾಯರ ಕಡೆಗೆ ಯಾತಕ್ಕೆ ಹೋಗಬೇಕು? ಅವರೇನು ಅಧಿಕಾರಿಗಳೆ? ಅವರಲ್ಲಿ ನನ್ನ ಕೆಲಸವಾಗುವದೇ ?' ಅವನಿಗಾವದೂ ತಿಳಿಯಲಿಲ್ಲ. ಅದರಲ್ಲಿ ಮುನ್ನಾದಿನ ಕೇಳಿದ ನಾಚಿಕೆ ರಂಗಿನಿಂದ! ಕುಬೇರರಾಯರ ಕಡೆ ಹೋಗುವ ಎಳೆತವಿರಲಿಲ್ಲ. ತಪ್ಪಿಸಿಬಿಡಬೇಕೆಂದು ಮನಸ್ಸಿನಲ್ಲಿ ಬಂದಿತು. ಆದರೆ ಮಾಮಲೇದಾರರು ಏನು ತಿಳಿದುಕೊಳ್ಳಬಹುದೆಂಬ ಬೆಗಡು. 'ಮೊದಲು ನನ್ನ ಮನೆಗಿಷ್ಟು ಹೋಗೋಣ' ಎಂದು ಹೋಗಿ, ತಂದೆ ಬಂಡೇರಾಯರನ್ನು ಕಂಡು ನಡೆದದ್ದನ್ನೆಲ್ಲ ಹೇಳಿದನು. 'ಇದೆಲ್ಲಾ ನೂರು ಜನ್ಮದ ಗೋಳು ಘೋರ ಶಾಪದಿಂದಲೋ ನಿನಗೆ ಒದಗಿ ಬಂದಿತಲ್ಲ.... ಜಗಣ್ಣಾ.... ಈ ಬೆಳೆಯುವ ದಿನಗಳಲ್ಲಿ' ಎಂದು ಮೊದಲು ಮಿಡುಕಿ 'ಆದದ್ದಾಗಲಿ, ಹೋಗಿ ಬಾ ವಕೀಲರ ಕಡೆಗೆ. ಅವರ ವಶೀಲಿಯಿಂದ ನಿನಗಾದರೂ ಮುನಿಸಿಪಾಲಿಟಿಯಲ್ಲಿ ಜಾಗವೊಂದು ಸಿಗಬಹುದು' ಎಂದು ಅಟ್ಟಿದರು. ಈಗ ಜಗಣ್ಣನಿಗೆ ಧೈರ್ಯಬಂದಿತು.

ಮೊದಲನೆಯ ಸಲ ಕುಬೇರರಾಯರು ಕೋರ್ಟಿನಿಂದ ಬಂದಿರಲೇ ಇಲ್ಲ. ಎರಡನೆಯಾವರ್ತಿ ಬಂದಿದ್ದರೂ ಪಕ್ಷಕಾರರ ಪರಿಷತ್ತು ನೆರೆದಿತ್ತು. ತಿರುಗಿ ಹೋಗದೆ ಜಗಣ್ಣನು ಅವರಟ್ಟದ ಕಟಾಂಜನದಲ್ಲಿ ನಿಂತು, ಬೀದಿಯಲ್ಲಿಯ ಜನಸಂದಣಿಯನ್ನು ನೋಡಲಾದನು; ನಡುನಡುವೆ ಇಣಿಕಿ, ರಾಯರು ಒಬ್ಬರೇ ಆದರೇನೆಂದು ಒಳಗೆ ದೃಷ್ಟಿ ಚೆಲ್ಲುತ್ತಿದ್ದನು. ಸಂಜೆಯು ಆರು ಆಗಲು ಬಂದಿತ್ತು. ಆಟಕ್ಕೆ ಹೊರಟ ಹುಡುಗರು, ಗುಡಿಗೆ ಹೊರಟ ಹೆಂಗಳೆಯರು, ಪೇಟೆಯಲ್ಲಿ ಹೊರಟ ಗಂಡಸರು: ಎಲ್ಲ ಬಗೆಯ ಓಡಾಟವು ಕಣ್ಣಿಗ ಬಿತ್ತು. 'ಇವರೆಲ್ಲರೂ ಎಷ್ಟು ತಣ್ಣಗಿದ್ದಾರೆ?' ಎಂದು ಹೊಟ್ಟೆಯುರಿ ಬಿದ್ದು ತನ್ನಲ್ಲಿ ಅಂದುಕೊಂಡನು. ಇನ್ನೊಂದು ಕ್ಷಣ, 'ಅಲ್ಲ, ಅಲ್ಲ, ಈ ಎಲ್ಲ ಮೋರೆಗಳು, ಒಂದಿಲ್ಲೊಂದು ದುಃಖವನ್ನು ಒಳಗೆ ಹುಗಿದು, ಮೇಲೆ ಹೂಮುಡಿದ ಗೋರಿಗಳು ಆಗಿರಬಹುದು!' ಎಂದು ತನ್ನನ್ನು ತಾನೇ ಸುಧಾರಿಸಿಕೊಂಡನು. 'ನಾನೂ ಇಂದು ನಾಳೆ ಹೀಗೇ ಆಗುವೆ' ಎನಿಸಿತು. ಇಷ್ಟರಲ್ಲಿ ಶಿರಸ್ತೇದಾರರೊಬ್ಬರು ಪಟ್ಟೇ ಸಿಪಾಯಿಯಿಂದ ಮುಂದೆ ಪೆಟ್ಟಿಗೆ ಹೊರಿಸಿಕೊಂಡು, ಪಟಪಟ ಮೊಚ್ಚೆಯಾಡಿಸುತ್ತ ನಡೆದಿದ್ದರು. ಅವರ ಕೈಬಡಿಗೆ ಹಾದಿಯಲ್ಲಿ ಮಲಗಿದ ನಾಯಿಗೆ

ಚೆನ್ನಾಗಿ ತಾಕಲು, ಅದು 'ಕೊಂಯ್' ಎನ್ನುತ್ತ ಎದ್ದಿತು. ರಾವಸಾಹೇಬರು ಏನೂ ಆಗದವರಂತೆ ಮುನ್ನೋಡಿ ನಡೆದರು.

ಅದನ್ನೆಲ್ಲ ನೋಡಿದ ಜಗಣ್ಣನು 'ಆಃ, ಬಿಂಕವೆ! ಕಾಯಂ ನೌಕರೀ ಸಿಕ್ಕರೆ ಇದು ಬೇರೆ ಬರುವದೆ? ಹಾಗಾದರೆ ನನಗಂಥ ನೌಕರೀ ಬೇಡವೇ ಬೇಡ' ಎಂದು ಮನಸ್ಸಿನಲ್ಲಿ ಮುನಿದನು. ಕತ್ತಲೆಯಾಗುತ್ತ ನಡೆಯಿತು. ಕುಬೇರರಾಯರು ಒಬ್ಬರೇ ಆಗಿ, ಎಲೆ–ಅಡಿಕೆ ಹಾಕಿಕೊಳ್ಳುತ್ತ ಕುಳಿತಿದ್ದರು. ಜಗಣ್ಣನು ಧೈರ್ಯಮಾಡಿ ಒಳಗೆ ಹೋದನು; ಮಾತಾಡುವ ಧೈರ್ಯವಾಗಲಿಲ್ಲ. ತಮ್ಮಲ್ಲಿ ಕಾಲುಹಾಕುವ ಜನರಲ್ಲಿ ಇವನೊಬ್ಬ ಹುಡುಗನೆಂದೋ ಏನೋ–ರಾಯರು ಲಕ್ಷ್ಯಕ್ಕೆ ತರಲಿಲ್ಲ. ಆದರೆ ಅದು ನಿಜವಾದ ಅಲಕ್ಷ್ಯವೆಂದು ತಿಳಿದು ಜಗಣ್ಣನು ತಿರುಗಿ ಹೊರಡಬೇಕೆಂದು, ಹಿಂದೊಂದು ಮುಂದೊಂದು ಹೆಜ್ಜೆ ಇಡಹತ್ತಿದನು. ಆದರೆ ಅದೇಕೋ, ಲಹರಿಯ ರಾಯರು – ಎಲೆ ಮೆಲ್ಲುತ್ತ – ಬಾಯಿತುಂಬಿದ ರಸದಿಂದ 'ನೀನಾರೋ ಸಾಲೀ ಹುಡುಗ?' ಎಂದು ಸಹಜವಾಗಿ ಖುಷಿಯಲ್ಲಿ ಕೇಳಿದರು. ಇನ್ನು ಮಾತ್ರ ಜಗಣ್ಣನು ಮೂಕನಾಗಿ ಬಗೆಹರಿಯುವಂತಿರಲಿಲ್ಲ. 'ನಾನು ಜಗನ್ನಾಥ' ಎನ್ನುತ್ತ ಮಾಮಲೇದಾರರ ಪತ್ರವನ್ನು ಮುಂಚಾಚಿದನು. 'ನೋಡೋಣ ಕೊಡು' ಎಂದು ಪೀಕದಾನಿಯನ್ನು ಹತ್ತಿರ ಸರಿಸಿಕೊಂಡು, ರಾಯರು ಎರಡು ಬೆರಳುಗಳ ಮಧ್ಯಮಾರ್ಗದಿಂದ ಅದರಲ್ಲಿ ಪೀಕಳಿ ಬಿಟ್ಟರು. ಕಣ್ಣಿಗೆ ಕನ್ನಡಕ ಹಚ್ಚಿ ಪತ್ರ ಓದಿದ್ದಾಯ್ತು.

'ಏನೋ ಸಣ್ಣ ಹುಡುಗಾ, ನಿನಗ್ಯಾಕ ನೋಕರಿ ಬೇಕೋ? ಇನ್ನೂ ಮಕವಿಾಸಿ ಒಡೆದಿಲ್ಲ.'

ಜಗಣ್ಣನಿಗೆ ಹೇಳಬೇಕೆಂದರೆ ನಿಜ–ನಿಜವಾದ ನೂರೆಂಟು ಕಾರಣಗಳಿದ್ದವು. ಆದರೆ ಹೇಳುವ ಬಾಯಿ ಬರಲಿಲ್ಲ.

'ಹೋಗು, ತಿರುಗಿ ಸಾಲಿಗೆ ಹೋಗಿ ಕಲೀ ಹೋಗು, ಹೆಡ್ ಮಾಸ್ತರರಿಗೆ ಚೀಟೀ ಕೊಡತೀನಿ.'

ಈ ಚೀಟಿಗಳ ಸರಪಳಿ ಹೀಗೇ ಬೆಳೆಯುತ್ತ ಸಾಗಿತೆಂದು ಜಗಣ್ಣನಿಗೆ ಒಳಒಳಗೆ ತುಸು ಕೆಟ್ಟನಗೆ ಬಂದಿತು.

'ಯಾವ ಕ್ಲಾಸಿನಲ್ಲಿದ್ದಿ ?'

'ಏಳನೇ ಈಯತ್ತೆಯಲ್ಲಿ.'

'ಕನ್ನಡೇನು ?'

ಈ ಪ್ರಶ್ನೆ ವಿಚಿತ್ರವಾಗಿ ತೋರಿತು. ಆದರೆ ಕೇಳಿದ್ದಕ್ಕೆ ಹೇಳಬೇಕು.

'ಇಂಗ್ಲೀಷ ಸಾಲಿಯಲ್ಲಿ.'

'ಹೀಗೇನು ? ಮ್ಯಾಟ್ರಿಕ್‌ತನಕ ಬಂದೀಯಲ್ಲ. ಪರೀಕ್ಷೆಗೆ ಕುಳಿತು ಸಪಾಸು ಪೌದಲ್ಲೋ ? ಅವಕ್ಕೇ ಚಾಕರಿಯ ಹಪಾಪಿಯೇನೋ! ಹೋಗು, ಸುಮ್ಮನೆ ಮ್ಯಾಟ್ರಿಕ್ ಪಾಸಾಗಿ ಬಾ,' ಎಂದು ರಾಯರು ಉದ್ದಕ್ಕೆ ಆರಂಭಿಸಿದರು.

ಜಗಣ್ಣನಿಗೆ ಹೇಗೆ ತಡೆಯಬೇಕೆಂಬದು ತಿಳಿಯಲೇ ಇಲ್ಲ. ಒಂದೇ ಒಂದು ಹೇಳಿದನು 'ಅಪ್ಪನ ನೌಕರೀ ಹೋತರೀ, ಅದಕ್ಕೇ ...'ಅರ್ಧಕ್ಕೇ ವಾಕ್ಯ ಮುಗಿಯಿತು. ಯಾಕೋ ರಾಯರಿಗೆ ಮುಂದೆ ಮಾತಾಡುವ ಸೊಗಸು ಇರಲಿಲ್ಲ.

'ಆತು ಹೋಗು, ಮಾಮಲೇದಾರರು ಚೀಟೀ ಕೊಟ್ಟಾರೆ, ನಾಳಿ ನಿಂದ ನಮ್ಮ ಕಾರಕೂನ ಬಸವಣ್ಣೆಯ ಹತ್ತಿರ ಕೂಡುತ್ತ ಇರು.'

ಇದಾವ ಕೆಲಸವೋ ಜಗಣ್ಣನಿಗೆ ಅರ್ಥ ಹತ್ತಲಿಲ್ಲ. ಮುನಿಸೀಪಾಲಿ ಟಿಯ ಬದಲು ರಾಯರ ಮನೆಯ ಮುನಸೀಪಾಲಿಟಿಯ ಹುದ್ದೆಯಂತೆ ತೋರಿತು. ಅದೇನೂ ವಿಚಾರ ಮಾಡದೆ 'ಹೂಂ' ಎಂದನು. ಮುಂದೆ ಅದೆಂಥ ನೌಕರಿಯೆಂದು ಕೇಳಿ, ತನ್ನ ಬೇಡಿಕೆಯನ್ನು ಸ್ಪಷ್ಟಗೊಳಿಸ ಬೇಕೆಂದು ಮನಸ್ಸು ಜಗ್ಗಿತು; ಆದರೆ ನಾಲಿಗೆ ಸೇದಿಕೊಂಡಿತು. 'ಹಾಗಾ ದರೆ ನಾನು ಹೋಗುತ್ತೇನೆ' ಎಂದು ನಮಸ್ಕಾರಮಾಡಲಿಕ್ಕೆ ಕೈಜೋಡಿ ಸುತ್ತಿರಲು, ಕುಬೇರರಾಯರು 'ನಿಲ್ಲು ನಿಲ್ಲು, ಒಂದು........ ಒಂದು ಕೆಲಸವಿದೆ' ಎಂದು ಮೆತ್ತಗಿನ ದನಿಯಲ್ಲಿ ಆರಂಭಮಾಡಿದರು. ಮೊದ ಲಿನ ವಿಚಾರವು ರದ್ದಾಗಿ ಬೇರೊಂದು ಬಂದಿರಬಹುದೆಂದು ಜಗಣ್ಣ ಹಾಗೇ ನಿಂತನು. 'ಸ್ವಲ್ಪ ಕೂಡು' ಎಂದು ಒಂದು ತುದಿಯಿಂದ ಇನ್ನೊಂದಕ್ಕೆ ಮಿಸೆಯ ಮೇಲೆ ಕೈಸಾಗಿಸುತ್ತ ಓಡಾಡಿದರು. ಒಂದು ಕಾಗದ ತಕೊಂಡು ಟೇಬಲ್ಲಿಗೆ ಕುಳಿತು ಲೆಕ್ಕಣಿಕೆ ಎತ್ತಿದರು. ಅದೇಕೋ

ಸರಿಬೀಳಲಿಲ್ಲ. ಮತ್ತೆ ಎದ್ದು ಹೊರಕಟಾಂಜನಕ್ಕೆ ತಂಬಾಕನ್ನು ಉಗುಳ ಹೋದರು. ಅಲ್ಲಿ ತಮ್ಮ ಸೌಭಾಗ್ಯವತಿಯು ಹೊರಗೆಲ್ಲೋ ನಡೆದುದು ಕಂಡಿತು. ಅವಳು ಹೋಗುವವರೆಗೆ ನೋಡಿಯೆ ನೋಡುತ್ತ ತಿರುಗಿ ಒಳಗೆ ಬಂದರು. ಜಗನ್ನನು ದಿಗಿಲುಗೊಂಡನು. ರಾಯರ ಅಪ್ಪಣೆಯ ಮೇರೆಗೆ ಟೇಬಲ್ ಲ್ಯಾಂಪನ್ನು ಹಚ್ಚಿಟ್ಟನು. ಈಗ ಮಾತ್ರ ರಾಯರು ವೇಗದಿಂದ ಏನೇನೊ ಬರೆದರು. ಪಾಕೀಟಿನಲ್ಲಿ ಹಾಕುತ್ತ 'ಆತು ನೀನು ಹೋಗು' ಎಂದು 'ಕಾಸೀಮ' ಎಂದು ಗಟ್ಟಿಯಾಗಿ ಕೂಗಿದರು. ಸಂಜೆಯ ಹೊತ್ತು, ಅವನೆಲ್ಲಿಯೋ ಹೋಗಿದ್ದ. ಮತ್ತೆ ಹೊರಟ ಜಗನ್ನನನ್ನು ನಿಲ್ಲಿಸಿದರು.

'ತಗೋ, ನಿನ್ನ ಕೆಲಸ ನಮ್ಮಲ್ಲಿ ಈಸತ್ತಿನಿಂದೇ ಸುರುವಾಯಿತು. ಎಂದು ತಿಳಿ. ಯಾರಿಗೂ ಹೇಳದೆ ಹುಷಾರಿಯಿಂದ ಈ ಪತ್ರವನ್ನು ಈ ಪತ್ತೆಯ ಮನೆಯಲ್ಲಿ ಕೊಡು; ಮುಂದೆ ನಿನ್ನ ಮನೆಗೆ ಹೋಗು.'

'ಆಗಲಿ' ಎಂದು ಅಲ್ಲಿ ನಿಲ್ಲಲಾರದೆ ಜಗನ್ನನು ಹೊರಪಟ್ಟನು. ಹಾದಿಯಲ್ಲಿ ಕರುಳು ಕೊರೆಯುವ ವಿಚಾರಗಳು ಬಂದವು. 'ಇದೇನು ಕೆಲಸ? ಕಾಸೀಮನ ಜಾಗಾಕ್ಕೆ ನನ್ನ ನೇಮಣೂಕಿಯೆ? ಅವನ ಕೆಲಸ ದಿಂದನೇ ಇಂದು ಆರಂಭವೆ?' ಕಣ್ಣೀರು ಕೇಳದೆ ನುಗ್ಗಿತು. ಕತ್ತಲೆ ಯಲ್ಲಿ ಯಾರೂ ನೋಡಲಿಲ್ಲ; ಹಗಲಿದ್ದರೂ ನೋಡುವವರು ಕಡಿಮೆಯೆ. ಆ ಪತ್ರವನ್ನು ಹಿಚುಕಿ ಹರಿದು ಬಿಡಬೇಕೆಂಬ ಸಿಟ್ಟು ಬಂದಿತು. ಆದರೆ ರಾಯರು ವಕೀಲರು, ಮತ್ತೇನಾಗುವದೊ? ಪತ್ತೆಯ ಮೇಲಿಂದ ಓಣಿ ಯನ್ನು ಹುಡುಕಿ, ಆ ಸಣ್ಣ ಸಂದಿಯ ಅಟ್ಟದ ಮನೆಯನ್ನು ಮುಟ್ಟಿದನು. ಬಾಗಿಲು ಇಕ್ಕಿತ್ತು; ಪತ್ರದ ಮೇಲಿನ ಹೆಸರು ನೋಡಿದನು, 'ಕಾಂತಾ ಸಾನಿ' ಎಂದಿತ್ತು. ಎದೆ ಡವಡವ ಎಂದಿತು. ತಿರುಗಿ ಓಡಿಹೋಗ ಬೇಕೆಂದು ಎನಿಸಿತು. ಒಳಗಿನಿಂದ ಯಾರೋ ಒಬ್ಬರು ಬಂದು ಬಾಗಿಲ ತೆರೆದರು. ನಿರುಪಾಯವಾಯಿತು. ಆ ಮುದುಕಿಯ ಕೈಯಲ್ಲಿ ಪತ್ರ ಕೊಟ್ಟನು. ಅಟ್ಟದ ಮೇಲಿಂದ ಎಳದನಿಯ ಸವಿಹಾಡೂ ಸುಗಂಧದ ಬತ್ತಿಗಳ ಸುವಾಸನೆಯ ಜೋಡೂ ಕೂಡಿ, ಒಳಗೆ ಆತನನ್ನು ಜಗ್ಗಿದವು. ಮೇಲೆ 'ಒಳಗೆ ಬನ್ನಿರಲ್ಲ' ಎಂಬ ಆ ವ್ಯಕ್ತಿಯ ಕರೆ. ಕ್ಷಣದಲ್ಲಿ,

ಚಿಕ್ಕವನಾದರೂ ಅವನಿಗೆ ಇದರ ಅಂತರಂಗವು ತಿಳಿದುಹೋಯ್ತು. ಕಣ್ಣು ಮುಚ್ಚಿ ಹಾಗೆಯೇ ಅರ್ಧದಾರಿ ನಡೆವವರೆಗೆ ಉಸಿರು ಬಿಡದೆ, ಮುಂದೆ ಚೆನ್ನಾಗಿ ಉಸ್ಸೆಂದು ತನ್ನ ಮನೆ ಕಂಡನು.

ಕುಬೇರರಾಯರು–ಮೊದಲಿನ ರಾತ್ರಿ ನಿದ್ದೆ ಸಂಪೂರ್ಣವಾಗಿ ಇಲ್ಲದಾಗಿದ್ದರೂ–ಈ ದಿನ ಬೇಗನೆ ಮಲಗಲಿಲ್ಲ. ಇಂಥ ನಿದ್ದೆಗೇಡು ನಾಕ್ಕೈದು ಬಂದರೂ ಲೆಕ್ಕಿಸದ ದೇಹಸ್ಥಿತಿ ಅವರದು. ಅಲ್ಲಿಲ್ಲಿ ಫರಾಳವಾಯಿತೆಂಬ ನೆವದಿಂದ ರಾತ್ರಿಯ ಊಟಕ್ಕೆ ಏಳಲಿಲ್ಲ. ತಮ್ಮ ಕೋಣೆಯಲ್ಲಿ ದೀಪದ ಹುಳದ ಹಾಗೆ ಸುತ್ತಾಡಿಯೇ ಸುತ್ತಾಡಿದರು. ಹತ್ತು ಹೊಡೆದು ಹೋಯ್ತು; ಮನೆಯವರೆಲ್ಲ ಮಲಗಿದರು. ರಾಯರ ಧರ್ಮಪತ್ನಿ ಬಂದು 'ಮಲಗುವದಿಲ್ಲವೇ?' ಎಂದು ಕೇಳಿದ್ದಕ್ಕೆ 'ಹೂಂ' ಎಂದು 'ಇಲ್ಲ' ಎಂದು ಎರಡೂ ಉತ್ತರ ಕೊಟ್ಟರು. 'ಏನೋ ಖಟ್ಲೆಯ ವಿಚಾರ, ಖೂನೀ ಖಟ್ಲೆಯೇನೋ!' ಎಂದು ಹೆಂಡತಿ ಹಾಸಿಗೆ ಹಾಸಿ ಮಲಗಿದಳು. ರಾತ್ರಿ ಹನ್ನೆರಡಕ್ಕೆ ಕುಬೇರರಾಯರು ಸದ್ದಿಲ್ಲದೆ ಹೊಸದಾಗಿ ಒಲಿದ ಅಪ್ಸರೆಯ ಮನೆಗೆ ಹೋದರು.

---

## ೩ನೆಯ ಕಿಡಿ

ಎರಡು ಮೂರು ತಿಂಗಳು ಹೋದವು. ವಕೀಲರ ಕಾರಕೂನರ ಕೈಕೆಳಗಿನ ಕಾರಕೂನಿಕೆಯಲ್ಲಿ, ಜಗಣ್ಣನು ಹೊಟ್ಟೆಯ ಹೋರಾಟವನ್ನು ಮೊದಲು ಮಾಡಿದನು. ಇಂಗ್ಲಿಷ್ ಬರುತ್ತಿದ್ದ ಅವನಿಂದ ಬಸವಣ್ಣಗೆ ಬಹಳ ನೆರವಾಯ್ತು. ಎಷ್ಟೋ ಕೈಫಿಯತ್ತು ಡಿಕ್ರಿಗಳನ್ನು ಆತನಿಂದ ಬರೆಯಿಸಿ, ತನ್ನ ಕೆಲಸದ ಚೊಕ್ಕತನವನ್ನು ರಾಯರಿಗೆ ತೋರಿಸಿ ಅವನಿಗೆ ಮೆರೆಯಬಂದಿತು. ಎಂಥ ಸಾಮಾನ್ಯನಿಗೂ ಅನುಭವವೆಂಬದು ಸಮ್ರಾಟನ ಸೊಕ್ಕು ಕೊಡುತ್ತದೆ. ಇಷ್ಟು ದಿನ ಇನ್ನೊಬ್ಬರ ಕಾಲುಹಿಡಿದು ಹಲ್ಲು ತೆರೆದು, ಹೇಳಿದಂತೆ ಕೇಳಿಕೊಂಡು ದೊಡ್ಡವನಾದ ಬಸವಣ್ಣಯ್ಯ,

ಈಗ ಜಗಣ್ಣನಿಗೆ ಮೇಲಧಿಕಾರಿ. ಕೇಳುವದೇನು ? 'ಇಂಗ್ಲೀಷನ್ನು ಎಷ್ಟು ವರ್ಷ ಕಲಿತರೇನು ಜಗನ್ನಾಥರಾಯರೇ; ಲೆಕ್ಕಾ ಇಡಲಿಕ್ಕೆ ಬಂದೀತೇ ? ಅದಕ್ಕೆ ಕಲೀಬೇಕು.... ಮುಲ್ಕೀ ಪರೀಕ್ಷೆಯೊಳಗಿನ ಜಮಾಖರ್ಚು; ಇಲ್ಲಿ ತರ್ರಿ' ಎಂದು ಲೆಕ್ಕದ ವಹಿಯನ್ನು ಕಸಿದುಕೊಂಡು, ಹೀಗೆ ಹೀಗೆ , ಎಂದು ' ಇದುರಿಗೆ ಕುಳಿತ ಕಂಬಳೀ ಗೆಣೆಯರ ಮುಗುಳು ನಗೆಯ ಹೊಗಳಿಕೆಯಲ್ಲಿ, ಜಗಣ್ಣನಿಗೆ – ಹಳ್ಳಿಯ ಸಾಲೀಮಾಸ್ತರರು ಕಲಿಸಿದಂತೆ–ಕಲಿಸುತ್ತಿದ್ದನು. ಎಲ್ಲದಕ್ಕೂ ಸಿದ್ಧನಾದ ಜಗಣ್ಣನಿಗೆ ಅದೇನು ದೊಡ್ಡದಲ್ಲ. ಆದರೂ ಇಂಥ ಪಾಠಗಳು ಎಂದಾದರೊಮ್ಮೆ ಒಂದೇ ದಿನ ಹೆಚ್ಚಾದರೆ ಕಣ್ಣಲ್ಲಿಯೇ ಇಂಗುವ ಕಣ್ಣೀರು, ಮೇಲೊಂದು ನಿಟ್ಟುಸಿರು ಬರುತ್ತಿದ್ದವು.

ಆರಂಭ – ಆರಂಭಕ್ಕೆ ಭರ್ ಕೋರ್ಟಿನಲ್ಲಿ ವಕೀಲರಿಂದಲೇ ಎನಿಸಿಕೊಂಡು ಸಾಕುಬೇಕಾಗುತ್ತಿತ್ತು; ಮೇಲೆ ಮನೆಯಲ್ಲಿ ಬೀದಿಯಲ್ಲಿ ಬಸವಣ್ಣಿಯ ಬೋಧಾಮೃತ ! ಇದೆಲ್ಲ ಇದ್ದರೂ ಒಂದು ತೃಪ್ತಿ ಇತ್ತು. 'ತನ್ನ ಗಳಿಕೆಯಿಂದ ಆಯಕಟ್ಟಿನ ದಿವಸಗಳಲ್ಲಿ ಮನೆತನಕ್ಕೆ ಉಪಯೋಗವಾದೆನೆಲ್ಲ ' ಎಂಬ ವಿಚಾರ ಬಂದು, ಎಲ್ಲ ಬೇಸರವನ್ನು ಹಿಂದೂಡುತ್ತಿತ್ತು. ಮೊದಲತಿಂಗಳಲ್ಲಿ ಜಗಣ್ಣನ ಗಳಿಕೆ ಹತ್ತರ ಒಳಗೇ. ಮುಂದೆ ಐದು ಏರಿತು. ಆಗ ಕಾರಕೂನಿಕೆಯ ಸಂಪಾದನೆ ಹೇಗೆಂಬ ವಿಷಯವು ಅವನಿಗೆ ಹೊಸದಾಗಿ ತಿಳಿಯಿತು. 'ರಾಯರ ಮನೆಯು ಮೂರು ಅಂತಸ್ತಿನದಾದರೆ ಬಸವಣ್ಣಿಯದು ಎರಡು ಅಂತಸ್ತಿನದೇಕೆ ?' ಎಂಬದರ ಅರ್ಥವಾಯಿತು. ಬಸವಣ್ಣಿಯ ಪಗಾರವು ಹೆಸರಿಗೆ ಇಪ್ಪತ್ತು, ಅವನಿಗೆ ಬರುವದು ಅದರ ಐದು ಪಟ್ಟು, ಒಮ್ಮೊಮ್ಮೆ ಅದಕ್ಕೂ ಹೆಚ್ಚು. ಈ ಪಗಾರವು ಒಂದು ಕೈಯಿಂದ ಒಂದೇ ದಿನ ಬರುವಂತಹದಲ್ಲ; ಒಮ್ಮೆ ಬಕ್ಷೀಸಿನ ಹಣದಿಂದ, ಒಮ್ಮೆ ಕೋರ್ಟಿನ ಖರ್ಚಿಗೆಂದು ಕೊಟ್ಟ ರಕಮಿನಿಂದ, ಒಮ್ಮೆ ಕೋರ್ಟಿನಲ್ಲಿ ನಿಂತುನಿಂತಿರಲಿಕ್ಕೆ ಪಕ್ಷಗಾರನ ಟೊಂಕದಿಂದ ಹೀಗೆ ನೂರು ಕೈಗಳಿಂದ, ನೂರು ಹೊತ್ತುಗಳಲ್ಲಿ ಬಸವಣ್ಣಿಯ ಸಂಪತ್ತು ಬಂದು ಬೀಳುತ್ತಿತ್ತು. ಅರ್ಥಾತ್ ಅದರಲ್ಲಿ ಸಣ್ಣ ಪಾಲೊಂದು ಲೆಕ್ಕ ನಿಯಮವಿಲ್ಲದೆ ಜಗಣ್ಣನ ಕಿಸೆ ಸೇರುತ್ತಿತ್ತು. ಮೊದಲು ಇಂಥ

ಪ್ರಾಪ್ತಿಗೆ ಹೇಸಿದರೂ ಮುಂದೆ ಜಗಣ್ಣನಿಗೆ ರೂಢಿ ಬಿದ್ದಿತು. ಆದದ್ದನ್ನು ನುಂಗಲಿಕ್ಕೆ ಅವನು ಕಲಿಯತೊಡಗಿದನು. ತನಗೆ ಬರುವ ಹಣವು ಮನೆಗೆ ಸಾಲಬಲ್ಲದೇ ?—ಎಂಬದೊಂದು ಅವನ ಮುಖ್ಯ ಯೋಚನೆಯಾಯ್ತು. ಅಷ್ಟೇ ಸಂಬಳದಲ್ಲಿ ಆಯುಷ್ಯವನ್ನು ಸವೆಯಿಸಿದ ಬಂಡೇರಾಯರಿಗೆ ಹೆಚ್ಚು ಬೇಡುವ ಆಶೆ ಇರಲಿಲ್ಲ. ಹಾಸಿಗೆಗಿಂತ ಕಡಿಮೆಯೇ ಕಾಲು ಚಾಚುವ ತಯ್ಯಾರಿ ಅವರದು.

ಇಲ್ಲದ ತೊಂದರೆಯಿಲ್ಲದೆ ಪ್ರಪಂಚವು ಸಾಗಿತು. ತಾವು ಸ್ವತಃ ಕೂಡ ಯಾವಾಗಲೂ ಮನೆ ಹಿಡಿದು ಕೂಡದೆ, ಈಗಾಗಲೇ ಪರಿಚಿತ ಆದ ಹುಂಡೇಕಾರಿಕೆಯನ್ನು-ಸ್ನೇಹಿತನೊಬ್ಬನ ಕೂಡ-ಹೂಡಿದರು. ಸ್ಟೇಶನ್ನಿನಲ್ಲಿ ಬಂದು ಬೀಳುವ ಸರಕುಗಳನ್ನು ವ್ಯಾಪಾರಸ್ಥರ ವಖಾರಕ್ಕೆ ಮುಟ್ಟಿಸುವ ಈ ಉದ್ಯೋಗದಲ್ಲಿ ಗಂಟುಮಾಡಿದ ಒಬ್ಬಿಬ್ಬರು, ಮೊದಲಿನ ಋಣಾನುಬಂಧದಿಂದ ಅವರಿಗೆ ಸಹಾಯ ಮಾಡಿದರು. ಅಂತೂ ಮೊದಲಿನ ಗಾಬರಿ ಈಗ ಎಷ್ಟೋ ಕರಗಿತು, ಆಗೊಮ್ಮೆ ಈಗೊಮ್ಮೆ ನಗೆಚಾಟಿಕೆಗೆ ಚಿಕ್ಕವರಿಗೂ ದೊಡ್ಡವರಿಗೂ ಇಂಬುದೊರೆಯಿತು. ಒಮ್ಮೆ ಸಂಜೆಯ ಊಟ ತಿರಿಸಿ, ಕೆಲಸಬೊಗಸೆ ಆದೊಡನೆ ಗೋದವ್ವನು ಹಾಸಿಗೆ ಹಾಸುತ್ತ 'ಮಗನ ಮದುವೆ ಮಾಡದೆ ನೌಕರಿ ಕಳಕೊಂಡಿರಿ, ನಮ್ಮ ಹೊಟ್ಟೆಗೆ ಅವನೇ ದುಡಿಯಬೇಕಾಯಿತು' ಎಂದು ಯಜಮಾನರಿಗೆ ತಿಪ್ಪ-ಮಾತನ್ನು ನಗೆಯಲ್ಲಿ ಬೆರಸಿ ಆಡಿದಳು. ಅದನ್ನು ನಗೆಮಾತೆಂದು ತಿಳಿದು ಕೊಳ್ಳುವ ತಾಳ್ಮೆ ಅವರಿಗೆ ಬಂದಿತ್ತು. 'ಹೌದು, ನೀನನ್ನುವದು ಖರೆ, ಆದರೆ ಅವನ ಮದುವೆಗೆಂದು ನಾನೂ ಈಗ ದುಡಿಯುತ್ತಿರುವೆನಲ್ಲ!' ಎಂದರು. ಇಬ್ಬರೂ ಈಗ ನಕ್ಕರು. ಅಲ್ಲಿಯೇ ಕಂಬಳಿಯ ಮೇಲೆ ಸ್ವಸ್ಥವಾಗಿ ಆಸರಕ್ಕೆಂದು ಒರಗಿದ ಜಗಣ್ಣನು 'ನನಗೆ ಮದುವೆ ಮಾಡುವ ಸಲುವಾಗಿ ಅಪ್ಪನು ದುಡಿಯುತ್ತಿದ್ದರೆ, ನಾಳೆನಿಂದಲೇ ಅದನ್ನು ನಿಲ್ಲಿಸಿ ಬಿಡಲಿ' ಎಂದು ಖಂಡಿತವಾದ ಧ್ವನಿಯಲ್ಲಿ ಹೇಳಿದನು. ಅದೆಲ್ಲಾ ಹುಡುಗಮಾತೆಂದು ಬಲ್ಲ ಗೋದವ್ವನು 'ಹುಚ್ಚಾ! ನಿನಗೇನು ತಿಳಿಯುತ್ತದೆ? ಮದುವಿ ಆಗದೆ ಹಾಗೇ ಇರತೀ ಏನು?' ಎಂದು ಕಡೆ ನುಡಿದಳು.

ಈ ಮಾತು ಕತೆ ನಡೆದಾಗಲೆ ಒಬ್ಬ ಆಳುಮನುಷ್ಯನು 'ಜಗನ್ನಾಥ ರಾವ' ಎಂದು ಹೊರಗಿನಿಂದ ಕೂಗಿದಂತಾಯ್ತು. ಬಾಗಿಲ ತೆರೆದರು. ಕುಬೇರರಾಯರ ಕಾಸೀಮನು ರಾಯರ ಕಡಿಂದ ಒಂದು ಚೀಟೀ ತಂದಿದ್ದನು. 'ಇದನ್ನೋಡಿ ಗಸಕ್ಕನೆ ಬಾ ಎಂದು ಹೇಳ್ಯಾರ್ರಿ' ಎಂದು ಗಡಿಬಿಡಿಯಿಂದ ಹೇಳಿದನು. ಅದೇನು ಅಂಥ ಕೆಲಸವೋ ಎಂದು ಜಗಣ್ಣನು ಅಂಗಿಕೋಟುಗಳನ್ನು ಹಾಕಿಕೊಳ್ಳುತ್ತ ಚೀಟಿಯನ್ನೋದಿದನು. 'ಊರಿಗೆ ಹೋಗಬೇಕಾಗಿದೆ, ಹೊರಡುವ ತಯ್ಯಾರಿಯಿಂದ ಬಾ' ಎಂದು ರಾಯರು ಬರೆದಿದ್ದರು. ಒಳ್ಳೇದು ಎಂದು ಮನೆಯಲ್ಲಿ ಹೇಳಿ ಕಾಸೀಮನೊಡನೆ ವೇಗದಿಂದ ನಡೆದನು. 'ಊರಿಗೆ ಯಾಕೋ ಕಾಸೀಮಾ?' ಎಂದು ಹಾದಿಯಲ್ಲಿ ಕೇಳಿದನು. 'ನನಗೇನೂ ಗೊತ್ತಿಲ್ಲರಿ. ಅವ್ವನವಗು ಮಾತ್ರ ಅಳಕೋತ ಮಲಗ್ಯಾರ' ಇದೇನು ಪ್ರಸಂಗವೆಂಬುದು ತಿಳಿಯದೆ ಜಗಣ್ಣನು ದಿಗಿಲುಗೊಂಡನು. ತನ್ನ ರಾಶಿಯು ಖೋಡಿಯಿದೆಯೆಂಬ ದೃಢವಾದ ನಂಬಿಗೆ ಅವನಿಗೆ ಉಂಟಾದ್ದರಿಂದ ತನ್ನ ಸುತ್ತೇ ಸಂಕಟವೇನೋ ಬಂದಿತೆಂದು ಅವನ ಕಲ್ಪನೆಯಾಯಿತು. ಕಾಲ ಹೆಜ್ಜೆ ಏಳಲೊಲ್ಲವು. ತನ್ನ ಕೆಲಸದಲ್ಲಿ ಏನು ತಪ್ಪಾಯಿತು, ಬಾಯಿಯವರಿಗೆ ಏನಾದರೂ ಆ ಹೊತ್ತು ಅಂದೇನೆ ಎಂದು ತನ್ನ ಅಂದಿನ ದಿನಚರಿಯನ್ನು ನೆನಸಿಗೊಂಡನು. ಅಂಥ ತಪ್ಪೇನೂ ಆಗಿರಲಿಲ್ಲ. ಇದಲ್ಲದೆ ಅವನ ತಪ್ಪೇ ಆಗಿದ್ದರೆ ಈ ಊರಿಗೆ ಹೋಗುವ ಪ್ರಸ್ತಾಪವೇಕೆ? ಯಾವದೂ ತಿಳಿಯಾಗಲಿಲ್ಲ.

ಇಷ್ಟರಲ್ಲಿ ಮನೆ ಬಂದಿತು. ರಾಯರ ಅಟ್ಟಕ್ಕೆ ಜಗಣ್ಣ ಹೋದನು. ದಿವಾಣಖಾನೆಯಲ್ಲಿ ಇರಲಿಲ್ಲ. ಮಲಗುವ ಕೋಣೆಗೆ ಹೋಗಬೇಕಾಯಿತು. ಅಲ್ಲಿ ಮಂಚದ ಮೇಲೆ ರಾಯರು ಕಣ್ಣು ಕೆಂಪುಮಾಡಿ ಕೂತಿದ್ದಾರೆ, ಮೂಲೆಯಲ್ಲಿ ಒತ್ತಟ್ಟಿಗೆ ಬಾಯಿಯವರು ನಿಂತಿದ್ದಾರೆ. 'ಇವನು ಬಾಗಿಲಲ್ಲಿಯೇ ನಿಂತು 'ಯಾಕೆ ಕರಿಸಿದಿರಿ?' ಎಂದು ಕೇಳಿದನು.

ಮೊದಲು ರಾಯರು ಮಾತಾಡಲಿಲ್ಲ. ಆ ಮೇಲೆ ರೌಷಿನ ದನಿಯಲ್ಲಿ ಎಂದರು. 'ಬಂದಿಯಾ ಜಗಣ್ಣಾ' ಹೋಗು ಈವತ್ತಿನ ರಾತ್ರಿ ಎರಡರ ಗಾಡಿಗೆ, ಇವಳನ್ನು ತವರುಮನಿಗೆ ಅಟ್ಟಿ ಬಾ.'

ಈ ಮಾತಿನ ಬಿರುಸು ಬಾಣದಂತೆ ಶಾಂತಾಬಾಯಿಯ ಎದೆಯಲ್ಲಿ ನಟ್ಟು ರಕ್ತದ ಬೆಲೆಯುಳ್ಳ ಕಣ್ಣೀರನ್ನು ಹೊರಪಡಿಸಿತು. ರಾಯರು ಮತ್ತಿಷ್ಟು ಅಕ್ಕಸದಿಂದ ಕೂಗಿದರು.

'ಸಾಕು ನಿನ್ನ ಅಳೋದು, ಅತ್ತರೆ ಹೇಳಿದಂತೆ ಕೇಳುವರೆಂದು ನಿನ್ನ ಕಲ್ಪನೆ ಕಾಣತದೆ. ಹದಿನೈದು ದಿನವಾಯ್ತು, ಗಿಳಿಯಂತೆ ಹೇಳುತ್ತ ಬಂದಿರುವೆ, ಇದೊಂದುಸಾರೇನೂ ಬಾಣಂತನಕ್ಕೆ ನಿನ್ನ ತವರುಮನೆಗೇ ಹೋಗೆಂದು. ಮತ್ತೆಮತ್ತೆ 'ನಾನೊಲ್ಲೆ' ಎಂಬ ದುಷ್ಟಮಂತ್ರವನ್ನು ಹಿಡಿದಿರುವಿ. ಇನ್ನು ಕೇಳುವದಿಲ್ಲ. ಈವತ್ತು ಹೋಗಲಿಕ್ಕೇ ಬೇಕು'

ಈ ಸುರಿಮಳೆಯಲ್ಲಿ ತಾನೆಲ್ಲಿ ನಿಲ್ಲಬೇಕೋ, ಜಗಣ್ಣನಿಗೆ ತಿಳಿಯಲಿಲ್ಲ. ನಿಂತಲ್ಲಿ ನಿಂತನು. ಶಾಂತಾಬಾಯಿಯು ಧೈರ್ಯಮಾಡಿ ಹೇಳಿದಳು.

'ನೀವು ಹೇಳಿದಾಗ ನಾನು ಯಾವ ಮಾತನ್ನು ಕೇಳಿಲ್ಲ? ಬರೇ ಅಂದರಾಯ್ತೇನು?'

'ಹೌದು, ಅಂತೇ ಈಗ ಕೇಳು ನೋಡೋಣ'

ರಾಯರ ತಾರಸ್ವರವು ಸ್ವಲ್ಪ ಮಧ್ಯಮಕ್ಕೆ ಇಳಿಯಿತು.

'ಈ ಸಾರೆ ಇಲ್ಲಿಯೇ ಇರತೀನಿ?'

'ಯಾಕೆ ಈ ಕೆಟ್ಟ ಹಟವು?'

ಶಾಂತಾಬಾಯಿಗೆ ಹೇಳಲಿಕ್ಕೆ ಬಾಯಿಯೇ ಇಲ್ಲ. ಆದರೆ ಅವಳಿಗೆ ತಲೆಯೊಳಗೆ ಬರಕೊಂಡ ಉತ್ತರವಿತ್ತು, ಬಿಚ್ಚಿ ಹೇಳಲಿಕ್ಕೆ ಬಾರದು. ಹಾಗೆಯೇ ನಿಂತಳು. ಕಡೆಗೆ ರಾಯರು ಬೇಸತ್ತು 'ಜಗಣ್ಣಾ, ಇವಳ ಸಾಮಾನು ಕಟ್ಟುಹೋಗು. ಕಾಸೀಮನಿಗೆ ಟಾಂಗಾ ಹೇಳಿಬರಲಿಕ್ಕೆ ಹೇಳು' ಎನ್ನಲು ಜಗಣ್ಣನು ಕೆಳಗಿಳಿದನು. ಬಾಯಿಯವರು ಕೆಳಗೆ ಬರದೇ ಸಾಮಾನು ಕಟ್ಟುವದೇನೆಂದು ತಿಳಿಯದೆ, ಕಾಸೀಮನೊಡನೆ ಮಾತಾಡುತ್ತ ಕುಳಿತನು. ಕೂಡಲೆ ರಾಯರು ಸೌಭಾಗ್ಯವತಿಯನ್ನು ಹತ್ತಿರ ಕರೆದು ಕೂಡಿಸಿಕೊಂಡು, ತಲೆಗಿಂಬಿನ ಬುಡದಿಂದ ಒಂದು ಸಣ್ಣ ಡಬ್ಬಿಯನ್ನು ತೆಗೆದು ಎಂದರು:

'ಇದು ನೋಡು, ಈ ಬೆಂಡೋಲೆ, ಬುಗುಡಿಯ ಮುತ್ತುಗಳನ್ನು; ನಿನ್ನ ದೆಸೆಯಿಂದ ತರಿಸಿದ್ದೇನೆ. ಇಡೀ ಮುಂಬಯಿಯಲ್ಲಿ ಇವಕ್ಕೂ

ತೇಜಿಮುತ್ತುಗಳಿಲ್ಲ–ಎಂದು ಪತ್ರ ಬಂದದೆ. ಸಾವಿರ ರೂಪಾಯಿ ಎಲ್ಲ ಕೂಡಿ ಬಿತ್ತು. ನೀನು ಒಲ್ಲೆಂದರೆ ಯಾರಿಗಾದರೂ ಮಾರಿಬಿಡಬೇಕು'

'ಛೇ, ಮಾರುವದೇನು ಛಲೋದು? ನನಗೆ ಇವು ಬೇಕೇ' ಬೇಕು.

'ಹಾಗಾದರೆ, ಊರಿಗೆ ಹೋಗುವೆನೆನ್ನು ಕೊಡುತ್ತೇನೆ.'

'ಹೂ.' ಎಂದು ಶಾಂತಾಬಾಯಿ ಅಂದುಬಿಟ್ಟಳು.

ತಮ್ಮ ಮರುಳುಮಾಟವು ಸಾಧಿಸಿತೆಂದು ರಾಯರ ಹಿಗ್ಗು. ಆದರೆ ಈ ರಸಕಸಿಯು ಸಾಕೆಂದು, ಊರಿಗೆ ಹೊರಡಲು ಮನಸ್ಸನ್ನು ಸಿದ್ಧಪಡಿಸುತ್ತಲೇ ಶಾಂತಾಬಾಯಿಯು ರಾಯರ ಹತ್ತಿರ ಅದೇ ಹೋಗಿದ್ದಳು.

'ಹೀಗೆ ಅನ್ನು. ಹೋಗುವಿಯಲ್ಲವೇ? ನಾನು ಏಳೆಂಟು ದಿವಸ ಕ್ಕೊಮ್ಮೆ, ಅದೇಕೆ ಎರಡೆರಡು ಸಾರೆ ಬಂದು ಭೆಟ್ಟಿ ಆಗುವೆನು. ಈಗೇನು ಕೆಲಸ ಇದ್ದದ್ದೂ ಅಷ್ಟರಲ್ಲೇ ಅದೆ. ನಿನ್ನ ತಾಯಿಯವರನ್ನೂ ನೋಡದೆ ಬಹಳ ದಿನಗಳಾದವು. ಅವರಂಥ ಗರೀಬ ಮನುಷ್ಯರೇ ಇಲ್ಲ'

ಶಾಂತಾಬಾಯಿಯು ಮುಗ್ಧಳಾದಳು, ಮತ್ತೆ 'ಹೂಂ' ಎಂದಳು.

'ಹಾಗಾದರೆ ಹೋಗು, ಸಾಮಾನು ಕಟ್ಟು, ಹತ್ತುಹೊಡೆಯಿತು' ಎಂದು ರಾಯರು ಮುತ್ತಿನ ಡಬ್ಬಿಯನ್ನು ಕೈಯಲ್ಲಿಟ್ಟರು. ಶಾಂತಾಬಾಯಿಯು ಬಾಗಿಲವರೆಗೆ ಹೋಗಿ ಮತ್ತೆ ತಿರುಗಿ ಬಂದು 'ನಾನು ಹೋದಮೇಲೆ....' ಸ್ವಲ್ಪ ತಡೆದಳು.

'ನೀವು ಹೋದಮೇಲೆ ನಾವೇನು ಮಾಡಬೇಕು?'

'ನೀವು ಪ್ರಕೃತಿ ಕೆಡಿಸಿಕೊಳ್ಳಬಾರದು, ರಾತ್ರಿ ನಿದ್ದೆಗೆಟ್ಟು'

'ಛೇ, ಹಗಲೆಲ್ಲ ನಿದ್ದೆಗೆಡುತ್ತಾರೇನು? ಆವತ್ತೊಂದು ದಿವಸ ಮಂದೀ ಜುಲುಮೆಗೆ ಗಾನಾ ಮಾಡಿಸಿ ಕೇಳಬೇಕಾಯಿತು.'

ಈ ಮಾತಿನ ಸತ್ಯವು ಅವಳಿಗೆ ಗೊತ್ತಾಗಿ ಹಳೆಯಮಾತಾಗಿತ್ತು. ಎದೆ ಹಾರಿತು. ಕ್ಷಣ ಬೆಪ್ಪಳಾಗಿ ನಿಂತಳು.

'ನಡೆ ನಡೆ ಗಾಡಿ ತಪ್ಪೀತು' ಎಂದು ರಾಯರು ನುಗಿಸಿದಂತೆ ಆಡಲು, 'ದೇವರೇ' ಎಂದು ಮನಸ್ಸಿನಲ್ಲಿ ಏನೇನೋ ಬೇಡಿಕೊಂಡು ಶಾಂತಾಬಾಯಿ ಅಟ್ಟವನ್ನಿಳಿದಳು.

ಕುಬೇರರಾಯರ ಮೊಗದಲ್ಲಿ ಹುರುಪು ಕುಣಿಯುಹತ್ತಿತು. 'ಜಗಣ್ಣಾ!' ಎಂದು ಕೆಳಮನೆಗೆ ಗಟ್ಟಿಯಾಗಿ ಕೂಗಿದರು. ಮತ್ತೇನು ಬಂದಿತೆಂದು ಅವನು ಹೆದರುತ್ತ ಹೋದನು. 'ಒಂದಿಷ್ಟು ಎಲೆ ಇಸು ಗೊಂಡು ಬಾ ಕೆಳಗಿಂದ' ಎಂದರು. ಎಲೆ ಬಂದವು. ಯಥಾವಿಧಿಯಾಗಿ ತಂಬಾಕಿನವರೆಗೆ ಎಲ್ಲ ಆಯ್ತು. 'ಜಗಣ್ಣಾ, ಇಲ್ಲಿ ಕೂಡು' ಎಂದರು. 'ಬಾಯಿಯವರ ಸಾಮಾನು ಕಟ್ಟಬೇಕು' ಎಂದು ಜಗಣ್ಣಾ ಹೋಗಲೆಂದ. 'ಕಾಸೀಮ ಕಟ್ಟುತ್ತಾನೆ ಕೂಡು' ಎಂದು ಕೂಡಿಸಿಕೊಂಡು, ರಾಯರು ಬಾಯಿತುಂಬ ಮಾತುನಡೆಸಿದರು.

'ಎರಡರ ಗಾಡಿಗೆ ಹೊರಡು....ಆಕೆಯನ್ನು ಕರಕೊಂಡು. ರಾತ್ರೀ ಹೊತ್ತೆಂದು ಹೆದರುವಿಯೇನು ಮತ್ತೆ? ನಿನ್ನಂಥ ಹುಡುಗರು ಬೇಕಾದ ಹೊತ್ತಿನಲ್ಲಿ ಬೇಕಾದ ಕೆಲಸಕ್ಕೆ ಸಿದ್ಧರಿರಬೇಕು. ನಾನು ಗರ್ಭಶ್ರೀಮಂತ ನೆಂದು ನೀನು ತಿಳಿದಿರಬಹುದು. ಅದೆಲ್ಲಾ ಸುಳ್ಳು ಜಗಣ್ಣಾ! ನಾನೂ ನಿನ್ನ ವಯಸ್ಸಿಗೆ ನಿನಗೂ ಬಡವನಾಗಿದ್ದೆ. ವಾರದಮನೆಯೂಟ ಉಂಡು, ರಸ್ತೆಯ ಕಂದೀಲಕ್ಕೆ ಓದಿ, ಕಂಬದ ಕಟ್ಟೆಗೆ ಮಲಗಿ ಕಲಿತೆನಪ್ಪ ನಾನು. ದುಡಿದವರಿಗೆ ಸಿಗುತ್ತಾಳೆ ಕೇಳು ಮಹಾಚಂಚಲ ಲಕ್ಷ್ಮಿ!'

ಜಗಣ್ಣನಿಗೆ ಇದು ನಿಜವಾಗಿ ರಾಯರ ಬಗ್ಗೆ ಹೊಸ ಸಂಗತಿಯು ಗೊತ್ತಾಗಿ, ಕಣ್ಣುಹಿಗ್ಗಿಸಿ ಅವರನ್ನು ನೋಡಿದನು. 'ಇಂಥವರು ಮೊದಲು ಹಾಗಿದ್ದರೆ? ನಾನೇಕೆ ಇವರಂತೆ ಆಗಬಾರದು?' ಎಂಬ ಆಸೆಯು ಮೊಳಕೆ ಎದೆಯಲ್ಲಿ ಎದ್ದಿತು. ರಾಯರು ಅವನ ಕುತೂಹಲವನ್ನು ಕಂಡು ಹಿಡಿದು, ತಾವು ವಕೀಲರಾಗುವವರೆಗೆ ಹಾಗೂ ಆದಮೇಲೆ ಹತ್ತು ವರುಷಗಳಲ್ಲಿ ಮಾಡಿದ ಅದ್ಭುತಲೀಲೆಗಳನ್ನು ಸವಿಮಾಡಿ ಹೇಳಿದರು. ಅಲ್ಲದೆ ಇತ್ತೀಚೆಗೆ ದೇಶದಲ್ಲಿ ಅಸಹಕಾರದ ಗೊಂದಲವೆದ್ದಿದ್ದರೂ ಬರೀ ದುಡ್ಡಿನ ನೆರವು ಕೊಡುತ್ತ ತಾವುತಾವು ಸುರಕ್ಷಿತರಾಗಿರುವ ಹೆಮ್ಮೆಯ ಸುದ್ದಿಯನ್ನೂ ಬಣ್ಣಿಸಿ ಹೇಳಿದರು.

ಹನ್ನೆರಡು ಹೊಡೆದುಹೋಯಿತು. ಶಾಂತಾಬಾಯಿಯು ತನ್ನ ಜೊತೆಗೆ ಕರೆದುಕೊಂಡು ಹೋಗುವ 'ಪಮ್ಮಿ'ಯನ್ನು ಎಬ್ಬಿಸಿ, ಪರಕಾರ ವುಡಿಸಿ, ಎಲ್ಲ ಸಿದ್ಧತೆಯಿಂದ ಕಟ್ಟೆಟ್ಟ ಹಾಸಿಗೆ ಸುರುಳಿಗೆ ಆತುಕೊಂಡು

ಉರುಳಿದಳು. ನೀನೂ ಸ್ವಲ್ಪ ಮಲಗಿ ಏಳು ನಾನು ಎಬ್ಬಿಸುವೆನೆಂದು ಜಗಣ್ಣನಿಗೆ ಮಲಗ ಹೇಳಿ, ರಾಯರು ಕೆಳಗೆ ಹೋದರು. ಕಂದೀಲನ್ನು ಹಾಗೆಯೆ ದೊಡ್ಡದಾಗಿಟ್ಟು ಒಂಟುಗೈಯ ದಿಂಬಿಗೆ ಒರಗಿದ ತಮ್ಮ ಪತ್ನಿಯನ್ನು ನೋಡಿದರು. ತುಂಬುಬಸಿರು, ಕೇದಗಿಯ ಬಣ್ಣ, ನಿದ್ದೆಯಲ್ಲಿಯೂ ಮುಪ್ಪುಕಳೆ— ರಾಯರು ನೋಡುತ್ತ ಅಲ್ಲಿಯೇ ನಿಂತರು. ಮದುವೆಯಾದಾಗಿನ ಮೊದಲಿನ ಸ್ನೇಹದ ನೆನಪು ಮೂಡಿದವು. ಒಂದು ನಿಮಿಷ, 'ಇವಳನ್ನು ಊರಿಗೆ ಕಳಿಸುವದೇ ? ಒಲ್ಲೆ' ಎಂಬ ಅಕ್ಕರೆಯು ತಿಳಿದೆರೆ ನುಗ್ಗಿಬಂದಿತು. ಹಾಗೆ ಹೇಳಿಬಿಡಲು ಎಚ್ಚರಿಸಬೇಕೆಂದು ಬಾಗುವಂತಾಯ್ತು. ಅದು ಬಹಳಕಾಲ ನಿಲ್ಲಲಿಲ್ಲ. ಬೇರೊಂದು ಹುಚ್ಚು-ಕರೆಯು ಕೈಹಿಡಿದು ಜಗ್ಗಿ ಅಟ್ಟಕ್ಕೆ ಒಯ್ದಿತು. ಮೂಲೆಯಿಂದ ಮೂಲೆಗೆ ಸುಳಿದಾಡಿದರು. ಜಾಣ ವಕೀಲನಂತೆ ಎರಡೂ ಪಕ್ಷಗಳನ್ನು ಹಿಂಜಿ ಹಿಂಜಿ, ಎರಡೂ ಗೆದೆಯುವಂತೆ ಕಾರಣಗಳನ್ನು ತೆಗೆದರು. ಇಷ್ಟರಲ್ಲಿ ಗಾಡಿಯ ಹೊತ್ತಾಗಿ ಟಾಂಗೆ ಬಂದಿತು. ಹೊರಡುವವರು ಎದ್ದರು. 'ಪತ್ರ ಹಾಕಿರಿ, ಬಂದುಹೋಗಿರಿ' ಎಂದು ಮೆಲ್ಲಗೆ ಹೇಳುತ್ತ ಶಾಂತಾಬಾಯಿಯು ಹೊರಹೊರಟಳು. ರಾಯರು ಜಗಣ್ಣನ ಕೈಯಲ್ಲಿ ಹಣ ಕೊಟ್ಟು 'ಜೋಕೆಯಿಂದ ಕಳಿಸಿ ಬಾ. ಇದು ಸರಿಯಾಗಿ ಬೆಳಿಗ್ಗೆ ಬದಾಮಿಗೆ ಹೋಗುತ್ತದೆ. ಹಗಲ ಗಾಡಿಯಕಿಂತ ಇದೇ ಬೇಕು' ಎಂದು ಹೇಳುಹೇಳುತ್ತಿರಲು, ನಿದ್ದೆಗಣ್ಣಿನಲ್ಲಿ ಆಳುತ್ತಿರುವ ಪಮ್ಮಿಯ ಸಂಗೀತದಲ್ಲಿ ತಾಯಿಯ ದುಃಖರಾಗವು ಬೆರೆತು, ಟಾಂಗೆಯು ಮನೆಬಿಟ್ಟು ಓಡಿತು.

ರಾಯರು ಒಳಗೆ ಹೋದರು. ಕಾಸೀಮನು ತಲೆಬಾಗಿಲು ಇಕ್ಕತೊಡಗಿದನು. 'ನಿಲ್ಲು' ಎಂದು ರಾಯರು ಹುಚ್ಚು ಅವಸರದಿಂದ ಮೇಲೆ ಹೋಗಿ, ಯಾವಾಗಲೋ ಸಿದ್ಧಪಡಿಸಿದ ಸುವಾಸಿತ ವೇಷವನ್ನು ಧರಿಸಿ, ಬೆತ್ತವನ್ನು ಬೀಸುತ್ತ ಕೆಳಗೆ ಬಂದರು. ಆ 'ಹೊಸ ಚಡಾವು ತಾ' ಎಂದು ಕಾಲಿಗೆ ಹಾಕಿಕೊಂಡರು. ಒಂದು ವೀಳ್ಯದ ಪಟ್ಟಿಯನ್ನು ಬಾಯಲ್ಲಿ ಹಾಕಿ, ಹೊಸತಿಲ ದಾಟುತ್ತ 'ಬಾಗಿಲ ಹಾಕಿಕೊ. ನಾನು ಬೈಠಕಕ್ಕೆ ಹೋಗಿ ಇದೇ ಬರತೇನೆ.' ಎಂದು ನಡೆದರು.

'ಗೊತ್ತದೆ ರಾಯರ ಬೈಠಕು, ಕಾಂತಾಸಾನಿಯ ಆಟಕಿನಲ್ಲಿ' ಎಂದು ಮನಸ್ಸಿನಲ್ಲಿ ಅನ್ನುತ್ತ ಕಾಸೀಮನು ಚಿರ್ರೆನ್ನುವ ಬಾಗಿಲನ್ನು ಒತ್ತಿಹಾಕಿದನು.

---

## ೪ನೆಯ ಕಿಡಿ

---

ಹತ್ತು ಹದಿನೈದು ದಿನವಾಯ್ತು, ಸರಿಯಾಗಿ ಕುಬೇರರಾಯರು ಕೋರ್ಟಿನ ಕೆಲಸವನ್ನು ನೋಡದಾದರು. ಪಟ್ಟಣಕ್ಕೆ ಬಂದ ಉಬ್ಬಿನಲ್ಲಿ ಚಹಾ ಚೂಡಾ ಫರಾಳಮಾಡಿ, ಆರೇಳಕ್ಕೆ ಬಂದು ಕುಳಿತ ವಾದಿ ಪ್ರತಿ-ವಾದಿಗಳಿಗೆ ಒಂಬತ್ತು ಹತ್ತರವರೆಗೆ ರಾಯರ ದರ್ಶನವೇ ಇಲ್ಲ. ಬಸವಣ್ಣೆಯು ಎಲ್ಲದರ ಮುಕ್ತ್ಯಾರೀ ಹೊತ್ತು ಸಣ್ಣಪುಟ್ಟ ಕೆಲಸಗಳನ್ನು ಸರಿಪಡಿಸುತ್ತಿದ್ದನು. ಊಟದ ಹೊತ್ತಿಗೆ ಏಳುವದು; ಲಗುಬಗೆಯಿಂದ ಸ್ನಾನಮಾಡಿ, ದೋತರ ಉಡುತ್ತಲೇ ಊಟಕ್ಕೆ ಕುಳಿತೆದ್ದು ಕೋರ್ಟಿಗೆ ಹೊರಡುವದು ಕುಬೇರರಾಯರ ನಿತ್ಯಕ್ರಮವಾಗುವಂತೆ ತೋರಿತು. ಹೀಗೆ ಹೊರಟಾಗ ತಲೆಬಾಗಿಲಲ್ಲಿ, ಎಷ್ಟೊತ್ತಿನಿಂದ ಹಾದೀ ನೋಡುತ್ತಿದ್ದ ಪಕ್ಷಕಾರನೊಬ್ಬನು ಬಾಗಿ 'ಈವತ್ತು ಮುದ್ದತ ಐತಿರಿ' ಎಂದು ದೈನಾಸಬಟ್ಟು ಹೇಳಲು 'ರೂಪಾಯಿ ತಗೊಂಡು ಕೋರ್ಟಿಗೆ ಬಾ' ಎಂದು ರಾಯರ ಉತ್ತರವು ಸಿದ್ಧವಾಗುತ್ತಿತ್ತು. ಕೋರ್ಟಿನ ಹೊರಬದಿಯಲ್ಲಿ ಸಾಕ್ಷೀದಾರರಿಗೆ ತಲೆಕಟೆಯುವ ಕ್ಲಾಸು ಹಾಕಿ, ಮುಂದೆ ಐದು ಮಿನಿಟುಗಳಲ್ಲಿ 'ಹಜರ ಹೈ' ಕೂಗು ಕೇಳಿಸಿದೊಡನೆ ಹಾಗೆ ಹೀಗೆ ರುಮಾಲು ಸುತ್ತಿ, ಕೋರ್ಟನ್ನು ಹೊಗುವದಕ್ಕೆ ಆರಂಭವಾಯ್ತು. ಮೊದಲೇ ಪಂಡಿತರಾದ ಸಾಕ್ಷೀದಾರರು ರಾಯರ ಬಯಲುಹವೆಯ ಐದು ನಿಮಿಷದ ಸಾಲೆಯಲ್ಲಿ ಹೆಚ್ಚು ಪಂಡಿತರಾಗಿ, ವಾದಿಯ ಹಣನುಂಗಿ ಬಂದಿದ್ದರೆ ಪ್ರತಿವಾದಿಗೆ ಉಪಯೋಗವಾಗುವ ಪುರಾವೆಯ ಪುರಾಣ ಹೇಳಹತ್ತಿದರು. ಒಂದೆರಡು ಖಟ್ಲೆ ಸೋತುಹೋದವು. ಹೀಗಾಗಿ ರಾಯರ ಜಾಣತನದ ಚಂದ್ರಪ್ಪನು ಒರಬರುತ್ತ ಕರಗುವನೋ -- ಎಂಬ ಭಯಕ್ಕೆ ಎಡೆಯಾಯ್ತು.

ಚುರುಕುಬುದ್ಧಿಯ ಬಸವಣ್ಣಿಯು ಇದನ್ನರಿತು ಮುದ್ದತು ತಕ್ಕೊಳ್ಳುವ ಉದ್ಯೋಗ ನಡೆಯಿಸಿದನು. ಇದರ ರಹಸ್ಯವು ತಿಳಿಯದೆ ಜಗಣ್ಣನೊಮ್ಮೆ 'ಯಾಕೆ ಬಸವಣ್ಣಪ್ಪನವರೇ, ಖಟ್ಲೆ ಮುಂದೆ ಹಾಕಿಸುತ್ತೀರಿ? ಗಳಿಸಿ ಗಳಿಸಿ ಬೇಸರವೇನು?' ಎಂದು—ಕೋರ್ಟಿನಲ್ಲಿ ಇಬ್ಬರೂ ಕುಳಿತಾಗ – ಕೇಳಿದನು. ಬಸವಣ್ಣಿಯು ಅತ್ತಿತ್ತ ನೋಡಿ 'ರಾಯರ ಮನೆಯವರು ಊರಿಂದ ಬರುವವರೆಗೆ ಹೀಗೇ ಮಾಡಬೇಕರಿ' ಎಂದು ಗುಟ್ಟಿನ ಮಾತನ್ನು ಹೇಳುವಂತೆ ಉಸುರಿದನು. ಜಗಣ್ಣನಿಗೆ ಗುಟ್ಟಿನ ಒಳಗುಟ್ಟು ಬೇರೆಯಿದೆಯೆಂದು ಮುಸಕುಮುಸಕಾಗಿ ತಿಳಿದಿತ್ತು, ಬಿಚ್ಚಿ ಹೇಳುವ ಗೊಡವೆಗೆ ಹೋಗಲಿಲ್ಲ.

ಒಂದು ದೊಡ್ಡ – ಬಕ್ಷೀಸಿನ – ದಿವಾಣೀ ಖಟ್ಲೆಯ ಮುದ್ದತು ಬಂದಿತು. ಹಣದ ಹಂಬಲವು ಬಹಳಾಗಿ, ಕುಬೇರರಾಯರು ಒಂದೆರಡು ದಿನ ಮನೆಬಿಟ್ಟು ಎಲ್ಲಿಯೂ ಹೋಗದೆ, ಹಗಲಿರುಳು ದುಡಿದು ಅದಕ್ಕೆ ತಯ್ಯಾರಾದರು. ಕೋರ್ಟಿನಲ್ಲಿ ಅಂದಾದ ಅವರ 'ಆರ್ಗ್ಯುಮೆಂಟು' ಚಿರಸ್ಮರಣೀಯವೆಂದು ಉಳಿದೆಲ್ಲ ವಕೀಲರು ಬೊಟ್ಟುಕಚ್ಚಿದರು. ಮರುದಿನವೇ 'ಠರಾವು' ಆಯ್ತು; ರಾಯರಂತೆ ಆಯ್ತು. ನಾಕು ಗಂಟೆಗೆ ಪಕ್ಷಕಾರನು ಹುಚ್ಚುಹಿಗ್ಗಿನಿಂದ ರಾಯರ ಕೈಯಲ್ಲಿ ಇನ್ನೂರರ ಥೈಲಿ ಕೊಟ್ಟು 'ಈಗಿಷ್ಟು ತಗೊಳ್ಳಿರಿ' ಎಂದನು. 'ಆಗಲಿ' ಎಂದು ಒಂದು ಟಾಂಗೆಯನ್ನು ತರಿಸಿ ರಾಯರು ಥೈಲಿಸಹಿತವಾಗಿ ಹೊರಟರು. 'ಇನ್ನು ೧೫ ದಿನದ ಮನೆಯ ಖರ್ಚಿಗಾಯ್ತು' ಎಂದು – ಹೊರಟ ರಾಯರನ್ನು ನೋಡುತ್ತ – ಜಗಣ್ಣನು ಬಸವಣ್ಣಿಗೆ ಅಂದನು.

ರಾಯರ ಟಾಂಗೆಯು ಮನೆಯತ್ತ ಹೋಗಲಿಲ್ಲ. ಅವರಪ್ಪಣೆಯ ಮೇರೆಗೆ ಸಾನಿಯ ಬೀದಿಯಲ್ಲಿ ಹೋಗಿ, ಕಾಂತಾಸಾನಿಯ ಸುಖಾವಾಸದ ಇದಿರು ನಿಂತಿತು. ನಿಂತ ಕುದುರೆಯ ಹೇಕಾರಕ್ಕೆ 'ರಾಯರ ಸವಾರಿ ಬಂದಿತು' ಎಂಬ ತಂತಿಯ ಸುದ್ದಿಗಳು ಒಳಗೆ ಮುಟ್ಟಿದವು. ಥೈಲಿಯಲ್ಲಿಯ ಒಂದು ರೂಪಾಯಿಯನ್ನು ಟಾಂಗೆಯಾತನಿಗೆ ಕೊಟ್ಟು, ತಾವೇ ಬಾಗಿಲ ದೂಕಿ ಅಟ್ಟಕ್ಕೆ ಹೋದರು ರಾಯರು. ಒಳಕೋಣೆಯಲ್ಲಿ ಕೂದಲು ಬಿಚ್ಚಿ ಹೆಳಲು ಹಾಕಿಕೊಳ್ಳುವ ಸಿದ್ಧತೆಯಲ್ಲಿ ಸಾನಿಯವರಿದ್ದರು. ರಾಯರು

ದೊಪ್ಪನೆ ಹೊರಗಿನಟ್ಟದ ಆರಾಮ ಕುರ್ಚಿಯಲ್ಲಿ ಕಾಲು ಚಾಚಿ ಒರಗಿ, ಕಾಲುತ್ತುದಿಗೆ ಹಣದ ಚೀಲವನ್ನು ಒಗೆದರು. ಅವರು ಒಂದ ಸುದ್ದಿ ಗೊತ್ತಿದ್ದರೂ ಸೋಗಿನ ಬೊಂಬೆಯಾದ ಸಾನಿಯು 'ಎಲ್ಲೆಲ್ಲಿ ಹುಡುಕುವರು ನೋಡೋಣ' ಎಂದು ಮುಗುಳುನಗೆ ನಗುತ್ತ ಹಿರಿಗಸ್ಸಡಿಯಿದಿರು ನಿಂತಿದ್ದಳು. ಏನೋ ಝಣತ್ಕಾರವನ್ನು ಕೇಳಿ ಮಾತ್ರ ಕಾಲು ಹಾರಿದವು. ತಟ್ಟನೆ ಪಡದೆ ಸರಿಸಿ ನಟಿಯಂತೆ ಹೊರಗೆ ಬಂದು 'ಸವಾರಿಯು ಹೊತ್ತಿಲ್ಲದ ಹೊತ್ತಿನಲ್ಲಿ ಬಂದಿತು' ಎಂದು ಮುಂದರಿದಳು. ಕಣ್ಣು, ಮನಸ್ಸು ಎಲ್ಲ ರಾಯರ ಕಾಲಕೆಳಗಿನ ಗಂಟಿನ ಕಡೆಗೆ; ಬಾಯಲ್ಲಿ ಕುಳಿತ ತೋರಿಕೆಯ ಕರುಳು ಮಾತ್ರ ರಾಯರ ಕಡೆಗೆ. ಸಾನಿ ರಾಯರ ಹಿಂದೆ ಹೋಗಿ ನಿಂತು ಎಂದಳು.

'ಯಾಕೆ ಬಹಳ ಆಯಾಸವಾಗಿರುವದೇ ? ಸೋಡಾ ತರಿಸಲೇ ?'

'ಛೇ, ಇಲ್ಲಿಗೆ ಬಂದು ಬಿದ್ದರಾಯಿತು, ಎಲ್ಲ ಹೋಗುತ್ತದೆ.'

'ಅದೇಕೆ ?'

'ಕಾಂತಾ, ನಿನಗೆ ಹೇಳಬೇಕೆ? ಕಾಂತಾ ಇದ್ದಲ್ಲಿ ಎಲ್ಲ ಶಾಂತ!'

ಸಾನಿಯು ಹುಚ್ಚುನಗೆ ನಗುತ್ತ ರಾಯರ ಮುಂಬದಿಗೆ ಬಂದು, ಜೋಲುಬಿದ್ದ ಕಪ್ಪು ಕೂದಲ ರಾಸಿಯನ್ನು ಹಿಂಗೈಗಳಿಂದ ಹಾರಿಸುತ್ತ ಅವರ ಅಡಿಯಲ್ಲಿ ಕೂಡಬೇಕೆಂದಳು. ರಾಯರು ಕೈಹಿಡಿದು ಎಬ್ಬಿಸಿ 'ಆ ಕುರ್ಚಿಯನ್ನೆಳೆದು ಕೂಡು' ಎಂದರು. ಸಾನಿಯು ಸ್ವಲ್ಪ ಹಾಗೇ ಕೂತಳು.

'ಅದೇನು ಗೊತ್ತಿದೆಯೆ ?' ಎಂದು ರಾಯರು ಥೈಲಿಯನ್ನು ತೋರಿಸಿ ಕೇಳಿದರು.

'ಇದ್ದೀತು, ಕಾಗದಪತ್ರ.'

'ಅದೆಂಥದು ?'

'ನನಗೇನು ಗೊತ್ತು ? ಯಾರದಾದರೂ ಮೃತ್ಯುಪತ್ರವಿದ್ದೀತು ! ಅದಕ್ಕೇ ಕಟ್ಟಿಟ್ಟೀರಿ. ಹೇಳಿಕೇಳಿ ವಕೀಲರು.'

ರಾಯರು ಬಾಯೊಳಗೇ ನಕ್ಕರು.

'ಕಾಂತಾ, ನಿನ್ನಂಥ ಮರುಳೆಯನ್ನು ನಾನೆಲ್ಲಿಯೂ ನೋಡಲಿಲ್ಲ.'

' ಹೌದು, ನಾನೇನು ನಿಮ್ಮಂತೆ ಟಿಸ್ ಪಿಸ್ ಕಲಿಯಲಿಲ್ಲ; ವಕೀಲಿ ಪಾಸಾಗಿ, ಏನನ್ನೊಂದಕ್ಕೂ ಮುಂದಿಯನ್ನು ಹಾಳು ಮಾಡುವ ಕಾರಭಾರ ಮಾಡಲಿಲ್ಲ. '

ರಾಯರು ಕೆಲಹೊತ್ತು ಸ್ತಬ್ಧರಾದರು.

' ನಾನು ಹೇಳಲು ಹಾಕಿ ಹೂಮುಡಿದುಕೊಂಡು ಬರಲೇ ? ' ಎಂದು ಸಾನಿಯೆದ್ದಳು.

ರಾಯರು ಕೂಡಲೆ ಆರಾಮ ಕುರ್ಚಿಯ ಹಿಂಗಡೆಯಿಂದ ಮುಂದೆ ತೂಗಿ ನುಡಿದರು.

' ಹುಚ್ಚಿಯೆಂದರೆ ಓ ಪಿನ್ನು ಏ. ತೆಗೆದುಕೊ ಆ ಚೀಲವನ್ನು; ನಿನ್ನ ತಿಜೋರಿಯಲ್ಲಿಡು. '

' ಆಗಲಿ. ನಿಮ್ಮಾಜ್ಞೆ. ಹೋಗುವಾಗ ನೀವೇ ಮರೆಯದೆ ಕೇಳಿ ಒಯ್ಯಬೇಕು, ನನಗೆ ಗೊತ್ತಿಲ್ಲ. '

' ಇನ್ನೂ ಹೇಳಬೇಕೆ ? ನಾನು ಹೋಗುವಾಗ ಒಯ್ಯುವದಿಲ್ಲ. '

' ಯಾಕೆ? ಎಷ್ಟು ದಿನ ನಾನು ಕಾಯಬೇಕು ? ನಾನೊಲ್ಲೆ ತಾಯೀ' ಎಂದು ಸಾನಿಯು ಮೋರೆ ತಿರುವಿ, ಮೂಗು ಮುರಿದು ಹೊರಟಳು.

ರಾಯರು ಕುರ್ಚಿಯಿಂದೆದ್ದು ಚೀಲವನ್ನು ಕೈಯಿಂದೆತ್ತಿ ಅವಳ ಹೆಗಲಮೇಲಿಟ್ಟು, ಅವಳು ತಿರುಗಿ ನಿಂತು ಅದನ್ನು ಹಿಡಿಯಲು, ರಾಯರು ಹೇಳಿದರು.

' ಇದು ನನಗೆ ಬಂದ ಬಕ್ಷೀಸು, ನಿನಗೆ ನಾ ಕೊಟ್ಟ ಇನಾಮು, ತಿಳಿಯಿತೋ ? '

' ಅಮ್ಮಯ್ಯ ! ' ಎಂದು ಸಾನಿಯು ಆಚ್ಚರಿಯ ಹುಬ್ಬು ಹಾರಿಸಿ, ಮೋರೆ ಡೊಂಕಿಸಿ, ಚೀಲದೊಡನೆ ಒಳಗೆ ಜಿಗಿದಳು.

ರಾಯರು ಕೋಟು ರುಮಾಲಗಳನ್ನು ತೆಗೆದು ಮಂಚದ ಮೆಲ್ಲಾಸಿನ ಮೇಲೆ ಅಡ್ಡಾದರು. ಸಂಜೆಯವರೆಗೆ ನಿದ್ದೆಯಾಯಿತು. ಏಳುವದರಲ್ಲಿ ಅಟ್ಟದ ತುಂಬೆಲ್ಲ ಜಗಜಗಿಸುವ ದೀವಿಗೆ, ಲೋಬಾನದ ಮಂಜಿನಲ್ಲಿ ಓಡಾಡುವ ಊದಿನ ಕಡ್ಡಿಯ ಹೊಗೆಯ ಬಿಳಿಮೋಡಗಳು, ಇದುರಿಗೆ ಸಿಂಗಾರಾಗಿ ಕೈಯಲ್ಲಿ ತಂಬೂರಿ ಹಿಡಿದು ಕುಳಿತು, ಯಮನ್‌ಕಲ್ಯಾಣ ರಾಗದ

ಆರಂಭಸ್ವರಗಳನ್ನೆತ್ತುವ ಸಾನಿಯು ಸವಿಗೊರಳು. ರಾಯರು ಎದ್ದು ಸೋರೆತೊಳೆದು, ಸಾನಿಯ ಹತ್ತಿರ ಗಾದೆಗೆ ಕುಳಿತರು. ಪಟ್ಟಿಗಳ ಡಬ್ಬಿ, ತಂಬಾಕು, ಪೀಕದಾಣಿ ಮುಂದೆ ಸರಿದವು. ಸಾನಿಯ ಮನೆಯು ಸತ್ಯವಾಗಿ ಸುಖಾವಾಸವೆನಿಸಿತು. ಸಾನಿಯು ಒಂದೆರಡು ರಾಗ ಹೇಳಿ ರಂಗಿನಲ್ಲಿ ಬರಲು, ರಾಯರು 'ಶಾಬ್ಬಾಸ!' ಎಂದು ರಸಿಕತೆಯ ಕಳಸವೇರಿದರು 'ಇನ್ನೇನು ಹೇಳಲಿ?' ಎಂದು ಸಾನಿಯು ಪ್ರಶ್ನೆ ಮಾಡಲು, ರಾಯರು ಸಲಿಗೆಯಿಂದ 'ಕಾಂತಾ! ಅಂದು ನಮ್ಮ ಆಟ್ಟದಲ್ಲಿ ಹಾಡಿದ **'ಪಿಯಾಪರದೇಶ'** ಚೀಜನ್ನು ಹೇಳು' ಎಂದು ಬಿನ್ನವಿಸಿಕೊಂಡರು. ಸಾನಿಯು ತಡವಿಲ್ಲದೆ ಆರಂಭಿಸಿದಳು. ನಿಜವಾಗಿ ಅವಳ ಗಾನಶಕ್ತಿಯು ಅಷ್ಟು ಸಹಜವಾದದ್ದು. ಕೇಳಿದ್ದನ್ನು ಮತ್ತೆ ಹೆಚ್ಚು ಸೊಗಸು ಮಾಡಿ ಕೇಳುತ್ತ, ಮೊದಲವಳ ಆ ಹಾಡು ಕೇಳಿದಾಗ ಮನಸ್ಸಿನಲ್ಲಿ ಬಂದ ವಿಚಾರಸ್ಫೂರ್ತಿಯನ್ನು ನೆನೆದು ಉಬ್ಬುತ್ತ, ಹೊತ್ತು – ನೆಲೆ ಮರೆತು, ರಾಯರು ಒಂದು ಚಿಕ್ಕೆಯ ಮೇಲೆ ಕುಳಿತು, ಇನ್ನೊಂದರ ಹಾಡು ಕೇಳುವಂತೆ ಕುಳಿತೇ ಕುಳಿತರು.

............ಇತ್ತ ಕೋರ್ಟಿನಲ್ಲಿ ರಾಯರು ಹೋದ ಸ್ವಲ್ಪ ಹೊತ್ತಿಗೆ, ಅವರ ಸೈ ಮಾಡಿಸಿ ಅಂದೇ ಕೋರ್ಟಿಗೆ ಹಾಜರ್ ಮಾಡಬೇಕಾಗಿದ್ದ ಜರೂರಿಯ ಕಾಗದಗಳಿವೆಯೆಂದು ಬಸವಣ್ಣೆಯ ಧ್ಯಾಸಕ್ಕೆ ಬಂದಿತು. ವೇಗದಿಂದ ಮನೆಗೆ ಹೋದನು. ಮನೆಯಲ್ಲಿ ಎಲ್ಲಿಯೂ ರಾಯರಿಲ್ಲ. ಬಂದು ಹೋದರೇನೆಂದು ವಿಚಾರಿಸಿದನು. 'ಇಲ್ಲ' ಎಂದು ಉತ್ತರ ದೊರೆಯಿತು. ಹಾದಿಯಲ್ಲಿ ಎಲ್ಲಿಯೋ ಇಳಿದರೆಂದು ಅವರು ಸಾಧಾರಣವಾಗಿ ಎಡೆತಾಕುತ್ತಿರುವ ವಕೀಲಮಂಡಳಿಯ ಮನೆಗೆಲ್ಲ ಹೋಗಿ ವಿಚಾರಿಸಿದನು. ಎಲ್ಲಿಯೂ ರಾಯರ ಸುಳಿವಿಲ್ಲ. ಜಗಣ್ಣನನ್ನು ಕೆಲವು ಕಡೆ ಕಳಿಸಿದನು. ಅಲ್ಲಿಯೂ 'ನಾಸ್ತಿ' ಎಂಬ ಸುದ್ದಿ ಬಂದಿತು. ರಾಯರು ಹೋದ ಸ್ಥಳವು ಆ ಹಗಲು ಹೊತ್ತಿನಲ್ಲಿ ಜಗಣ್ಣನಂಥವನ ತಲೆ ಹಾಯುವದು ಅಶಕ್ಯವಾಗಿತ್ತು. ಈ ಹುಡುಕಾಟದಲ್ಲಿ ಜಯರಾಯನು ಭೆಟ್ಟಿಯಾಗಿ, ಒಂದರ್ಧ ತಾಸು ಹಾದಿಯಲ್ಲಿಯೇ ನಿಲ್ಲಿಸಿಕೊಂಡು ಜಗಣ್ಣನ ಇತಿವೃತ್ತವನ್ನು ಕೇಳಿಕೊಂಡನು. 'ಈ ವಕೀಲರ ನೆರಳು ಯಾಕೆ

ಹಿಡಿದಿಯೋ ಮಹಾರಾಯ ' ಎಂದು ತನ್ನ ಕುಚೇಷ್ಟೆಯ ವೃತ್ತಿಯಲ್ಲಿ ಜೋಡಿಸಿದ ಕೂಡ. ಇದೆಲ್ಲ ಆಗುವದಕ್ಕೆ ಕೋರ್ಟಿಗೆ ಬೀಗ ಬಿತ್ತು. ಕೋರ್ಟಿನ ಸಿಪಾಯಿಗಳು ಹೆಂಡದಂಗಡಿಯ ಮುಂದೆ ತೂಗಾಡುತ್ತ ನಡೆಯುವ ಹೊತ್ತೂ ಆಯ್ತು. ಆ ಕೆಲಸವು ಹಳಸಿತೆಂದು ಬಸವಣ್ಣೆಯು ಸುಮ್ಮಗಾದನು. ರಾಯರು ಯಾವದೋ ಹಳ್ಳಿಗೆ ಹೋದರೆಂಬ ಸಂಶಯವು ದೃಢವಾಯ್ತು.

ಈ ಮಾತುಕತೆಯಲ್ಲಿ ರಾಯರ ಮನೆಯ ಕಚೇರಿಯಲ್ಲಿ ಕುಳಿತಾಗ ತಾರೊಂದು ಬಂದಿತು. ಜಗಣ್ಣನ ಜೀವ ಧಸಕ್ಕೆಂದಿತು. ಏನೋ ಅಪಘಾತವಾಯಿತೆಂಬ ಕಲ್ಪನೆಯೇ ಅವನ ತಲೆ ಹೊಕ್ಕಿತು. ಜಗಣ್ಣನು ಒಡೆದು ನೋಡಿದನು. ಸಂತೋಷದ ಸುದ್ದಿ, ಸಕ್ಕರೆ ಹಂಚುವ ಸುದ್ದಿ: ರಾಯರಿಗೆ ಗಂಡು ಮಗ ಹುಟ್ಟಿತು. ಶಾಂತಾಬಾಯಿ ಸುರಕ್ಷಿತವಾಗಿ ಗಂಡು ಕೂಸನ್ನು ಹೆತ್ತಳೆಂದು ಬದಾಮಿಯಿಂದ ಬಂದ ತಾರು ಅದು. ಸುಮ್ಮನೆ ಗಾಬರಿ ಆದದ್ದಕ್ಕೆ ಬಸವಣ್ಣೆಯು ತನ್ನ ತಾ ಛೀಗರೆದನು. ಮನೆಯ ತುಂಬ ಸುದ್ದಿ ಹಬ್ಬಿತು. ಸಕ್ಕರಿ, ಫೇಡೆ ತರಲಿಕ್ಕೆ ಆಳನ್ನು ಕಳಿಸಿದ್ದಾಯ್ತು. ಏನೋ ತಮ್ಮ ಹಬ್ಬವೆಂದು ಕಾಸೀಮನೊಬ್ಬನು ಮನೆಯಲ್ಲಿ ಇರಲಿಲ್ಲ. ಅಡಿಗೆಯಾಕೆಯು ಸವಿಸವಿಯಡಿಗೆ ಮಾಡಲಿಕ್ಕೆ ತೊಡಗಿದಳು. ಆದರೆ ರಾಯರೇ ಇಲ್ಲ.

ಊರೆಲ್ಲ 'ಕುಬೇರರಾಯರು ಎಲ್ಲಿದ್ದಾರೆ?' ಎಂಬ ಪ್ರಶ್ನೆ ತಿರುಗಿತು. ಸಾನಿ ಗಲ್ಲಿಗೆ ಹೋಗುವ ಯೋಚನೆ ಯಾರಿಗೂ ಬರಲಿಲ್ಲ; ಆ ಗಲ್ಲಿಗೆ ಹೋದವರು, ಅದಕ್ಕೆ ಏರಿದವರು ತಿರುಗಿ ಬರಲಾರರೆಂಬ ತಿಳಿವು ಹೊರಗಿದ್ದ ಅನೇಕರಿಗೆ ಇತ್ತೇನೊ! ಕತ್ತಲೆಯಾಯಿತು, ರಾತ್ರಿ ಹೆಚ್ಚಿತು. ಬಸವಣ್ಣೆಯು ತನ್ನ ಮನೆಗೆ ಹೋಗಬೇಕಾಯ್ತು. ಜಗಣ್ಣನು ಊಟ ತೀರಿಸಿ ಬಂದನು. ಊಟದ ಹೊತ್ತಿಗೆ ಸಹ ರಾಯರಿಲ್ಲ.

ರಾಯರ ಅಣ್ಣನ ಮಗನಾದ ಅನಂತನು ಹಾದೀ ನೋಡುತ್ತ ಕುಳಿತು ಬೇಸತ್ತನು. ತಂದೆತಾಯಿ ತೀರಿದ ಒಬ್ಬನೇ ಒಬ್ಬನಾಗಿ ರಾಯರ ಚೆಪ್ಪರದಲ್ಲಿ ಬೆಳೆದ ತಿಳುವಳಿಕೆಯ ಹುಡುಗನವನು. ಜಗಣ್ಣನಿಗೂ ಅವನಿಗೂ ಬಹಳ ಕೂಡುತ್ತಿತ್ತು. ಶ್ರೀಮಂತಿಕೆಯ ಎಲ್ಲ ಸಾಧನ-

ಸಾಮಗ್ರಿಗಳಿದ್ದರೂ ನೆತ್ತಿಗಣ್ಣು ಇಲ್ಲದೆ, ಎಲ್ಲರೊಡನೆ ಒಂದೆ ಸವನಾಗಿ ಇರುವ ಜಾಣ ಅನಂತನಿಗೂ ಜಗಣ್ಣನಿಗೂ ಕ್ರಮೇಣ ಹೆಚ್ಚಿನ ಸ್ನೇಹ ಬೆಳೆಯಿತು. ಅನಂತನು ಈಗ ಮ್ಯಾಟ್ರಿಕ್ ಕ್ಲಾಸಿನಲ್ಲಿ ಇದ್ದ ಮೂಲಕ ಪರೀಕ್ಷೆ ಸಮೀಪಿಸಿತೆಂದು -- ನಿಯಮಿತವಾಗಿ -- ಸಿಕ್ಕಷ್ಟು ವೇಳೆಯನ್ನು ಓದಿನಲ್ಲಿ ಹಾಕುತ್ತಿದ್ದನು. ಆದರೆ ಈ ಹೊತ್ತು ಊಟ ತಡವಾಗಿ ಅಭ್ಯಾಸಕ್ಕೆ ವಿಘ್ನ ಬಂದಿತು. ತಾನೊಬ್ಬನೇ ಊಟ ಮಾಡಲು ಮನಸ್ಸೊಪ್ಪಲಿಲ್ಲ. ಹಾಗೆಯೇ ರಾಯರ ದಾರಿ ಕಾಯುತ್ತ ಜಗಣ್ಣನೊಡನೆ ತನ್ನ ಶಾಲೆಯ, ಮಾಸ್ತರರ, ಪರೀಕ್ಷೆಯ ಸುದ್ದಿ ಹೇಳುತ್ತ ಕುಳಿತನು. ಜಗಣ್ಣನು ನಾಪಾಸಾಗಿ ಮುಂದೆ ಕಲಿಯದೆ ತಮ್ಮಲ್ಲಿ ಕೆಲಸಕ್ಕೆ ನಿಂತ ಕತೆಯನ್ನೆಲ್ಲ ಹೇಳಿ ಕಳವಳಗೊಳ್ಳುತ್ತಿದ್ದನು.

ಒಂಬತ್ತು ಹೊಡೆದು ಯಾವ ಹೊತ್ತಾಯಿತು, ಬಾಗಿಲು ತೆರೆದಂತಾಯ್ತು; ರಾಯರು ಬಂದರೆಂದು ಎಲ್ಲರೂ ಗಟ್ಟಿಹಿಡಿದಿರಲು, ಕಾಸೀಮ ಸಾಹೇಬರು ಹಬ್ಬದ ಹಾರಾಟ ಮುಗಿಸಿ—ಇನ್ನೂ ಅದೇ-ಬಣ್ಣ ಬಣ್ಣದ ಪಟ್ಟಿಯ ತೆಳ್ಳಗಿನ ಸಿಂಗಾರದ ಶರ್ಟು, ಆಕಾಶಕ್ಕೆ ಮುಟ್ಟುವ ಪೌಲಿನ ಪಟಗ, ಚಡಾವಿನ ಚರ್‌ಚರ್ರೆಂಬ ಸಪ್ಪಳದೊಡನೆ ಒಳಹೊಕ್ಕರು; ಮೆಲ್ಲಗೆ ಬಂದು 'ರಾಯರು ಊಟ ಮಾಡಿ ಮಲಗಿದರೇನು? ನಾನು ಹಾಸಿಗೆ ಹಾಸಲಿಲ್ಲ.' ಎಂದು ಜಗಣ್ಣನನ್ನು ಕೇಳಿದರು. 'ಹೌದು, ನೀನು ಬಂದರೆ ಹೊರಗೆ ಹಾಕಿ, ನಾಳೆಯಿಂದ ಕೆಲಸಕ್ಕೆ ಬೇಡ-ಎಂದು ಹೇಳಿ ಮಲಗಿದರು' ಎಂದು ಅನಂತ—ಜಗಣ್ಣರ ಚೇಷ್ಟೆಯ ಅರ್ಧ-ಗತಿಯಾದ ಮೇಲೆ, ರಾಯರು ಮನೆಗೇ ಬಂದಿಲ್ಲವೆಂಬ ನಿಜಾಂಶವು ಅವನಿಗೂ ತಿಳಿಯಿತು. ಸಂಜೆಯ ಸುತ್ತಾಟದ ಸುದ್ದಿಯನ್ನೂ ಕೇಳಿಕೊಂಡನು. ಕೂಡಲೆ 'ನನಗೆ ಏನು ಇನಾಮು ಕೊಡತೀರಿ? ನಾ ಕರಕೊಂಡು ಬರತೀನಿ' ಎಂದು ಉಬ್ಬಿನಿಂದ ಹೊರಟನು. ಈಗ ಮಾತ್ರ ಜಗಣ್ಣನಿಗೆ ರಾಯರಿದ್ದ ಜಾಗದ ಅರಿಕೆ ಹೊಳೆದಂತಾಯ್ತು. ಏನೇ ಇರಲಿ, ಬೇಗನೆ ಕರೆತರಲಿ ಎಂದು 'ಹೋಗು ಕಾಸೀಮಾ, ಕರಕೊಂಡು ಬಾ, ಗಂಡಸು ಮಗನ ಸುದ್ದೀ ಹೇಳು. ನಿನ್ನ ಇನಾಮು ಅಲ್ಲೇ ಸಿಗುವದು' ಎಂದು ಹೇಳಿ ಅವನನ್ನು ಹಚ್ಚಿಕೊಟ್ಟನು.

ಕಾಸೀಮನು ರಾಯರ ಗೆರೆಗಳನ್ನು ಪೂರ್ಣ ಬಲ್ಲವನು, ನೆಟ್ಟಗೆ ಕಾಂತಾಸಾನಿಯ ಅಟ್ಟಕ್ಕೆ ಹೋದನು. ಹಾಡಿನ ಜಲಸೆಯು ಆದೇ ಮುಗಿದು ರಾಯರು ಮಸಾಲೆಯ ಹಾಲನ್ನು ಕುಡಿಯುತ್ತ ಕುಳಿತಿದ್ದರು. ಸಾನಿಯು ಪಟ್ಟಿ ಮಾಡುತ್ತಿದ್ದಳು. ಕಾಸೀಮನು–ಇದೇ ಮೊದಲನೆಯ ಸಲವಾದರೂ – ಒಳಹೊಕ್ಕು ರಾಯರಿದ್ದಲ್ಲಿ ನಿರ್ಭಯವಾಗಿ ಹೋದನು. 'ರಾವಸಾಬ, ಗಂಡಸು ಮಗ ಹುಟ್ಟ್ಯಾನರಿ ಏಮಗ' ಎಂದು ಕಾಸೀಮನು ಆನಂದದ ಸುದ್ದಿಯನ್ನು ಸಾರಿದನು. ಸಾನಿಯು ಅತ್ಯಾನಂದದ ನಟನೆಯಿಂದ 'ಹಾ! ಶಾಂತಾಬಾಯಿ ಗಂಡು ಹಡೆದರೆ? ಯಾವಾಗ ತಿಳಿಯಿತು? ನಾಳೆ ಪೀರನಿಗೆ ಸಕ್ಕರೀ ಕೊಡಬೇಕು' ಎಂದು ತನ್ನ ತಾಯಿಗೆ ತಿಳಿಸಹೋದವಳಂತೆ ಕೆಳಗೆ ಹೋದಳು. ತಿಳಿಸಿಯೂ ತಿಳಿಸಿದಳು, ಆದರಲ್ಲಿಯ ನಿಜವಾದ ಅಂತಃಕರಣದ ಭಾಗವನ್ನು ಹಿಂಜಿ ತಿಳಿಯಲು ಬ್ರಹ್ಮನು ಅಲ್ಲಿದ್ದರೂ ತೀರ ಅಸಾಧ್ಯವೇ.

ರಾಯರು ಆ ಸುದ್ದಿಯನ್ನು ಕೇಳಿ ಇನಾಮಿನ ಸುರಿಮಳೆ ಮಾಡುವರೆಂದು ಹೋದ ಕಾಸೀಮನು ಮತ್ತೆ ಅದನ್ನು ಒದರಿ ಹೇಳಿದನು. 'ಅದು ಹೇಗೆ ತಿಳಿಯಿತೋ?' ಎಂದು ಸಾವಧಾನವಾಗಿ ರಾಯರು ಕೇಳಿದರು. 'ತಾರು ಬಂದsದಂತರಿ, ಸಂಜೀಮುಂದ ಬಂತಂತರಿ' ಎಂದು ಕಾಸೀಮನು ಉಬ್ಬಿಸಿಂದ ಹೇಳಿದನು. ರಾಯರು ಹಾಲಿನ ಕಪ್ಪನ್ನು ಮುಗಿಸಿ, ಪಟ್ಟಿಯನ್ನು ಬಾಯುಲಿಟ್ಟು 'ಆ ಸುದ್ದಿ ಹೇಳಲಕ್ಕೆ ಇಲ್ಲೀತನಕ ಬಾ ಎಂದು ನಿನಗ್ಯಾರು ಹೇಳಿದರು?' ಎಂದು ಗದ್ದರಿಸಿದರು. ಕಾಸೀಮನಿಗೆ ಹೇಗೆ ಹೇಗೋ ಆಯ್ತು. ಇನಾಮಿನ ಮಾತು ದೂರ ಉಳಿಯಿತು. ಅಲ್ಲಿಂದ ಎದ್ದನು. ಹೋಗಹೋಗುತ್ತ 'ಮನಿಯಲ್ಲಿ ಬಹಳ ಹಾದೀ ನೋಡತಾರ್ರಿ. ಊಟಕ್ಕೆ ಬರಬೇಕಂತರಿ' ಎಂದನು. 'ಬರುವದಿಲ್ಲ ಎಂದು ಹೇಳು' ಎಂದರು ರಾಯರು. ಕಾಸೀಮನ ಕಪ್ಪುಮೋರೆಯು ಇನ್ನಷ್ಟು ಕಪ್ಪಾಗಿ ಕೆಳಗಿಳಿದನು. ಅವನು ಬಾಗಿಲ ಹೊರಗೆ ಹೋಗುವದಕ್ಕೆ ಸಾನಿಯು ಮೇಲೆ ಸಾಗಿದಳು. ಕಾಸೀಮನು ಅವಳನ್ನು ನೋಡಿ 'ಏನು ಮರುಳು ಮಾಡೀದೇ ಸೆಟವಿ!' ಎಂದು ಹಲ್ಲು ಕಡಿಯುತ್ತ ಹೋದನು.

ಕಾಸೀಮನು ಮನೆಗೆ ಬಂದು ರಾಯರ ಸುದ್ದಿ ಸಂದೇಶ ತಿಳಿಸಲು

ಅನಂತನ ಹೊಟ್ಟೆಯಲ್ಲಿ ಕರುಳು ಹರಿಯುವ ಕಲಮಲವಾಯಿತು, ಹಸಿವು ಎಲ್ಲಿಯೋ ಅಡಗಿತು. ಅಡಿಗೆಯಾಕೆಯು ನಿದ್ದೆಹೋಗಿಬಿಟ್ಟಳು. ಒಳ್ಳೇ ಅಡಿಗೆ ತಂಗಳಾಗಿ ಹಾಗೇ ಉಳಿಯಿತು. ಅನಂತನು ರಾತ್ರಿಯೆಲ್ಲ ನಿದ್ದೆಯಿಲ್ಲದೆ ಹೊರಳಾಡಿ ‘ಆ ತಂಗಳಡಿಗೆಯಂತೆ ಈ ಕಕ್ಕನ ಸಿರಿ ಆಗುತ್ತದೆ, ಆಗಿಯೇ ಆಗುತ್ತದೆ–ಮಾಡುವದೇನು ?’ ಎಂದು ಗಟ್ಟಿಯಾಗಿ ಬಡಬಡಿಸಿದನು. ಅವನ ಸಲುವಾಗಿ ಅಂದು ಅಲ್ಲಿಯೇ ಮಲಗಿದ ಜಗಣ್ಣನು ‘ಏನಾಯ್ತು ?’ ಎಂದೆದ್ದು ಕೇಳಿದನು.

---

# ಜನೆಯ ಕಿಡಿ

---

ಬಾದಾಮಿಗೆ ಹೋದಂದಿನಿಂದ ಪ್ರತಿಯೊಂದು ದಿನವನ್ನು ಕಳೆಯುವದೆಂದರೆ ಶಾಂತಾಬಾಯಿಗೆ ಬೇಕುಬೇಡಾಗಿತ್ತು. ಮನಸ್ಸೆಲ್ಲ ಗೆಲವೂರಲ್ಲಿ; ಮೇಲೆ ಹೇಳಲಿಕ್ಕೆ ಬಾರದ ದುಃಖ; ಬಸಿರಿನಿಂದ ಮೊದಲೇ ಬಾಡಿದ ಬಿಳುಪಿದ ಮೋರೆ ಇನ್ನಿಷ್ಟು ಮುದುಡಿತು. ಊಟಕ್ಕೆ ಸೊನ್ನೆ ಆಯಿತು. ರಾತ್ರಿಯ ನಿದ್ದೆ ಉಸುರ್ಗರೆಯ ಹೊರಳಾಟ. ತಂದೆತಾಯಿಗಳಿಗೆ ಇದೆಲ್ಲ ಬಸಿರಿನ ತೊಂದರೆಯೆಂದು ಗ್ರಹಿಕೆ. ತನ್ನೊಳಗೆ ಕೊರಗುತ್ತ ಹೇಗೋ ಇದ್ದಳು. ಒಂದು ದಿನ ವಿಚಾರವೊಂದು ಬಂದಿತು, ಆ ಮುತ್ತು ತೆಗೆದು ಬೆಂಡೋಲಿಮಾಡಿಸಬೇಕೆಂದು. ಅವ್ವನಿಗೆ ಹೇಳಿದಳು, ಆಕೆಗೆ ಅತ್ಯಾನಂದವಾಯಿತು. ಅಕ್ಕಸಾಲಿಗನಲ್ಲಿ ತಾನೇ ಹೋಗಿ ಕುಳಿತು ಸುತ್ತಿಸತೊಡಗಿದಳು, ಬೆಂಡೋಲೆ ಸಿದ್ಧವಾದವು. ಅವನ್ನಿಟ್ಟುಕೊಂಡು ಕನ್ನಡಿಯಲ್ಲಿ ನೋಡಿಕೊಂಡಳು, ತನ್ನ ಪ್ರೀತಿಯ ಹಸಿರು ಸೀರೆಯುಟ್ಟು ಗುಡಿಗೆ ಹೋದಳು. ಅಲ್ಲಿ ಪುರಾಣಕ್ಕೆ ಬಂದ ವಿಧವೆಯರೂ ದೇವರಿಗೆ ಬಂದ ಮುತ್ತೈದೆಯರೂ ಪುರಾಣವನ್ನೂ ವೆಂಕಟ–ರಮಣನನ್ನೂ ಅಲ್ಲಿಯೇ ಮರೆತು ಇವಳನ್ನೇ ನೋಡತೊಡಗಿದರು. ಪುರಾಣಿಕರು ಗಾಬರಿಯಾಗಿ ಚಾಳೀಸು ಹಣೆಗೇರಿಸಿ ನೋಡಿದರು. ಶಾಂತಾಬಾಯಿಯ ಕಿವಿದುದಿಯಿಂದ ಸೂಸಿ ಬರುವ ಮುತ್ತಿನ ಮುದ್ದು-

ಬೆಳಕು. ಪುರಾಣವು ಬೇಗಮುಗಿಯಿತು, ಎಲ್ಲರೂ ಶಾಂತಾಬಾಯಿಯನ್ನು ಕೇಳುವವರೇ.

'ಎಲ್ಲೀವರೇ ಈ ಮುತ್ತು? ಏನು ತೇಜಿ ಅವ? ಎಷ್ಟು ಬಿದ್ದವು?'

ಶಾಂತಾಬಾಯಿಯು ತಾಯಿ ದೊಡ್ಡ ಪುರಾಣ ಮಾಡಿ, ಕುಬೇರ ರಾಯರ ಘನಸಿರಿಯ ಕಥೆಯನ್ನು ಅರ್ಧತಾಸು ಹೇಳಿದಳು. ಕೇಳಿದವರಿಗೆ ಇದೇ ಪುರಾಣ ಹೆಚ್ಚು ಸವಿಯೆನಿಸಿತು. ಆ ಮೊದಲ ಪುರಾಣಿಕರು ಹೇಳಿದ ಪರೀಕ್ಷಿತರಾಜನ ಕಥೆ, ಭಕ್ತಿ, ವೈರಾಗ್ಯ, ದುಃಖಮಯ ಸಂಸಾರ ಮೊದಲಾದ ಶಬ್ದಗಳು ಎಲ್ಲಿಯೋ ಅಡಗಿ ಹೋದವು. ಯಾವೊ ಬಾಯಲ್ಲಿ 'ನಾನೂ ತರಿಸಬೇಕು ನೋಡೇ ಆ ಮುಂಬೈ ಮುತ್ತು' ಎಂಬ ಮಾತೇ.

ಶಾಂತಾಬಾಯಿ ಸಂಜೆಗೆ ಮನೆಕಂಡಳು, ರಾತ್ರಿಯಾಯಿತು, ಇದ್ದದರಲ್ಲಿ ಕಡಿಮೆ ಬೆಳಲಿಕೆಯಲ್ಲಿ ಆ ದಿನವು ಕಳೆಯಿತೆನ್ನುವದಕ್ಕೆ ಎಲ್ಲಿಂದಲೋ ನೆನವು ನುಗ್ಗಿತು. ಕತ್ತಲೆಕೋಣೆಗೆ ಹೋಗಿ ಹಾಸಿಗೆ ಯುರುಳಿಸಿ ಹೊರಳಾಡುತ್ತ ಕಿವಿಗೆ ಕೈಯಿಟ್ಟು 'ಈ ಮುತ್ತು ಕೊಟ್ಟ ಆ ಕೈಯು ಈಗ ಯಾವಳ ಪಾಲಾಗಿದೆಯೋ ...' ಎಂದು ದೊಡ್ಡದಾಗಿ ಅಳಹತ್ತಿದಳು. ಹಾಸಿಗೆ ತೊಯ್ಯಿತು, ಹುಚ್ಚುಕಲ್ಪನೆಗಳ ಬಲೆಯಲ್ಲಿ ಸಿಕ್ಕು, ರಾತ್ರಿಯಂತ ರಾತ್ರೆಲ್ಲ ಜೀವ ಜಿರಿಜಿರಿಯಾಯ್ತು.

ಮುಂದೆ ಕೆಲದಿನಕ್ಕೆ ಶಾಂತಾಬಾಯಿ ಹಡೆದಳು, ಕೂಸು ಬಾಣಂತಿ ಸುದೈವದಿಂದ ಕುಶಲವಾಗಿದ್ದರು ತಾರು ಬಿಟ್ಟದ್ದಾಯ್ತು, ಉತ್ತರ ಬರಲೇ ಇಲ್ಲ. ಪತ್ರ ಹೋಯಿತು, ಅದರಲ್ಲಿ ಕುಬೇರರಾಯರಿಗೆ ಬಂದು ಹೋಗುವ ಸಲುವಾಗಿ ಬಹಳ ಆಗ್ರಹಪಡಿಸಿ ಬರೆಯಿಸಿದ್ದಳು.

ಅದಕ್ಕೆ 'ಬರುವದಾಗುವದಿಲ್ಲ, ಕೆಲಸದಲ್ಲಿದ್ದಾರೆ' ಎಂದು ಬಸವಣ್ಣೆಯ ಕಡೆಯಿಂದ ಪಕ್ಕದಾರರಿಗೆ ಬಂದಹಾಗೆ ಉತ್ತರ ಬಂದಿತು. ಅದು ಬಂದ ದಿನ ಶಾಂತಾಬಾಯಿಗೆ ಉಂಟಾದ ಹೊಟ್ಟೆಯುರುವು ಅಷ್ಟಿಷ್ಟಲ್ಲ. 'ಎಳೆಂಟು ದಿವಸಕ್ಕೊಮ್ಮೆ, ಅದೇಕೆ ಎರಡು ಸಾರೆ ಬಂದು ಭೆಟ್ಟಿ ಕೊಡುವೆನೆಂಬ ಇವರ ಬಣ್ಣದ ಮೋಸದ ಮಾತು ತಿಳಿದಹಾಗಾಯ್ತು' ಎಂದು ಆ ಪತ್ರವನ್ನು ಮುದುಡೆಮಾಡಿ ಮೂಲೆಗೆ ಚೆಲ್ಲಿದಳು.

ಮುಂದೆ ಬೇಸಿಗೆಸೂಟಿಯು ಬಂದಿತು. ಆಗೂ ಪತ್ರವಿಲ್ಲ, ಬರುವ ದಂತೂ ದೂರವೇ ಉಳಿಯಿತು. ಇನ್ನು ಬರಬಹುದೆಂಬ ಬಯಕೆಯನ್ನೆ ಚಿವುಟಿ ಬಿಟ್ಟಂತಾಯ್ತು. ತಾನು ಮುನ್ನೋಡಿದ ಅನರ್ಥವು ನಡೆದಿದೆ ಯೆಂದು ಅವಳು ಮನಗಂಡಳು. ಮುತ್ತಿನ ಲಂಚದಿಂದೋ ಹೇಗೋ ತಾನು ಹೊರಟು ಬಂದದ್ದು ತೀರ ತಪ್ಪಾಯ್ತೆಂದು ಕನವರಿಸಿದಳು. ಹಿಂದಿನ ಸಲ ತಾನು ಹಡೆದಾಗ, ಬಂದು ಹೋಗುವದೇನು—ಹೊರಸಿನ ಮೇಲೆ ಕುಳಿತು ಕೂಸೆತ್ತಿಕೊಳ್ಳುವದೇನು—ಊರಿಗೆ ಹೋದ ಮೇ ಮೇಲೆ ಪತ್ರದ ಸುರಿಮಳೆಯೇನು! ಒಂದಕ್ಕೊಂದು ಹೋಲಿಸಿ ತನ್ನ ಎಣಿಕೆಯು ಸರಿಯೆಂದು ಗೊತ್ತುಮಾಡಿಕೊಂಡಳು. 'ಊರಿಗೆ ಇನ್ನಾ ದರೂ ಹೋಗಿ ನೋಡೋಣ, ನನ್ನಿದಿರು ಆ ಮರುಳಾಟವು ನಿಂತೀತು' ಎಂದು ಅವಳಿಗೆ ಎನಿಸಿತು. ತನ್ನನ್ನು ಬೇಗನೆ ಕಳಿಸಿರೆಂದು ಅವ್ವ ಅಪ್ಪನಿಗೆ ಗಂಟುಬಿದ್ದಳು. ಅವರು ಹೇಗೆ ಕಳಿಸುತ್ತಾರೆ? ಹಡೆದು ಮೂರು ತಿಂಗಳಾದರೂ ಆಗಬೇಡವೆ? ಇದೇ ತಿಂಗಳಾಗಿತ್ತು. ಶಾಂತಾಬಾಯಿಗೆ ಇದು ಗೊತ್ತಿದ್ದರೂ ಅವಳ ಕರುಳು ಹುಚ್ಚಾಗಿತ್ತು, ಬುದ್ಧಿಗೇಡಾಗಿತ್ತು. ಒಂದು ರಾತ್ರಿ ಮೊಲೆ ಕೊಟ್ಟರೂ ಗಪ್ಪಾಗದೆ ಅತ್ತೇ ಅಳುವ ಕೂಸನ್ನು ನೋಡಿ 'ಯಾಕೆ ಹುಟ್ಟಿದಿ? ಯಾಕೆ ಬಂದಿ ನನಗೆ ಮುಳುವಾಗಿ?' ಎಂದು ಚೀರಿ ಬಿಟ್ಟಳು. ಇದೇನಾಯ್ತೆಂದು ತಂದೆ-ತಾಯಿ ಇಬ್ಬರೂ ಎದ್ದು ಬಂದರು. ಕೂಸನ್ನು ಹೊರಸಿನ ಮೇಲೆ ಬಿಟ್ಟು ಬಾಣಂತಿ ಹೊರಟು ನಿಂತಿ ದ್ದಾಳೆ. 'ಯಾಕೆ? ಏನು?' ಎಂದು ಅವರು ಕೇಳಿದರು. 'ಸಾಕು. ನಾನು ನಿಂದಿರಲಾರೆ. ಊರಿಗೆ ಹೋಗುವೆ' ಎಂದಳು. ಹಾಗೆ ಮಾಡಬಾರದೆಂದು ಶಮಿಸಬೇಕಾದರೆ ರಗಡಾಯ್ತು. ಅಂದಿನ ಅವಳ ದುಃಖದ ಅಂಚಿನಂಚು ಅವರಿಗೆ ತಿಳಿಯಿತು. ಅಳುವಿನಲ್ಲಿ ಅವರೂ ಪಾಲುಗೊಂಡರು.

ಎರಡುವರೆ ತಿಂಗಳಾಯ್ತು, ಮುಹೂರ್ತ ತೆಗೆಯಿಸಿ ಗುಡಿಗೆ ಕಳಿಸಿ ಶಾಂತಾಬಾಯಿಯನ್ನು ಗಲವೂರಿಗೆ ಕಳಿಸುವ ಶಾಸ್ತ್ರವಾಯ್ತು. ಮಧ್ಯಾಹ್ನದ ಗಾಡಿಗೆ ಊರು ಮುಟ್ಟಿದಳು, ಊರಿಗೆ ಬಯಸಿದಂತೆ ಬಂದೆ ನೆಂಬ ಸಮಾಧಾನದ ಹೊರತು ಉಳಿದೆಲ್ಲ ಕಸಿವಿಸಿ, ಒತ್ತಿಟ್ಟ ಕಣ್ಣೀರು. ರಾಯರು ಕಚೇರಿಗೆ ಹೋಗಿದ್ದರು, ಅಡಿಗೆಯಾಕೆ ಬರಮಾಡಿಕೊಂಡಳು.

ಮುದ್ದು ಕೂಸನ್ನೆತ್ತಿ ಮುತ್ತು ಕೊಟ್ಟು ಆಡಿಸಿ ಆಡಿಸಿ ದಣಿಯುದಾದಳು. ಅದಾವ ಉಮೇದಿಯೂ ಆದರ ಹಡೆದವ್ವನಿಗೆ ಇಲ್ಲ. 'ಥೇಟ ರಾಯರ ಹಾಗೇ ಆದೆ, ಅದೇ ಮೂಗು, ಅದೇ ಕಣ್ಣು' ಎಂದು ವರ್ಣನೆಗಾರಂಭ ವಾಯ್ತು. 'ಅದೇ ಸ್ವಭಾವ ಆಗದಿರಲಿ' ಎಂದು ಶಾಂತಾಬಾಯಿ ತನ್ನ ಮನಸ್ಸಿನಲ್ಲಿ ಎಂದುಕೊಂಡಳು. ಸಂಜೆಯಾಯ್ತು, ರಾಯರು ಬಂದರು. ಬಾಯಿಯವರು ಬಂದದ್ದು ತಿಳಿಯಿತು. ನೆಟ್ಟಗೆ ಮೇಲಟ್ಟಕ್ಕೆ ಹೋದರು. ಕೋಲು ರುಮಾಲು ತೆಗೆದು ಆರಾಮ ಕುರ್ಚಿಯಲ್ಲಿ ಬಿದ್ದುಕೊಂಡರು; ಗಹನವಿಚಾರಕ್ಕೆ ಮೊದಲಾಯ್ತು. ಮಾತಾಡಿಸಲಿಕ್ಕೆ ಬರಬಹುದೆಂದು ಕೆಳಗೆ ಹಾದೀ ನೋಡಿ ಅರ್ಧತಾಸು ಆಯ್ತು. ಮತ್ತೆಮತ್ತೆ ಬಯಸುವ ಶಾಂತಾಬಾಯಿಯ ಮರುಳು ಹೃದಯಕ್ಕೆ ಹೊಸಬರೆ ಬಿದ್ದಿತು.

'ನಾನು ಬರಿಸುವೆ ನಿಂದಿರ್ರಿ' ಎಂದು ಅಡಿಗೆಯಾಕೆಯು ನೀರು ಕುಡಿಯಲಿಕ್ಕೆ ಬರಬೇಕೆಂದು ಹೇಳಿಕಳಿಸಿದಳು. 'ಕೋರ್ಟಿನಲ್ಲಿ ಎಲ್ಲ ಮುಗಿದಿದೆ' ಎಂಬುತ್ತರ ಬಂದಿತು. 'ಮೇಲೆ ಯಾರಾದರೂ ಜೋಡಿ ಇದ್ದಾರೇ? ಎಂಬ ಶೋಧವೂ ಆಯ್ತು, ಯಾರೂ ಇಲ್ಲ, ರಾಯರು ಒಬ್ಬರೇ. ತಲೆಯಲ್ಲಿ ಇದ್ದ ಇನ್ನೊಬ್ಬರ ಪತ್ತೆ ಹತ್ತುವದು ಹೇಗೆ? ಮನೆ ಯಲ್ಲಿ ಕಾಲಿಟ್ಟಾಗ, ಬಂದು ಬಿದ್ದೆನೆಂಬ ಶಾಂತಾಬಾಯಿಯ ಎದೆ ಹಗುರು, ಯಾಕೆ ಬಂದೆನೆಂಬ ತಿವಿತಿವಿದು ಕೇಳುವ ಪ್ರಶ್ನೆಯಲ್ಲಿ ಇಲ್ಲ ದಾಯ್ತು.

ಅಂದೇ ರಾತ್ರಿಯೂಟವಾಗಿ ಮಲಗುವ ಹೊತ್ತು. ಯಾರೋ ಒಂದು ಚೀಟಿಯನ್ನು ಕೊಟ್ಟು ಹೋದರು. ಒಡೆದು ನೋಡಲು ಕಾಂತಾ ಸಾನಿಯ ಪತ್ರ: 'ಸುಂದರ ಶೇಟಜಿಯವರಲ್ಲಿ ನಾನು ಈವತ್ತು ಜಲಸಾಕ್ಕೆ ತಮ್ಮ ಪರವಾನಗಿಯಿಂದ ಹೋಗಬೇಕೆನ್ನುತ್ತೇನೆ. ಕೃಪೆಯಾಗಲಿ.'

'ಆಗಲಿ' ಎನ್ನದ ಹೊರತು ನಿರ್ವಾಹವೇ ಇಲ್ಲ. ಇಂಥ ಪರವಾನಗಿಯ ರೀತಿಯಿದು. ತಿರುಗಿ ಚೀಟಿಯು ಹೋಯಿತು. 'ಇಂದೇ ಈ ಜಲಸಾ ಬೇರೆ' ಎಂದು ರಾಯರು ಗುಣಗುಣಿಸುತ್ತ ಮುಸುಗು ಹಾಕಿ ಮಂಚದ ಮಚ್ಛರದಾಣಿಯಲ್ಲಿ ಮರೆಯಾದರು. ಶಾಂತಾಬಾಯಿಯು ಕೂಸೆತ್ತಿ ಮೇಲಟ್ಟಕ್ಕೆ ನಡೆದಳು. ತನ್ನ ಅಧಿಕಾರದ ಸ್ಥಳಕ್ಕೆ ಹೋಗುವೆನೆಂಬ

ಹೌಸು ಅವಳಲ್ಲಿ ಇಲ್ಲ. ಊಟಕ್ಕೆ ಕುಳಿತಾಗ ಆಡಿದ ಉಪಚಾರದ ಒಂದೆರಡು ಮಾತು ಬಿಟ್ಟು ಉಳಿದೆಲ್ಲ ಬಿಗುವಿನ ಬ್ರಹ್ಮಗಂಟೇ ಆದ ರಾಯರನ್ನು ಕಾಣುವದು ಹೇಗೆ? ಕೋಣೆಯಲ್ಲಿ ಕಾಣುವೆನೋ ಇಲ್ಲವೋ? ಎಂದು ಕೋಣೆಯ ಬಾಗಿಲಿಗೆ ಬಂದಳು, ರಾಯರು ಒಳಗಿದ್ದ ಸಪ್ಪಳವೇ ಇಲ್ಲ. ಎದೆ ಧಗಧಗಿಸಿತು. ಒಳಹೊಕ್ಕಳು, ತನ್ನ ಹಾಸಿಗೆಯಲ್ಲಿ ಬೆಚ್ಚಗಾಗಿ ಕೂಸನ್ನು ಒರಗಿಸಿದಳು. ಕೆಲ ಹೊತ್ತು ಅಲ್ಲಿಯೇ ನಿಲ್ಲಲು, ಉಸಿರಿನ ಏರಿಪಾಟದ ಸುಯ್ಯಲದು ಕೇಳಬಂತು. ಮಂಚದಲ್ಲಿ ಮಲಗಿರುವರೆಂಬ ಧೈರ್ಯವುಂಟಾಯಿತು. ತಾನು ಬಂದಿರುವದು ತಿಳಿಯುವ ಹಾಗೆ ಅತ್ತಿತ್ತ ಸುಳಿದಳು. ನಿದ್ದೆ ಹತ್ತದೆ ರಾಯರು ಮುಸುಗುಟ್ಟುತ್ತ ಮಲಗಿದ್ದರೂ ಏಳಲಿಲ್ಲ. ಯಜಮಾನತಿ ಎಬ್ಬಿಸಬೇಕಾಯಿತು, ಹೇಗೋ ಜುಕ್ಕುಜುಲುಮೆಯಿಂದ ಎದ್ದರು.

'ಊರಿಂದ ಬಂದರೆ ಒಂದು ಮಾತು ಆಡಬಾರದೇನು ? ನಾನೇನು ಅಂಥ ಅಪರಾಧ ಮಾಡೀನಿ?' ಶಾಂತಾಬಾಯಿಯೇ ಸೋಲಬೇಕಾಯ್ತು. ಉತ್ತರವಿಲ್ಲ.

'ನನ್ನೊಡನೆ ಮಾತು ಹೋಗಲಿ. ಕೂಸು ನೋಡುವ ಅಪೇಕ್ಷೆಯೂ ಇಲ್ಲವೆ?' ಹೀಗೆನ್ನುತ್ತ ಕೂಸು ತಂದು ತೊಡೆಯಲ್ಲಿ ಕೊಟ್ಟಳು. ತಂದೆಯನ್ನು ಗುರುತಿಸಿಯೇನೊ ಎನ್ನುವಂತೆ ಅದು ಎದ್ದು ಪಿಳಿಪಿಳಿ ಕಣ್ಣು ಹೊರಳಿಸಿತು. ಈಗ ನಾಲ್ಕು ತಿಂಗಳಿಂದ ಕಲ್ಲುಮಾಡಿಕೊಂಡ ಎದೆಯು ಆ ಎಳೆಯ ಜೀವದ ಚಂಚಲ ನೋಟದ ಏಟಿನಿಂದ ಕರಗಲೆಂದಿತು. 'ಹೆಸರೇನು ಇಟ್ಟಿರಿ?' ಎಂದು ರಾಯರು ತಡೆಯಲಾರದೆ ಸಹಜವಾಗಿ ಕೇಳಿದರು. ಶಾಂತಾಬಾಯಿಗೆ ಇದೊಂದು ಕೇಳಿಕೆಯಿಂದ ಅದೆಂಥ ಹರುಷವಾಯಿತು! ಹಿಂದಿನ ನೋವನ್ನು ನುಂಗಿ ನಲಿಯುವಂತಾಯ್ತು. ಕೂಡಲೆ ಬಾಯಿತುಂಬ ಆಡಿದಳು.

'ಮೊದಲು ನೀವು ಬರೆದ ಹೆಸರನ್ನು ಇಡಬೇಕೆಂದು ಮಾಡಿತ್ತು. ನೀವು ಬರೆಯಲಿಲ್ಲ. ತಲೆಗೊಬ್ಬರು ಹೆಸರು ಹೇಳಿದರು, ಮನೋಹರ ಮಾಧವ, ಅದು ಇದು. ನನಗೆ ಅವು ಯಾವು ಸೇರಲಿಲ್ಲ. ಕಡೆಗೆ ಮಾವನವರ ಹೆಸರಿಡಿಸಿದೆ: ಕನಕರಾಯರು ಎಂದು.'

‘ಓಹೋ ಈಗಾಗಲೇ ಇವರು ಕನಕರಾಯರಾದರೇನು?’

‘ನಾನು ಇಟ್ಟದ್ದು ಸೆಟ್ಟಗಾಯಿತಲ್ಲವೆ?’

‘ಆಗದೆ? ತಂದೆಯವರ ಹೆಸರಿಟ್ಟು ಬಹಳ ಸೆಟ್ಟಗೆ ಮಾಡಿದಿ.’

ರಾಯರು ಕೂಸಿನ ಕಡೆ ನೋಡಿ ಬೆರಳಾಡಿಸುತ್ತ ‘ಕನಕಾ! ಹುಚ್ಚಾ!’ ಎಂದು ಮಿತವಾಗಿ ಆಡಿಸಿದರು. ಇದನ್ನೆಲ್ಲ ನೋಡುತ್ತಿದ್ದ ಶಾಂತಾಬಾಯಿಗೆ ಏನೋ ಒಂದು ಭ್ರಮುವಳಿ ಹಿಗ್ಗು. ತಾನು ಹಿಂದೆ ತಿಳಿದುದೆಲ್ಲ ಸುಳ್ಳಿರಬೇಕೆಂಬ ವಿಚಾರವು ಪ್ರಬಲವಾಯ್ತು. ಅವರ ಸ್ವಭಾವವೇ ಹಾಗೆ, ಒಮ್ಮೆ ಏರು, ಒಮ್ಮೆ ಇಳಿಯು. ‘ಬೇರೆ ಏನೂ ಆಗಿಲ್ಲ, ನಾನೇ ಇಲ್ಲದ್ದು ಬಗೆದು ಗೋಳಿಟ್ಟೆ’ ಎನ್ನುವವರೆಗೆ ಅವಳ ಹಿಗ್ಗು ಹೆಚ್ಚಿತು. ಕೂಸನ್ನು ತಿರುಗಿ ಇಸಿದುಕೊಂಡು ಮಲಗಿಸಿದಳು.

ಶಾಂತಾಬಾಯಿ ತನ್ನ ಹಾಸಿಗೆಯಲ್ಲಿ ಕುಳಿತು ಸಲಿಗೆಯ ಸ್ವರದಲ್ಲಿ ಕೇಳಿದಳು.

‘ನೀವು ಬರುತ್ತೇನೆಂದು ಹೇಳಿ ಯಾಕೆ ಬರಲಿಲ್ಲ?’

‘ಕೆಲಸವು ಬಹಳಿತ್ತು. ಪತ್ರ ಹಾಕಿತ್ತಲ್ಲ?’

ಆಕೆಗೆ ನಿಜವಿರಬೇಕೆನಿಸಿತು. ತಾನು ಕಲ್ಪಿಸಿಕೊಂಡದ್ದು ಎಲ್ಲ ಭ್ರಮೆಯೆನಿಸಿತು. ಖೋಡಿ ವಕೀಲೀ ಉದ್ಯೋಗದಲ್ಲಿ ಒಮ್ಮೆ ಹೆಸರು ಬಿದ್ದರೆ ಕೆಲಸ ಬಹಳವೆಂದು ಆವಳಿಗೆ ತಿಳಿದಿತ್ತು, ಈಗದನ್ನೇ ಭಾವಿಸಿದಳು.

‘ನಾನು ಒಂದಗಳಿಗ್ಗೆ ಬಂದು ಮಾತಾಡಿಸಲಿಲ್ಲ. ಯಾಕೆ?’ ಎರಡನೆಯ ಸವಾಲು ಬಂದಿತು.

‘ನನಗೆ ಕೆಟ್ಟ ತಲೆಸೂಲಿ. ಈವತ್ತು ಮನಸ್ಸಿಗೆ ಚೈನವೇ ಇಲ್ಲ.’

ಮೊದ್ದು ಹೆಂಗಸು, ಎಲ್ಲ ನಂಬಿದಳು. ಕೇಳುವದೇನೂ ಉಳಿಯಲಿಲ್ಲ. ತಾನು ಮಾಡಿಸಿದ ಬೆಂಡೋಲೆ ತೋರಿಸಿ,ಜನರು ಮಾಡಿದ ಮುತ್ತಿನ ವರ್ಣನೆ ಹೇಳಿ ಪ್ರಸನ್ನಳಾಗಿ ನಿದ್ದೆಹೋದಳು.

ರಾಯರ ಅಶಾಂತಿ ರಾತ್ರಿಯೊಡನೆ ಹೆಚ್ಚಿತು. ಸುಮ್ಮನೆ ಹೊರಳಾಡುತ್ತ ಬಿದ್ದುಕೊಂಡಿದ್ದರು. ಗಡಿಯಾರದಲ್ಲಿ ಎರಡಾಯ್ತು, ಜಲಸಾ ಪಾರ್ಟಿಯು ಈಗ ತೀರಿರಬೇಕೆಂದು,ಅಪರಾತ್ರಿಯೆನ್ನದೆ ಎದ್ದು ನಡೆದರು. ಮುಂದೊಮ್ಮೆ ಆಕಸ್ಮಿಕವಾಗಿ ಕೇಡುಗನಸಿನಿಂದ ಎಚ್ಚರವಾಗಿ ಎದ್ದ

ಶಾಂತಾಬಾಯಿಯು ತನ್ನ ರತ್ನ ಕಾಯುವ ನಾಗರ ಹಾವಿನಂತೆ ರಾಯರ ಕಡೆಗೆ ನೋಡಿದಳು, ಮಟಮಾಯವಾಗಿದ್ದರು. ಗೂಟಕ್ಕಿದ್ದ ಕೋಟು ರುಮಾಲು, ಮೂಲೆಯಲ್ಲಿಯ ಬಡಿಗೆ ಅದೃಶ್ಯವಾಗಿದ್ದವು. 'ಅಯ್ಯೋ, ನಾನು ತಿಳಕೊಂಡದ್ದು ಸುಳ್ಳಲ್ಲ, ಸುಳ್ಳಲ್ಲ!' ಎಂದೆದ್ದು ತಲೆ ಬಡಿದು ಕೊಂಡು ಅತ್ತಳು. ಬೆಳಗಿನವರೆಗೆ ಅದೇ ಮುಳು ಮುಳು ನಡೆಯಿತು.

ಮರುದಿನ ರಾಯರು ಎಂಟು ಒಂಬತ್ತಕ್ಕೆ ಕಣ್ಣುತಿಕ್ಕುತ್ತ ಮನೆಗೆ ಬಂದರು. ಅಲ್ಲಿಯೇ ಕನಕನನ್ನು ತೊಟ್ಟಿಲಕ್ಕೆ ಹಾಕುತ್ತಿದ್ದ ಶಾಂತಾಬಾಯಿ ಅದನ್ನು ನೋಡಿದಳು, ಕೆಟ್ಟ ಸಂಕಟವಾಯಿತು. ರಾಯರ ಮೇಲಿನ ಕನಲಿಕೆ ಜೀಕುವ ತೊಟ್ಟಿಲದ ಮೇಲೆ ಹಾಯ್ದು, ಹಿರಿದೆರೆಯು ಹಡಗವನ್ನು ಹೊಯ್ದಾಡಿಸಿದಂತೆ ಕೂಸನ್ನು ಹೊಯ್ದಾಡಿ ಸಿತು. ಅಲ್ಲಿಗೇ ಮುಗಿಯಲಿಲ್ಲ. ಹಗಲು ಊಟವನ್ನು ಸರಿಯಾಗಿ ಉಣ್ಣ ಲಿಲ್ಲ. ಮಧ್ಯಾನ್ಹವೆಲ್ಲ ಹೊದ್ದುಕೊಂಡು ಮಲಗಿಬಿಟ್ಟಳು. ಸಂಜೆಯ ಅಡಿಗೆಗೆಂದು ಬಂದ ಅಡಿಗೆಯಾಕೆ ನೋಡುತ್ತಾಳೆ, ಪರ್‌ವರ್ರೆಂದು ಒದ ರುತ್ತ ಕೂಸು ತೊಟ್ಟಿಲದಲ್ಲಿದೆ. ತಾಯಿ ತನ್ನ ಮುಸುಕಿನಲ್ಲಿ. ಇದೇನು ವಿಚಿತ್ರವೆಂದು ಆಕೆ ಚಿನ್ನನನ್ನೆತ್ತಿ ಅಪ್ಪಿಕೊಂಡು, ಶಾಂತಾಬಾಯಿ ಮಲಗಿ ದಲ್ಲಿ ಹೋಗಿ ಕೊಟ್ಟಳು. ಒಲೆ ಹೊತ್ತಿಸುವದಾದ ಮೇಲೆ ತಾನೂ ಅಲ್ಲಿಯೇ ತಲೆಗಿಂಬಿನ ದೆಸೆಗೆ ಹೋಗಿ ಕುಳಿತಳು. ತಲೆಯ ಮೇಲೆ ಮೆಲುಗೈಯಾಡಿಸುತ್ತ 'ಯಾಕೆ ಶಾಂತಾಬಾಯಿ, ಏನಾಗಿದೆ? ತಲೆಸೂಲಿ ಯೇನು? ಅಮೃತಾಂಜನ ತರಲೆ?' ಎಂದು ಕೇಳಿದಳು. 'ಬೇಡ ಬೇಡ' ಎಂಬ ಹಾರಿಕೆಯ ಉತ್ತರವಾಲೆ ಆಯಿತು. ಹೇಳಬಾರದ ಬವಣೆಯನ್ನು ಆವಳು ಹೇಗೆ ಹೇಳುವಳು?

ಅಡಿಗೆಯಾಕೆ ಎಲ್ಲ ಗೊತ್ತಿದ್ದವರಂತೆ ಒಮ್ಮೆಲೆ ಆಡಿದಳು.

'ನನಗೆ ಗೊತ್ತದೆ ಶಾಂತಕ್ಕ ನಿನ್ನ ದುಕ್ಕಾ. ಮಾಡುವದೇನು? ಪ್ರಾಲಬ್ಧ. ಆವತ್ತು ರಾತ್ರಿ ಆ ಸೋಗಲಾಡಿ ಯಾಕೆ ಹಾಡಲಿಕ್ಕೆ ಬಂದಳೋ, ಅದೇ ನಿಮಿತ್ತ ಆತು. ಅದಕ್ಕೇ ನೀನು ಹಡೆಯಲಿಕ್ಕೆ ಹೋಗ ಬ್ಯಾಡ. ನಾನೇ ಇಲ್ಲಿ ಬಾಣೆಂತನ ಮಾಡತೀನಿ ಅಂದೆ. ನೀನಾದರೂ ಏನು ಮಾಡುವದು? ರಾಯರು ಹಟ ತೊಟ್ಟರು.'

ಈಗ ಶಾಂತಾಬಾಯಿಯ ದುಃಖವು ಇಮ್ಮಡಿಯಾಯಿತು. 'ಎಲ್ಲರಿಗೆ ಗೊತ್ತಾಗೇದ ಬ್ಯಾರೆ' ಎಂದು ಅಳತೊಡಗಿದಳು. ಅಡಿಗೆಯಾಕೆ ಹಾಗೆ ಹೀಗೆ ಆವಳನ್ನು ಸಂತವಿಸಿ, ತೀರ ಹತ್ತಿರಕ್ಕೆ ಹೋಗಿ, ಕಿಡಕಿಯಲ್ಲಿ ನೋಡಿ ಯಾರೂ ಇಲ್ಲೆಂದು ತಿಳಿದು, ಕಿವಿಮಾತು ಹೇಳಿದಳು.

'ನಾನು ಹೇಳಲೇನು ಶಾಂತಾಬಾಯರೇ. ಇದೆಲ್ಲ ಆ ಹುಡುಗ ಹೊಕ್ಕಾನಲ್ಲ ಮನಿಯೊಳಗ, ಅವನ ಕಾಲ್ಗುಣ. ನನಗೆಲ್ಲಾ ಗೊತ್ತದೆ. ಅವ ಬಂದ ದಿನದ ತೊಟ್ಟು ರಾಯರು ಇದನ್ನು ಸುರುವು ಮಾಡಿದ್ದಾರೆ. ಮೊದಲನೇ ಪತ್ರವನ್ನು ಬರತೀವಿ ಎಂದು ಹೇಳಿ ಅವನ ಜೋಡೀನೆ ರಾಯರು ಆಕೆಗೆ ಕಳಿಸಿಕೊಟ್ಟರು.'

'ಏನು ಜಗಣ್ಣನ ಜೋಡೀ?' ಎಂದು ಶಾಂತಾಬಾಯಿ ಉತ್ಸುಕಳಾಗಿ ಕೇಳಿದಳು.

'ಹೌದು ಹೌದು. ಅವನ ಜೋಡಿ. ಆಕಿಯ ಮನೆಗೆ ಹೋಗಂದಾಗ ಹೋಗಬೇಕು, ಹೇಳಿದ್ದು ಕೇಳಬೇಕು, ಅಂತ ಕರಾರು ಮಾಡಿ ರಾಯರು ಅವನ್ನ ಇಟುಗೊಂಡಾರ.'

'ಹೀಗೆನು? ನಾನೆಂಥ ಹುಚ್ಚಿ? ಜಗಣ್ಣ ಒಳ್ಳೆಯವ ಅಂತ ಮಾಡಿದ್ದೆ.'

'ಅದೆಲ್ಲಾ ಸುಳ್ಳು, ಇದs ನೋಡಿರಿ. ನಿಮ್ಮನ್ನು ಕಳಿಸಲಿಕ್ಕೆ ರಾಯರು ಅವನ್ನs ಯಾಕ ಕರಿಸಿಕೊಂಡರು? ಅವನ್ನs ಯಾಕ ಕಳಿಸಿದರು? ಕಾಸೀನು ಇದ್ದಿಲ್ಲs? ಅನಂತ ಇದ್ದಿಲ್ಲs?'

ಶಾಂತಾಬಾಯಿಗೆ ಇದೆಲ್ಲ ಹೊಸ ಸುದ್ದಿಯಾಯಿತು, ನಿಜವೂ ಎನಿಸಿತು. ಅಡಿಗೆಯೊಲೆ ಆ ಕೋಣೆಯಿಂದ ಕಾಣಿಸುತ್ತಿದ್ದ ಕಾರಣ, 'ಅಯ್ಯೊ, ಅನ್ನ ಉಕ್ಕಿ ಒಲಿ ಆರತsದ' ಎನ್ನುತ್ತ ಹೋಗಿ ಸ್ವಲ್ಪ ನೀರು ತೆಗೆದು ಕಟಿಗೆ ಚಾಚಿ ಮತ್ತೆ ಬಂದು ಹೇಳಿದಳು.

'ಶಾಂತಕ್ಕ, ನನ್ನ ಜೀವಕ್ಕೂ ಬ್ಯಾಸರಕಿ ಬಂದsದ. ಈಗೆಲ್ಲಾ ಆತ ನದs ಕಾರಭಾರ. ನೀವು ಹೋದ ಹಿಡಿದೂ ಎಲ್ಲಾ ಮನಿಯು ಎವಸ್ಥಾ ಆವಂದs. ಸಾಮಾನಿನ ಕ್ವಾಣೀ ಕೀಲೀ ಹಾಕಿ ನನಗ ಅಳದಳದು ಅಡಿಗೇ ಸಾಮಾನು ಕೊಡತಿದ್ದ, ನೀವು ಬಂದರಿ. ನೆಟ್ಟಗಾತು' ಈ ಪ್ರಕಾರ

ಅವಳ ರೋದನಾಕಾಂಡವು ನಡೆಯಿತು. ಹೊರಗೆ ರಾಯರ ಮೊಚ್ಚೆ ಸಪ್ಪಳ ಕೇಳಿಯೇ ನಿಂತಿತು. ಶಾಂತಾಬಾಯಿಗೆ ಮಾತ್ರ ಮೊದಲಿನ ಸಿಟ್ಟು ಸಂಕಟಗಳಲ್ಲಿ ಹೊಸ ಕಹಿಯೊಂದು ಬೆರೆಯಿತು, ಜಗನ್ನಾಥನ ನಕ್ಷತ್ರ ಕೆಂಗಣ್ಣಾದವು.

ಮೊದಲಿನ ಇರುಳಲ್ಲಿ ರಾಯರು ಕೆಲ ತಾಸಾದರೂ ಮನೆಯಲ್ಲಿದ್ದರೆ, ಇಂದು ಇದಿರಿದಿರು ಹತ್ತಕ್ಕೇ ಹೋದರು. ‘ ಎಲ್ಲಿಗೆ ? ಯಾಕೆ ? ಬೇಡ ! ’ ಎಂಬ ಮೂರೂ ಮಾತುಗಳನ್ನು ಆಡುವ ವೇಗದಿಂದ ಶಾಂತಾಬಾಯಿ ತಲೆಬಾಗಿಲಿಗೆ ಬಂದಳು; ಆದರೆ ರಾಯರು ಬೀದಿ ಬಿದ್ದಿದ್ದರು. ಆಗೇನು ಕೇಳುವದು ? ಮಿಕ್ಕಿದ ಕಳವಳದಿಂದ ಮೇಲಟ್ಟಕ್ಕೆ ಹೋಗಿ, ರಾಯರು ಕಾಣುವವರೆಗೆ ನೋಡಿದಳು, ಮರೆಯಾದರು. ಬಾಗಿದ ಮೋರೆ ಹಾಗೇ ಇರುವಾಗಲೆ ‘ ನಾನೂ ಕೆಳಗೆ ನುಗ್ಗಿ ಬಿಡಲೇ ? ’ ಎಂಬ ಹುಚ್ಚು ಯೋಚನೆ ಮೊಳೆಯಿತು. ಅಳುವ ಕೂಸು ಕರೆಯಿತು, ಹೋಗಿಬಿಟ್ಟಳು.

ಮರುಇರುಳಲ್ಲಿ ರಾಯರು ಹೊರಡುವ ಹೊತ್ತಿಗೆ ಟಕ್ಕು ಹಿಡಿದು ಕುಳಿತು, ಕೈಹಿಡಿದು ‘ ಎಲ್ಲಿಗೆ ಹೊರಟಿರಿ ?’ ಎಂದು ಕೇಳಿಬಿಟ್ಟಳು. ರಾಯರಲ್ಲಿ ಉತ್ತರಕ್ಕೇನು ಕೊರತೆ ? ಖಟ್ಲೆಯ ಬಗ್ಗೆ ವಕೀಲ ವಸಂತರಾಯರ ಕೂಡ ಮಾತು ಕತೆ ಆಡಲಿಕ್ಕೆ ಹೋಗುವೆನೆಂದರು. ‘ ಅದೆಲ್ಲ ಸುಳ್ಳು, ನನಗೆ ಗೊತ್ತಿಲ್ಲ ಎಂದು ಮಾಡಬೇಡಿರಿ ’ ಎಂದು ಗಟ್ಟಿಸಿ ಶಾಂತಾಬಾಯಿ ಆಡಿದಳು. ರಾಯರ ಸಿಟ್ಟು ಬ್ರಹ್ಮರಂಧ್ರಕ್ಕೆ ಹೋಯಿತು. ಬುದ್ಧಿ ಹಾರಿದವರಾಗಿ ಕೈಕಸಿದು ಹಿನ್ನುಗಿಸಿ ‘ ನಿನಗೇಕೆ ಎಲ್ಲ ಕಾರಭಾರ, ಸುಮ್ಮನೆ ಬೀಳು ಹೋಗು ’ ಎಂದು ಕಣ್ಮರೆಯಾದರು. ಅವೇ ಹಡೆದೆದ್ದ ಆ ಎಳಕ ಮೈಗೆ ಅಂದಾದ ನೋವು, ಮನಸ್ಸಿಗೆ ತಗಲಿದ ಪೆಟ್ಟು, ಅವಳ ಪ್ರೀತಿಯನ್ನೆಲ್ಲ ಕೊಂದು ಹೃದಯವನ್ನು ಹಿಚುಕಿದವು.

ಮರುದಿವಸ ಮುಂಜಾನೆ ಎಂಟು ಒಂಬತ್ತರ ನಡುವೆ ಜಗನ್ನಾಥನು ತನ್ನ ಕೆಲಸಕ್ಕೆ ಬರುವ ಹಾಗೆ ಬಂದು ಮೇಲೆ ಹೋಗುತ್ತಿರುವಾಗ, ನೆಲದಲ್ಲಿ ಚೀಲಹಾಸಿ ಮಲಗಿಸಿದ ಕನಕನು ಅಳುವದು ಕೇಳಿಸಿತು. ಶಾಂತಾಬಾಯರು ಹಿತ್ತಲ ಕಡೆಗೆ ಹೋಗಿರಬಹುದೇನೊ ಎಂದು ಎತ್ತಿಕೊಳ್ಳ ಹೋದನು. ರಾತ್ರಿಯೆಲ್ಲ ನಿದ್ದೆಗೆಟ್ಟು ಮನದ ಶಾಂತಿಯನ್ನು

ಕಳೆದುಕೊಂಡು ಪದ್ಮಿಯು ಮೋರೆಯೊರಿಸುತ್ತ ನಿಂತ ಶಾಂತಾ ಬಾಯರು ಕೂಡಲೆ ಕೆರಳಿ ಕೂಗಿದರು:

'ನೀನೆತ್ತ್ಯಬ್ಯಾಡೊ ಜಗಣ್ಣಾ ಕನಕನ್ನ.'

'ಅಳತsದ ಬಾಯರೇ' ಜಗಣ್ಣನು ನಮ್ರನಾಗಿ ಹೇಳಿದನು.

'ಅತ್ತರೇನಾತು. ಅಳದs ಯಾವ ಹುಡುಗರು ದೊಡ್ಡವು ಆಗ್ಯಾವ? ಎಲ್ಲಾದರೊಳಗೂ ಕಾರಭಾರ ಬ್ಯಾಡ.'

ಈ ಕೋಪಶಾಪದ ದನಿ ಕೇಳಿ ಅಡಿಗೆಯಾಕೆಯು ತಾನು ನೆಟ್ಟ ಬೀಜವು ಹೇಗೆ ಮರವಾಗಿದೆ....ನೋಡಲೆಂದು ಬಾಗಿಲ ಸಂದಿಗೆ ನಿಂತಳು. ಜಗಣ್ಣನಿಗೆ ಬಾಯರ ಮಾತಿನ ಹರಿ ತಿಳಿಯಲೇ ಇಲ್ಲ. 'ನಾನೇನು ಅಂಥ ಕಾರಭಾರ ಮಾಡೀನಿ ಬಾಯರೇ?' ಎಂದು ಮುಗುದನಂತೆ ಕೇಳಿದನು ಆಯಿತು, ಹುದುಗಿಕೊಂಡಿದ್ದ ಕಹಿಯೆಲ್ಲ ಹೊರಚೆಲ್ಲಿತು.

'ಏನು ಕಾರಭಾರ ನಿನಗೆ ಯಾಕೆ ಗೊತ್ತಿದ್ದೀತು? ಅನುಭೋಗಿಸುವವರಿಗೆ ಗೊತ್ತು. ಮನಿತುಂಬ ನಿನ್ನದೇ ಆಗಿದೆ ಚೆಲ್ಲಾಟ. ನಮ್ಮ ಸಂಸಾರದೊಳಗೆ ವಿಷಬೆರಿಸಲಿಕ್ಕೆ ಬಾ....ಎಂದು ನಿನಗೆ ಹೇಳಿ ಕಳಿಸಿತ್ತೇ? ಬಡವನಾದರೆ ಬಿಕ್ಷೆ ಬೇಡಿ ಹೊಟ್ಟೆ ಹೊರಕೊಳ್ಳಬೇಕು.'

ಇನ್ನೂ ಜಗಣ್ಣನ ದಿಗಿಲು ಹೋಗಲಿಲ್ಲ, ಬೈಗಳ ಸುರಿಮಳೆಯಲ್ಲಿ ಮೈ ಬೆವರಿತು. 'ನಾನೇನು ಮಾಡೀನಿ ಅಂಥದನ್ನು?' ಎಂದು ಮತ್ತೆ ಮತ್ತೆ ಕೇಳಿದನು. ಬಾಯಿಯುವರು ಸ್ಪಷ್ಟವಾಗಿ ಹೇಳಲಾರರೆಂದು ಸೂಕ್ಷ್ಮತಿಳಿದ ಅಡಿಗೆಯವಳು ತಟ್ಟನೆ ಮುಂದೆ ಬಂದು ಆಡಿದಳು.

'ಏನು ಕೇಳತೀಯೋ ಜಗನ್ನಾಥರಾಯಾ,ಮಾಡುವದನ್ನು ಮಾಡಿ? ನೀ ಬಂದಮ್ಯಾಲs ರಾಯರಿಗೆ ಹೊರಚಟ ಹತ್ತೇದ.'

ಈ ಮಾತು ಜಗಣ್ಣನ ತಲೆದಿಮ್ಮೆನಿಸಿತು, ಹುಚ್ಚನಂತೆ ಗೋಡೆಗೆ ಆತು ನಿಂತನು. ಮಾತಾಡಲು ನಾಲಿಗೆ ನಡೆಯಲಿಲ್ಲ. ಅಲ್ಲಿಂದ ಹೊರಟು ಮೇಲೆ ಸಹ ಹೋಗದೆ, ಹೊರಹೊರಟನು. ಅವರು ಹೋದ ಮೇಲೆ 'ಹೆಂಗ ಹೋಗತಾನ ನೋಡ್ರಿ, ನಾಚಿಕಿ ಇಲ್ಲದ?' ಎಂದು ಅಡಿಗೆಯ ರಕ್ಕಸಿ, ಕೊನೆಯ ಒಗ್ಗರಣೆಯನ್ನು ಬೇರೆ ಹಾಕಿದಳು.

ಜಗಣ್ಣನು ದಿಕ್ಕೆಟ್ಟು ಬಿಸಿಲಲ್ಲಿ ಪಿರಿಪಿರಿ ತಿರುಗಿ ಮನೆಗೆ ಹೊರಡಲು,

ಹಾದಿಯಲ್ಲಿ ಜಯರಾಯನು ಒದರಿ ಕರೆದನು. ಹುಚ್ಚುಪಚ್ಚಾದ ಮುಖ ನೋಡಿ ಜಯರಾಯನು ತನ್ನ ಹುಡುಗಾಟಿಕೆಯಲ್ಲಿ 'ಯಾಕೆ? ಪಟ್ಟಿ ಸೋಲಿಸಿದಿರೆಂದು ಪಕ್ಷಕಾರರು ಮಸಿ ಉಗ್ಗಿದರೇನು?' ಎಂದು ಕೇಳಿದನು. ಸುಮ್ಮನಿರಲಾಗದೆ 'ಇಲ್ಲ, ಜಯಾ, ಇಷ್ಟು ದಿವಸದ ಚಾಕರಿ ಹೊಳೆಯಲ್ಲಿ ಹುಣಿಸೆ ತೊಳೆದಂತೆ ಆಯ್ತು. ಪಕ್ಷಕಾರರು ಉಗ್ಗಲಿಲ್ಲ, ಯಜಮಾನರ ಒಡತಿ ಉಗ್ಗಿದರು, ಎಂದೂ ಒರಿಸಲಿಕ್ಕೆ ಬಾರದ ಮಸಿ ಉಗ್ಗಿದರು.' ಎಂದು ಜಗಣ್ಣನೆಂದ. ಕಣ್ಣು ನೀರುತುಂಬಿಕೊಂಡವು. ಸ್ವಲ್ಪದರಲ್ಲಿ ಆದದ್ದನ್ನು ಜಯರಾಯನಿಗೆ ತೋಡಿಕೊಂಡನು. ಅದೆಲ್ಲ ಕೇಳಿ ಮುಗುಳುನಗೆಯಿಂದ ಜಯರಾಯನು 'ಅದಕ್ಕೇ ಹೇಳಿದೆ ಮಹಾರಾಯಾ, ವಕೀಲರ ನೆರಳು ಬೇಡೆಂದು. ಚಂದನದಗಿಡ ಅದು, ದೂರಿಂದ ಚೆಂದ, ಒಳ್ಳೇ ಸುಗಂಧ; ಒಳಗೆ ಸುತ್ತಿಸುತ್ತಿಕೊಂಡು ಬಿದ್ದ ಹಾವು, ಜಗಣ್ಣ. ಹೋಗಲಿ, ಈಗೇನಾಯ್ತು? ಇನ್ನು ನನ್ನ ಮಾತು ಕೇಳಿ ನಿನ್ನ ಮೊದಲಿನ ಪುಸ್ತಕ ಹಿಡಿ ನೋಡೋಣ. ಕಲಿ, ಮುಂದ ಕಲಿ' ಎಂದು ಹುರುಪಿನಿಂದ ಬೋಧಿಸಿ ಊಟಕ್ಕೆ ಜೊತೆಗೂಡಿಸಿಕೊಂಡು ಮನೆಗೆ ಕಳುಹಿದನು.

---

## ೬ನೆಯ ಕಿಡಿ

---

ತಾನು ಜೋತುಬಿದ್ದ ಗಿಡದ ಬೊಡ್ಡೆಯು ಈವರೆಗೆ ಗಟ್ಟಿಯೆಂದು ತಿಳಿದ ಜಗಣ್ಣನಿಗೆ 'ಅದು ಹಾಗಲ್ಲ' ಎಂದು ಗೊತ್ತಾಯಿತು. 'ಎಲ್ಲಿಂದಲೋ ಬಂದ ನೀರು ಒಳಗಿನಿಂದ ಕೊರೆದು, ಬೊಡ್ಡೆದರಸೆ ಗಿಡವನ್ನು ಕೆಡಹುವುದರಲ್ಲಿದೆ—ಎಂಬ ಅರಿವು ಬಂತು. ಶಾಂತಾಬಾಯಿಯ ಸಿಟ್ಟಿನ ಕೈಯಲ್ಲಿ ಬುದ್ಧಿಕೊಟ್ಟು ಆಡಿದ ಮಾತು, ಅದರ ಮೇಲೆ ಅಡಿಗೆಯಾಕೆ ಮಾಡಿದ ಟೀಕೆ, ಅವನಿಗೆ ಮರೆಮಾತಾಗುವಂತಿರಲಿಲ್ಲ; ಕೊನೆವರೆಗೆ ನಿಲ್ಲುವ ತಿವಿಮಾತು ಆದವು. ಇಷ್ಟುದಿನ ಹಚ್ಚಿಕೊಂಡು ಮಾಡಿದ ಸೇವೆ, ಅದರಿಂದ ಮನೆಗೆ ಆದ ಉಪಯೋಗ, ಮನಸ್ಸಿಗೆ ದೊರೆತ ಶಿಕ್ಷಣ ಇವನ್ನು

ನೆನೆಸಿ 'ನನಗಿಷ್ಟು ಇದ್ದರೆ ಸಾಕು! ಯಾಕೆ ಹೆಚ್ಚು ಬಯಸಬೇಕು?' ಎಂದು ಸ್ವಲ್ಪುಹಿಂದೆ ಅವನು ತನ್ನಷ್ಟಕ್ಕೆ ಅಂದುಕೊಂಡಿದ್ದನು. ಆ ಮೊದಲು ಇದ್ದ ಹಿರಿಹುರುಪನ್ನು ಹೋಗಲಾಡಿಸಲು ಹವಣಿಸುತ್ತಲೂ ಇದ್ದನು. ಈಗ ಈ ಒರಸಿಡಿಲು ಬಂತು, ಅವನ ಕಣ್ಣು ತೆರೆದವು.

ಹೊಟ್ಟೆಯಲ್ಲಿ ಪಂಜು ಇಟ್ಟುಕೊಂಡು ಹೊರಗೆ ತೋರದೆ ಇರುವ ದುಃಖಿಯಂತೆ ಅವನ ಗತಿಯಾಯ್ತು. ಮನೆಯಲ್ಲಿ ಹೇಳಲಾರ, ಹೇಳಿದರೆ ಅವ್ವ-ಅಪ್ಪ ತನಗಿಂತ ಹೆಚ್ಚು ಗಾಬರಿಗೊಂಡು ಎದೆಗುದಿಯಲ್ಲಿ ಕಾಲಕಳೆಯಬಹುದೆಂದು ಅಂಜಿದನು. ಇತ್ತ ಕುಬೇರರಾಯರಿಗಾಗಲಿ ತನ್ನ ಮೇಲಧಿಕಾರಿ ಬಸವಣ್ಣಿಗಾಗಲಿ ಆದ ಸಂಗತಿಯನ್ನು ಹೇಳುವ ಸ್ಥಿತಿಯಿಲ್ಲ. 'ರಾಯರು ಹೆಂಡತಿಯ ಮೇಲೆ ಇನ್ನಿಷ್ಟು ರೇಗಿ ಹುಣ್ಣಿನ ಮೇಲೆ ಹುಳಿ ಚೆಲ್ಲಲಾರರೆ? ಅದರಿಂದೇನು ಪ್ರಯೋಜನ? ಇನ್ನು ಬಾಯಿಯವರು ಅಂದು ಸಿಟ್ಟಿನಲ್ಲಿ ಆಡಿರಬಹುದು ಹಾಗೆ, ಸಿಟ್ಟು ಅಡಗಿದಾಗ ಒಮ್ಮೆ ಮಾತಾಡಿಸಿ ತನ್ನ ತಪ್ಪಿಲ್ಲೆಂದು ತೋರಿಸಿಕೊಡಬಾರದೇಕೆ?' ಎಂಬ ವಿಚಾರವು ಒತ್ತರದಿಂದ ಬಂದಿತು. ಆದರಂತೆ ನಡೆದು ನೋಡಬೇಕೆಂದು ಒಂದೆರಡು ಸಣ್ಣಯತ್ನಗಳನ್ನು ಮಾಡಿದನು, ಕೈಗೂಡಲಿಲ್ಲ. ಯಾವಾಗಲೂ ದುಮುದುಮು ಉರಿಯುವ ಹೊಸತರವು ಶಾಂತಾಬಾಯಿಯಲ್ಲಿ ಮನೆಮಾಡಿತ್ತು.

ರಾಯರಲ್ಲಿ ಇರುವದೇ ಜಗಣ್ಣನಿಗೆ ಅಸಾಧ್ಯವೆನಿಸಿತು. ಕೆಲಸದಲ್ಲಿ ಸೊಗಸು ಅಳಿಯಿತು. ಚೊಕ್ಕ ಕೆಲಸ ಮಾಡಿದಾಗ ಪುಷ್ಟ ಏರಿಸುವ ಬಸವಣ್ಣಿಯು ಈಗಂತೂ ತೀರ ಗಳಪಿದನು. ರಾಯರಂತೂ ಜುಲುಮೆಗೆ ಕೋರ್ಟು, ಜುಲುಮೆಗೆ ಕಚೇರಿ ಆಗಿಬಿಟ್ಟರು. ಮನೆಯಲ್ಲಿ ಎಲ್ಲಿಯೂ ನಗೆ ಬತ್ತಿತು, ಹಾಗಾದರೆ ನಾನೇಕೆ ಇಲ್ಲಿ ಇರಬೇಕು? ಎಂದೊಮ್ಮೆ ಹೊಸ ಸಂಕಲ್ಪ ಮಾಡುವ ಉದ್ದೇಶದಿಂದ ಜಗಣ್ಣನು ತನ್ನನ್ನು ಕೇಳಿಕೊಂಡನು. ಕಣ್ಣಮುಂದೆ ಮುಂದಿನದೆಲ್ಲ ತಂದುಕೊಂಡನು, ಹಿಂದಿನದು ಬೆನ್ನಟ್ಟಿಯೇ ಇತ್ತು. ಎಲ್ಲದಕ್ಕೆ ಉತ್ತರವೊಂದೇ ಒತ್ತಿಒತ್ತಿ ಬಂದಿತು; ಹೊಟ್ಟೆ, ನನ್ನ ಹೊಟ್ಟೆ, ಮನೆಯವರ ಹೊಟ್ಟೆ ಆದಕ್ಕಾಗಿ ಇರಬೇಕು, ಸತ್ತಂತೆ ಇದ್ದರೂ ಇರಬೇಕು!

ಏಳೆಂಟು ದಿಸಗಳಲ್ಲಿ, ತನ್ನ ತೀರಿದ ತಾಯ ಆಪ್ತರೊಬ್ಬರ ಆಗ್ರಹ ದಿಂದ ಪರವೂರಿಗೆ ಹೋಗಿದ್ದ ಅನಂತನು ತಿರುಗಿ ಬಂದನು. ಕುಲುಕುಲು ನಗೆಯಿಂದ ಬಂದನು ತಾನು ಪಟ್ಟ ಶ್ರಮವು ಸರಿಯಾದ ಫಲ ಕಂಡರೆ ನಗದೆ ಏನು? ಹತ್ತು ಹದಿನೈದು ದಿನ ಹಿಂದೆ ಹೊರಬಿದ್ದ ಮ್ಯಾಟ್ರಿಕ್‌ದ ಪರಿಣಾಮದಲ್ಲಿ ಮೇಲ್ತರಗತಿಯ ಗುಣಗಳಿಂದ ಅವನು ತೇರ್ಗಡೆಯಾ ಗಿದ್ದನು. ಅದನ್ನು ತಾರಿನಿಂದ ಮೊದಲು ತಿಳಿದುಕೊಂಡ ಕ್ಷಣವೇ ಜಗ ಣ್ಣನು ಅವನು ಹೋದ ಊರಿಗೆ ತಾರು ಕಳಿಸಿದ್ದನು. ಮರಳಿ ಅನಂತನಿಂದ ಹರ್ಷದ—ಸ್ನೇಹದ ಪತ್ರ ಬಂದಿತ್ತು. ಆಮೇರೆಗೆ ಗೆಲವೂರಿಗೆ ಅನಂತ ಬಂದನು. ಸ್ನೇಹಿತರಿಬ್ಬರ ಭೆಟ್ಟಿ ಮೊದಲಾಯ್ತು. ಅನಂತನ ಓದುವ ಕೋಣೆಯಲ್ಲಿ ಪುಸ್ತಕಗಳನ್ನು ಹರವಿಕೊಂಡು ಆತ ಕುಳಿತಿರಲು, ಜಗ ಣ್ಣನು ಕಚೇರಿಯಿಂದ ಉಸ್ಸೆಂದು ಬಂದನು. ಹಿಗ್ಗಿದ ನೋಟದ, ಬಾಯ್ತುಂಬಿ ಬರಲೊಲ್ಲದ ನಗೆಯ ಭೆಟ್ಟಿಯಾಯ್ತು. ಅನಂತನು ಜಗ ಣ್ಣನ ಹೆಗಲಲ್ಲಿ ಕೈಯಿಟ್ಟು 'ಜಗಣ್ಣಾ, ನೀನು ಅವತ್ತು ತಾರು ಬಿಡದಿದ್ದರೆ ನನಗೆ ಹುಚ್ಚೇ ಹಿಡಿಯುತ್ತಿತ್ತು ನೋಡು. ಇಲ್ಲಿಗೆಂದು ತಾರಿಟ್ಟು ಅಲ್ಲಿಗೆ ಹೋದೆ. ಅಬಚಿಯೆಲ್ಲಿಯೂ ಹೋಗಗೊಡಲೊಲ್ಲಳು. ಎರಡು ಮೂರು ದಿವಸ ನಿದ್ದೆ ಇಲ್ಲ, ಚಲೋ ಕೆಟ್ಟ ಕನಸು ಕೂಡಿಯೇ ಬಿದ್ದವು. ನಿನ್ನ ತಾರು ಬಂದು ನನ್ನನ್ನು ಕುಣಿಸಿಬಿಟ್ಟಿತು. ನಿನ್ನ ಕಡೆಗೆ ಅಂದೇ ಓಡಿಬರಬೇಕೆಂದೆನಿಸಿತು. ಆದರೆ ಪಾಪಾದ ಮೇಲೆ ಕೇಳುತ್ತಾರೇ? ಮತ್ತೆ ಹಿಡಿದು ಹಿಡಿದು ನಿಲ್ಲಿಸಿಗೊಂಡರು.' ಎಂದನು. ಜಗಣ್ಣನಿಗೆ ಎಲ್ಲ ಕೇಳಿ ಅವನ ಸುಖದಲ್ಲಿ ಸಮಭಾಗಿಯಾಗಬೇಕೆಂದು ಹಾರೈಕೆ ಬಂತು. ತನ್ನ ಬೇಸಸ, ತನ್ನ ಬೇಸರ ಆ ಹಾರೈಕೆಯನ್ನು ಕಟ್ಟಿಹಾಕಿದವು. ಆದರೂ 'ಹೀಗೇನು?' ಎಂದು ತುಸುವೆ ನಡುನಡುವಿನಲ್ಲಿ ಆಡುತ್ತಿದ್ದ. ಅನಂತ ಮುಂದೆ ಸಾಗಿದ.

'ಆದರೆ ಜಗಣ್ಣಾ, ನಿನಗೆ ಅವತ್ತು ಬಹಳ ತ್ರಾಸವಾಯ್ತೇನೋ? ತಾರುಮಾಡಲಿಕ್ಕೆ ರೊಕ್ಕ ಎಲ್ಲಿದ್ದವು?'

'ನನ್ನಲ್ಲಿ ಎಲ್ಲಿಯ ರೊಕ್ಕವಪ್ಪಾ. ನಿಮ್ಮ ಕಕ್ಕಂದಿರ ಖಜೀನಿ ಯಿಂದ ಖರ್ಚು ಮಾಡಿದೆ'

'ನೆಟ್ಟಗೆ ಮಾಡಿದಿ ಬಿಡು. ಮತ್ತೆ....ನನ್ನ ಮಾರ್ಕನ್ನು ಯಾರು ಹೇಳಿದರು? ಗೊತ್ತಾಗಲಿಕ್ಕೆ ಎರಡು ಮೂರು ದಿನ ಹಿಡಿದಿರಬೇಕು'

'ಹೌದು, ಒಂದೆರಡು ದಿನ ನಾನು ಎಡತಾಕಬೇಕಾಯಿತು'

'ನನ್ನ ಸಲುವಾಗಿ ನಿನಗೆಷ್ಟು ತ್ರಾಸವೊ? ಅದಕ್ಕಾಗಿ ನಾ ಏನು ಮಾಡಲಿ ನಿನಗೆ ಹೇಳು'

ಹೀಗೆ ಸ್ನೇಹ ಚಿಗುರಿ ಎಲೆಬಿಡುವ ಹೊತ್ತಿನ ಇಬ್ಬರು ಗೆಳೆಯರ ಸಂವಾದ ನಡೆಯಿತು. ಆದರಲ್ಲಿ ಜಗಣ್ಣನ ಎದೆನೋವು ಮಾತ್ರ ಅನಂತನಿಗೆ ಅಷ್ಟು ತಿಳಿಯಲಿಲ್ಲ. ಅವನಿಗಂಥ ಆನಂದದ ಹೊತ್ತೇ ಅದು.

'ನಾಳೆಯೇ ನಾನು ಕಾಲೇಜ ಸೇರಲಿಕ್ಕೆ ಹೊರಡಬೇಕು, ಜಗಣ್ಣಾ' ಎಂದು ಅನಂತನು ಮಾತಿನಲ್ಲಿ ಒಮ್ಮೆ ಉಬ್ಬಿನಿಂದ ಹೇಳಿದನು.

'ನೀನು ಹೋಗದಿದ್ದರೆ ಇನ್ನು ಯಾರು ಹೋಗಬೇಕು? ಅವಶ್ಯ ಹೋಗು, ಅನಂತ. ಕಕ್ಕನು ದುಡ್ಡು ಕೊಡುತ್ತಾನೆ, ನಿನಗೆ ಚಲೋ ಬುದ್ಧಿ ಅದೆ, ಎಲ್ಲಾ ಅನುಕೂಲ ಅದೆ'

'ಆದರೆ ಈ ಪುಸ್ತಕದ ಗುಡ್ಡವನ್ನು ಏನು ಮಾಡಬೇಕು—ಎಂದು ವಿಚಾರ ಬಿದ್ದದೆ. ನೀನಂತೂ ಓದುಬರೆ ಎಲ್ಲಾ ಮುಗಿಸಿ ಕುಳಿತಿ'

'ಆದರೆ ....' ಎಂದು ಜಗಣ್ಣ ನಿಂತನು.

'ಆದರೇನು, ನಿನ್ನ ಗುರುತಿನ ಬಡಹುಡುಗರು ಯಾರಾದರೂ ಇದ್ದಾರೇನು? ಅವರಿಗೆ ಕೊಟ್ಟು ಬಿಡೋಣ. ಇಲ್ಲಿ ನೋಡಿದಿಯು, ಈ ಜಾಮಿಟ್ರಿ ಬಿಡಿಸಿದ ಹಾಳೆಯ ನೂಡು! ಇವೆಲ್ಲಾ ಈಗ ಹಳೆಯುವು ಆದವು ನನಗೆ. ಈಗಿನ ಕಲಿಯೋದು ಒಂದು ಮೋಜೇ, ಜಗಣ್ಣಾ. ಪರೀಕ್ಷೆಯ ಹೊತ್ತಿಗೆ ಇವೆಲ್ಲಾ ಅಂದರೆ ಮುತ್ತುರತ್ನ ಇದ್ದ ಹಾಗೆ ಕಾಪಾಡುವದು; ಮುಂದೆ ಕಸಕಡ್ಡಿಯ ಹಾಗೆ ತಿಪ್ಪೆಗೆ ಹಾಕುವದು. ಅದಿರಲಿ, ಅಂಥ ವಿದ್ಯಾರ್ಥಿ ಯಾರಿದ್ದಾರೆ?'

'ಇದ್ದಾರೆ, ಇನ್ನೂ ವಿಚಾರದಲ್ಲಿದ್ದಾರೆ.'

'ಅವರು ಯಾರೊ? ಆ ನಮ್ಮ ಲಂಬೋದರರಾಯ—ಅವನಿಗೆ ಕೊಡೋಣ ಏನು.'

'ಅವರೆಲ್ಲ ಯಾಕೋ, ಇಲ್ಲಿಯೇ ಕೊಟ್ಟು ಬಿಡು.'

‘ ಯಾರಿಗೆ ?’

‘ ನನಗೆ ! ಮತ್ತ್ಯಾರಿಗೂ ಬೇಡ, ನನಗೆ ! ಅನಂತ, ಓದಿ ಪರೀಕ್ಷೆಗೆ ಇನ್ನೊಮ್ಮೆ ಕೂಡಬೇಕೆಂಬ ಕೆಟ್ಟಬುದ್ಧಿ ಹುಟ್ಟಿದೆ ನನಗೆ. ನಾನೂ ಪಾಸಾಗಬಹುದೇನೊ? ’

ಈ ಕಡೆಯ ಪ್ರಶ್ನೆಯಲ್ಲಿ ಕುಳಿತ ಕರುಣೆಯು ಅನಂತನ ಕರುಳನ್ನು ಹಿಂಡಿತು.

‘ ಏನು ಕೇಳತೀ, ಜಗಣ್ಣ. ನೀನು ಕುಳಿತರೆ ಅದು ಯಾರು ಪಾಸು ಮಾಡದವರು ? ನಾನು ನೋಡತೀನಿ. ನೀನೇ ಅದು ಇದು ಹೇಳಿ ಒಲ್ಲೆ ಅನ್ನುತ್ತಿದ್ದೆಯೆಂದು ಸುಮ್ಮನಿದ್ದೆ. ಈಗ ಒಳ್ಳೇದಾಯ್ತು. ಕಾಸೀಮನಿಗೆ ಹೇಳಿ ಬಿಡತೀನಿ. ಸಂಜೆ ಅನ್ನುವದರಲ್ಲಿ ಎಕ್ಕಾದಲ್ಲಿ ಹಾಕಿ ಈ ಎಲ್ಲ ಚೋಪಡಿಯನ್ನು ನಿಮ್ಮ ಮನೆಗೆ ಮುಟ್ಟಿಸುವನು. ನಾಳೆನಿಂದ ಸುರುವು ಮಾಡು, ಸುಳ್ಳಲ್ಲ, ಸುರುವು ಮಾಡು. ಈ ಕೆಲಸ ಹೋಗಲಿ, ಹಳ್ಳಾ ಕೂಡಿ. ’

ಅನಂತನ ಈ ಹುರುಪು ಜಗಣ್ಣನ ಮೈಗೆ ಅಂಟಿತು. ತಾನೂ ಕಾವೇರಿ ‘ ಆಗಲಿ, ನಿಸ್ಸಂಶೆ ಆಗಲಿ ’ ಎಂದನು.

ಸಂಜೆಯೂಟ ತೀರಿದ ತರುವಾಯ ಅನಂತನು ಕಕ್ಕನನ್ನು ಆತನ ಕೋಣೆಯಲ್ಲಿ ಕಂಡು, ತನ್ನ ವಿಜಯದ ಬಗ್ಗೆ ಅವರು ಕೇಳಿದ್ದಕ್ಕೆಲ್ಲ ಉತ್ತರ ಕೊಟ್ಟನು. ಅವನು ಪಡೆದ ಗುಣಗಳ ಬಗ್ಗೆ ರಾಯರಿಗೆ ಅಭಿಮಾನ ಹುಟ್ಟಿ, ಕಾಲೇಜನ್ನು ಸೇರಲು ಆತನನ್ನು ಹುರುಪುಗೊಳಿಸಿದರು. ತಾವು ಅವನನ್ನು ಇಟ್ಟುಕೊಂಡು ಬೆಳೆಯಿಸಿದ್ದರಿಂದ ಇನ್ನಿಷ್ಟು ಕೀರ್ತಿಯನ್ನೂ ಹಣದ ಪ್ರತಿಫಲವನ್ನೂ ಅವನಿಂದ ಮುಂದೆ ಪಡೆಯಲೆಂದು ಕೋರಿದರು. ಅಂತೂ ಮರುದಿನ ಹೊರಡಲು ಅಪ್ಪಣೆ ದೊರೆಯಿತು. ಅನಂತನು ಸಿದ್ಧತೆಯ ಯೋಚನೆಗಳಲ್ಲಿ ತನ್ನ ಕೋಣೆಗೆ ಮರಳಿದನು; ರಾಯರು ತಮ್ಮ ನಿತ್ಯಕ್ರಮದಂತೆ ‘ ಸುಖಾವಾಸ ’ ಕ್ಕೆ ತೆರಳಿ, ಶಾಂತಾಬಾಯಿಯ ದುಃಖವು ಕೊನೆಯಿಲ್ಲದ—ಹಗಲು ಕಾಣದ—ಕತ್ತಲೆಯಂತೆ ಆಗುವ ಹಾಗೆ ಮಾಡಿದರು.

ಮರುದಿನ ಮಧ್ಯಾನ್ಹ ಎರಡರ ಗಾಡಿಗೆ ಅನಂತನು ಎಲ್ಲ ಸಂವರಿಸಿ

ಕೊಂಡು ಹೊರಡಲನುವಾದನು. ಅಂದು ಆದಿತ್ಯವಾರ ಇದ್ದದರಿಂದ ರಾಯರು, ಜಗಣ್ಣ ಎಲ್ಲರೂ ಮನೆಯಲ್ಲಿ ಇದ್ದರು. ತನಗೆ ಹೋದೊಡನೆ ಬೇಕಾಗಬಹುದಾದ ಹಣವನ್ನು ತಕ್ಕೊಂಡು, ರಾಯರಿಗೂ ಶಾಂತಾ ಬಾಯರಿಗೂ ವಂದಿಸಿ, ಟಾಂಗೆಯೊಳಗೆ ಕೂಡಲಿಕ್ಕೆ ಅನಂತನು ಹೊರಟನು. ಜಗಣ್ಣನ ಕೂಡ ಬಹಳ ಮಾತಾಡಬೇಕೆಂದು ಆಸೆ, ಏನೂ ಆಡಲಾಗಲೊಲ್ಲದು. ಇದಿರಿಗೆ ರಾಯರು ಬೇರೆ, 'ಪುಸ್ತಕ ಮನೆಗೆ ಮುಟ್ಟಿದವೆ ?' ಎಂದಿಷ್ಟು ಕೇಳಿದನು. ಜಗಣ್ಣ 'ಹೂಂ' ಎಂದನು, ಮತ್ತೇನೂ ಆಡದೆ ಅವನ ಕೈಯನ್ನು ಗಟ್ಟಿಯಾಗಿ ಹಿಡಿದೇ ಟಾಂಗೆಯ ಹತ್ತಿರ ಹೋದನು. ಇದನ್ನೆಲ್ಲ ಚಿವುಗಣ್ಣಿನಿಂದ ನೋಡಿದ ರಾಯರು 'ಆಯ್ತು, ಜಗಣ್ಣಾ, ಸ್ಟೇಶನ್‌ತನಕ ಹೋಗಿ ಕಳಿಸಿ ಬಾ' ಎಂದರು. ಒಳ್ಳೇದಾಯ್ತು ಎಂದು ಇಬ್ಬರೂ ಕುಳಿತು ನಡೆದರು.

ಕೆಲ ಹೆಜ್ಜೆ ಹೋದ ಮೇಲೆ ಜಗಣ್ಣನು ಹೇಳಿದನು. '

'ನಾನೂ ಹೀಗೇ ಬಂದುಬಿಟ್ಟರೆ ಹೇಗೆ ಅನಂತಾ ?'

'ಅದೇಕೆ ?' ಎಂದು ಭಯಕೂಡಿದ ಕುತೂಹಲದಿಂದ ಅನಂತ ಕೇಳಿದನು.

'ಜಗತ್ತಿನಲ್ಲಿ ಇದ್ದರೆ ನಿನ್ನೊಬ್ಬನ ಕೂಡ ಇರಬೇಕು ಎನಿಸುತ್ತದೆ.' ಏನೋ ಒಂದು ನಡುಗುವ ಧನಿಯಲ್ಲಿ ಜಗಣ್ಣ ಹೇಳಿದನು.

'ನಡೆ ಹಾಗಾದರೆ.'

ಇಬ್ಬರೂ ಕೈಕೈಯಮುಕಿದರು. ಜಗಣ್ಣನ ಕಣ್ಣಲ್ಲಿ ನೀರು ತುಂಬಿದವು.

'ಅನಂತಾ, ನೀನೆಲ್ಲಾ 'ಓದು, ಪರೀಕ್ಷೆಗೆ ಕೂಡು' ಎಂದು ಹುರುಪು ಕೊಟ್ಟೆ. ಆದರೆ ನನ್ನ ಮೇಲೆ ಕಡಕೊಂಡು ಬಿದ್ದ ಮುಗಿಲನ್ನು ಮರೆತಿಯಲ್ಲ ! ಮನೆಗಾಗಿ ದುಡಿಯಲಿ ಯಾವಾಗ, ಓದಲಿ ಯಾವಾಗ ? ಆದರಲ್ಲಿ ನನ್ನ ಕೆಲಸವು ಎಂತಹದೆಂಬುದನ್ನು ನೀನೇ ನೋಡಿರುವಿ. ರಾಯರ ಲಹರಿ ಹೇಳಿದ ಕೆಲಸ ಮಾಡಬೇಕು. ಕರೆಸಿದಾಗ ಹೋಗಬೇಕು, ನಿಲ್ಲೆಂದಲ್ಲಿ ನಿಲ್ಲಬೇಕು. ಇದಕ್ಕೇನು ಆಫೀಸಿನ ವೇಳೆಯುಂಟೇ ? ಕಚೇರಿಯ ಗಂಟೆಯುಂಟೇ ?'

'ಅದು ನಿಜ, ಜಗಣ್ಣ, ಆದರೆ ನಾನು ಕಕ್ಕನಿಗೆ ಬರೆದು ತಿಳಿಸಲೇನು? ಕಚೇರಿಯಲ್ಲಿ ಮಾತ್ರ ನಿನ್ನ ಕೆಲಸವನ್ನು ಕೆಲ ಹೊತ್ತು ತಗೊಳ್ಳಬೇಕೆಂದು '

' ಛೇ ಅದನ್ನು ಮಾಡಬೇಡ. ಅವರ ಸ್ವಭಾವವು ವಿಚಿತ್ರವದೆ. ಸಿಗುವ ಅನ್ನವೂ ಮಣ್ಣು ಪಾಲಾದೀತು.'

'ಹಾಗಾದರೆ ನಿನಗಾಗಿ ನಾನೇನು ಮಾಡಲಿ ಹೇಳು. ನೀನು ಓದಿ ಈ ವರ್ಷ ಪರೀಕ್ಷೆಗೆ ಕೂಡಲೇ ಬೇಕು.'

'ಪ್ರಯತ್ನ ಮಾಡುವೆ. ನನ್ನ ಸುತ್ತು ಇನ್ನೂ ಏನೇನು ಜಾಡ ಬೆಳೆಯುವದೊ ಬಲ್ಲರಾರು? ನನ್ನ ದೈವ ಬಲು ಖೊಟ್ಟಿ, ಅನಂತಾ. ನಿನ್ನಂಥವನ ಗುರುತಾದ್ದೊಂದು ಸುದೈವ.'

ಹೀಗೆಂದು ಮಾತಾಡುತ್ತ ಟಾಂಗೆಯಿಂದ ಇಬ್ಬರೂ ಇಳಿದರು. ಅನಂತನು ಗಾಡಿಯಲ್ಲಿ ಕುಳಿತನು. 'ಸಣ್ಣಾಗಿ ಅಭ್ಯಾಸವನ್ನಂತೂ ನಡೆಯಿಸು, ಪತ್ರ ಹಾಕು, ಮರೆಯಬೇಡ' ಎಂದು ಜಗಣ್ಣನಿಗೆ ಹೇಳುತ್ತಿರಲು ಗಾಡಿಯು ಅಲುಗಿತು.

'ಒಳ್ಳೇದು' ಎನ್ನುತ್ತ ಜಗಣ್ಣನು ಕೇಳಿದನು. 'ಯಾವ ಪತ್ತೇಕ್ಕೆ ಬರೆಯಲಿ?'

'ಧಾರವಾಡ ಕಾಲೇಜ ಅನ್ನು. ಅಲ್ಲಿ ಹೋದ ಮೇಲೆ ಹೆಚ್ಚು ತಿಳಿಸುವೆ.'

ಕಣ್ಮರೆಯಾಗುವವರೆಗೆ ಅನಂತನು ಬಾಗಿ ನೋಡುತ್ತಿದ್ದನು. ಆಗ ಆತನಿಗೆ ಕಂಡ–ಜಗಣ್ಣನು ಎಡಗೈಯಿಂದ ಕಣ್ಣೊರಸಿ ಬಲಗೈ ಬೀಸುತ್ತ ನಿಂತ–ಚಿತ್ರವು ಮುಂದೆ ಅವನ ನೆನಪಾದಾಗೆಲ್ಲ ಇದಿರು ನಿಲ್ಲುವಂತೆ-ಆತನ ಮನದಲ್ಲಿ ಮೂಡಿತು.

ಜಗಣ್ಣನು ಮ್ಯಾಟ್ರಿಕ್‌ದಲ್ಲಿ ಪಾಸಾಗಲು ಅಯೋಗ್ಯನಾದ ಹುಡುಗನಲ್ಲ; ಆದರೆ ಬಡತನದ ಬೆಂಕಿಯಲ್ಲಿ ಇದ್ದ ಜದ್ದ ಬುದ್ಧಿ ಕರಕಾಗಿ ಹೋಗಿತ್ತು. ಕಲಿಯುವಾಗ ಓದಲು ಹೆಚ್ಚು ಹೊತ್ತು ಸಿಗುವಂತಿಲ್ಲ; ಸಾಲೆಯಲ್ಲಿ ಕೂಡ ಎಲ್ಲ ತಾಸುಗಳಲ್ಲಿ ಇರುವಂತಿಲ್ಲ. ಒಮ್ಮೊಮ್ಮೆ ಗೋದವ್ವನಿಗೆ ಜಡ್ಡು, ಮುಟ್ಟು ಇವೆಲ್ಲ ಬಂದರೆ ಇವನದೇ ಅಡಿಗೆ. ಬಂಡೇರಾಯರಂತೂ ಮುಂಜಾವಿನಿಂದ ಕಗ್ಗತ್ತಲೆಯಾಗುವವರೆಗೆ ಸಾಕೆ

ಯಲ್ಲಿ. ಇದಲ್ಲದೆ ದಿನದಿನಕ್ಕೆ ನೀರು ಜಗ್ಗುವದು, ಒಗೆಯುವದು, ಪಲ್ಲೆ ಮುಂತಾದ್ದು ತರುವದು ಇವಂತೂ ಬಿಟ್ಟವಲ್ಲ. ಹೀಗಾಗಿ ಒಂದೆರಡು ವಿಷಯಗಳಿಗೆ ಸಾಕಷ್ಟು ಲಕ್ಷ್ಯ ಪೂರೈಸಲು ಅವನಿಗೆ ಆಗಲಿಲ್ಲ. ಗಣಿತದಲ್ಲಿ ಅವನು ಜಾತ್ಯಾ ಕುಶಲನೆಂದೇ ಆ ಬಗ್ಗೆ ಚಿಂತೆ ಇರಲಿಲ್ಲ. ಆದರೆ ಇಂಗ್ಲಿಷ್ ಸಂಸ್ಕೃತ ಭಾಷೆಗಳಲ್ಲಿ ಅವನು ಕೈಸಾಗದವನಾಗಿದ್ದನು. ವಿಶೇಷವಾಗಿ ಸಂಸ್ಕೃತವು ಅವನಿಗೆ ಅಡಿಕೆಯ ಬೆಟ್ಟಕ್ಕಿಂತ ಬಿರುಸಾದದ್ದು.

ಜಗಣ್ಣನಿಗೂ ಜಯರಾಯನಿಗೂ ಈ ವಿಚಾರದಲ್ಲಿ ಏಕಮತವಿತ್ತು. ಜಯರಾಯನು ಸಂಸ್ಕೃತದ ಕೈಯಲ್ಲಿ ಸೋತು ಸಾಲೆ ಬಿಟ್ಟಾಗ ಜಗಣ್ಣನನ್ನು ಕುರಿತು 'ನೋಡು, ನೀನೂ ಹೀಗೇ ಬಿಟ್ಟೀ. ನನ್ನ ಕೈ ಸಡು—ನೀರಾಗ ಸೋತರೆ, ನೀನು ದಂಡೆಗೆ ಮುಟ್ಟುವದರೊಳಗೇ ಸೋತು ನೆಳವಿಗೆ ಬೀಳತೀ' ಎಂದು ವಿನೋದ ಮಾಡಿದ್ದನು. ಅದು ಈಗ ನಿಜವಾದಂತೆ ತೋರಿತು. ಜಗಣ್ಣನು ಫೇಲಾದದ್ದು ಸ್ವಲ್ಪ ಇಂಗ್ಲಿಷು, ಮುಖ್ಯ ಸಂಸ್ಕೃತದಲ್ಲಿ. ಅಂತೇ ಅನಂತನು ಕೊಟ್ಟ ಪುಸ್ತಕಗಳಲ್ಲಿ ಮೊದಲು ಸಂಸ್ಕೃತದವುಗಳನ್ನೆಲ್ಲ ಆರಿಸಿಟ್ಟು, ರಾತ್ರಿಯೂಟವಾದ ಮೇಲೆಯೂ ಬೆಳಗಿನಲ್ಲಿ ಬೇಗ ಎದ್ದೂ ಓದತೊಡಗಿದನು. ಇದನ್ನು ನೋಡಿದ ಬಂಡೇರಾಯರು ಕೇಳಿದರು.

'ಯಾಕೆ ಜಗಣ್ಣಾ, ಅಭ್ಯಾಸದ ಕಡೆಗೆ ಈ ವರ್ಷ ಆದರೂ ಲಕ್ಷ್ಯ ಹತ್ತಿತೇ ?'

'ಹೌದು, ಆಗಾಗ ಇಷ್ಟು ಓದಬೇಕಂತೀನಿ.'

'ಬಹಳ ಒಳ್ಳೇದು; ನಿನಗೆ ಬೇಕಾದರೆ ಆ ಸಂಸ್ಕೃತ ಶಾಸ್ತ್ರಿಗಳ ಗುರುತು ನನಗೆ ಆಗಿದೆ. ಅವರಿಗೆ ಹೇಳತೀನಿ. ರಾತ್ರಿಯಲ್ಲಿ ಒಂದು ತಾಸು ಹೋಗಿ ಹೇಳಿಸಿಕೊಂಡು ಬಾ.'

'ಆಗಲಿ' ಎಂದು ತನ್ನ ದಿನಗೆಲಸದಲ್ಲಿ ಜಗಣ್ಣನು ಅದನ್ನೊಂದನ್ನು ಇಟ್ಟುಕೊಂಡನು. ಮಗನು ಮತ್ತೆ ಓದುತ್ತಿರುವದನ್ನು ಕಂಡು ನಲಿದು, ಶನಿವಾರ ಹಣಮಪ್ಪನಿಗೆ ಹೋದಾಗ 'ನಮ್ಮ ಜಗಣ್ಣ ಪಾಸಾದರೆ ನಿನಗೆರಡು ಟೆಂಗಿನಕಾಯಿ ಒಡಿಸುವೆ' ಎಂದು ಗೋದವ್ವನು ಬೇಡಿಕೊಂಡು

ಬಂದಳು. 'ಆದರೆ ಪಾಸಾಗಿ ಮುಂದೇನು?' ಈ ಪ್ರಶ್ನೆ ಯಾರ ತಲೆಯನ್ನೂ ತಿನ್ನಲಿಲ್ಲ.

ಜಗಣ್ಣನಿಗೂ ಅನಂತನಿಗೂ ಪತ್ರವ್ಯವಹಾರವು ನಡೆಯಿತು. ಜಗಣ್ಣನ ಅಭ್ಯಾಸದ ಸುದ್ದಿ ಕೇಳಿ ಅನಂತನಿಗೆ ಸಂತೋಷ. ತಾನು ಸೂಟಿಗೆ ಬರುವಾಗ ಆ ವರುಷದ ಮ್ಯಾಟ್ರಿಕ್ ಇಂಗ್ಲಿಷು ಪಠ್ಯ ಪುಸ್ತಕಗಳನ್ನು ತರುವೆನೆಂದು ಬರೆದನು. ಆ ಪ್ರಕಾರ ದೀಪಾವಳಿಗೆ ಪುಸ್ತಕ ಸಹಿತ ಬಂದನು. ಎರಡು ಮೂರು ದಿನ ಇಬ್ಬರ ನಡುವೆ ತುದಿಮೊದಲಿಲ್ಲದ ಮಾತು, ನಗೆ, ಸುದ್ದಿ ಆದವು. ಕಾಲೇಜಿನ ಸುದ್ದಿಗಳನ್ನು ಹೇಳುತ್ತ ಅಸಹಕಾರದ ಮೂಲಕ ವಿದ್ಯಾರ್ಥಿಗಳ ಹುಚ್ಚೆದ್ದ ಉತ್ಸಾಹ, ಕಾಲೇಜಿನ ಇದಿರು ಅಡ್ಡಬಿದ್ದು ಒಳಗೆ ಹೋಗಬೇಡಿರೆಂಬ ಬೇಡಿಕೆ, ಕಾಲೇಜಿನ ಅಧಿಕಾರಿಗಳ ಬೆದರಿಕೆ, ಹೊರಗಿನ ಮುಂದಾಳುಗಳ ಉದ್ಬುದ್ಧ ಬಾಷಣ ಮೊದಲಾದವುಗಳನ್ನು ಕುರಿತು ಅನಂತನು ಆವೇಶ ತುಂಬಿ ಹೇಳಿದನು. ಜಗಣ್ಣನು ಭಯದಿಂದ ಕೇಳಿದನು.

'ಮತ್ತೆ ನೀನೂ ಬಿಟ್ಟುಬಂದೆಯೋ ಹೇಗೆ?'

'ಒಂದೆರಡು ದಿನ ಬಿಟ್ಟಿದ್ದೆ. ಕಕ್ಕನ ಪತ್ರವು ಜೋರಿನಿಂದ ಬಂದ ಕೂಡಲೆ ಹೋಗಬೇಕಾಯ್ತು. ನಮ್ಮ ದೇಶವೆಷ್ಟು ಪರತಂತ್ರವೋ ನಾವೂ ಅಷ್ಟೇ ಪರತಂತ್ರ, ಜಗಣ್ಣ' ಎಂದು ಅನಂತನು ಆ ಮಾತು ಮುಗಿಸಿದನು.

ಸೂಟಿಯು ಮುಗಿಯಲು ಜಗಣ್ಣನಿಗೆ ಹೆಚ್ಚು ಆಸ್ಥೆಯಿಂದ ಓದ ಹೇಳಿ ಅನಂತನು ತಿರುಗಿ ಧಾರವಾಡಕ್ಕೆ ತೆರಳಿದನು.

ಕುಬೇರರಾಯರ ಪ್ರೀತಿಯ ಕಾಂತಾಸಾನಿಯು, ಒಂದೆರಡು ತಿಂಗಳ ಜಲಸೆಯ ಸಫರಿಗೆಂದು ಗೆಲವೂರನ್ನು ಬಿಟ್ಟು ಹೋದಳು. ಊರಲ್ಲಿಯ ಸಂಗೀತಕ್ಕೆ ರಾಯರ ಪರವಾನಗಿಯು ಬೇಡಿದಾಗ ದೊರೆಯುತ್ತಿತ್ತು. ಈಗ ಮಾತ್ರ ಒಂದೆರಡು ದಿನ ಸಿಟ್ಟು ಸೆಡವಾಯ್ತು. ಆದರೆ ತನ್ನ ಫೋಟೊ ತೆಗಿಸಿಕೊಟ್ಟು, ತಿರುಗಿ ಬೇಗ ಬರುವೆನೆಂದು ಒನಸಿನಿಂದ ಹೇಳಿ, ಸಾನಿಯು ಸಂಚಾರಕ್ಕೆ ಹೊರಟಳು. ಆದರಿಂದ ರಾಯರು ಹಗಲು ರಾತ್ರಿ ಮನೆ ಹಿಡಿದರು. ಶಾಂತಾಬಾಯರ ಮೇಲಿನ ವಕ್ರ

ದೃಷ್ಟಿಯು ದಿನದಿನಕ್ಕೆ ಸರಳವಾಯ್ತು. 'ಇದೇಕೆ ಹೀಗಾಯ್ತು?' ಎಂಬದು ಅವಳಿಗೆ ಹೊಳೆಯಲಿಲ್ಲ. 'ಹೋದ ಹೊನ್ನು ದೊರೆಯಿತಲ್ಲ' ಎಂದಿಷ್ಟು ಸಮಾಧಾನ. ಆದರೂ ತೀರ ಮುಗುದೆಯಂತೆ ಸಾನಿಯ ಸೆರೆಯಿಂದ ರಾಯರು ಪಾರಾದರೆಂದೇನು ತಿಳಿಯಲಿಲ್ಲ, 'ಏನಾದರೂ ಇಬ್ಬರಿಗೆ ಒಗ್ಗಿಬರಲಿಲ್ಲವೆಂದು ಕಾಣುತ್ತದೆ' ಎಂದುಕೊಂಡಳು.

ತಿಂಗಳಮೇಲೆ ಆಯ್ತು, ಹಿಂದಿನ ಸುಖದ ಮಿಂಚು ಮತ್ತೆ ಮೂಡಿದಂತೆ ರಾಯರ ಪತ್ನಿಗೆ ತೋರಿತು. ಇದೇ ಸುಸಂಧಿಯೆಂದು ತನ್ನ ಒಲ್ಮೆಯನ್ನು ಸೂರೆಮಾಡಿ ರಾಯರನ್ನು ತನ್ನವರನ್ನಾಗಿ ಮಾಡಿಕೊಳ್ಳಲು ಹವಣಿಸಿದಳು. ಊರ ನರಸಿಂಹನಿಗೆ ಬೇಕಾದಷ್ಟು ಬೇಡಿಕೊಂಡಳು. ಇಷ್ಟರಲ್ಲಿ ಸಾನಿಯು ತಿರುಗಿ ಬಂದ ಚೀಟಿಯು ರಾಯರಿಗೆ ಕೋರ್ಟಿನಲ್ಲಿಯೇ ತಲುಪಿತು. ಖಟ್ಲೆಗಳೆಲ್ಲ ನಿಂತವು, ರಾಯರು ಜಗನ್ನನನ್ನು ಕರೆಯಿಸಿ 'ನಾನು ಸಂಜೆಯೂಟ ಮಾಡುವದಿಲ್ಲೆಂದು ಮನೆಯಲ್ಲಿ ಹೇಳು, ಕಾಸೀಮನು ಊರಲ್ಲಿಲ್ಲ ನೀನು ಅಲ್ಲಿಯೇ ಮಲಗಿಕೋ' ಎಂದು ಹೇಳಿ ಹೊರಟು ಹೋದರು.

ಕೋರ್ಟಿನ ಕೆಲಸವು ಕೊನೆಗಂಡನಂತರ ಜಗನ್ನನು ರಾಯರಲ್ಲಿ ಹೋಗಿ ಅವರ ಬೆಸನವನ್ನು ಮನೆಯವರಿಗೆ ತಿಳಿಸಿದನು. ಶಾಂತಾಬಾಯಿಗೆ ಊಟಮಾಡುವದಿಲ್ಲೆಂಬ ರಾಯರ ಸಂದೇಶವು ಸಹಜವಾಗಿಯೆ ತೋರಿತು. ಆದರೆ ತನ್ನ ಊಟ ತೀರಿಸಿ ಜಗನ್ನನು ರಾತ್ರಿಯೊಂಬತ್ತಕ್ಕೆ ಅಲ್ಲಿಗೆ ಹೋಗಲು 'ರಾಯರೆಲ್ಲಿ? ಮನೆಗೇಕೆ ಬರಲಿಲ್ಲ ಯಾವ ಹೊತ್ತಾಯಿತು?' ಎಂಬ ಪ್ರಶ್ನೆಯೆದ್ದಿತು. 'ಅವರು ಬಹುಶಃ ಬರಲಿಕ್ಕಿಲ್ಲ' ಎಂದು ತನ್ನ ಸರಳವಾದ ಅನುಮಾನವನ್ನು ಜಗನ್ನನು ಆಡಿತೋರಿಸಿದನು. 'ನೀನು ಯಾಕೆ ಈಗಿಲ್ಲಿ ಬಂದೆ?' ಎಂದು ಶಾಂತಾಬಾಯರು ಕೇಳಿದರು. 'ರಾಯರು ನನಗೆ ಇಲ್ಲಿಯೇ ಮಲಗಲಿಕ್ಕೆ ಹೇಳಿದ್ದಾರೆ' ಜಗನ್ನ ಎಂದನು. ಈ ಉತ್ತರಗಳಿಂದ ಈಗೊಂದು ತಿಂಗಳವರೆಗೆ ಶಾಂತವಾಗಿದ್ದ ಶಾಂತಾಬಾಯರು ಈಗ ಕೆರಳಿದ ಹುಲಿಯಾದರು. 'ನೀನಾದರೂ ಇಲ್ಲಿ ಮಲಗುವದೇಕೆ, ಹೋಗು. ನಮಗೇನೂ ಗೊತ್ತಿಲ್ಲ ಎಂದು ನೀನು ತಿಳಿದಂತೆ ಕಾಣತದೆ. ಈ ಸ್ವಲ್ಪುದಿವಸ ಅವರು ಹಿತವಾಗಿ ಮನೆಯಲ್ಲಿ ಇರುವದು

ನಿನಗೆ ಸಹನವಾಗಲಿಲ್ಲವಲ್ಲವೆ? ಹೇಗೆ ಆದೀತು? ಕಚೇರಿಯಿಂದ ಮನೆಗೆ ಸಹ ಬರದಂತೆ ಅತ್ತಲಾಗ ಕಳಿಸಿ, ತಾನು ಈಗ ಮಲಗಲಿಕ್ಕೆ ಬಂದಾನೆ. ಯಾರೂ ಮಲಗುವದು ಬೇಡ. ಹೋಗು, ಇಲ್ಲಿಂದ ನಡೆ.'

ಈ ಗರ್ಜನೆಯು ಜಗಣ್ಣನ ತಾಳ್ಮೆಯ ಕೊಲೆ ಮಾಡಿತು. ಆದರೆ ಉತ್ತರ ಕೊಡಲಿಕ್ಕೆ ನಾಲಿಗೆಗೆ ಒಂದಕ್ಷರವೂ ಹತ್ತಲಿಲ್ಲ. ನಾಲಿಗೆಯ ದ್ರವವೆಲ್ಲ ಕಣ್ಣಲ್ಲಿ ತುಂಬಿ ನಿಂತಿತು. ಏನೂ ಆಡದೆ ಕೆಳಮೋರೆ ಹಾಕಿ ಹೊರಟುಹೋದನು.

ಆ ದಿನ ನಿದ್ದೆಯಿಲ್ಲದೆ ಘೋರವಿಚಾರಗಳಲ್ಲಿ ಉರುಳಾಡುತ್ತ 'ಮನೆಯವರೆಲ್ಲರ ಕೂಡ ಬಾವಿ–ಕೆರೆ ಬಿದ್ದರೂ ಚಿಂತೆಯಿಲ್ಲ, ಇನ್ನು ಆ ಹೆಂಗಸಿನ ನುಡಿಸಂಜು ಬೇಡ' ಎಂದು ಬಡಬಡಿಸಿದನು. ಆದರೆ ಮರುಬೆಳಗಿನಲ್ಲಿ ರಾಯರಿಗೆ ಇದನ್ನು ತಿಳಿಸುವದು ಹೇಗೆ? ಅವರಿಂದ ಬಿಡುಗಡೆಯಾಗುವ ಬಗೆಯಾವದು? ಎನ್ನುತ್ತ ಕೆಲಸಕ್ಕೆ ಹೋದನು. ಅಲ್ಲಿ ಹೋಗುವದರಲ್ಲಿ ರಾಯರು ಬಂದಿದ್ದರು; ಕಣ್ಣು ಕೆಂಪೇರಿದ್ದವು. ಅವರ ಕೋಣೆಯಲ್ಲಿ ಒಂದು ಮೂಲೆಗೆ ಶಾಂತಾಬಾಯಿ ನಿಂತಿದ್ದಳು. ಜಗಣ್ಣನು ಹೋದ ಕೂಡಲೆ 'ಯಾಕೆ ಜಗಣ್ಣಾ, ನಿನ್ನೆ ಇಲ್ಲಿ ಮಲಗಲಿಕ್ಕೆ ಯಾಕೆ ಬರಲಿಲ್ಲ? ಮನೆಯಲ್ಲಿ ಹೆಂಗಸರೊಬ್ಬರೇ ಹೇಗೆ ಮಲಗಬೇಕು ನಿನಗೆ ತಿಳಿಯಲಿಲ್ಲವೇ? ಶುಂಭಾ!' ಎಂದು ರಾಯರು ಗದ್ದರಿಸಿದರು.

ಜಗಣ್ಣನಿಗೆ ತುದಿನಾಲಿಗೆಯ ಮೇಲೆ ಇದ್ದ ಉತ್ತರವನ್ನು ಹೇಳಲು ಸಾವಿರ ಅಡ್ಡಿಗಳು ಬಂದವು. ಹಾಗೆಯೇ ನಿಂತನು, 'ನಾನು ಹೊಟ್ಟೆಗಿಲ್ಲದೆ ಹೋಗಲಿ, ಆ ಹೆಂಗಸಿನ ಕರುಳಿಗೆ ನನ್ನಿಂದ ಇರಿತವು ಬೇಡ' ಎಂದು ಸಿದ್ಧವಾದ ಮರುಮಾತನ್ನು ಸಹ ಅವನು ಹೇಳಲಿಲ್ಲ. ರಾಯರು ಇನ್ನಿಷ್ಟು ಕಣ್ಣಗಲಿಸಿ 'ತಿಳಿಯಿತು, ನಮ್ಮನೆಯನ್ನ ಉಂಡು ಕೊಬ್ಬಿದ ಗೂಳಿ ಆದಿ. ಇನ್ನೇನು ನಿನಗೆ ಕಾಳಜಿ? ಹೋಗು, ನಿನ್ನ ನೌಕರಿ ಸಾಕು. ನಿನ್ನ ದೈವದಲ್ಲಿಲ್ಲ, ನಡೆ' ಎಂದರು. ಒಳ್ಳೇದು ಎಂದು ಜಗಣ್ಣನು ಅಟ್ಟೆ ಇಳಿದನು. ಮೈಯು ಇಡಿಯಾಗಿ ಬೆವರಿತು. ಮೋರೆ ಹುಚ್ಚು ಸುರಿವಂತೆ ಆಯ್ತು. ಆದರೆ ಒಳಜೀವಕ್ಕೆ ಅಷ್ಟು ಕೆಡಕೆನಿಸಿದಂತೆ ತೋರಲಿಲ್ಲ. 'ಬೇಡಿದ್ದೇ ಆಯಿತಲ್ಲವೇ?' ಎಂದು ತನ್ನೊಳಗೆ ಕೇಳುತ್ತ ಆತನು ಮನೆಯ ದಾರಿ ಹಿಡಿದನು.

# ೭ನೆಯ ಕಿಡಿ

ಜಗಣ್ಣನು ಮನೆಗೆ ಹೋಗಿ ಮುಸುಕು ಬಿಗಿದು ಮಲಗಿಬಿಟ್ಟನು. ಎಷ್ಟೊತ್ತಿನವರೆಗೆ ಯಾರಿಗೂ ತಿಳಿದಿರಲೇ ಇಲ್ಲ. ಗೋದವ್ವನು ತಾನು ಮೈತೊಳೆದುಕೊಳ್ಳುವ ಮೊದಲು ಅಕ್ಕಿತೊಳೆದಿಡಬೇಕೆಂದು ಅಕ್ಕಿಯ ಡಬ್ಬಿಯಿದ್ದ ಆ ಕೋಣೆಗೆ ಹೋಗಿ ನೋಡುತ್ತಾಳೆ, ಯಾರೋ ಮಲಗಿದಂತಿತ್ತು. ಜಗಣ್ಣನಿರಬೇಕೆಂಬ ಕಲ್ಪನೆ ಅವಳಿಗೆ ಮೊದಲು ಬರಲೇ ಇಲ್ಲ. ನೌಕರಿ ಹೋದಂದಿನಿಂದ ಈ ಹಗಲುನಿದ್ದೆಯ ವ್ಯಸನವು ತನ್ನ ಯಜಮಾನರಿಗೆ ಹೆಚ್ಚಿರುವದೆಂದು ಅವಳು ಅರಿತಿದ್ದಳು. ‘ಹೊತ್ತಿಲ್ಲದ ಹೊತ್ತಿನಲ್ಲಿ ಮಲಗುವದು ಇವರದೊಂದು ಸ್ವಭಾವವೇ!’ ಎಂದು ಗುಣುಗುಣುಮಾಡುತ್ತ ಹೊರಟಿದ್ದಳು. ಅಷ್ಟರಲ್ಲಿತನ್ನ ಅರೆ ನಿದ್ದೆಯ ಒರಲಾಟದಲ್ಲಿ ಜಗಣ್ಣನು ‘ಅವ್ವಾ’ ಎಂದು ನೆರಳಿದನು. ಕೂಡಲೆ ತಾಯಿಯ ಕರುಳು ಜಗಣ್ಣನನ್ನು ಗುರುತಿಸಿತು. ಕೈಯಲ್ಲಿದ್ದ ಬುಟ್ಟಿಯನ್ನು ಅಲ್ಲಿಯೇ ಇಟ್ಟು ಹಾಸಿಗೆಯ ಹತ್ತಿರ ಓಡಿ ಕುಳಿತಳು. ‘ಯಾಕೋ ಜಗಣ್ಣಾ, ಏನಾಗಿದೆ? ಯಾವಾಗ ಬಂದಿ ಮನೆಗೆ? ಜ್ವರ ಬಂದಾವೇನು?’ ಎಂದು ಪರಿಪರಿಯಿಂದ ಕೇಳಿದಳು.

ಜಗಣ್ಣನಿಗೆ ಪೂರ್ಣ ಎಚ್ಚರವಾಗಲು ಒಂದೆರಡು ಮಿನಿಟು ಹಿಡಿಯಿತು. ಎಚ್ಚರಾಗಿ ಗೋದವ್ವನ ಮೋರೆಯನ್ನು ನೋಡಿದಾಕ್ಷಣವೇ ಕಣ್ಣೀರು ಸುರಿಸಹತ್ತಿದನು. ಅವಳು ಮತ್ತಿಷ್ಟು ಎದೆ ಒಡೆದು ‘ಯಾಕೆ? ಏನಾಯ್ತು?’ ಎಂದು ಮತ್ತೆಮತ್ತೆ ಕೇಳುತ್ತ ಅಲ್ಲಿಯೇ ಕುಳಿತಳು ಹೊರಗಿನಿಂದ ಬಂಡೇರಾಯರೂ ಬಂದರು. ಅವರಿಬ್ಬರೂ ಕೂಡಿದಮೇಲೆ ಕೇಳುವದೇನು! ಜಗಣ್ಣನ ದುಃಖವು ಇಮ್ಮಡಿಯಾಯ್ತು, ಸಂತಸವೇನು ದೊರಕಲಿಲ್ಲ. ದುಃಖಿತರ ಸುತ್ತು ಕರುಳಿನ ಸಂಬಂಧವಿದ್ದವರು ಎಷ್ಟೆಷ್ಟು ನೆರೆಯುವರೋ ಅಷ್ಟಷ್ಟು ದುಃಖಕ್ಕೆ ಹುರುಪು, ಸಮಾಧಾನಕ್ಕೆ ಸೊನ್ನೆ. ಅಂಥದರಲ್ಲಿ ನಡುವೊಮ್ಮೆ ಎದ್ದು ಕುಳಿತು ‘ರಾಯರ ಮನೆಯ ನೌಕರಿ ಹೋತು’ ಎಂದು ಗಟ್ಟಿಧೈರ್ಯದಿಂದ ಹೇಳಿದನು. ಮುಂದೆ ಮಾತಿಲ್ಲ.

ನಿಜವಾದ ಕಾರಣವು ಗೊತ್ತಾಗಿ ಅವರಿಬ್ಬರೂ ಮಿಡುಕಿದರು. ರಾಯರನ್ನು ಶಾಪಿಸಿದರು, ತಮ್ಮ ಅದೃಷ್ಟವನ್ನು ಬೀಳುಗಳೆದರು. ಆದರೆ ಬಂಡೇರಾಯರು ನೌಕರಿ ಕಳಕೊಂಡು ಒಂದು ದಿವ್ಯ ಅನುಭವ ವನ್ನು ಹೊಂದಿದ್ದರಿಂದ ಬಹಳವಾಗಿ ಕೊರಗದೆ, ಜಗಣ್ಣನನ್ನು ಅತಿಯಾಗಿ ಹುರಿಗೊಳಿಸಿದರು: 'ಇದೇನು, ಜಗಣ್ಣಾ, ಇದಕ್ಕೆಯಾಕೆ ಅಂಜುವಿ ಬಿಡು! ನನ್ನ ಧಂದೆಯು ಈಗ ಹತೋಟಿಗೆ ಬಂದದೆ. ನಿನಗೆ ಎಳ್ಳುಕಾಳಷ್ಟೂ ತ್ರಾಸ ಬೇಡ. ಯಾವ ಉಸಾಬರಿಯನ್ನೂ ಮಾಡದೆ ನಿನ್ನ ಅಭ್ಯಾಸ, ನೀನು ಆಗಿ ಬಿಡು.' ಎಂದು ಮುಂತಾಗಿ ಹೇಳಿ,ಅವನನ್ನು ಹಾಸಿಗೆಯಿಂದ ಎಬ್ಬಿಸಿಬಿಟ್ಟರು. ಕೆಲಹೊತ್ತಿಗೆ ಅಲ್ಲಿ ಜಯರಾಯನು ಅಕಸ್ಮಾತ್ತಾಗಿ ಬಂದನು. ನಗೆಯಾಡುತ್ತಲೇ ಹೊಸತಿಲಲ್ಲಿ ಕಾಲಿಡುವುದು ಆತನ ರೂಢಿ. ಜಗಣ್ಣನನ್ನು ಇನ್ನೂ ಮನೆಯಲ್ಲಿ ನೋಡಿ 'ಯಾಕೆ ? ಜಗನ್ನಾಥರಾಯ ರಿಗೂ ಶ್ರೀಮಂತ ಕುಬೇರರಾಯರಿಗೂ ಸೋಡಚೀಟಿ ಆತೇನು ?' ಎಂದು ಸಹಜವಾಗಿ ಉಸುರಿದನು. ಈ ಸಹಜವಾದ ಮಾತು ಶಕುನ ನ್ನುಡಿದಂತೆ ಆಯ್ತು.

'ಹೌದಪ್ಪಾ, ನೀನಂದಂತೇ ಆಗಿದೆ. ಜಗಣ್ಣನ ಮನಸ್ಸು ಈಗ ಚೈನ ಇಲ್ಲ' ತಂದೆ ನುಡಿದರು.

ಜಯರಾಯನು ಖೊಳ್ಳೆಂದು ನಕ್ಕು ಜಗಣ್ಣನ ಹತ್ತಿರ ಹೋಗಿ 'ನಡಿ ನಮ್ಮ ಚೈನೀಸಮಾಜಕ್ಕೆ, ಅದುಹೇಗೆ ಚೈನ ಇಲ್ಲ ನೋಡತೀನಿ? ನಾನು ಮೊದಲು ಹೇಳಿದ್ದೆ. ಶನೀ ಅದು ಹೋತು ಬಿಡು. ನಮಗೆ ಗಂಡುಮಗ ಹುಟ್ಟಿದ್ದರಿಂದ ಈವತ್ತು ನಮ್ಮಲ್ಲಿ ಮೇಜವಾನೀ ಅದೆ, ನಿಮಗೆಲ್ಲಾ ಊಟಕ್ಕೆ ಹೇಳಲಿಕ್ಕೆ ಬಂದೀನಿ' ಎಂದನು.

ಒಳಗೆ ಮೈತೊಳೆದುಕೊಂಡು ಒಲೆಯಮೇಲಿನ ತಪ್ಪೇಲಿಗೆ ಅಕ್ಕೀ ಸುರುವಬೇಕೆಂದು ಬಾಗಿನಿಂತ ಗೋದವ್ವನು ಈ ಮಾತು ಕೇಳಿ ಹೊರಗೆ ಬಂದಳು. ಆಮಂತ್ರಣವು ಎಲ್ಲರಿಗೂ ಮುಟ್ಟಿತು. ಮೊದಲು ನಾನೊಲ್ಲೆ ನೆಂದು ಜಗಣ್ಣನು ವಿಪರೀತವಾಗಿ ಹಟತೊಟ್ಟನು. ಜಯರಾಯನು ಕೇಳುವನೇ ? 'ನೀನು ಬರದಿದ್ದರೆ ಮೇಜವಾನಿಯೇ ಕ್ಯಾನ್ಸಲ್' ಎಂದನು. ಆಡಿದಂತೆ ಮಾಡುವ ಜಾತಿ ಬೇರೆ ಅವನದು. ನಾನು ಕಡೆಯ ಪಂಕ್ತಿಗೆ

ಬರುವೆನೆಂದು–ಕಡೆಗೆ–ಜಗಣ್ಣ ಒಪ್ಪಿದನು. ಹೋಗುವಾಗ ಜಯರಾಯನು ಸ್ನೇಹಿತನ ಬೆನ್ನು ಚಪ್ಪರಿಸಿ ಹೇಳಿದನು.

'ಇಲ್ಲಿ ನೋಡು ಜಗಣ್ಣಾ, ನಾನು ಧಡ್ಡ ಆದರೂ ನನ್ನ ಭವಿಷ್ಯ ಸುಳ್ಳಾಗುವದಿಲ್ಲ. ಇನ್ನು ಮೇಲೆ ನೀನು ಫಕ್ತ ಅಭ್ಯಾಸದಲ್ಲಿ ಮನಸ್ಸು ಹಾಕು. ಈ ಸಾರೆ ಮ್ಯಾಟ್ರಿಕ್ ಹೊಡೆದು ಬಿಡು. ನಿಮ್ಮ ಹಾಯ್ ಸ್ಕೂಲದಲ್ಲಿ ನಾಳೆ ಜಾನೇವಾರಿಯ ಹತ್ತಕ್ಕೆ ಪ್ರಿಲಿಮಿನರಿ ಸುರುವು ಅಂತ ನೋಡು. ಆ ನಿಮ್ಮ ಗಿಡ್ಡ ಮಾಸ್ತರು ಹೇಳತಿದ್ದರು. ಈ ಹೊಟ್ಟಿ,ಚಾಕರಿ, ಪಗಾರ ಇದರ ವಿಚಾರವಸ್ನು ಸ್ವಲ್ಪ ಗಂಟು ಕಟ್ಟಿಡು. ಬಂಡೇರಾಯರಿಗೆ ಇದೆಲ್ಲಾ ಸೀಗದಿದ್ದರೆ, ಎಲ್ಲಾರು ಕೂಡಿ ಈವತ್ತ ಬಂದವರು ಅಲ್ಲೇ ನಮ್ಮಲ್ಲೇ ಇದ್ದುಬಿಡಿರಿ, ಆತೇ?' ಎಂದು ಎಲ್ಲಿಂದಲೋ ಹುರುವು ತಂದು ಹಂಚಿ ಹೋದ ಯಕ್ಷನಂತೆ ಹೊರಟುಹೋದನು.

'ಎಂಥಾ ಒಳ್ಳೇ ಜೀವಾ!' ಎಂದು ಗೋದವ್ವನು ಬಾಯಮೇಲೆ ಕೈಯಿಟ್ಟಳು. ಅವಳ ಅಡಿಗೆಯ ತ್ರಾಸ ತಪ್ಪಿಸಿದ್ದೂ ಜಯರಾಯನಿಗೆ ಈ ಸರ್ಟಿಫಿಕೇಟು ದೊರೆಯಲು ಒಂದು ಕಾರಣವಾಗಿರಬಹುದು!

ಇದೆಲ್ಲ ನಡೆದುದು ನಾತಾಳೀ ಸೂಟಿಯ ಆರಂಭಕ್ಕೆ. ಇನ್ನೆರಡು ದಿನಗಳಲ್ಲಿ ಅನಂತ ಬರುವನೇನೊ; ಅವನಿಗೆ ಏನೆಂದು ಮುಖ ತೋರಿಸಬೇಕೆಂದು ಜಗಣ್ಣನು ಮರುಗುತ್ತಲಿದ್ದನು. ಅಷ್ಟರಲ್ಲಿ 'ಅಭ್ಯಾಸ ಬಹಳಿದ್ದದರಿಂದ ನಾನು ಈ ಸಣ್ಣ ಸೂಟಿಗೆ ಅಲ್ಲಿ ಬರುವದಿಲ್ಲ,ನಿನ್ನ ಅಭ್ಯಾಸದ ಬಗ್ಗೆ ಬೇಗನೆ ತಿಳಿಸು' ಎಂದು ಅನಂತನ ಪತ್ರ ಬಂದಿತು. ಪತ್ರವು ರಾಯರಲ್ಲಿ ಹೋಗಿ ಇಲ್ಲಿ ಬಂದಿತ್ತು. ಜಗಣ್ಣನು ಆ ದಿನ ಮಧ್ಯಾಹ್ನದಲ್ಲಿ ಕುಳಿತು, ತನ್ನ ಕರುಣಕಥೆಯನ್ನೆಲ್ಲ ಒಂದೆರಡು ಹಾಳೆಗಳಲ್ಲಿ ತುಂಬಿ, ನಡುವೆ ಕಣ್ಣೀರಿನ ಕಲೆಗಳಿಂದ ಅಕ್ಷರಗಳನ್ನು ಅಂದಗೆಡಿಸಿ, ಅನಂತನಿಗೆ ದೊಡ್ಡ ಪತ್ರ ಬರೆದನು. ಅದನ್ನು ಓದಿದ ಅನಂತನಿಗೆ ಎರಡು ದಿನ ಸರಿಯಾಗಿ ನಿದ್ದೆಹತ್ತಲಿಲ್ಲ. ಗೆಳೆಯನಿಗೆ ಸಂತವಿಡಲು ಹೋಗಬೇಕೆಂದು ಒಕ್ಕಡೆಯ ಜಗ್ಗಾಟ, ಇನ್ನೊಂದು ಕಡೆ ಅಭ್ಯಾಸದ ಒತ್ತಾಯ. ಜಗಣ್ಣನು ತನ್ನ ಪತ್ರದಲ್ಲಿ ಹತ್ತು ಸಲ 'ನೀನು ಕೆಟ್ಟೆನಿಸಿಕೊಳ್ಳಬೇಡ. ನಾನು ಅಭ್ಯಾಸ ನಡೆಸಬೇಕಂತೀನಿ, ಇಲ್ಲಿಗೆ ಬಂದಗಿಂದೀ' ಎಂದ ಮಾತುಗಳಿಂದ

ಅನಂತನು ಸ್ವಲ್ಪ ಸಮಾಧಾನ ಹೊಂದಿ, ಒಂದು ಎದೆಕರಗಿನ ಉತ್ತರ ಹಾಕಿದನು, ತಾನೇನು ಹೋಗಲಿಲ್ಲ.

ಜಗಣ್ಣನು ಈಗ ಒಂದೆರಡು ದಿನ ಕ್ಲಾಸಿಗೆ ಹೋಗಿ ಹಳೆಯ ಹೊಸ ಸ್ನೇಹಿತರಿಗೆ ಭೆಟ್ಟಿಯಾಗಿ ಅಭ್ಯಾಸದ ಪೋರ್ಶನ್ನು ಕೇಳಿ ಬಂದನು. ತನ್ನನ್ನು ಬಹಳ ಪ್ರೀತಿಸುತ್ತಿದ್ದ ಸಾಧುಶಿರೋಮಣಿಗಳಾದ ಸಂಗಮ ಮಾಸ್ತರರನ್ನು ಭೆಟ್ಟಿಯಾಗಿ, ತನ್ನ ಸ್ಥಿತಿಗತಿಯನ್ನೆಲ್ಲ ಅವರಿಗೆ ತಿಳಿಸಿದನು. ಅವರು ಬಹಳ ಹಳಹಳಿಬಟ್ಟು 'ನೀನು ಕಾಳಜೀ ಮಾಡಬೇಡ ಹೋಗು. ನಿನಗೆ ಫಾರ್ಮ್ ಸಿಗುತ್ತದೆ. ಎಂದು ಕಳಿಸಿದರು. ಪ್ರವೇಶಕ ಪರೀಕ್ಷೆ ಹದಿನೈದು ದಿನ ಮಾತ್ರ ಉಳಿಯಿತೆಂದು ಜಗಣ್ಣನು ಅತ್ಯಂತ ಆಸ್ಥೆಯಿಂದ ಹಗಲಿರುಳು ಅಭ್ಯಾಸದಲ್ಲಿ ತೊಡಗಿದನು.

ಇತ್ತ ರಾಯರು ಜಗಣ್ಣನನ್ನು ಸಿಟ್ಟಿನ ಭರದಲ್ಲಿ ಮನೆಗೆ ಅಟ್ಟಿದರೇನೋ ನಿಜ. ತಿರುಗಿ ಒಂದೆರಡು ದಿನಗಳಾದ ಮೇಲೆ ಜೀವ ಚಡಪಡಿಸಹತ್ತಿತು. 'ಎಂಥ ಹುಡುಗನಿಗೆ ಏನು ಮಾಡಿದೆ' ಎನಿಸಿತು. ಇಷ್ಟು ದಿನ ಪ್ರತಿಯೊಂದು ಸಣ್ಣ ಪುಟ್ಟ ಕೆಲಸಕ್ಕೆ 'ಜಗಣ್ಣ, ಜಗಣ್ಣ' ಎಂದು ಕೂಗಿ ರೂಢಿಯಾದ ನಾಲಿಗೆಯು ಕಾಶೀಮನಿಗೂ 'ಜಗಣ್ಣ' ಎನ್ನಲೆಸಗಿತು. ಮೂರು ದಿನ ಹೋದವು,ಕಚೇರಿಯಿಂದ ತಿರುಗಿಬಂದು ರಾಯರು ಲೋಡಿಗೆ ಕುಳಿತರು. ಜಗಣ್ಣನ ನೆನಪಾಯಿತು. ಅವನು ಅದೇ ಹೊತ್ತಿನಲ್ಲಿಯೇ ಚಾಕರಿ ಬೇಡುತ್ತ ತಮ್ಮಲ್ಲಿ ಬಂದದ್ದನ್ನೂ ತಿರುಗಿ ಆಳಿಗಿಂತ ಆಳಾಗಿ ದುಡಿದದ್ದನ್ನೂ ನೆನೆಸಿಕೊಂಡರು. ಕಂಠವುಬ್ಬಿ ಬಂದಿತು, 'ಬಡ ಹುಡುಗನನ್ನು ಕ್ಷುಲ್ಲಕಕಾರಣದಿಂದ ಹೊರನೂಕಿ, ಅವನ ಹೊಟ್ಟೆಗೆ ಸಿಗುವ ತುತ್ತುಅನ್ನವನ್ನು ಕಸಿದುಕೊಂಡೆನಲ್ಲ! ಇದಾದರೂ ನನ್ನದಿದ್ದದ್ದೂ ಅಷ್ಟರಲ್ಲೇ ಅದೆ.' ಹೀಗೆಂದು ಚಟ್ಟನೆ ಎದ್ದು ಕಾಶೀಮನನ್ನು ಕರೆದು,'ಜಗಣ್ಣನನ್ನು ಕೂಡಲೆ ಕರೆದುಕೊಂಡು ಬಾ' ಎಂದು ವಿಧಿಸಿದರು.

ಜಗಣ್ಣನು ರಾತ್ರಿಯೂಟ ತೀರಿಸಿ, ಎದೆ ಒಡೆದು ಎರಡು ಹೋಳಾಗಿ ಬಂದನು. ಮತ್ತೇನು ಅಪವಾದವು ತನ್ನ ಪಾಲಿಗೆ ಬರುವದಿದೆಯೋ ಎಂದು ರಾಯರನ್ನು ಕಂಡನು. ರಾಯರು ಅವನನ್ನು ಕಂಡೊಡನೆ ತಬ್ಬಿಕೊಂಡು 'ಜಗಣ್ಣಾ, ಇಲ್ಲಿ ಕುಳಿತುಕೊ, ನನ್ನ ತಪ್ಪಾಯಿತು'

ಎಂದು ಆಳಲಿಕ್ಕೆ ಆರಂಭ ಮಾಡಿದರು. ಜಗಣ್ಣನಿಗೆ ಇದೆಲ್ಲ ಅದ್ಭುತ ವಾಯಿತು. ಅವನು ದೂರ ಸರಿದು ಕುಳಿತನು. ರಾಯರು ತಮ್ಮ ಹುಯಿ ಲನ್ನು ಮುಗಿಸಿ, ಅಂತಃಕರಣವು ತುಂಬಿ ಬಂದು ಆಡಿದರು.

'ಜಗಣ್ಣ, ನೀನು ಇನ್ನು ಹೋಗಬೇಡ. ಇಲ್ಲಿಯೇ ಇದ್ದುಬಿಡು. ನಿನಗೆ ಮ್ಯಾಟ್ರಿಕ್ ಪಾಸು ಮಾಡಿಸಿ, ವಕೀಲಿ ಪರೀಕ್ಷೆಗೆ ಸಹ ನಾನು ಕೂಡಿಸುತ್ತೇನೆ ತಿಳಿಯಿತೇ.'

ರಾಯರ ಈ ಮಾತು ಜಗಣ್ಣನನ್ನು ಒಂದು ಕ್ಷಣ ಸ್ವರ್ಗಕ್ಕೆ ಮುಟ್ಟಿಸಿತು. ಕುಬೇರರಾಯರ ಸಂಪತ್ತಿಗೆಲ್ಲ ತಾನೊಬ್ಬ ಪಾಲುಗಾರ ನೆಂಬ ಭ್ರಮೆಯೂ ಸ್ವಲ್ಪ ಹೊತ್ತು ಮೈ ಹೊಕ್ಕಿತು.

ಆದರೆ ಮನೆಯ ಗತಾಗತಗಳನ್ನು ಈ ವರೆಗೆ ತಿಳಿದ ಆತನು ಹೇಳಿದನು.

'ಬೇಡ, ರಾಯರೇ. ನಿಮ್ಮ ಉಪಕಾರವು ನನ್ನ ಮೇಲೆ ಹೇಳ ದಷ್ಟು ಆಗಿದೆ. ನಾನು ಪರೀಕ್ಷೆಯ ಸಲುವಾಗಿ ಈಗ ಅಭ್ಯಾಸ ನಡೆಸಿ ದ್ದೇನೆ. ದಯಮಾಡಿ ನನ್ನನ್ನು ಜುಲುಮೆಮಾಡಿ ಗೋಳಿಗೆ ಹಾಕಬೇಡರಿ.'

'ಆದರೆ ಚರಿತಾರ್ಥದ ವಿಚಾರವೇನೋ ಜಗಣ್ಣ? ನೀನು ಕೆಲಸ ಬಿಟ್ಟರೆ ನಿಮ್ಮ ಮನೆಯವರ ಹೊಟ್ಟೆ ಸಾಗುವ ಬಗೆಯೇನು?' ರಾಯರು ಕಕ್ಕುಲತೆಯಿಂದ ಕೇಳಿದರು.

ತಂದೆಯವರು ಈಗ ಸಾಕಷ್ಟು ಗಳಿಸುತ್ತಿರುವರೆಂದು ವಿವರಿಸಿ ಹೇಳಿ ಜಗಣ್ಣನು ಹೊರಟನು. 'ಹಾಗಾದರೆ ನಿಂದಿರು.' ಎಂದು ರಾಯರು ಒಳಗೆ ಹೋಗಿಬಂದು ಮಾತನಾಡಿದರು.

'ಈ ಐವತ್ತು ರೂಪಾಯಿ ತಗೋ, ನಿನ್ನ ಪರೀಕ್ಷೆಯ ಖರ್ಚು ಮಾಡಿಕೊ. ಮತ್ತೆ ಬೇಕಾದಾಗ ಬಾ, ತಿಳಿಯಿತೇ?'

ಆ ಹಿರಿಯರ ಕಾಣಿಕೆಯನ್ನು ಒಲ್ಲೆನ್ನಲಾರದೆ ಜಗಣ್ಣನು ತಕ್ಕೊಂಡು ತನ್ನ ಮನೆ ಸೇರಿದನು.

ಪ್ರವೇಶಕಪರೀಕ್ಷೆ ನಾಳೆ, ನಾಡಿದು ಎನ್ನಲಿಕ್ಕೆ ಜಗಣ್ಣನಿಗೆ ಜ್ವರ ಬಂದವು. ಹತ್ತು ಹದಿನೈದು ದಿನದ ಓದಿನ ಪರಿಣಾಮ. 'ಆಯಿತು ನನ್ನ ಹಣೆಬರಹದಲ್ಲಿ ಮುಂದೆ ಹೋಗುವದಿಲ್ಲ'ಎಂದು ಪುಸ್ತಕ ಒಗೆದು ಹಾಸಿಗೆ

ಹಿಡಿದನು. ಬಂಡೇರಾಯರ ಜೀವ ಚುರುಚುರು ಎಂದಿತು. ಕೇಶವ ಡಾಕ್ಟರರ ಕಡೆ ಧಾವಿಸಿ ಕ್ವಿನಾಯಿನ್ ತಂದುಕೊಟ್ಟರು. 'ನನಗೆ ಯಾವದೂ ಬೇಡ. ಪರೀಕ್ಷೆ ಗಿರೀಕ್ಷೆ ಮುಗಿದಂತಾಯಿತು, ನನ್ನ ಆಯುಷ್ಯದಲ್ಲಿ' ಎಂದು ಜಗಣ್ಣನು ಹಟಮಾರಿಯಾದನು. 'ಹಾಗೆನ್ನಬಾರದು, ಇದು ತಗೋ ಹಣಮಪ್ಪನ ಅಂಗಾರ ಹಚ್ಚಿಗೋ. ನಾಳೆ ನೀ ಎದ್ದು ಪರೀಕ್ಷಾಕ್ಕ ಹೋಗತೀ ನೋಡು' ಎಂದು ಗೋದವ್ವನು ರಮಿಸಿ ಔಷಧ ಕುಡಿಸಿದಳು. ಮರುದಿನ ಸ್ವಲ್ಪ ಓಡಾಡಲಿಕ್ಕೆ ನಿಜವಾಗಿ ಬಂದಿತು. ಓದಿದ್ದೆಲ್ಲ ತಲೆಯಲ್ಲಿ ನೆನಪಾಗತೊಡಗಿತು. ಈಗ ಜಗಣ್ಣನಿಗೆ 'ಪರೀಕ್ಷೆಗೆ ಕುಳಿತು ಬಿಡೋಣ, ಆದದ್ದಾಗಲಿ' ಎನಿಸಿತು. ಐದಾರು ದಿನಗಳಲ್ಲಿ ಪರೀಕ್ಷೆ ತೀರಿತು. ನಡುವೊಮ್ಮೆ ಜ್ವರ ಬರದೆ ಇರಲಿಲ್ಲ. ಆದರೂ ಫಾರ್ಮು ದೊರಕಿಸುವ ಮಟ್ಟಿಗೆ ಕುಳಿತದ್ದು ಸರಿಯಾಯಿತೆಂದು ಜಗಣ್ಣನು ಉಬ್ಬಿದನು.

ಎಂಟು ಹತ್ತು ದಿನಗಳಲ್ಲಿ ಎಲ್ಲ ನಿರ್ಣಯವಾಗಬೇಕಾಗಿತ್ತು. ಶಿಕ್ಷಕರು ಉತ್ತರದ ಕಾಗದಗಳನ್ನು ತಪಾಸುಮಾಡುವ ವೇಗ ನೋಡಿದರೆ, ವಿದ್ಯಾರ್ಥಿಗಳು ಏನೂ ಬರೆಯದೆ ಹಾಗೇ ಕೊಟ್ಟಿದ್ದಾರೆ—ಎನ್ನುವಂತಿತ್ತು. ಮಾರ್ಕು ಕೇಳುವ ಹುಡುಗರ ತಂಡತಂಡಗಳು ಮಾಸ್ತರ ಜನರ ಮನೆಯ ಸುತ್ತು ಮುಕುರಿದವು. ಜಗಣ್ಣನು ಅದಾವ ಗೋಜಿಗೂ ಹೋಗಲಿಲ್ಲ. ಅವನು ಮನೆಯಲ್ಲಿ ಕಾಯಾಸ ಕಟ್ಟಿದಂತೆ, ಇಂಗ್ಲಿಶ್‌ದಲ್ಲಿ ನಪಾಸೆಂದು ಪರಿಣಾಮದ ದಿನ ಗೊತ್ತಾಯಿತು. ಶಾಸ್ತ್ರಿಗಳ ಕೃಪೆಯಿಂದ ಸಂಸ್ಕೃತದಲ್ಲಿ ಪಾಸಾಗಿದ್ದನು. ಇಂಗ್ಲಿಶ್ ನಪಾಸಾದವನನ್ನು ಹೇಗೆ ಮುಂದಿನ ದೊಡ್ಡ ಪರೀಕ್ಷೆಗೆ ಕಳಿಸುವದೆಂದು ಹೆಡ್‌ಮಾಸ್ತರರಿಗೆ ದೊಡ್ಡ ಪ್ರಶ್ನೆ ಬಿದ್ದಿತು. ಸಂಗಮಮಾಸ್ತರರಿಗೆ ಈ ಸುದ್ದಿ ತಿಳಿಯಲು, ನಿರ್ಣಾಯಕ ಸಭೆಯಲ್ಲಿ ಜಗಣ್ಣನಂತೆ ಆಗುವ ಹಾಗೆ ಎಲ್ಲ ವ್ಯವಸ್ಥೆ ಮಾಡಿದ್ದರು. ಸಭೆ ಕೂಡಿತು. 'ಹಿಂದೊಮ್ಮೆ ಹೀಗೇ ನಪಾಸಾದ ಈ ಹುಡುಗನನ್ನು ಮತ್ತೆ ಕಳಿಸುವದರಲ್ಲಿ ಅರ್ಥವಿಲ್ಲ, ನಾನಂತೂ ವಿರುದ್ಧನಿದ್ದೇನೆ' ಎಂದು ಇಂಗ್ಲಿಶ್ ಮಾಸ್ತರರು ಪ್ರಳಯಕಾಲದ ಪ್ರೌಢಿಮೆಯಿಂದ ಹೇಳಿದರು. ಅದಕ್ಕೆ ಇನ್ನೊಬ್ಬ ವಿನೋದೀ ಮಾಸ್ತರರು ಎದ್ದು ನಿಂತು 'ಕೊಟ್ಟುಬಿಡಿರಿ,

ಎಂದು ಆಳಲಿಕ್ಕೆ ಆರಂಭ ಮಾಡಿದರು. ಜಗಣ್ಣನಿಗೆ ಇದೆಲ್ಲ ಅದ್ಭುತವಾಯಿತು. ಅವನು ದೂರ ಸರಿದು ಕುಳಿತನು. ರಾಯರು ತಮ್ಮ ಹುಯಿಲನ್ನು ಮುಗಿಸಿ, ಅಂತಃಕರಣವು ತುಂಬಿ ಬಂದು ಆಡಿದರು.

'ಜಗಣ್ಣ, ನೀನು ಇನ್ನು ಹೋಗಬೇಡ. ಇಲ್ಲಿಯೇ ಇದ್ದುಬಿಡು. ನಿನಗೆ ಮ್ಯಾಟ್ರಿಕ್ ಪಾಸು ಮಾಡಿಸಿ, ವಕೀಲಿ ಪರೀಕ್ಷೆಗೆ ಸಹ ನಾನು ಕೂಡಿಸುತ್ತೇನೆ ತಿಳಿಯಿತೇ.'

ರಾಯರ ಈ ಮಾತು ಜಗಣ್ಣನನ್ನು ಒಂದು ಕ್ಷಣ ಸ್ವರ್ಗಕ್ಕೆ ಮುಟ್ಟಿಸಿತು. ಕುಬೇರರಾಯರ ಸಂಪತ್ತಿಗೆಲ್ಲ ತಾನೊಬ್ಬ ಪಾಲುಗಾರನೆಂಬ ಭ್ರಮೆಯೂ ಸ್ವಲ್ಪ ಹೊತ್ತು ವೈ ಹೊಕ್ಕಿತು.

ಆದರೆ ಮನೆಯ ಗತಾಗತಗಳನ್ನು ಈ ವರೆಗೆ ತಿಳಿದ ಆತನು ಹೇಳಿದನು.

'ಬೇಡ, ರಾಯರೇ. ನಿಮ್ಮ ಉಪಕಾರವು ನನ್ನ ಮೇಲೆ ಹೇಳದಷ್ಟು ಆಗಿದೆ. ನಾನು ಪರೀಕ್ಷೆಯ ಸಲುವಾಗಿ ಈಗ ಅಭ್ಯಾಸ ನಡೆಸಿದ್ದೇನೆ. ದಯಮಾಡಿ ನನ್ನನ್ನು ಜುಲುಮೆಮಾಡಿ ಗೋಳಿಗೆ ಹಾಕಬೇಡರಿ.'

'ಆದರೆ ಚರಿತಾರ್ಥದ ವಿಚಾರವೇನೋ ಜಗಣ್ಣ? ನೀನು ಕೆಲಸ ಬಿಟ್ಟರೆ ನಿಮ್ಮ ಮನೆಯವರ ಹೊಟ್ಟೆ ಸಾಗುವ ಬಗೆಯೇನು?' ರಾಯರು ಕಕ್ಕುಲತೆಯಿಂದ ಕೇಳಿದರು.

ತಂದೆಯವರು ಈಗ ಸಾಕಷ್ಟು ಗಳಿಸುತ್ತಿರುವರೆಂದು ವಿವರಿಸಿ ಹೇಳಿ ಜಗಣ್ಣನು ಹೊರಟನು. 'ಹಾಗಾದರೆ ನಿಂದಿರು.' ಎಂದು ರಾಯರು ಒಳಗೆ ಹೋಗಿಬಂದು ಮಾತನಾಡಿದರು.

'ಈ ಐವತ್ತು ರೂಪಾಯಿ ತಗೋ, ನಿನ್ನ ಪರೀಕ್ಷೆಯ ಖರ್ಚು ಮಾಡಿಕೊ. ಮತ್ತೆ ಬೇಕಾದಾಗ ಬಾ, ತಿಳಿಯಿತೇ?'

ಆ ಹಿರಿಯರ ಕಾಣಿಕೆಯನ್ನು ಒಲ್ಲೆನ್ನಲಾರದೆ ಜಗಣ್ಣನು ತಕ್ಕೊಂಡು ತನ್ನ ಮನೆ ಸೇರಿದನು.

ಪ್ರವೇಶಕಪರೀಕ್ಷೆ ನಾಳೆ, ನಾಡಿದು ಎನ್ನಲಿಕ್ಕೆ ಜಗಣ್ಣನಿಗೆ ಜ್ವರ ಬಂದವು. ಹತ್ತು ಹದಿನೈದು ದಿನದ ಓದಿನ ಪರಿಣಾಮ. 'ಆಯಿತು ನನ್ನ ಹಣೆಬರಹದಲ್ಲಿ ಮುಂದೆ ಹೋಗುವದಿಲ್ಲ'ಎಂದು ಪುಸ್ತಕ ಒಗೆದು ಹಾಸಿಗೆ

ಹಿಡಿದನು. ಬಂಡೇರಾಯರ ಜೀವ ಚುರುಚುರು ಎಂದಿತು. ಕೂಡಲೆ ಡಾಕ್ಟರರ ಕಡೆ ಧಾವಿಸಿ ಕ್ವಿನಾಯಿನ್ ತಂದುಕೊಟ್ಟರು. 'ನನಗೆ ಯಾವದೂ ಬೇಡ. ಪರೀಕ್ಷೆ ಗಿರೀಕ್ಷೆ ಮುಗಿದಂತಾಯಿತು,ನನ್ನ ಆಯುಷ್ಯ ದಲ್ಲಿ' ಎಂದು ಜಗಣ್ಣನು ಹಟಮಾರಿಯಾದನು. 'ಹಾಗೆನ್ನಬಾರದು, ಇದು ತಗೋ ಹಣಮಪ್ಪನ ಅಂಗಾರ ಹಚ್ಚಿಗೋ. ನಾಳೆ ನೀ ಎದ್ದು ಪರೀಕ್ಷಾಕ್ಕ ಹೋಗತೀ ನೋಡು' ಎಂದು ಗೋದವ್ವನು ರಮಿಸಿ ಔಷಧ ಕುಡಿಸಿದಳು.ಮರುದಿನ ಸ್ವಲ್ಪ ಓಡಾಡಲಿಕ್ಕೆ ನಿಜವಾಗಿ ಬಂದಿತು. ಓದಿದ್ದೆಲ್ಲ ತಲೆಯಲ್ಲಿ ನೆನಪಾಗತೊಡಗಿತು. ಈಗ ಜಗಣ್ಣನಿಗೆ 'ಪರೀಕ್ಷೆಗೆ ಕುಳಿತು ಬಿಡೋಣ, ಆದದ್ದಾಗಲಿ' ಎನಿಸಿತು. ಐದಾರು ದಿನಗಳಲ್ಲಿ ಪರೀಕ್ಷೆ ತೀರಿತು. ನಡುವೊಮ್ಮೆ ಜ್ವರ ಬರದೆ ಇರಲಿಲ್ಲ. ಆದರೂ ಫಾರ್ಮು ದೊರಕಿಸುವ ಮಟ್ಟಿಗೆ ಕುಳಿತದ್ದು ಸರಿಯಾಯಿತೆಂದು ಜಗಣ್ಣನು ಉಬ್ಬಿದನು.

ಎಂಟು ಹತ್ತು ದಿನಗಳಲ್ಲಿ ಎಲ್ಲ ನಿರ್ಣಯವಾಗಬೇಕಾಗಿತ್ತು. ಶಿಕ್ಷಕರು ಉತ್ತರದ ಕಾಗದಗಳನ್ನು ತಪಾಸುಮಾಡುವ ವೇಗ ನೋಡಿದರೆ, ವಿದ್ಯಾರ್ಥಿಗಳು ಏನೂ ಬರೆಯದೆ ಹಾಗೇ ಕೊಟ್ಟಿದ್ದಾರೆ—ಎನ್ನುವಂತಿತ್ತು. ಮಾರ್ಕು ಕೇಳುವ ಹುಡುಗರ ತಂಡತಂಡಗಳು ಮಾಸ್ತರ ಜನರ ಮನೆಯು ಸುತ್ತು ಮುಕುರಿದವು. ಜಗಣ್ಣನು ಅದಾವ ಗೋಜಿಗೂ ಹೋಗಲಿಲ್ಲ. ಅವನು ಮನೆಯಲ್ಲಿ ಕಾಯಾಸ ಕಟ್ಟಿದಂತೆ, ಇಂಗ್ಲಿಶ್‌ದಲ್ಲಿ ನಪಾಸೆಂದು ಪರಿಣಾಮದ ದಿನ ಗೊತ್ತಾಯಿತು. ಶಾಸ್ತ್ರಿಗಳ ಕೃಪೆಯಿಂದ ಸಂಸ್ಕೃತ ದಲ್ಲಿ ಪಾಸಾಗಿದ್ದನು. ಇಂಗ್ಲಿಶ್ ನಪಾಸಾದವನನ್ನು ಹೇಗೆ ಮುಂದಿನ ದೊಡ್ಡ ಪರೀಕ್ಷೆಗೆ ಕಳಿಸುವದೆಂದು ಹೆಡ್‌ಮಾಸ್ತರರಿಗೆ ದೊಡ್ಡ ಪ್ರಶ್ನೆ ಬಿದ್ದಿತು. ಸಂಗಮಮಾಸ್ತರರಿಗೆ ಈ ಸುದ್ದಿ ತಿಳಿಯಲು, ನಿರ್ಣಾಯಕ ಸಭೆಯಲ್ಲಿ ಜಗಣ್ಣನಂತೆ ಆಗುವ ಹಾಗೆ ಎಲ್ಲ ವ್ಯವಸ್ಥೆ ಮಾಡಿದ್ದರು. ಸಭೆ ಕೂಡಿತು. 'ಹಿಂದೊಮ್ಮೆ ಹೀಗೇ ನಪಾಸಾದ ಈ ಹುಡುಗನನ್ನು ಮತ್ತೆ ಕಳಿಸುವದರಲ್ಲಿ ಅರ್ಥವಿಲ್ಲ, ನಾನಂತೂ ವಿರುದ್ಧನಿದ್ದೇನೆ' ಎಂದು ಇಂಗ್ಲಿಶ್ ಮಾಸ್ತರರು ಪ್ರಳಯಕಾಲದ ಪ್ರೌಢಿಮೆಯಿಂದ ಹೇಳಿದರು. ಅದಕ್ಕೆ ಇನ್ನೊಬ್ಬ ವಿನೋದೀ ಮಾಸ್ತರರು ಎದ್ದು ನಿಂತು 'ಕೊಟ್ಟುಬಿಡಿರಿ,

ಹೋಗಲಿ ಬಡಹುಡುಗ. ನಾವೇನು ವೈಕುಂಠದ ಬಾಗಿಲಲ್ಲಿ ನಿಂತು ತಪಾಸು ಮಾಡಿಬಿಡುವ ಜಯವಿಜಯರಲ್ಲ; ಅಥವಾ ಗ್ರೀಕ್ ಜನರ ನರಕದ ಹಾದಿಯಲ್ಲಿ ನಿಂತ ಸೆರ್ಬರಸ್ ನಾಯಿಗಳಲ್ಲ.' ಎಂದರು. ಎಲ್ಲರೂ ಹುಚ್ಚುನಗೆ ನಕ್ಕರು. ಹೆಡ್‌ಮಾಸ್ತರರು 'ಯಾಕಾಗಲೊಲ್ಲದು' ಎಂದು ಈ ವಿನೋದದ ಭರದಲ್ಲಿ ಹೆಸರು ಗುರುತಿಸಿದರು. ಅಂತೂ ಜಗಣ್ಣನು ಫಾರ್ಮ್ ಕಳಿಸಿದ್ದಾಯ್ತು. ಕುಬೇರರಾಯರ ಹಣವು ಈಗ ಎಷ್ಟು ಉಪಯುಕ್ತವಾಯಿತೆಂಬುದನ್ನು ನಿರ್ಧನರು ಮಾತ್ರ ತಿಳಿಯಬಲ್ಲರು.

ಮ್ಯಾಟ್ರಿಕ್ ಪರೀಕ್ಷೆ ಎರಡು ತಿಂಗಳಿತ್ತು. ಅನಂತನ ಇಚ್ಛೆಯ ಮೇರೆಗೆ ಧಾರವಾಡ ಕೇಂದ್ರವನ್ನೇ ಜಗಣ್ಣನು ತುಂಬಿದ್ದನು. ಹಿಂದಿನ ಪರೀಕ್ಷೆಯಿಂದ ಪಾಠ ಕಲಿತಮೇರೆಗೆ ಅಪರಾತ್ರಿಯ ಅಭ್ಯಾಸಕ್ಕೆ ಶರಣು ಹೊಡೆದು, ಆದಷ್ಟು ಓದುಬರೆಹವನ್ನು ಅಚ್ಚುಕಟ್ಟಾಗಿ ಹಗಲಲ್ಲಿ ಮಾಡುತ್ತ ಸಾಗಿದನು. ತನ್ನ ಪರೀಕ್ಷೆ ತೀರಿಸಿಕೊಂಡು, ಎರಡನೆಯ ವರ್ಗದಲ್ಲಿ ಮೇಲೆ ಮೇಲೆ ಬಂದು ಪಾಸಾದ ಅನಂತನು ಗೆಲವೂರಿಗೆ ಬಂದನು. ಮೊದಲ ವರ್ಷದಲ್ಲಿ 'ಮೋಹದಿಂದ ದುಡಿದದ್ದೆಲ್ಲ ನೀರುಪಾಲಾಯಿತು' ಎಂಬ ವಿಷಾದವು ಬಿಡಲಿಲ್ಲ. ಜಗಣ್ಣನನ್ನು ಕರೆದುಕೊಂಡು ಮುಂದೆ ಆತನೇ ಧಾರವಾಡದವರೆಗೆ ಹೋಗಿ ಅವನಿಗೆ ಎಲ್ಲ ಅನುಕೂಲ ಮಾಡಿಕೊಟ್ಟನು. ಪರೀಕ್ಷೆ ಕೊನೆಗಂಡಿತು, ನಿರ್ವಿಘ್ನವಾಗಿ ಕೊನೆಗಂಡಿತು. ಜಗಣ್ಣನು ಅತ್ಯಾನಂದದಿಂದ ಅನಂತನನ್ನು ಕೊನೆದು ಕೊಂಡಾಡಿ 'ಅನಂತಾ! ನಿನ್ನಂಥವ ಒಬ್ಬ ಈ ಜಗತ್ತಿನ ಮೇಲಿದ್ದರೆ ನಮ್ಮಂಥ ನೂರು ಬಡವರ ಚಿಂತೆ ಸಾಯುತ್ತವೆ' ಎಂದು ಉಪಕಾರ ಸ್ಮರಿಸುತ್ತ ಊರು ಮುಟ್ಟಿದನು.

ಮೇ ಮೂವತ್ತಕ್ಕೆ ಫಲಿತಾರ್ಥವು ಹೊರಬಿದ್ದಿತು: " ಜೆ. ಬಿ. ಜಮದಗ್ನಿ ಪಾಸು " ಎಂದು ತಿಳಿಯಿತು. 'ಪಾರಾದೆ!' ಎಂದು ಜಗಣ್ಣ ಜಿಗಿದನು. ಗೋದವ್ವನು ಹಣಮಪ್ಪನಿಗೆ ಬೇಡಿಕೊಂಡ ಎರಡೂ ಕಾಯಿ ಒಡಿಸಿದಳು, ಬಂಡೇರಾಯರು ಸಕ್ಕರೆ ಹಂಚಿದರು. ರಾಯರು ತಮ್ಮ ಹಣದ ಸದುಪಯೋಗವಾಯ್ತೆಂದು ಹಿಗ್ಗಿದರು. ಅನಂತನಂತೂ ಮಿತ್ರನ ಪಾಸಿನಲ್ಲಿ ತನ್ನ ಫಸ್ಟ್‌ಕ್ಲಾಸಿನ ಹಾನಿಯನ್ನು ಮರೆತುಬಿಟ್ಟನು. ಆದರೆ

ಮುಂದೇನು ? ಈ ಪಾಸಿನ ಬೆಲೆಯೇನು ಬಾಜಾರದಲ್ಲಿ ? ಎಂಬ ವ್ಯವಹಾರದ ವಿಚಾರವು ಯಾರೊಬ್ಬರ ಮಿದುಳನ್ನೂ ಅಂದು ಸೇರಲಿಲ್ಲ.

---

# ಆನೆಯ ಕಿಡಿ

---

ಜಗಣ್ಣನು ಪಾಸಾದ ದಿನ ರಾತ್ರಿ ಅನಂತನ ಕೋಣೆಯಲ್ಲಿ ಎಷ್ಟೆಷ್ಟೋ ಮಾತಾಡುತ್ತ ಕುಳಿತನು.

'ನನ್ನ ದೈವವು ನಾನು ತಿಳಿದುಕೊಂಡಷ್ಟು ಕೆಟ್ಟದಲ್ಲ ನೋಡು ಅನಂತಾ.'

ಮಿತ್ರನ ಈ ಜಯವೆಂದರೆ ತನ್ನ ಹಾಗೂ ಅವನ ಕರ್ತೃತ್ವದ ವಿಜಯವೆಂದು ಮನವರಿಕೆಯಾದ ಅನಂತನು ಹೇಳಿದನು.

'ಹೌದು, ದೈವ ಕೆಟ್ಟದೆಂದು ತಿಳಿದುಕೊಳ್ಳುವದೊಂದೇ ಮನುಷ್ಯನ ದುರ್ದೈವ. ಹಾಗೆ ತಿಳಿಯದೆ ಇದ್ದವರು ಜಗತ್ತಿನಲ್ಲಿ ವಿರಳ. ದೈವದ ಹೆಸರು ತೆಗೆಯದೆ ನಾನು ಶೂರನೆಂದು ಹೊರಡಬೇಕು, ಜಗಣ್ಣ.'

'ಆದರೆ ನಾನು ಶೂರ–ಎಂದವರ ಫಜೀತಿ ಆಗುವದಲ್ಲ! ಅಂತೇ ಎಲ್ಲರೂ ದೈವಕ್ಕೆ ಜೋತು ಬೀಳುವದಿಲ್ಲವೇ ?'

'ಫಜೀತಿ ಆಗದೆ ಶೂರತನ ಹೊರಬೀಳದು. ದೈವವು ಶೂರರ ಹಾದಿಯಲ್ಲಿ ತೂರಿದ ಮುಳ್ಳುಕಂಟಿಯಂತೆ. ಅದನ್ನು ತುಳಿದು ಹೋದವನು ಉಳಿದಾನು.'

ಈ ಆಶಾವಾದದ ಲಹರಿಗುಂಟ ಮಾತುಕತೆ ನಡೆಯಲು, ಅನಂತನ ವಿಚಾರಶಕ್ತಿ, ಇಡುವ ರೀತಿ ಇವಕ್ಕೆ ಜಗಣ್ಣನು ಮರುಳಾದನು. ಮಾತನಾಡಿದನು.

'ಅನಂತಾ, ನಿನ್ನಂತೆ ಆಗಲಿಕ್ಕೆ ನಾನೆಷ್ಟು ಜನ್ಮ ದಾಟಬೇಕೇನೊ'

'ಅದೇಕೆ, ಕಾಲೇಜದ ನಾಲ್ಕುವರ್ಷಗಳನ್ನು ದಾಟು ಬಡವನಾಗಿ; ನನ್ನ ಅಪ್ಪನಾಗುವಿ. ನಾನು ಬರೀ ಮಾತಿನವನಲ್ಲ. ನೀನು ಎಲ್ಲದರಲ್ಲಿ ಮಲ್ಲನಾಗುವಿ.'

'ನಾನು ಹೇಗೆ ಕಾಲೇಜ ಕಾಣುವೆನು ಅನಂತಾ. ನಾಕುವರ್ಷ ಹೋಗಲಿ; ಒಂದು ಕ್ಷಣವೂ ಅದರ ಮೋರೆ ನೋಡುವ ಯೋಗ್ಯತೆಯು ನನಗಿಲ್ಲ?'

'ಅಂದರೆ?'

'ಅಂದರೆ ನನ್ನ ಸಾಲಿ ಕಾಲೇಜು ಎಲ್ಲದರ ಮಂಗಳವು ಈಗತ್ತು ಆಗಿಹೋಯಿತು. ಇನ್ನು ಮತ್ತೆ ಹೊರಡಬೇಕು—ಸಹರಾರಣ್ಯದಲ್ಲಿ ನಡೆದ ಒಂಟೆಯಂತೆ,ಉಸುಬಿನಲ್ಲಿ ಬಿಸಿಲಿನಲ್ಲಿ ನೀರು ಹುಡುಕುವ ಹುಚ್ಚು ಹವ್ಯಾಸದಿಂದ.'

'ಛೇ, ಅದಾಗದು, ನಾನು ನಿನ್ನ ಗೆಳೆಯನಾಗಿರುವವರೆಗೆ ಅದೆಂದಿಗೂ ಆಗದು. ನೀನು ಕಾಲೇಜದ ಪಾವಟಿಗೆಯನ್ನು ಏರಲೇಬೇಕು. ಕಾಲೇಜಿನಿಂದ ಏನೂ ದೊರೆಯದೆ ಹೋಗಲಿ, ನನ್ನದೊಂದು ಭರವಸೆಯಿದೆ ಜಗಣ್ಣಾ! ಬಿತ್ತಿ ಬೆಳೆಯುವವರಿಗೆ ಅಲ್ಲಿ ಗೊಬ್ಬರವಿದೆ. ನಮ್ಮಂಥವರಿಗೆ ಅಲ್ಲಿ ಸಂಸ್ಕೃತಿಯ ಅನ್ನ ದೊರೆಯುತ್ತದೆ. ಹೊಸವಿಚಾರದ ನೀರು ಸಿಗುತ್ತದೆ. ಆದರಿಂದ ಪುಷ್ಟವಾದ ಜೀವದ ಇರುವಿಕೆಯೇ ಇರುವಿಕೆ....'

'ಅದೆಲ್ಲ ನಿನಗೆ ಒಪ್ಪುತ್ತದೆ, ಅನಂತಾ. ಕುಬೇರರಾಯರ ಸಂಪತ್ತಿನ ರಾಸಿಯ ನಡುವೆ ಕುಳಿತ ನಿನಗೆ. ನಮಗೆಲ್ಲ ನಿನ್ನ ಆ ಅನ್ನ ನೀರು ಹೊಟ್ಟೆತುಂಬಿಸಲಾರವು.'

'ತಿಳಿಯಿತಪ್ಪಾ. ಹಾಗಾದರೆ ಕಕ್ಕನ ನೆರಳನ್ನು ಬಿಟ್ಟು ನಿನ್ನೊಡ ಹುಟ್ಟಿದ ತಮ್ಮನಾಗಿ ಇರು—ಎನ್ನು, ಆಗ ಸಹ ನಾನು ಕಾಲೇಜಕ್ಕೆ ಹೋಗಬೇಕೆನ್ನುವವ. ಅಲ್ಲಿದ್ದರೋ ಚೈತನ್ಯವನ್ನು ಹೊರಚಿಮ್ಮಿಸುವ ಬುದ್ಧಿಯ ಸಂಚಲನವಿರುತ್ತದೆ.'

'ಆಗಲಿ, ಅದೆಲ್ಲ ನಿನಗಿರಲಿ. ನನಗೆ ಗೆಲವೂರಲ್ಲಿಯೇ ನನ್ನ ಗೋರಿ. ಕಾಲೇಜದ ಲಭ್ಯವು ನನಗಿಲ್ಲ.'

'ಹಾಗೆನ್ನಬೇಡ, ಜಗಣ್ಣಾ. ನಿನಗೆ ನಾನೆಲ್ಲ ಅನುಕೂಲ ಮಾಡಿಸಿ ಕೊಡುವೆ. ನೀನು ಈ ಸಾರೆ ನನ್ನ ಜೋಡಿ ಬರಲೇಬೇಕು.'

ಈ ನಿರ್ಣಯದೊಡನೆ ಮಾತು ಮುಗಿತಾಯವಾಯ್ತು. ತಾನು

ಕಾಲೇಜಿನ ವಿದ್ಯಾರ್ಥಿಯಾಗುವದು ತೀರ ಅಸಾಧ್ಯವೆಂದು ನಿಃಸಂಶಯವಾಗಿ ತಿಳಿದುಕೊಂಡ ಜಗಣ್ಣನಿಗೆ 'ಆಗದ್ದು ಆಗಬಾರದೇಕೆ?' ಎಂದು ಕೇಳುವ ಹಾಗಾಯ್ತು.

ದಿನಸೆರಡು ದಿವಸಗಳು ಪಾಸಾದವರ ಫೇಡೆ ತಿನ್ನುವದರಲ್ಲಿ ಕಳೆದವು. ಮುಂದಿನ ವಿಚಾರವಮಾಡುವ ಮನಃಸ್ಥಿತಿಯು ಬಂತು. ಅನಂತನು ಬಂಡೇರಾಯರಿಗೆ ತಾನು ಉಪನ್ಯಾಸ ಕೊಟ್ಟು, ತನ್ನ ಕೂಡ ಜಗಣ್ಣನನ್ನು ಧಾರವಾಡಕ್ಕೆ ಕಳಿಸಬೇಕೆಂದು ಬೇಡಿಕೊಂಡನು. ಎಲ್ಲದರ ಕೊನೆಗೆ ಬಂಡೇರಾಯರು ಹೇಳಿದರು.

'ಅನಂತಾ, ನಿನ್ನ ಮನಸ್ಸು ಮುರಿಯಬಾರದು. ನಿನ್ನಿಂದೇ ಜಗಣ್ಣನು ಪಾಸಾದನು, ನಿನ್ನಿಂದೇ ಮುಂದೆ ಬರಬೇಕು. ಇದೆಲ್ಲ ಖರೆ. ಆದರೆ ಕಾಲೇಜಂದರೆ ನಮಗೆ ಉದ್ದ ನೀರು. ಖರ್ಚಿಗೆ ಕೊಡಲಾಗದ ಮಾತು. ಆದರಲ್ಲಿ ಒಂದು ತಿಂಗಳೇ, ಎರಡೇ? ನಾಲ್ಕು ಗಟ್ಟಿ ವರುಷ. ಮಧ್ಯಾಹ್ನದ ಪುರವಣೆಯಾದರೆ ಸಾಕೆಂದು ಕುಳಿತ ನಾವು ಆದರ ವಿಚಾರ ಮಾಡುವದೇ ಹುಚ್ಚುತನದ್ದೇ ಸರಿ.'

ಅನಂತನ ಆಶಾತಂತುವೆಲ್ಲ ಹರಿದಂತಾಯಿತು. ತಾನು ಊಟದ ಇರುವಿಕೆಯ ಏರ್ಪಾಟು ಮಾಡಬಹುದೆಂದು ಅವನ ನೆಚ್ಚಿಗೆಯಿತ್ತು; ಆದರೆ ಫೀ ಮೊದಲಾದ್ದಕ್ಕೆ ನೂರಿನ್ನೂರಾದರೂ ಪ್ರತಿವರ್ಷ ಬೇಡವೇ? ಇದಕ್ಕೆ ಉತ್ತರ ದೊರೆಯಲಿಲ್ಲ. ವಿಚಾರಗಳಲ್ಲಿ ಮುಂದೋಟವಿದ್ದರೂ ವ್ಯವಹಾರದಲ್ಲಿ ಆತನು ಚಿಕ್ಕವನೇ. ಕಾಲೇಜಿನಲ್ಲಿ ಅವನನ್ನು ಯಾರು ಯಾಕೆ ಕೇಳಬೇಕು? ಜಗಣ್ಣನಿಗಾಗಿ ಬಿಕ್ಕೆ ಬೇಡಿದರೆ ಕೊಡುವವರೊಬ್ಬರು ಬೇಕಲ್ಲವೇ? ಈ ಮುಂತಾದ ತೊಡಕು ತೋಟಿಗಳಲ್ಲಿ ಹೊಸ ಹಂಚಿಕೆಗಳನ್ನೆಷ್ಟೋ ಕಟ್ಟಿ, ಮುರಿದು, ತೀರ ನಿರಾಶಿತನಾಗಿ, 'ಹಣವೇ, ಒಬ್ಬರನ್ನಪ್ಪಿ ಇನ್ನೊಬ್ಬರನ್ನು ಒದೆದು ಇರುವದು ಯಾವ ತರ್ಕ ನಿನ್ನದು?' ಎಂದು ಒರಲಿ, ತನ್ನ ಹೊತ್ತಿಗೆ ಇಂಟರ್‌ಕ್ಲಾಸಿನ ವಿದಾರ್ಥಿಯಾಗಿ ಕಾಲೇಜಕ್ಕೆ ಹೋದನು. ಮತ್ತೊಂದು ಅಗಲಿಕೆಯ ಪ್ರಸಂಗವು ನಡೆಯಿತು. ಜಗಣ್ಣನು ನಿಜವಾಗಿ ಒಬ್ಬೊಂಟಿಯಾದನು.

' ಪರೀಕ್ಷೆಯ ಆಗುಹೋಗನ್ನೆಲ್ಲ ಜಯರಾಯನಿಗೆ ಹೇಳಲೆಂದು

ಮುಂದೊಂದು ದಿನ ಜಗಣ್ಣನು ಆತನ ಮನೆಗೆ ಹೋದನು. ಜಗಣ್ಣನ ಪಾಸು ಜಯರಾಯನಿಗೆ ಆಗಲೇ ಗೊತ್ತಾಗಿತ್ತು. ಆದರೆ ಪಾಸಾದಂದಿನಿಂದ ಅನಂತನ ಕೂಡ ಅಂಟಿಕೊಂಡ ಹಾಗೆ ಇದ್ದ ಮೂಲಕ, ಜಯರಾಯನ ಕಡೆಗೆ ಜಗಣ್ಣನು ಹೋಗಿದ್ದಿಲ್ಲ; ಅಂತೇ ಜಯರಾಯನು ಆತನನ್ನು ಕಂಡಕೂಡಲೆ 'ಓಹೋ ನಪಾಸಾದ ಜಗನ್ನಾಥರಾಯರು ಮತ್ತೆ ನೌಕರಿ ಕೇಳಲಿಕ್ಕೆ ಬಂದರೇನು?' ಎಂದು ಗೇಳು ಮಾಡಿದನು. ಜಗಣ್ಣನಿಗೆ ಬೇಗನೆ ಅರ್ಥವಾಗಲಿಲ್ಲ. ತನ್ನ ಸರಳ ಬಗೆಯಲ್ಲಿ 'ಇಲ್ಲೋ ಜಯರಾಯಾ, ಪಾಸ್ ಆಗೇನಿ. ನಿನಗೆ ಅದರದೆಲ್ಲ ಹೇಳಲಿಕ್ಕೇ ಈಗ ಬಂದದ್ದು.' ಎಂದನು.

'ಓಹೋ, ಬಹಳ ಲಗೂ ಬಂದಿರಿ ಹೇಳಲಿಕ್ಕೆ! ಮುಂದಿನ ವರುಷ ಬಂದಿದ್ದರೆ ಇದಕ್ಕೂ ನೆಟ್ಟಗಾಗುತ್ತಿತ್ತು.'

'ಇಲ್ಲ, ಜಯಾ, ಹಾಗೇನು ತಿಳಿಯಬೇಡ. ನಿನಗೆ ಗೊತ್ತಾಗಿರಬೇಕೆಂದು ಪಾಸೊಂದನ್ನೇ ತಿಳಿಸಲು ಬರಲಿಲ್ಲ. ಇದಲ್ಲದೆ....' ಎಂದು ಕ್ಷಣ ನಿಂತು ಅನಂತನ ಹೊಸ ಗೆಳೆತನವನ್ನೂ ಅವನಿಂದ ಆದ ಉಪಕಾರವನ್ನೂ ಕುರಿತು ಮನವಾರೆ ಹೊಗಳಿ ಹೇಳಿದನು.

'ಆಯಿತು ಬಿಡಪ್ಪಾ. ನನಗೆ ನಿನ್ನ ಪಾಸು ಗೊತ್ತಾಗದೆ ಹೋಗುತ್ತದೇ? ನಮ್ಮ ಸಂಘದಲ್ಲಿ ಊರಸುದ್ದಿಗಳೆಲ್ಲ ತಾಸುತಾಸಿಗೆ ರಿಪೋರ್ಟ್ ಆಗುತ್ತವೆ. ತಾಜಾಸುದ್ದಿ ಬೀರೋ ಅಂದರೆ ನೀವು ಇಂಗ್ಲೀಷಿನಲ್ಲಿ ಬ್ಯೂರೋ ಅಂತೀರಲ್ಲ ಅಂಥ ಒಂದು ಅಸಾಮಿ ಅದೆ ನಮ್ಮಲ್ಲಿ. ನಿಮ್ಮ ಮ್ಯಾಟ್ರಿಕ್‌ದ ತಾರುಬರುವ ಮೊದಲು ನಮಗೆ ಎಲ್ಲಾ ಬಾತಮೀ ಸಿಗುತ್ತವೆ. ಅವನಿಂದ ಅಷ್ಟು ಜಲದು. ನಿನ್ನದೂ ಅನಂತನ ಗಳಶ್ಯಾ ಕಂಠಶ್ಯಾ ಸಹಿತ ನಮ್ಮ ಮಾತಿನಲ್ಲಿ ಹಾದುಹೋಗಿದೆ. ಹೋಗಲಿ, ಮತ್ತೆ ನಿನ್ನ ಫೇಡೇ ಎಲ್ಲಿ?'

'ನೀನೇ ಕೊಡಬೇಕು ಫೇಡೇ!'

'ಅದು ಯಾಕಪಾ?'

'ನೀನು ತಿವಿದು ತಿವಿದು ಹಚ್ಚಿದ್ದಕ್ಕೇ ನಾನು ಅಭ್ಯಾಸಮಾಡಲಿಲ್ಲವೇನು?'

'ಆಗಿಹೋಯ್ತು, ಫೇಡೇ ಉಳಿಸಿಕೊಳ್ಳಲು ಒಳ್ಳೇ ಯುಕ್ತಿ. ಹೀಗಾದರೆ ನೀನು ನಿನ್ನನ್ನು ಪಾಸುಮಾಡಿದ ಪರೀಕ್ಷಕರಿಂದಲೂ ಫೇಡೇದ ಪುಡಕಿಯನ್ನು ತರಿಸಿಕೊಳ್ಳುವವ ಅಂದಹಾಗಾಯ್ತು. 'ನೀವು ಪಾಸುಮಾಡಿದಲ್ಲೇ ನಾನು ಪಾಸಾದೆ' ಎಂದು!'

ಹೀಗೆ ವಿನೋದದ ಮುನ್ನುಡಿಯಾದಮೇಲೆ ಜಗಣ್ಣನು ಫಾರ್ಮಿನ ಸಲುವಾಗಿ ಆದ ತೊಂದರೆ, ಮುಂದಿನ ಅಭ್ಯಾಸ, ಧಾರವಾಡದ ಪ್ರವಾಸ ಮುಂತಾದ ವಿಷಯಗಳನ್ನು ಮುಚ್ಚುಮರೆಯಿಲ್ಲದೆ ಹೇಳಿ 'ಅಂತೂ ಪಾಸಾದದ್ದು ಹೆಚ್ಚಿನದಾಯ್ತು ಜಯಾ' ಎಂದು ಉಸಿರಿಬಿಟ್ಟನು.

'ಇನ್ನು ಮುಂದಿನದು ಅದಕ್ಕೂ ಹೆಚ್ಚಿನದು. ಏನು ಮಾಡುವ ವಿಚಾರ ನಿನ್ನದು?'

'ಏನೂ ಬಗೆಯೇ ಹರಿಯುವೊಲ್ಲದು. ಒಂದೆರಡು ದಿನ ವಿಚಾರ ಮಾಡಿ ನೋಡಿದೆ. ತಲೆ ಕಾದಿತು. ನಪಾಸಾಗಿದ್ದರೇ ನೆಟ್ಟಗಿತ್ತೇನೋ ಎನಿಸಿತು.'

'ಹೌದು, ಪಾಸು ನಪಾಸು ಒಂದೇ ಈಗಿನ ದಿವಸಗಳಲ್ಲಿ. ಆದರೂ ಹೀಗೆ ಮಾಡು. ಮತ್ತೆ ಆ ಮಾಮಲೇದಾರರಿಗೆ ಭೆಟ್ಟಿ ಆಗಿ ಬಾ. ನೋಡೋಣ ಏನಾಗುತ್ತದೆ. ಮ್ಯಾಟ್ರಿಕ್‌ದ ಮುದ್ರೆ ಒಡಕೊಂಡು ಬಂದೀನಿ ಎಂದು ಹೇಳು.'

'ಛೇ, ಮುದ್ರೆ ಅಕ್ಷತೆ ಅವರಿಗೆ ಹೆಸರು ಕೇಳಿದರೆ ಆಗುವದಿಲ್ಲ. ಅದೆಲ್ಲಾ ವ್ಯರ್ಥ ಜಯರಾಯಾ.'

'ಹಾಗನಬಾರದು ನೋಡು. ಹರಳು ಒಗೆದು ನೋಡಬೇಕು, ತಾಕಿದರೆ ತಾಕೀತು. ತಿರುಗಿ ನಮಗೇನು ಬಡೆಯುವದಿಲ್ಲವೇ? ಹೋಗು ಈವತ್ತೇ ಹೋಗು'

ಜಯರಾಯನ ಈ ಸೂಚನೆಗೆ ಬಂಡೇರಾಯರು ಒಪ್ಪಲು ಇದ್ದದ ರಲ್ಲಿ ಸ್ವಚ್ಛವಾದ ಅಂಗಿಕೋಟುಗಳನ್ನು ಧರಿಸಿ ಅಪ್ಪನ, ರುಮಾಲು ಸುತ್ತಿಕೊಂಡು, ಜಗಣ್ಣನು ಕಚೇರಿಗೆ ಹೋದನು. ಕಚೇರಿಯೊಳಗೆ ರಾಯರ ಭೆಟ್ಟಿ ಆಗಲೇ ಇಲ್ಲ, ತಾನೆರಡುತಾಸು ನಿಂತದ್ದು ಮಾತ್ರ ಆಯಿತು. ಅವರ ಹಿಂದೆ ಹಿಂದೆ ಸಂಜೆಯ ನೆರಳು ತುಳಿಯುತ್ತ ಹೋಗಿ

ಮನೆಯಲ್ಲಿ ಕಂಡನು. ನಮಸ್ಕಾರ ಚಮತ್ಕಾರವಾದ ಮೇಲೆ ರಾಯರು 'ಯಾಕೆ ಬಂದೀ?' ಎಂದು ಕೇಳಿದರು. ಈ ನೀಟಾದ ಪ್ರಶ್ನೆಗೆ ಉತ್ತರ ಕೊಡಲು ಶಬ್ದ ಬರದೆ ಜಗಣ್ಣನು ಹಾಗೇ ನಿಂತನು. ರಾಯರು ತಾವೇ ಕೇಳಿದರು.

'ಕೆಲಸ ವಕೀಲರಲ್ಲಿ ನೆಟ್ಟಗೆ ನಡೆದಿದೆಯೆ?'

'ಅಲ್ಲಿ ಬಿಟ್ಟೆ' ಎಂದು ಅಂಜುತ್ತ ಜಗಣ್ಣ ಹೇಳಿದನು.

'ಮತ್ತೇನು ಮಾಡಬೇಕೆನ್ನುವಿ?'

ಇಷ್ಟರಲ್ಲಿ ಹೇಳಬೇಕಾದ ಪದಗಳು ತಲೆಯಲ್ಲಿ ಕೂಡಿಕೊಂಡಿದ್ದವು.

'ಇದೇ ವರುಷ ಮೊನ್ನೆ ನಾನು ಮ್ಯಾಟ್ರಿಕ್ ಪಾಸು ಆದೆನ್ರಿ. ಅದಕ್ಕೆ ತಮ್ಮ ಕಚೇರಿಯಲ್ಲಿ ಎಲ್ಲಿಯಾದರೂ ಜಾಗಾ ಇದ್ದರೆ ಅರ್ಜಿ ಕೊಡಬೇಕೇನು?–ಕೇಳಬೇಕಂತ ಬಂದೀನ್ರಿ?'

'ಓಹೋ, ತಿಳಿಯಿತು. ಅಲ್ಲೋ ಹುಡುಗಾ, ವಕೀಲರ ಮನೆ ಯಲ್ಲಿ ತಡೆಯದ ನೀನು ಕಚೇರಿಯಲ್ಲಿ ತಡೆಯುವಿಯಾ?'

'ಜಗಣ್ಣನ ಮೈ ಬೆವರಿತು, ಮುಳ್ಳೆಂದಿತು. ರಾಯರನ್ನು ಬಿಟ್ಟು ಬಂದದ್ದಕ್ಕೆ ಈಗ ಮೊದಲು ಎನಿಸದಷ್ಟು ಕೆಡಕೆನಿಸಿತು. ತಾನು ಅಲ್ಲಿ ದಕ್ಕದೆ ಹೊರಬಂದೆನೆಂಬ ಹುಸಿಮಾತು ಎದೆಯಿರಿದು ನಿಂತಿತು. ಮಾಮಲೇದಾರರು ನೋಡಿದರೆ ತೀರ ಸಹಜವಾಗಿ ಅದನ್ನಾಡಿದರು. ಇಂಥ ಹಾರಿಕೆಯ ಮಾತಾಡಿ ಪ್ರತಿಕ್ಷಣವೂ ಅವರಿಗೆ ರೂಢಿ. ಆದರೂ ಹುಡುಗನು ಮನಸ್ಸಿಗೆ ಹಚ್ಚಿಕೊಂಡನೇನೋ–ಎಂದು ಸ್ವಲ್ಪ ಅವರಿಗೆ ತೋರಿತು. 'ಆಯ್ತು ಹೋಗು, ಕ್ಯಾಂಡಿಡೇಟ ಲಿಸ್ಟಿನಲ್ಲಿ ಹಾಕಲಿಕ್ಕೆ ಒಂದು ಅರ್ಜಿ ಬರೆದು ತಾ' ಎಂದು ಹೇಳಿದರು. ಇದಂತೂ ನೂರು ಸಾರೆ ಹಚ್ಚಿ ಮತ್ತೆ ಹಚ್ಚಿದ ಹಾಡಿನ ರೆಕಾರ್ಡಿನಂತೆ ಈ ಹೊಸ ಅರ್ಜೀದಾರನಿಗೆ ಹೇಳಿದ ಹಳಸಿದ ಹುಕುಮು ಇದು. ಜಗಣ್ಣನು 'ಹೂಸರಿ' ಎಂದು ಹೊರಟನು. ತನ್ನ ದುಃಸ್ಥಿತಿಯನ್ನು ಕುರಿತು ದೊಡ್ಡ ಭಾಷಣವನ್ನು ಮಾಡಿ ಮಾಮಲೇದಾರರ ಕಣ್ಣೀರನ್ನೇ ತರಿಸಿಬಿಡಬೇಕೆನ್ನುವ ತಯ್ಯಾರಿ ಯಿಂದ ಮೊದಲು ಹೋದವನು ಅವನು!

ಅರ್ಜಿಯನ್ನೇನೊ ಒಗೆದನು, ಮುಂದೆ ಏನೂ ಸಿಗದಂತೆಯೇ

ಒಗೆದನು. ಈಗ ಪುಣ್ಯ ಮಾಡಬೇಕು ಅದರ ಫಲ ಸಿಕ್ಕೇ ಸಿಗುತ್ತದೆ, ಇಂದಿಲ್ಲ ಮುಂದಿನ ನೂರನೆಯ ಜನ್ಮದಲ್ಲಿ ಎನ್ನುವ ಹಾಗೆ ಈ ಕಚೇರಿಯ ಕರ್ಮಕಾಂಡವು.ಅಂತೇ ಅದರ ಆಸೆಯು ಅವನಿಗೆ ಹಿಂಗಿತು. ಬೇರೆ ವಿಚಾರ ಗಳಲ್ಲಿ ತೊಡಗಿದನು. ಲಾಯಬ್ರರಿಗೆ ಹೋದಾಗ ರೇಲ್ವೆಯವರ ಜಾಹೀ ರಾತೊಂದನ್ನು ನೋಡಿ 'ದಿಲ್ಲಿಗೆ ಕಲಿಯಲಿಕ್ಕೆ ಯಾಕೆ ಹೋಗಬಾರದು? ಎಲ್ಲ ಖರ್ಚು ಕೊಡುತ್ತಾರೆ' ಎನಿಸಿತು. 'ದಿಲ್ಲಿಗೆ ಹೋದರೂ ನಿನ್ನನ್ನು ಬಿಡುವದಿಲ್ಲ' ಎಂದು ನೌಕರಿಗೆ ಮನಸ್ಸಿನಲ್ಲಿ ನಗೆಚಾಟಿಕೆ ಮಾಡುತ್ತ ಹುರುಪಿನಲ್ಲಿ ಮನೆಗೆ ಬಂದು, ಆ ವಿಷಯವನ್ನು ಊಟಕ್ಕೆ ಕುಳಿತಾಗ ತೆಗೆದನು.

ಗೋದವ್ವನು ಗಾಬರಿಯಾಗಿ ಬಡಿಸುವ ಬೋಗೋಣಿಯನ್ನು ಅಲ್ಲೇ ಇಟ್ಟು 'ದಿಲ್ಲೀ ? ಅಲ್ಲೇನು ಪರದೇಶಕ್ಕೆ ಹೋಗತೀಯಪ್ಪಾ ! ಊರs, ಉದ್ಯಾನs ? ಅಲ್ಲಿ ಹೋಗಿ ಜಡ್ಡುಬಿದ್ದರ ಯಾರು ಕೇಳಬೇಕು' ಎಂದು ಭಾರೀ ಭಾವನಾಮಯವಾದ ಭಾಷಣ ಮಾಡಿದಳು. 'ಒಪ್ಪಿದರೆ ತಪ್ಪೇನು? ' ಎನ್ನುತ್ತಿದ್ದ ಬಂಡೇರಾಯರ ಎದೆಯೂ ಕರಗಿತು. ಗೋದ ವ್ವನು ಕೊನೆಗೆ ತನ್ನ ನಿರ್ಣಯ ಹೇಳಿದಳು.

'ಎಲ್ಲೂ ಹೋಗಬೇಡ. ದೊಡ್ಡಪರೀಕ್ಷಾ ಕೊಟ್ಟೀ. ಇಲ್ಲೇ ಸಾಲ್ಯಾಗ–ಗೀಲ್ಯಾಗ ಒಂದುಕೆಲಸಾ ನೋಡಿ ಸುರಕ್ಷಿತ ಇರು. ಹೆಡ್ ಮಾಸ್ತರರ ಅವ್ವ ಎಂಥಾ ಛಲೋ ಮುದುಕಿ ಅದ. ದಿನಾ ಪುರಾಣಕ್ಕ ಬರತಾಳ. ನಾ ಬೇಕಾರ ಹೇಳತೀನಿ'

ಆಯಿತು, ಜಗಣ್ಣನ ಕಲ್ಪನೆಯ ಗುಳ್ಳೆ ಒಡೆಯಿತು. 'ಇದ್ದಲ್ಲಿ ಇದ್ದರೂ ನಿನ್ನ ಕೈಗೆ ಹತ್ತುವದಿಲ್ಲ' ಎಂದು ನೌಕರಿಯು ಅವನಿಗೆ ತಿರುಗಿ ಅಣಕಿಸಿ ದಂತಾಯ್ತು.

ಆದರೆ ಗೋದವ್ವನು ಮಾಡಿದ ಸೂಚನೆಯು ಅಲಕ್ಷ್ಯಮಾಡು ವಂತಿರಲಿಲ್ಲ. ಅನಂತನಿಂದ ಕೂಡ ಆದೇತರದ ಪತ್ರ ಬಂದಿತು. ಎಂದೊ ಡನೆ ಜಗಣ್ಣನು ಒಂದೆರಡು ಹಾಯಸ್ಕೂಲುಗಳ ಹೆಡ್‌ಮಾಸ್ತರರ ಭೆಟ್ಟಿ ಆಗಿ ಬಂದನು. ಅದರಲ್ಲಿ ಒಂದಂತೂ ಸರಕಾರೀ ಸಾಲೆ, ಅಲ್ಲಿ ಹೆಡ್ ಮಾಸ್ತರರು ಏನೂ ಮಾಡಲಾರರು. ಇನ್ನೊಂದು ಜಗಣ್ಣನು ಕಲಿತ ಸಾಲೆ, ಖಾಸಗೀ ಸಂಸ್ಥೆ. ಅಲ್ಲಿ ಮಾತ್ರ ವಿಚಾರಮಾಡಿ ಹೇಳುವೆವೆಂದರು.

ಇಷ್ಟು ತಿಳಿಯುವದೊಂದೇ ತಡ, ಗೋದವ್ವನು ದೇವರಿಗೆ ದೊಡ್ಡ ದೊಡ್ಡ ಹರಕೆಹೊತ್ತಳು. ಹುಣ್ಣಿವೆಗೊಮ್ಮೆ ಸತ್ಯನಾರಾಯಣವೆಂದು ಆಣೆ ಮಾಡಿದಳು. ಆದರೆ ಏಳೆಂಟುದಿನ ವಿಚಾರಮಾಡಿ ಆಜೀವಸದಸ್ಯ ರೊಡನೆ ಚರ್ಚೆಮಾಡಿ 'ಈಗ ಖಾಲೀ ಇಲ್ಲ. ಮುಂದೆ ಆದ ಮೇಲೆ ನಿನ್ನನ್ನೇ ಮೊದಲು ತಗೊಳ್ಳುತ್ತೇವೆ' ಎಂದು ಹೆಡ್‌ಮಾಸ್ತರರು ವಚನವಿತ್ತರು.

ಗೋದವ್ವನ ಹರಕೆ ಸುಳ್ಳಾಗುವ ಹೊತ್ತು ಬಂದಿತು. ಎಂಟು ಹತ್ತುದಿನ ಹೋದವು. ಒಬ್ಬ ಮಾಸ್ತರರಿಗೆ ಹೊಟ್ಟೆಕಡೆತದ ಬೇನೆಯು ಹೆಚ್ಚಾಗಿ, ಅವರು ಔಷಧೋಪಚಾರಕ್ಕೆ ಮುಂಬೈಗೆ ಹೋಗಲೇಬೇಕಾಯಿತು. ಎರಡುಮೂರುತಿಂಗಳ ರಜೆ ಬೇಡಿದರು. ಆದರಿಂದ ಜಗನ್ನಾನಿಗೆ ಒಂದು ತೆರವು ಉಂಟಾಯಿತು, ಇಪ್ಪತ್ತುರೂಪಾಯಿ ಪಗಾರದ ಮೇಲೆ ತಕ್ಕೊಂಡರು. ಗೋದವ್ವನ ಅಪೇಕ್ಷೆಯಂತೆ ಒಂದು ಸತ್ಯನಾರಾಯಣವಾಯಿತು. ಈಗ ದೊರೆತ ಕೆಲಸವು ಕಾಯಂ ಆಗಲಿ ಎಂದು ಮುಂದಿನ ಜಾಲವನ್ನು ಮರುಳುದೇವರ ಮೇಲೆ ಬೀಸಿದಳು. ಕೊಟ್ಟ ಪ್ರಸಾದ ತಿಂದು ಹೇಳಿದ ಕೆಲಸ ಮಾಡುವ ಜೀತದಾಳು ಏನೋ ಅವಳ ದೇವರು—ಎನ್ನುವಂತಿತ್ತು. ಆದರೆ ರಜೆಯಮೇಲೆ ಹೋದ ಶಿಕ್ಷಕರು ಗುಣಹೊಂದಿ ಬಂದರು, ಜಗನ್ನಾನ ಕೆಲದಿನದ ಕೆಲಸವು ಕೊನೆಗಂಡಿತು.

ಮತ್ತೆ ಜಗನ್ನಾನು ನಿರುದ್ಯೋಗಿಯಾಗಿ ನಿಂತನು. ತಂದೆಯ ಪ್ರಾಪ್ತಿ ತಿಂಗಳಿಗೆ ಹದಿನೈದನ್ನು ಮಿಕ್ಕಿ ಹೋಗುತ್ತಿರಲಿಲ್ಲ. ಕಿರಿದು ಮಾಡಕೊಂಡ ಬರೀ ಹೊಟ್ಟೆಗೆ ಅದು ಸಾಲುತ್ತಿತ್ತು. ಗೋದವ್ವನಿಗೆ ಈಗಾಗಲೆ—ಜಗನ್ನಾನನ್ನು ಹಿಡಿದು—ಎರಡು ಗಂಡು, ಎರಡು ಹೆಣ್ಣು ಹುಟ್ಟಿದ್ದವು. ಅವರಲ್ಲಿ ಜಗನ್ನಾನೇ ಹಿರಿಯನು. ಚಿಂತೆ ಮಾಡುವದ ರಲ್ಲಿಯೂ ಅವನೇ ಹಿರಿಯನಾದನು. 'ಕುಬೇರರಾಯರಲ್ಲಿ ಹೋಗಿ ಯಾಕೆ ಇದ್ದು ಬಿಡಬಾರದು?' ಎಂಬ ಮನೀಷೆಯು ತಿರುತಿರುಗಿ ಬಂದಿತು. ಅವರು ಸ್ವತಃ ಕರೆದಿದ್ದರು, ಒಂದೆರಡುಸಲ ಬಸವಣ್ಣೆಯು ಹಾದಿಯಲ್ಲಿ ಭೆಟ್ಟಿ ಆದಾಗ ಅವನೂ ಕರೆದಿದ್ದನು. ಆದರೆ, ಹಿಂದಿನ ಕಥಾವಳಿಯನ್ನೆಲ್ಲ ಧ್ಯಾಸಕ್ಕೆ ತಂದ ಗಳಿಗೆಗೆ ಮೈಜುಮ್ಮೆಂದು 'ರೊಕ್ಕದಲ್ಲಿ ನನ್ನನ್ನು

ಮುಳುಗಿಸಿ ಎಬ್ಬಿಸಿದರೂ ಆ ಸ್ಥಳಬೇಡ ' ಎಂದು ಜಗಣ್ಣನು ನಿರ್ಧಾರ ಮಾಡಿದನು.

ದೀವಳಿಗೆಗೆ ಅನಂತನು ಬಂದನು. ಇಬ್ಬರ ಭೆಟ್ಟಿಯು ಸುಖವನ್ನೇನು ಕೊಡಲಿಲ್ಲ. ಜಗಣ್ಣನ ಗೋಳಾಟದ ಪ್ರಪಂಚವು ಅನಂತನಿಗೆ ನೋಡಲಾರದಂತಾಯಿತು. ಒಮ್ಮೊಮ್ಮೆಯಂತೂ ಜಗಣ್ಣನು ರಾತ್ರಿಯೂಟಕ್ಕೆ ಸುಮ್ಮನೆ ಹಸಿವೆಯಿಲ್ಲೆಂದು ಹೇಳಿ, ಅನಂತನ ಕೋಣೆಯಲ್ಲಿ ಮಾತುಕತೆಯಾಡದೆ ಮಲಗಿ ಬಿಡುತ್ತಿದ್ದನು. ಅನಂತನೂ ನಿದ್ದೆಯಿಲ್ಲದೆ ಒಂದು ರಾತ್ರಿ ಆಳವಾಗಿ ಯೋಚಿಸಿ 'ಇದೊಂದು ಕಡೆಯ ಉಪಾಯ, ಇದು ಸೋತರೆ ಇವನನ್ನು ಕಾಲೇಜಕ್ಕೇ ಒಯ್ಯಬೇಕು ' ಎಂದು ನಿರ್ಣಯಿಸಿಕೊಂಡು ಕಕ್ಕನ ಮುಂದೊಮ್ಮೆ ಮಾತಾಡಿ, ಹೇಳಿಟ್ಟು ತಾನು ಮರಳಿ ಕಾಲೇಜಿಗೆ ಹೋದನು.

ಕುಬೇರರಾಯರು ತಮ್ಮ ವಶೀಲಿಯನ್ನೆಲ್ಲ ಖರ್ಚುಮಾಡಿ ಒಂದು ತಿಂಗಳೆನ್ನುವದರಲ್ಲಿ ಜಗಣ್ಣನಿಗೆ ಹದಿನೈದುರೂಪಾಯಿಗಳ ಕಾರಕೂನಿಕೆಯನ್ನು ಗೆಲವೂರ ಮುನಸಿಪಾಲಿಟಿಯಲ್ಲಿ ದೊರಕಿಸಿಕೊಟ್ಟರು. ' ಅಲ್ಲಿ ಬೇಡಿದ ಹರಕೆ ಇಲ್ಲಿ ನೆರವೇರಿತಲ್ಲ, ದೇವರು ಎಂಥ ಕರುಣಾಳು ! ' ಎಂದು ಗೋದವ್ವನು ಹಣಮಪ್ಪನಿಗೆ ಕುಂಕುಮಪೂಜೆ ಕಟ್ಟಿಸಿದಳು. ಕೆಲಸವು ಸುಸ್ಥಿರವೆಂದೇ ಮೊದಲು ತೆಗೆದುಕೊಂಡದ್ದಾಗಿತ್ತು. ಇನ್ನು ಪೊಯ್ದಾಡುವ ನೌಕರಿಯದಿನ ಹೋದವೇನೋ ಎಂದು ಜಗಣ್ಣನು ಸಿಕ್ಕಿದ್ದರಲ್ಲಿ ಸಂತುಷ್ಟನಾಗಿ, ಬಂದದ್ದನ್ನು ನುಂಗಿಕೊಂಡು ಕಾಲಹಾಕ ಹತ್ತಿದನು. ತಿಂಗಳೊಪ್ಪತ್ತಿನೊಳಗೆ ಹೊಳೆದುಹೋಯಿತು, ಮುನಸೀಪಾಲಿಟಿಯ ಕೆಲಸವೆಂದರೆ ಎಂಥ ಮುತ್ತುರಗನ್ನವೆಂದು ! ಕೆಲಸಗಾರರಿಷ್ಟೇ ಉಳಿದ ಕಡೆ ಅಸ್ಥಿರರಾದರೆ, ಇಲ್ಲಿ ಆಳುವವರೂ ಅಸ್ಥಿರರೇ; ಹೆಚ್ಚು ಕಡಿಮೆ ಅಜ್ಞರೇ. ಅದರ ಗೊಡವೆ ತನಗೇಕೆ? ತನ್ನ ಹೊಟ್ಟೆಬಟ್ಟೆಗೆ ಸಿಗುವವರೆಗೆಂದು, ನರಕದ ಹುಳವು ನಿಶ್ಚಿಂತವಾಗಿರುವಂತೆ ತನ್ನ ಶಿಕ್ಷಣ, ಸ್ವಾಭಿಮಾನ, ಸುನೀತಿ ಎಲ್ಲ ಕಟ್ಟಿಟ್ಟು, ಹೇಳಿದ ಕೆಲಸಕ್ಕೆ ಜಗಣ್ಣನು ಸಿದ್ಧನಾಗಿ ಸಾಗಿದನು. ಆದರೆ ಮುನಿಸೀಪಾಲಿಟಿಯ ಮೇ ತಿಂಗಳ ಸಭೆ ಆಯಿತು. ಸಿಡಿಲುಗುಡುಗಿನಂತೆ ಆರ್ಭಟಿಸಿತು, ಅದು ಕಣ್ಣುಮುಚ್ಚಿ

ಬುದ್ಧಿಶೂನ್ಯವಾಗಿ ಯಾರುಯಾರನ್ನು ಸೆಳೆಯಿತೋ ಅದರಲ್ಲಿ ಜಗಣ್ಣನೂ ಒಬ್ಬನಾಗಿದ್ದನು.

## ೯ನೆಯ ಕಿಡಿ

ಜಗಣ್ಣನ ಇಳಿತರದ ಕಾಲವು ಅನಂತನಿಗೆ ಒಳ್ಳೇ ಏರಿಕೆಯದಾಯಿತು. ಇಂಟರ ಪರೀಕ್ಷೆಯಲ್ಲಿ ಮೊದಲನೆಯ ವರ್ಗದಲ್ಲಿ ಅವನು ಉತ್ತೀರ್ಣನಾದನು. ಕುಬೇರರಾಯರು ತಲೆದೂಗಿದರು, ಕೇಳಿದವರೆಲ್ಲ 'ಶಾಬ್ಬಾಸ್' ಎಂದರು. ಬಸವಣ್ಣಿಯೂ ಕಾಸೀಮನೂ 'ಫೇಡೇ, ಫೇಡೇ' ಎನ್ನುತ್ತ ಅನಂತನನ್ನು ಕಾಡಿದರು ಅನಂತನಿಗೆ ಮಾತ್ರ ಮನಸ್ಸಿನಲ್ಲಿ ಸುಮ್ಮಾನವಿಲ್ಲ. ತನ್ನ ಶ್ರಮಕ್ಕೆ ತಕ್ಕ ಫಲವು ದೊರೆಯಿತೆಂಬ ಸಣ್ಣ ಸಮಾಧಾನವಿದ್ದರೂ ಹಿಗ್ಗಿನಿಂದ ಕುಕಿಲಿರಿದು ಕುಣಿಯಬೇಕೆಂಬ ಹಂಬಲಿಲ್ಲ. ಪರೀಕ್ಷೆ ತೀರಿಸಿ ಗೆಲವೂರಿಗೆ ಬಂದಕೊಟ್ಟು, ಜಗಣ್ಣನ ಎದೆಯನ್ನು ಕುಟುಕುವ ಸಾವಿರ ಚೇಳುಗಳ ಕತೆ ಕೇಳಿ ಅವನ ಹಿಗ್ಗು ಹಳ್ಳ ಕೂಡಿತ್ತು. ಗೆಳೆಯನ ಘೋರವಾದ ಸಮಸ್ಯೆಯು ಅವನನ್ನು ದಾಟಿ ಜಗವೆಲ್ಲ ಹಬ್ಬಿದ ದೃಶ್ಯವು ಅವನ ಕಣ್ಣೆದಿರಲ್ಲಿ ಕಟ್ಟಿತು. ಹಸಿದು ತೆರೆದ ಕೋಟ್ಯವಧಿ ಬಾಯ್ಗಳ ಕೂಗಿನ ಕಲಮಲವು ಅವನನ್ನು ಒಮ್ಮೊಮ್ಮೆ ಮೈಮುರಿಯುವ ವೇದನೆಗೆ ಗುರಿಮಾಡಿತು. 'ಹೋಗಲಿ ಜಗದ ಜಂಬ ನನಗೇಕೆ, ನನ್ನ ಜಗಣ್ಣನೊಬ್ಬನಿಗೆ ನೆರವು ಕೊಟ್ಟು ಅವನ ಹೊಟ್ಟೆಗೆ ತುತ್ತು ಬಸಿಯನ್ನ ಸಿಗುವಂತೆ ಮಾಡಿದರೆ ಸಾಕು' ಎಂದು—ಇನ್ನೊಮ್ಮೆ ಜಗಣ್ಣನನ್ನು ಕೂಡಿಸಿಕೊಂಡು—ಎಷ್ಟೋ ಧೈರ್ಯದ ಮಾತು ಹೇಳಿ 'ನನ್ನ ನಂಬು ಜಗಣ್ಣಾ, ನಿನ್ನ ದುಃಖ ನನ್ನದು. ನೀನು ಬಾಳಿದರೆ ನಾನು ಬಾಳುವೆ, ತಿಳಿಯಿತೆ?' ಎಂದು ಕೊನೆಯ ಕೆಚ್ಚುನುಡಿಯಿಂದ ಮುಗಿಸುತ್ತಿದ್ದನು. ಇದರಲ್ಲಿ ತಾನು ಅಂದವಾಗಿ ಬರೆದ ಪರೀಕ್ಷೆಯ ಕಾಗದಗಳ ವಿಷಯವನ್ನೂ ಫಲಿತವು ನನಿಯಕ್ಕೆ ಬಂದ ಸಂಗತಿಯನ್ನೂ ಮರೆತಂತೆಯೇ ಇದ್ದನು. ಆಗ ಈ ಫರ್ಸ್ಟ್‌ಕ್ಲಾಸು ಗೊತ್ತಾಯಿತು, ಒಂದು ಕ್ಷಣ ಮುಖವು ಅರಳಿತು, ಮತ್ತೆ ಮುದುಡಿತು.

ಆದರೆ ಪರೀಕ್ಷೆಯ ಪರಿಣಾಮದಿಂದ ಅನಂತನು ಒಂದು ದೊಡ್ಡ ನಿಶ್ಚಯ ಮಾಡಿದನು. 'ತನ್ನ ಸುಂದರ ಭವಿಷ್ಯದಲ್ಲಿ ಜಗಣ್ಣನನ್ನು ಬಿಟ್ಟು ವಿಚಾರ ಮಾಡುವಂತಿಲ್ಲ, ಅವನನ್ನು ಇನ್ನುಮುಂದೆ ಕಾಲೇಜಿಗೆ ಕರೆದು ಕೊಂಡು ಹೋಗಲೇ ಬೇಕು, ಯಾರ ವಿರೋಧವನ್ನೂ ಲೆಕ್ಕಿಸದೆ ಕರೆದು ಕೊಂಡು ಹೋಗಬೇಕು.' ಅದರಂತೆ ಜಗಣ್ಣನ ಸಮಕ್ಷಮದಲ್ಲಿ ಹೇಳಿ ದನು. ನಿರಾಶೆಯನ್ನು ತುಂಬಿಕೊಂಡು ಯಾವಾಗಲೂ ತಿರುಗಾಡುವ ಜಗಣ್ಣನಿಗೆ ಈ ಸುದ್ದಿಯು ಹೊಸಹುರುಪು ಕೊಡಲಿಲ್ಲ.

'ನೀ ಎಲ್ಲಾ ಹೇಳುವಿ ಅನಂತಾ. ಆದರೆ ಕಾಲೇಜು ನನಗೆ ಕನ ಸಿನ ಗಂಟು. ಮನೆಯವರ ಹೊಟ್ಟೆತುಂಬಲಿಕ್ಕೆ ದುಡಿಯಬೇಕೆಂದು ಹುಟ್ಟಿಬಂದ ಯಂತ್ರ ನಾನು, ನನ್ನ ವಿದ್ಯೆಬುದ್ಧಿಗಳನ್ನು ಬೆಳಿಸಲಿಕ್ಕೆ ಎಲ್ಲಿ ಯತ್ನ ಮಾಡುವಂತಿದೆ? ಇನ್ನುಮೇಲೆ ಎಲ್ಲಿಯಾದರೂ ದಿನಗೂಲಿಯ ಕಲ್ಲುಹೊರುವ ಕೆಲಸವನ್ನೋ ಸ್ಟೇಶನ್‌ಮೇಲಿನ ಹಮಾಲಿಯನ್ನೋ ನೋಡುವದೊಂದು ಉಳಿದಿದೆ'

'ಹಾಗೆಲ್ಲಾ ಆಡಬಾರದು ಜಗಣ್ಣಾ. ವಿದ್ಯೆಬುದ್ಧಿಯ ಸಲು ವಾಗಿ ನೀನು ಕಲಿಯುವದು ಒತ್ತಟ್ಟಿಗಿರಲಿ, ನಿನ್ನ ಆ ಹೊಟ್ಟೆಯ ಯಂತ್ರಕ್ಕೆ ಇನ್ನಿಷ್ಟು ಕಲ್ಲಿದ್ದಲಿ ಬೇಕೆಂದೇ ಕಲಿಯಬೇಕು. ನಿನ್ನ ಮ್ಯಾಟ್ರಿಕ್ಯು ಸಾಲದು. ಪ್ರತಿವರ್ಷ ನಿನ್ನಂತೆ ಪಾಸಾಗುವ ಹುಡುಗರ ಸಂಖ್ಯೆಯನ್ನು ನೀನು ನೋಡಿಲ್ಲವೆ? ಈ ಎಲ್ಲ ಪಾಸಿನ ರಾಸಿಗೆ ಬೆಲೆ ಯೇನು? ಗಾಡಿತುಂಬಿ ಬಂದ ಬಾಳೆಯ ಹಣ್ಣು,ಕೊಳ್ಳುವವರಿಲ್ಲದೆ ಕೊಳೆ ತಂತೆ ಇವು! ನಾವೆಲ್ಲ ಮ್ಯಾಟ್ರಿಕ್ ಆಗುವದರಿಂದ ಆಗುವ ಲಾಭವೆಂದರೆ ಆ ವರ್ತಮಾನಪತ್ರದವರಿಗೆ ಸಿಗುವ ರೊಕ್ಕ, ಅದನ್ನು ಕೂಗಿಕೊಂಡು ಮಾರುವ ಹುಡುಗರ ಹೊಟ್ಟೆಗೆ ಸಿಗುವ ತುಣುಕು ರೊಟ್ಟಿ!'

ಈ ಎಲ್ಲ ಮಿಂಚುಮಾತುಗಳಿಂದ ಜಗಣ್ಣನಿಗೆ ಹೊಸದೊಂದು ಹೊಳೆಯಿತು ನಿಜ. ಕೂಡಲೇ ಇಬ್ಬರೂ ಎದ್ದು ಜಗಣ್ಣನ ಮನೆಗೆ ಹೋದರು. ಬಂಡೇರಾಯರ ಮುಂದೆ ಮಾತು ಇಡುವದಾಯಿತು. ಕೇಳುವವರೆಗೆ ಕೇಳಿ ಬಂಡೇರಾಯರು ತಮ್ಮ ಹಿಂದಿನ ಆಕ್ಷೇಪಗಳನ್ನು ಮತ್ತೆ ಹೇಳಿ 'ಅದಾಗದು' ಎಂಬರ್ಥದ ಗೋಣುಹಾಕಿದರು. ಅನಂತನು

ನಿರಾಶೆಯ ತುದಿಗೆ ಬಂದನು. ಆದರೂ ಇನ್ನೊಮ್ಮೆ ಹೇಳಿ ನೋಡ ಬೇಕೆಂದು ಹವಣಿಸಿ ನುಡಿದನು.

'ಬಂಡೇರಾವ, ನಾನು ಫರ್ಸ್ಟ್‌ಕ್ಲಾಸಿನಲ್ಲಿ ಪಾಸಾದದ್ದು ಗೊತ್ತದೆ ಅಲ್ಲವೆ?'

'ಹೌದಪ್ಪಾ, ಗೊತ್ತದೆ. ನೀನು ನಸೀಬವಾನ್ ಇರುವಿ'

'ಅದು ಹೋಗಲಿ, ಆದರಿಂದ ಇನ್ನುಮುಂದೆ ನನಗೆ ಸ್ಕಾಲರ್‌ಶಿಪ್ ಸಿಗಲಾರದೆ?'

'ಸಿಗದೆ ಹೇಗೆ? ನಿನಗೆ ಸಿಗದಿದ್ದರೆ ಇನ್ನು ಯಾರಿಗೆ ಸಿಗಬೇಕು?'

'ಹೌದಲ್ಲೋ, ಹಾಗಾದರೆ ಆ ಹಣವು ಜಗಣ್ಣನ ಸಲುವಾಗಿ ಎಂದು ತಿಳಿದುಕೊಳ್ಳಿರಿ'

'ಛೇ ಛೇ, ನಿಮ್ಮ ರಾಯರು ಏನಾದರೂ ಅಂದಾರು. ಆ ಹುಚ್ಚಿಗೆ ಹೋಗಬೇಡ'

'ಇಲ್ಲ ಬಂಡೇರಾವ, ಕಕ್ಕನು ಏನನ್ನೂ ಅನ್ನುವದಿಲ್ಲ. ನನಗೆ ಭರವಸೆಯಿದೆ.'

ಬಂಡೇರಾಯರು ಒಪ್ಪಲಾರದವರಾದರು.

'ಹಾಗಾದರೆ ನೋಡಿರಿ; ಯಾರ ಹಣವನ್ನೂ ಒಂದು ಪೈ ಕೂಡ ಖರ್ಚುಮಾಡದೆ ಅವನನ್ನು ಅಲ್ಲಿ ಇಟ್ಟುಕೊಳ್ಳುವೆ. ಈಗಾದರೂ ಕಳಿಸುವಿರಾ?'

'ಕಳಿಸಬಹುದು, ಆದರೆ ಅದೆಂಥ ಮಾತು ಅನಂತಾ? ಹಣವಿಲ್ಲದೆ ಹೇಗೆ ನಡೆಯುವುದು?'

'ಆ ಚಿಂತೆಯನ್ನು ನನಗೆ ಬಿಡಿರಿ. ಇಲ್ಲಿ ಕುಳಿತಾದರೂ ಅವನೇನು ಮಾಡಬೇಕಾಗಿದೆ? ನನ್ನ ಕೂಡ ಬರಲಿ, ಇರುವಂತೆ ಆದರೆ ಇರಲಿ, ಇಲ್ಲ ದಿದ್ದರೆ ತಿರುಗಿ ಬರಲೊಲ್ಲನೇಕೆ?'

ಈ ಮಾತಿನ ಸರಣಿಯು ಬಂಡೇರಾಯರಿಗೆ ಒಪ್ಪಿತು. ಒಳಗಿನಿಂದ ಎಲ್ಲ ಚರ್ಚೆಯನ್ನು ಕೇಳುತ್ತಿದ್ದ ಗೋದವ್ವನು ಬಂದು 'ಅನಂತ ಅಂಬೋದು ಸುಳ್ಳಲ್ಲ. ಕಳಿಸಿಕೊಡಿರಲ್ಲ. ಕಾಲೇಜು ಆಗದಿದ್ದರೆ ಕೆಲಸ ಆದರೂ ಸಿಕ್ಕೀತು. ಕುಳಿತು ಕುಳಿತು ಇಲ್ಲಿ ಮತ್ತಿಷ್ಟು ತಲೆಕೆಟ್ಟೀತು!

ಬಂಡೇರಾಯರಿಗೆ ಆಶ್ಚರ್ಯವಾಯಿತು; ಎಷ್ಟು ಎದೆಗಾರಿಕೆಯು ಬಂದಿತಲ್ಲ ತಮ್ಮ ಮನೆಯಾಕೆಗೆಂದು. ಆದರೆ ಅದರ ಗುಟ್ಟು ಬೇರೆಯಾಗಿತ್ತು. ಎರಡು ಮೂರು ದಿನಗಳ ಹಿಂದೆ ಗುಡಿಯಲ್ಲಿ ಭೆಟ್ಟಿಯಾದ ಒಬ್ಬ ಬಾವಾನನ್ನು ಕಂಡು 'ತನ್ನ ಮಗನಿಗೆ ನೌಕರಿ ಎಲ್ಲಿ?' ಎಂದು ಕೇಳಿದ್ದಕ್ಕೆ ಅವನು 'ಸಮೀಪದಲ್ಲಿ ಆಗತದೆ. ಆದರೆ ಈ ಊರಲ್ಲಿ ಸರ್ವಥಾ ಇಲ್ಲ, ಬಹಳ ದೂರದೇಶದಲ್ಲಿಯೂ ಅಲ್ಲ' ಎಂದು ತೀರ ನಿಶ್ಚಿತವಾದ ಭವಿಷ್ಯವನ್ನು ಗೋದವ್ವನಿಗೆ ಹೇಳಿದ್ದನು. ಅದನ್ನು ಸುಳ್ಳುಮಾಡಬಾರದೆಂದೇ ದೇವರು ಅನಂತನ ಹೊಟ್ಟೆಯಲ್ಲಿ ಕುಳಿತು, ಜಗಣ್ಣನನ್ನು ಧಾರವಾಡಕ್ಕೆ ಎಳೆಯುತ್ತಿರುವನೆಂದು ಅವಳಿಗೆ ಕಾಣಿಸಿತು. ಅಂತೂ ಒಪ್ಪಿಗೆ ಇಮ್ಮಡಿಯಾಗಿ ದೊರೆಯಿತು. ಜಗಣ್ಣನು ತನ್ನೊಡನೆ ಬರುವನೆಂಬ ಹುಕಿಯಲ್ಲಿ ತನ್ನ ಪಾಸಿನ ಹರುಷವನ್ನು ಅನಂತನು ಈಗ ಪಡೆದನು.

ಕಾಲೇಜು ಆರಂಭಿಸುವದಕ್ಕೆ ಒಂದುದಿನ ಮೊದಲು ಇಬ್ಬರೂ ಧಾರವಾಡವನ್ನು ಸೇರಿದರು. ಅಲ್ಲಿ ಆ ಮೋಡಗಳ ಏರಿಬರುವಿಕೆ, ಮಳೆಯ ಸರಸರ, ಜಿಟಿಜಿಟಿ ಎಲ್ಲ ನಡೆದಿದ್ದುವು. ಬಯಲುಸೀಮೆಯ ಬಿಸಿಲಲ್ಲಿ ದೊಡ್ಡವನಾದ ಜಗಣ್ಣನಿಗೆ ಅದು ಹೊಸದಾಯ್ತು. ಮೈ ಜುಮ್ಮುದಟ್ಟಿ ನಡುಗಿತು. ಸ್ಟೇಶನ್ನಿನ ಹೊರಗೆ ನಾಲ್ಕು ಹೆಜ್ಜೆ ಇಡುವದರಲ್ಲಿ ಧೋತರಕ್ಕೆ ಕೆಂಪುಕಳೆಯ ಪ್ರಸಾದ ದೊರೆಯಿತು, ಮಳೆಯ ಸಿಟ್ಟಿನ ಅವತಾರವು ಜೋರಾಗಿ ಬಂದಿತು. 'ಇದೇನೋ ಅನಂತಾ, ನಿನ್ನ ಧಾರವಾಡವು ಇದೇ ಏನು? ನಮ್ಮ ಪಾಲಿಗೆ ಏನೇನು ಒದ್ದುವದೋ ಇನ್ನೂ' ಎಂದು ಜಗಣ್ಣನು ಚೇಷ್ಟೆಮಾಡಿದನು. 'ಇದು ಅಲ್ಲ ಧಾರವಾಡವು. ಅಲ್ಲಿ ನೋಡು ಆ ಹುಚ್ಚುಹಸರನ್ನು! ಒಣಗದೆ, ದಣಿಯದೆ ಬೆಳೆಯುವ ಹುಲ್ಲುಗದ್ದೆಯನ್ನು!' ಎಂದು ತೋರುತ್ತ ಅನಂತನು ಟಾಂಗೆಯೊಂದರಲ್ಲಿ ಜಗಣ್ಣನನ್ನು ಹಾಸ್ಟೆಲ್ಲಿಗೆ ಕರೆದುತಂದನು.

ಜಗಣ್ಣನು ಅಂದಿನದಿನ ಆ ಮಳೆಯ ಸೆಳಕುಗಳಿಗೆ ಅಂಜಿ ಎಲ್ಲಿಯೂ ಹೋಗದೆ ಹೊತ್ತುಕೊಂಡು ಕುಳಿತನು. 'ಹೀಗೆ ಮುದುಡಿಕೊಂಡು ಕುಳಿತರೆ ಈ ಊರಲ್ಲಿ ನಡೆಯುವದಿಲ್ಲ ಜಗರಾವ'. ಎಂದು ಅನಂತನು ಬಲುಮೆಯಿಂದ ಆತನನ್ನು ಸಂಜೆಗೆ ತಿರುಗಾಡಲಿಕ್ಕೆ ಕರೆದುಕೊಂಡು

ಹೋಗಿ ಏರಿಳಿತದ ಬೀದಿಗಳನ್ನೂ ಮೂಲೆಮೂಲೆಗೆ ಇದ್ದ ಬಂಗಲೆಗಳನ್ನೂ ತೋರಿಸಿದನು.

ಮರುದಿನ ಸೋಮವಾರ ಕಾಲೇಜಿನ ಆರಂಭದಿನವೆಂದು ವಿದ್ಯಾರ್ಥಿಗಳು ಸಿಪ್ಪುತುಗಟ್ಟಿ ಬಂದರು. ಅನಂತನು ಜಗನ್ನನೊಂದಿಗೆ ಕಾಲೇಜಿಗೆ ಹೋದನು. ಕಾಲೇಜಿನ ಭವ್ಯವಾದ ಕಟ್ಟಡವು ಜಗನ್ನನನ್ನು ದಂಗು ಮಾಡಿತು. ಹಾದಿತಪ್ಪಿದ ತಿರುಕನು ಅರಮನೆಯಲ್ಲಿ ಹೊಕ್ಕಹಾಗೆ ಅವನಿಗೆ ಎನಿಸಹತ್ತಿತು. ಅಂತೇ ‘ ಇಲ್ಲಿ ಹೇಗೆ ನಡೆದರೆ ಏನು ಅನ್ನುತ್ತಾರೋ ’ ಎಂಬ ಎದೆಗುದಿಯಿಂದ ಹೇಳಿದಲ್ಲಿ ಹೆಜ್ಜೆಯಿಡುತ್ತ ಒಳ ಹೊಕ್ಕನು. ‘ ಇಲ್ಲಿ ಕೂಡು, ನಿಮ್ಮ ಪ್ರೊಫೆಸರರು ಬರುತ್ತಾರೆ ’ ಎಂದು ಒಂದು ದೊಡ್ಡ ಹಾಲಿನಲ್ಲಿ ಅನಂತನು ಅವನನ್ನು ಕೂಡಿಸಿದನು. ಪಟ್ ಪಟ್ ಎಂಬ ಬೂಟಿನ ಸಪ್ಪಳಮಾಡುತ್ತ ಒಬ್ಬ ಮಹನೀಯರು ಬಂದು, ಉಚ್ಚಾರ ತಿಳಿಯದ ಇಂಗ್ಲಿಷ್‌ದಲ್ಲಿ ಮಾತನಾಡಿ, ಹಜರೀತಕ್ಕೊಂಡು ಹೋದರು. ಮೊದಲೇ ಗೆಲವೂರಿಂದ ಕಳಿಸಿದ ಅರ್ಜಿಯ ಮೇರೆಗೆ ಜಗನ್ನನ ಹೆಸರೂ ಅದರಲ್ಲಿತ್ತು. ಹಜರಿಯನ್ನು ಕೊಡುವಂತೆ ಕೊಟ್ಟನು; ಆದರೆ ‘ ಇದೇನು ಬಂದಿತು ? ಹೆಸರು ಹಚ್ಚುವದೆಲ್ಲ ಆಯ್ತು. ಮುಂದೆ ಫೀ ಕೇಳಿದರಂದರೆ ಹೇಗೆ ? ಕೊಡದಿದ್ದರೆ ಏನು ಮಾಡುವರೋ ಏನೋ ! ಮಾಸ್ತರರಿಗೆ ಹೇಳಲಿಕ್ಕೆ ಬರುತ್ತಿತ್ತು ಸಾಲೆಯಲ್ಲಿ. ಇಲ್ಲಿ ಎಲ್ಲಾ ಸಾಹೇಬರ ಸಹವಾಸ ’ ಎಂದು ವಿಚಾರ ಮಾಡುತ್ತ ಹೊರಬಿದ್ದನು. ಅನಂತನು ತಿರುಗಿ ಕೋಣೆಗೆ ಕರೆದುಕೊಂಡು ಹೋದನು.

ಇರುತ್ತಿರುತ್ತ ಕಾಲೇಜಿನ ಗಾಳಿಯಲ್ಲಿ ಜಗನ್ನನು ಸುಳಿಯಲಿಕ್ಕೆ ಕಲಿತನು. ಅಭ್ಯಾಸದ ಬಾಬಿನಲ್ಲಿ ಸಾಲಿಗಿಂತ ಕಾಲೇಜು ಮೇಲು ಎನಿಸಿತು. ಇಲ್ಲಿ ಜಬರಿಸುವ, ಹೊಡೆಯುವ, ಕಾಡುವ ಮಾಸ್ತರ ರಿಪಿಗಳಿಲ್ಲ; ‘ ಧೋ ’ ಎಂದು ಹುಚ್ಚೆದ್ದು ಮಳೆಗರೆವ ಮೋಡದ ಹಾಗೆ ಮಾತಾಡಿ ಹೋಗುವ ಪ್ರೊಫೇಸರರು ಹೆಚ್ಚು ಬೇಕು—ಎನಿಸಿತು. ಆದರೆ ಇದರಿಂದ ಕಲಿಯುವದು ಮಾತ್ರ ಶೂನ್ಯವೆಂದೇ ತೋರಿತು. ಅನಂತನು ಅವನನ್ನು ತನ್ನ ಕೋಣೆಯಲ್ಲಿಯೇ ಇರುವಂತೆ ಮಾಡಿಕೊಟ್ಟನು. ತನ್ನ ಗುರುತಿನ ಗುರುಗಳಿಂದ ಅದಕ್ಕೆ ಅಪ್ಪಣೆಯನ್ನೂ ಪಡೆದನು.

ಹೋದ ಕೆಲವು ದಿನದ ಊಟವನ್ನು ಅನಂತನ ಕ್ಲಬ್ಬಿನಲ್ಲಿ ಆತನ ಅತಿಥಿಯಾಗಿ ಮಾಡಿದನು. ಅದು ಅವನಿಗೆ ಸರಿಯೆಂದು ತೋರಲಿಲ್ಲ. ಒಂದು ದಿನ 'ಅನಂತಾ, ಹೀಗಾದರೆ ನಾನು ಊರಿಗೆ ಹೋಗಿ ಬಿಡುವೆ. ನಿನ್ನನ್ನು ಈಗ ಖರ್ಚಿಗೀಡು ಮಾಡುವ ಊಟವು ನನ್ನ ಹೊಟ್ಟೆಗೆ ಹತ್ತ ಲೊಲ್ಲದು' ಎಂದನು. 'ಒಳ್ಳೇದು' ಎಂದು ಅನಂತನು ಉಳಿದೆಲ್ಲ ಕ್ಲಬ್ಬಿನ ಸೆಕ್ರೆಟರಿಗಳನ್ನು ಭೆಟ್ಟಿಯಾಗಿ, ಒಂದೊಂದು ವಾರವನ್ನು ಗೊತ್ತುಪಡಿಸಿ, ಜಗಣ್ಣನನ್ನು ಅಲ್ಲಿಗಲ್ಲಿಗೆ ಕಳಿಸಿದನು. ಇಷ್ಟು ಸರಿಯಾಗಿ ಹಚ್ಚಿಕೊಂಡು ಹೊಂದಿಕೊಂಡು ಇವರಿಬ್ಬರೂ ತಿರುಗುವಾಗ, ಅನಂತನ ಕ್ಲಾಸಿನ ಹುಡು ಗರು ದುರುಗುಟ್ಟಿ ನೋಡುತ್ತಿದ್ದರು. ತಮ್ಮಲ್ಲಿ ಹೊಸಬರು ಯಾರಾ ದರೂ ಇದ್ದರೆ 'ಇವನೇ ಆ ಫರ್ಸ್ಟ ಕ್ಲಾಸ್ ಹುಡುಗ' ಎಂದು ಕಿವಿ ಮಾತು ಹೇಳುತ್ತ ಅನಂತನನ್ನು ಗುರುತಿಸುತ್ತಿದ್ದರು. ಆದರೆ ತನ್ನ ವಿಷಯವಾಗಿಯೇ ಅವರು ಆಡಿರಬೇಕೆಂದು ತಿಳಿದ ಜಗಣ್ಣನ ಕಿವಿಗೆ ಆ ಮಾತುಗಳು 'ಇವನೇ ಆ ಫರ್ಸ್ಟ ಕ್ಲಾಸ್ ಬಡವ!' ಎಂದು ಕೇಳುತ್ತಿದ್ದವು.

....ಮುಂದೊಂದು ತಿಂಗಳಲ್ಲಿ ಫೀ ಹಣವನ್ನು ತುಂಬುವ ತಾರೀಖು ಬಂದಿತು. ಅನಂತನು ಅದಕ್ಕೆ ಏನು ಹಂಚಿಕೆ ಮಾಡಬೇಕೆಂಬ ಯೋಚನೆ ಯಲ್ಲಿಯೆ ಇದ್ದನು. ಜಗಣ್ಣನಿಗೂ ಈಗ ಪರಿಸ್ಥಿತಿಯು ಕೂಡ ಹೋರಾ ಡಿಯೇ ನೋಡಬೇಕೆಂಬ ಒಳಹುರುಪು ಬೆಳೆಯತೊಡಗಿತ್ತು. 'ಅನಂತಾ, ಎಲ್ಲದಕ್ಕೂ ನೀನು ಚಿಂತೆ ಮಾಡಿ ನನ್ನ ಸಲುವಾಗಿ ಸಣ್ಣ ಆಗಬೇಡ. ಇನ್ನು ಮೇಲೆ ನಿನ್ನ ಓದುಜರೆ ಮಾಡಿಕೊ. ಮನೆಮನೆಗೆ ಹೋಗಿ ಆಣೆ ಅಣೆ ಬೇಡಿಯಾದರೂ ನಾನು ಫೀ ಕೂಡಿಸುವೆ' ಎಂದನು. ಈ ಮಾತಿ ನಿಂದ ಅನಂತನಿಗೆ ಒಂದು ಯೋಚನೆ ತಲೆದೋರಿತು. ತನ್ನನ್ನು ಬಹಳ ವಾಗಿ ಪ್ರೀತಿಸುತ್ತಿದ್ದ ಇಂಗ್ಲಿಶ್‌ದ ಪ್ರೊಫೆಸರರೊಬ್ಬರ ಕಡೆಗೆ ಹೋಗಿ ಒಂದು ಉತ್ತಮವಾದ ಬಿನ್ನಹಪತ್ರಿಕೆಯನ್ನು ಬರೆಯಿಸಿಕೊಂಡು ಬಂದು, ಅದರ ಕೆಳಗೆ ತನ್ನ ಹೆಸರಿನಲ್ಲಿ ಹತ್ತು ರೂಪಾಯಿ ಬರೆದು ಜಗ ಣ್ಣನ ಕಡೆಗೆ ಕೊಟ್ಟು ಹೇಳಿದನು. 'ಹೋಗು ಜಗಣ್ಣಾ ವಿದ್ಯಾರ್ಥಿ ಗಳನ್ನು ಕಂಡು ಕೊಟ್ಟದ್ದನ್ನು ಸಂಗ್ರಹಿಸು.'

ಹಾಸ್ಟೆಲ್ಲಿನಲ್ಲಿ ಕೋಣೆ ಕೋಣೆಗೆ ಜಗಣ್ಣನು ಹೋದನು. ಇನ್ನೂ

ಹಾಸಿಗೆಯ ಮುಸುಗಿನಲ್ಲಿ ಇದ್ದ ಕೆಲವರು ಏಳಲಿಕ್ಕೇ ಹೊತ್ತು ಮಾಡಿದರು. ಎಷ್ಟವರು ಎಲ್ಲಿಯೋ ಚಹಾಗೃಹಗಳಿಗೆ ಹೋಗಿದ್ದರು. ಒಬ್ಬಿಬ್ಬರು ‘ ನಾವೂ ನಿಮ್ಮೊಡನೆ ಬರುವ ಸ್ಥಿತಿಯಲ್ಲಿಯೇ ಇದ್ದೇವೆ ’ ಎಂದರು. ಆದರೆ ಪತ್ರಿಕೆಯನ್ನು ನೋಡಿದವರಲ್ಲಿ ಕೊಡದವರು ಕಡಿಮೆ. ಹತ್ತಿಪ್ಪತ್ತು ರೂಪಾಯಿಗಳು ಕೂಡಿದವು. ಜಗಣ್ಣನಿಗೆ ಸಹ ವಿದ್ಯಾರ್ಥಿಗಳ ಬಗ್ಗೆ ಪ್ರೀತಿ, ಆದರ ಉಂಟಾದವು. ಮುಂದೆ ನಡೆದನು. ಸದ್ಗೃಹಸ್ಥರಂತೆ ತೋರುವ ಏಳು ಎಂಟು ವಿದ್ಯಾರ್ಥಿಗಳ ಮೇಳವೊಂದು ಗೇಟಿನಲ್ಲಿ ಬಂದಿತು. ಸರ್ಜಕೋಟು ಪೋಲೋ ಕಾಲರು ಶರ್ಟಿನವರೇ ಅವರಲ್ಲಿ ಬಹಳ. ಸಿಗರೇಟಿನ ಹೊಗೆಯಲ್ಲಿ ತಮ್ಮ ಮುಖವೇ ಮುಂದಿನವರಿಗೆ ಕಾಣಿಸದ ಹಾಗೆ ಬರುವಂತಿತ್ತು. ಒಬ್ಬಿಬ್ಬರಿಗೆ ತಲೆಯಲ್ಲಿ ಟೊಪ್ಪಿಗೆಯೇ ಇಲ್ಲ, ಕ್ರಾಪಿನ ಬೆಳೆಸೇ ಒಂದೆರಡು ಟೊಪ್ಪಿಗೆಗಳ ಅಡಕಲಿನಂತೆ ತೋರುತ್ತಿತ್ತು. ಅವರು ಹತ್ತಿರ ಬರಲು ವಿನಯದಿಂದ ಜಗಣ್ಣನು ತನ್ನ ಕಾಗದವನ್ನು ಮುಂಚಾಚಿದನು. ‘ ಇದೇನರೆಪಾ ! ’ ಎನ್ನುತ್ತ ಒಬ್ಬನು ಅದನ್ನು ಕಸಿದು ಜೋರಾಗಿ ಬೀದಿಯಲ್ಲಿ ನಿಂತೇ ಎಲ್ಲರಿದುರು ಓದಿದನು. ‘ ಯಾವಾ, ನಮ್ಮ ಇಂಗ್ಲಿಶಾದ ಆಕ್ಸಾನ್ ಬರೆದಾನರೆಪಾ ಇದನ್ನ. ’ ಒಬ್ಬನಂದ. ‘ ಅವಗೇನದ ಉದ್ಯೋಗಾ ? ಬೇಡಿದವರಿಗೆ ಸರ್ಟಿಫಿಕೇಟು, ಬೇಕಾದವರಿಗೆ ಅಪೀಲು ಬರೆದು ಕೊಡತಾನ’ ಇನ್ನೊಬ್ಬನಾಡಿದನು. ಹೀಗೇ ಟೀಕೆಯ ಸುರಿಮಳೆ ನಡೆಯಿತು. ಒಬ್ಬನು ಮುಂದೆ ಬಂದು ಜಗಣ್ಣನನ್ನು ನೋಡಿ ‘ಏನ್ರೀ, ಕಾಲೇಜಕ್ಕೆ ಬಂದಿರಿ ತಿಳಿಯೋದಿಲ್ಲ – ಹಿಂಗ ಮೂಕರು ಕಿವುಡರು ಬರಿಸಿಗೊಂಡಂಗ ಬರಿಸಿಗೊಂಡು ಫೀ ಕೂಡಿಸಲಿಕ್ಕೆ ? ’ ಎಂದನು. ಅದನ್ನು ಅನುಮೋದಿಸುತ್ತ ತೀರ ಇನ್ನೊಬ್ಬನು ‘ ಇಂಥಾ ಪರಿಯಿಂದ ಕಾಲೇಜಕ್ಕ ಬರಬೇಕು ಯಾಕ ? ’ ಎಂದು ಮಾತನಾಡಿದನು.

ಜಗಣ್ಣನು ಏನೂ ಉತ್ತರ ಕೊಡದೆ ಬಡವನ ತುಟಿನಗೆ ನಕ್ಕು, ಬೈಗಳನ್ನು ತಡೆದುಕೊಳ್ಳಲು ಹವಣಿಸಿದನು. ಮೇಳವು ಮುಂದೆ ಹೊರಟಿತು. ಒಬ್ಬನು ಎಂದ.

‘ ಕೊಡಿರೋ ಕಾಗದ ಅವಗ. ಯಾಕ ಗೋಳಾಡಸತೀರಿ ? ಕಿಸೇದಾಗ ಏನಾರ ಇದ್ದರ ಕೊಟ್ಟು ಕಳಿಸಿರಿ.

'ಎಲ್ಲಾ ಚಹಾಕ್ಕ ಹೋದುವರಿ ಮಿಸ್ಟರ.'

ಎಂದು ಜಗಣ್ಣನನ್ನು ಕುರಿತು ಕಡೆಯುಸವನಾಡಲು ಬಿದ್ದು ನಗುತ್ತ ಎಲ್ಲರೂ ಹೋಗಿಬಿಟ್ಟರು.

ಜಗಣ್ಣನು ಅನಂತನ ಕೋಣೆಗೆ ಹೋದವನೇ ಆ ಕಾಗದವನ್ನು ನೆಲಕ್ಕೆ ಬೀಸಾಡಿ, ಕ್ವಾಟಿನ ಮೇಲೆ ಬಿದ್ದುಕೊಂಡನು. ಇದೇನಾಯ್ತು ವಿಚಿತ್ರವೆಂದು ಅನಂತನು ಹತ್ತಿರ ಹೋಗಿ, ಮೈಕೈಯಾಡಿಸಿ ಮಾತನಾಡಿಸಿದನು.

'ಅನಂತಾ, ನೀನು ಕಲಿತು ಕಲೆಕ್ಟರನಾಗು! ನಿನ್ನ ಬೂಟು ಒರಿಸುವ ಬಟ್ಲರನಾಗುವೆ ಬೇಕಾದರೆ. ನನಗೆ ಈ ಕಾಲೇಜು ಬೇಡ.'

ಜಗಣ್ಣನ ಈ ಉದ್ಗಾರಗಳು ಅನಂತನನ್ನು ದಿಗಿಲುಗೊಳಿಸಿದವು. ಮೆಲ್ಲನೆ ಚದುರಿನಿಂದ ಆಪ ಸಂಗತಿಯನ್ನೆಲ್ಲ ಕೇಳಿಕೊಂಡನು. 'ಹಾಗೆಲ್ಲಾ ತಿಳಿದುಕೊಳ್ಳಬಾರದು. ಇನ್ನು ಮೇಲೆ ನಾನು ನಿನ್ನ ಕೂಡ ಬರುವೆನು, ಆಯಿತೆ?' ಎಂದು ಮುಂತಾಗಿ ಅವನು ಜಗಣ್ಣನನ್ನು ಸಮಾಧಾನ ಪಡಿಸುತ್ತಿರಲು, ಬಾಗಿಲನ್ನು ಬೆರಳಿನಿಂದ ಬಡಿದಂತೆ ಕೇಳಿಸಿತು. ತೆರೆಯುತ್ತಲೇ ಸಿಳ್ಳು ಹಾಕುತ್ತ ಮೊದಲು ಹೇಳಿದ ಮೇಳದ 'ದೇಸಾಯಿ' ಎಂಬ ಕೆಂಪು ಹುಡುಗನು ಒಳಗೆ ಇಣಿಕಿ 'ನಿಮ್ಮ ಜೋಡಿ ತಿರುಗುವ ಆ ಬಡ ವಿದ್ಯಾರ್ಥಿ ಎಲ್ಲಿದ್ದಾರೆ? ಅವರಿಗೆ ಈ ಹತ್ತು ರೂಪಾಯಿ ಕೊಡಿರಿ; ನಮ್ಮ ಕ್ಯಾಂಪಿನ ಧನಸಹಾಯ ಎಂದು' ಎಂದು ನೋಟೊಂದನ್ನು ಕೊಟ್ಟು, ಕೀಲಿಕೈ ಸರಪಳಿಯನ್ನು ಬೆರಳಿನಿಂದ ಅಲೆಯಿಸುತ್ತ ಹೊರಟನು. ಅನಂತನಿಗೆ ಅವನ ಗುರುತು ಚೆನ್ನಾಗಿ ಇತ್ತು. ಕೋಣೆಯಲ್ಲಿ ಕರೆಯಬೇಕೆಂದರೆ ಜಗಣ್ಣನ ಮನಸ್ಸು ನೆಮ್ಮದಿಯಾಗಿಲ್ಲೆಂದು ಸುಮ್ಮನಾಗಿ ಬಾಗಿಲ ಹಾಕಿ, ಜಗಣ್ಣನ ಮುಂದೆ ಆ ನೋಟನ್ನು ಚೆಲ್ಲಿ ಹೇಳಿದನು.

'ನೋಡು, ಜಗಣ್ಣಾ. ನಿನಗೆ ಇಲ್ಲದ್ದು ಆಡಿಕೊಂಡ ಗುಂಪು ಏನು ಕಳಿಸಿದೆ ಪ್ರಾಯಶ್ಚಿತ್ತವೆಂದು?'

'ಇದು ಅವರದೇ?' ಎಂದು ಜಗಣ್ಣನು ಎದ್ದು ಕುಳಿತನು.

ಮತ್ತೆ ಕುಂದದ ಹುಮ್ಮಸಿನಿಂದ ಜಗಣ್ಣ ಓಡಾಡಿ ಫೀ ಹಣವನ್ನು ಕೂಡಿಸಿದನು. ಕೊನೆಗೂ ಹತ್ತುಹದಿನೈದು ಕಡಿಮೆ ಬಿದ್ದವು. ಕಾಲೇಜಿನ

‘ನಿರ್ಧನರ ನಿಧಿ’ಯಿಂದ ಉಳಿದದ್ದನ್ನು ದೊರಕಿಸಿ, ಫೀ ಕೊಟ್ಟದ್ದಾಯಿತ್ತು. ಬಂದು ಟರ್ಮಿನ ಚಿಂತೆ ಕಡಿಯಲು ಇಬ್ಬರೂ ಅಭ್ಯಾಸದಲ್ಲಿ ಒಂದಾದರು. ನಡುನಡುವೆ ಗೆಲವೂರಿಗೆ ಪತ್ರಬರೆಯುವ ಕೆಲಸವು ಇಬ್ಬರಿಗೂ ಮಹತ್ವದ್ದಾಗಿತ್ತು. ಹೊಸದಾಗಿ ಊರುಬಿಟ್ಟು ದೂರ ಬಂದ ಜಗಣ್ಣನಂತೂ ವಾರಕ್ಕೊಮ್ಮೆ ಬರೆಯಲೇ ಬೇಕು. ಬಂಡೇರಾಯರ ಒಂದು ಉತ್ತರದಲ್ಲಿ ‘ನನ್ನ ಕೆಲಸವು ಅಷ್ಟು ಏನೂ ಇಲ್ಲ. ನೀನು ಕೈಗೋಲಾಗುವವರೆಗೆ ಹೀಗೆ ಕುಂಟುತ್ತ ಕೂರುತ್ತ ಸಾಗಬೇಕು. ದೇವರಿಚ್ಛೆ’ ಎಂಬ ಮಾತು ಇತ್ತು. ಅದಕ್ಕಾಗಿ ಎರಡುದಿನ ಜಗಣ್ಣನು ನೊಂದನು. ‘ಅವರಿಗಾಗಿ ದುಡಿಯದೆ ಹೆರವರ ರಿಣಗೂಳು ತಿನ್ನುತ್ತ ನಾನೇಕೆ ಇಲ್ಲಿರುವೆ? ಅನಂತನ ಜುಲುಮೆಯಿಲ್ಲದಿದ್ದರೆ....’ ಎಂದು ನಿಲ್ಲುತ್ತಿದ್ದನು. ಇಬ್ಬರೂ ದೀಪಾವಳಿಗೆ ಊರಿಗೆ ಹೋದರು. ದೀಪಾವಳಿಯು ರಾಯರಲ್ಲಿ ಬಹಳ ಉತ್ಸವದಿಂದ ಸಾಂಗವಾಯಿತು. ರಾಯರು ಅದ್ಭುತ ಆನಂದದಲ್ಲಿದ್ದರು, ಶಾಂತಾಬಾಯರ ಮೋರೆಯ ಮೇಲೆ ಕಳೆಯೇ ಇಲ್ಲ. ಕಾಸೀಮನಿಂದ ಕಾರಣವೆಲ್ಲ ತಿಳಿಯಿತು. ರಾಯರ ಸಾನಿಗೆ ಚೆಲುವಾದ ಹೆಣ್ಣೊಂದು ಹುಟ್ಟಿತಂತೆ, ಅದಕ್ಕಾಗಿ ಚೀಲಸಕ್ಕರೆಯನ್ನು ಹಂಚುವದಾಯಿತಂತೆ. ಎಲ್ಲ ಕೇಳಿ ಅನಂತನ ಹೊಟ್ಟೆ ಉರಿದಿತು. ಕಕ್ಕಿಯ ಸ್ಥಿತಿಯನ್ನು ಕಲ್ಪಿಸಿ ಕಳವಳವಾಯ್ತು.

ಸೂಟಿ ಮುಗಿದೊಡನೆಯೆ ಧಾರವಾಡಕ್ಕೆ ಹೋದರು. ಮತ್ತೆ ಜಗಣ್ಣನ ಫೀ ಬಿಕ್ಕೆಯ ಸಂಚಾರವಾಯ್ತು. ಇದು ಹೀಗೆ ಎಷ್ಟುಸಾರೆ ಮಾಡುವದೆಂದು ಅವನಿಗೆ ಓಕರಿಕೆ ಇಟ್ಟಿತು. ಅದಕ್ಕೇ ನಿಶ್ಚಯಮಾಡಿದನು ‘ಇನ್ನು ಓದಿ ಮಾರ್ಕು ತಗೊಂಡು ಫ್ರೀಸಿಪ್ಪನ್ನು ದೊರಕಿಸಲಾಗದಿದ್ದರೆ ನಾನು ಬರುವದು ಸಾಕು.’

ಪರೀಕ್ಷೆಯ ಸಿದ್ಧತೆಯು ಒತ್ತರದಿಂದ ಸಾಗಿತು. ಅನಂತನಿರುವದು ಜ್ಯೂನಿಯರ್ ಬಿ. ಎ. ಆದರೂ ತನ್ನ ವೇತನವನ್ನು ಕಾಯ್ದುಕೊಳ್ಳಲು ಅವನೂ ಬಹಳವಾಗಿ ಓದಬೇಕಾಗಿತ್ತು. ಪರೀಕ್ಷೆ ಬಂದಿತು. ಪರೀಕ್ಷೆ ನಡೆದಾಗ ಜಗಣ್ಣನಿಗೆ ಬಂಡೇರಾಯರಿಂದ ಕಾಗದವೊಂದು. ಪುಣ್ಯಕ್ಕೆ ಅದು ಅನಂತನ ಕೈಗೆ ಬಿದ್ದಿತು, ಹಾಗೆಯೇ ಬಚ್ಚಿಟ್ಟನು.

ಪರೀಕ್ಷೆ ತೀರಿತು, 'ಅನಂತಾ ಇದೊಂದು ವರ್ಷ ಗೆದ್ದೆ, ಪೇಪರುಗಳೆಲ್ಲ ಸಟ್ಟಗೆ ಆದವು' ಎಂದು ಹಾರುತ್ತ ಜಗಣ್ಣನು ಕೋಣೆಯೊಳಗೆ ನುಗ್ಗಿದನು. ಬೇರೇನೂ ಆಡದೆ ಅನಂತನು ಕಾಗದವನ್ನು ಅವನ ಕೈಗೆ ಕೊಟ್ಟು 'ಈ ಸಂಜೇಗಾಡಿಗೆ ಹೊರಡು, ಜಗಣ್ಣಾ; ನಿಮ್ಮ ಗೋದವ್ವನವರಿಗೆ ವಿಷಮಜ್ವರದ ಕೆಟ್ಟ ವಿಕಾರವಂತೆ' ಎಂದನು. ಮೈ ಬೆವತು ಮುಖ ಬಾಡಿ, ಜಗಣ್ಣನು ಗೆಲವೂರ ಗಾಡಿಯನ್ನು ಹತ್ತಿದನು.

---

## ೧೦ನೆಯ ಕಿಡಿ

---

ದೇಸಾಯಿಯು ಶೋಕೀ ಹುಡುಗನು. ಅಂತೇ 'ಕಾಮಣ್ಣ' ಎಂಬ ಹೆಸರು ಅವನ ಸ್ನೇಹಿತರ ಮಂಡಲದಲ್ಲಿ ಅವನಿಗೆ ದೊರೆತಿತ್ತು. ಅವನೂ ಒಳ್ಳೇ ಹೆಸರುಗಳ ಪ್ರಿಯ; ಹಳ್ಳಿಯೂರಲ್ಲಿ ಅವನ ಮನೆಯವರು ಇಟ್ಟ 'ಕಲ್ಲಿ' ಎಂಬ ಹೆಸರನ್ನು ಯಾವಾಗ ಕಳೆದುಕೊಂಡೇನು ...ಎಂದು ಮಿಡುಕುತ್ತಿದ್ದ. ಆ ಹೊತ್ತಿಗೆ ಸ್ನೇಹಿತರ ನಾಮಕರಣವು ಅವನಿಗೆ ಪುನರ್ಜನ್ಮ ಕೊಟ್ಟಂತೆ ಆಯ್ತು. ಅವನು ಕಾಲೇಜಕ್ಕೆ ಬಂದದ್ದು ಆರನೆಯ ವರ್ಷ; ಪ್ರೀವ್ಹಿಯಸ್ ಇಂಟರುಗಳು ದುಪ್ಪಟ್ಟು ತಿಪ್ಪಟ್ಟು ಹೊರಳಾಡಿ ಸೋತು ಅವನ ಕೈಬಿಟ್ಟಿದ್ದವು. ಈಗ ಕಾಮಣ್ಣನದು ಜ್ಯೂನಿಯರ್ ಬಿಯೆಯ ಮೊದಲನೆಯ ವರ್ಷ; ಕೇಳುವದೇನು? ನೂರು ಯಜ್ಞಮಾಡಿ ಪಡೆದ ಇಂದ್ರಪಟ್ಟವೆ ಇದಿರು ನಿಂತಂತಾಯ್ತು. ಅಪ್ಸರೆಯರನ್ನು ಕರೆಯಿಸಿ ನೋಡುವ, ಹಾಡು ಕೇಳುವ, ಕುಣಿಯುವ ಎಲ್ಲ ಸುಖಸ್ವರ್ಗದ ಬಯಕೆಗಳಾದವು. ಇದೆಲ್ಲಕ್ಕೆ ಲಕ್ಷ್ಮಿಯು ಅವನಿಗೆ ತೀರ ಅನುಕೂಲಳಾಗಿದ್ದಳು. ಐದಾರುಸಾವಿರದ ದೇಸಗತಿ, ತಂದೆಗೆ ಒಬ್ಬನೇ ಮಗ, ಮೇಣದ ಗೊಂಬೆಯಂತೆ ಬೆಳೆದವ. ಇವನ ತಾಯಿಯ ಅಚ್ಚಪಂತೂ ಹೇಳಲಾಸಲ್ಲ. ನಾಲ್ಕೈದು ಮಕ್ಕಳು ಹುಟ್ಟಿ ಉಳಿಯದೆ ಹೋದಮೇಲೆ, ಇವನು ಉಳಿದೇಬಿಡಬೇಕೆಂದು ಹುಟ್ಟಲು 'ನೀನೊಬ್ಬ ಕಲ್ಲಾಗಿ ಗಟ್ಟಿಯಾಗಿ ಇರು' ಎಂದು ಹರಸಿ ಇವನ ತಾಯಿ 'ಕಲ್ಲ' ಎಂದು ಹೆಸರಿಡಿಸಿದ್ದಳು. ಇವನೂ ಕಲ್ಲಾಗಿಯೇ ಉಳಿದನು! ಹತ್ತು-

ಹನ್ನೆರಡು ವರ್ಷದವನಿದ್ದಾಗ ಸಹ ಇವನ ತಾಯಿ ಎಲ್ಲಿಯಾದರೂ ಗುಡಿಗೆ ಹೋಗಬೇಕಾದರೆ 'ಅಯ್ಯ, ನನ್ನ ಕಲ್ಲಸ ಕಾಲಿಗೆ ಹಳ್ಳು ಸಹ ತಾವ' ಎಂದು ಬಗಲಲ್ಲಿ ಎತ್ತಿಕೊಂಡು ತೇಕುತ್ತ ಹೋಗುತ್ತಿದ್ದಳು. ಅವಳನ್ನು ನೋಡಿದವರು ಮರೆಗೆ ಸಕ್ಕು 'ಮತ್ತೇನು ಮಾಡ್ಯಾಳು? ಅಪರೂಪವಾಗಿ ಹುಟ್ಟೇದ' ಎನ್ನುತ್ತಿದ್ದರು. ಅಪರೂಪವಾಗಿ ಹುಟ್ಟಿದ್ದು ನಿಜ. ಆದರೆ ಕಾಲಿಗೆ ನಡದ ಹರಳು ಕಲ್ಲಸ ತಲೆಯಲ್ಲಿ ಬೇಕಾದಷ್ಟು ಕೂಡಿದವು, ಜ್ಯೂನಿಯರಿಗೆ ಬಂದು ಮುಟ್ಟಬೇಕಾದರೆ ಮೀಸೆ ಅಡಿಹುಲ್ಲಿನ ಹಾಗೆ ಬೆಳೆದವು.

ಉಳಿದದ್ದು ಏನೇ ಇರಲಿ, ಕಾಮಣ್ಣನು ಚೆಲುವನೆಂಬುದು ಸುಳ್ಳಲ್ಲ. ತಿದ್ದಿ ತೀಡಿ ಮಾಡಿದ ಕೆಂಪುಮೊಗ ಅವನದು. ಎಣ್ಣೆಬಸಿಯುವ ಕಪ್ಪು ಕ್ರಾಪು, ಅವನ ಮೈಯುಮನೆಗೆ ಮೇಗಡೆಯ ಕಮಾನು ಇದ್ದಂತೆ ಕಾಣುತ್ತಿತ್ತು. ಬರೀ ಕೂದಲಿನ ಸಿಂಗಾರಕ್ಕಾಗಿ ಅವನ ಕೋಣೆಯಲ್ಲಿರುವ ಪೊಮೇಡಿನ ಬಾಟ್ಲಿ, ಕನ್ನಡಿಯ ತರತರ, ಹಣಿಗೆಯ ಹೊಸಹೊಸ ನಮೂನೆ ಅಂಗಡಿಕಾರರಿಗೆ ಕೂಡ ಮಾದರಿಯಾಗಿದ್ದವು. ವಸ್ತ್ರದ ಸೊಬಗು ಮುಂದಿನದು. ಎಂಟು ಹತ್ತುಕಡೆಗೆ 'ಹ್ಯಾಂಗರು'ಗಳಿಗೆ ತೂಗುಹಾಕಿದ ಕೋಟು ಅಲ್ಲದೆ ಕೆಳಗೆ ನಾಲ್ಕೈದು ಟ್ರಂಕು ತುಂಬಿದ ಶರ್ಟು ಸೂಟುಗಳ ಲೆಕ್ಕವೇ ಇಲ್ಲ. ಅವನ ಕೋಣೆಯಲ್ಲಿ ಪುಸ್ತಕಗಳನ್ನು ಕಾಣಬೇಕಾದರೆ, ಟೇಬಲ್ಲಿನ ಮೇಲೆ ಹರವಿದ ಟೇನಿಸ್‌ರ್ಯಾಕೆಟ್ಟು–ಹಳೆಯ ಅಂಗಿ ಅರಿವೆಗಳ ಬುಡದಲ್ಲಿ ಅವು ಉಸಿಲುಗಟ್ಟಿ ಪುಟಮುಡಿಚಿ ಬಿದ್ದಾಗ ನೋಡಬೇಕು. ಆದರೂ ಅವನು ಪುಸ್ತಕಪ್ರಿಯನು. ಒಮ್ಮೊಮ್ಮೆ ಖುಷಿಬಂದಾಗ ಆರಾಮಖುರ್ಚಿಯಲ್ಲಿ ಬಿದ್ದುಕೊಂಡು, ನಾಕಾಣೆಯ ನಾವ್ಹೆಲ್ಲು ಓದತೊಡಗಿದನೆಂದರೆ ಕೈಯಲ್ಲಿಯ ಸಿಗರೇಟು ಬೆರಳು ಸುಡಲಿಕ್ಕೆ ಬಂದರೂ ಎಚ್ಚರಿರುತ್ತಿರಲಿಲ್ಲ.

ತಾಯಜಡ್ಡು ಕಡಿಮೆಯಾಗಿ ಅವಳು ನಡೆದಾಡಹತ್ತಿದಮೇಲೆ, ಜಗಣ್ಣನು ಅನಂತನ ಜೊತೆಯಲ್ಲಿ ತಿರುಗಿ ಕಾಲೇಜು ಸೇರಲು ಬಂದನು. ನಿರೀಕ್ಷಿಸಿದಂತೆ ಪ್ರೀವ್ಹಿಯುಸ್‌ದಲ್ಲಿ ಪಾಸಾಗಿದ್ದನು. ಎರಡನೆಯ ವರ್ಗದ ಗುಣಗಳಿಂದ ಪಾಸಾಗಿದ್ದನು. ಫೀಯ ಬಗ್ಗೆ ಕಾಲೇಜಿನಿಂದ

ಬಿಡಿಸಿಕೊಳ್ಳಲು ಸಾಧ್ಯವಿದೆಯೆಂಬ ಅನಂತನ ಆಶ್ವಾಸನವು ಅವನನ್ನು ಹುರಿದುಂಬಿಸಿತು. ಹೋದವರುಷದ ಹಣದ ಮಾಧುಕರಿಯು ತಪ್ಪಬಹು ದೆಂದು ಅವನು ನಂಬಿದನು. ಇದಲ್ಲದೆ, ಅವನು ಬರುವದರಲ್ಲಿ ಜ್ಯೂನಿ ಯರಿಗೆ ಬಂದ ಕಾಮಣ್ಣನು ತಾನೇ ಊಟದ ಕ್ಲಬ್ಬನ್ನು ಆರಂಭಿಸಿ, ಮುಂದೆ ಜನರಲ್ ಸೆಕ್ರೆಟರಿಯೂ ಆಗಿ 'ಜಮದಗ್ನಿಯಂಥ ಬಡವಿದ್ಯಾರ್ಥಿ ಯೊಬ್ಬನಿಗೆ ಪುಕ್ಕಟೆಯಾಗಿ ಊಟಹಾಕಲು ಅಡ್ಡಿಯಿಲ್ಲ' ಎಂದು ಠರಾವು ಮಾಡಿಸಿಬಿಟ್ಟನು. ಇದರಿಂದ ಒಂದೇ ಕ್ಲಬ್ಬಿನಲ್ಲಿ ಜಗಣ್ಣನಿಗೆ ಎಲ್ಲರಂತೆ ಉಣ್ಣಲು ದೊರೆಯಿತು. ದಿನವೊಂದುಕಡೆಗೆ ಹೋಗುವದು ನಿಂತಿತು. ಈ ಉದಾರಕೃತಿಯಿಂದ ಕಾಮಣ್ಣನ ಬಗ್ಗೆ ಉಂಟಾದ ಹೋದವರುಷದ ಮತವು ಪಲ್ಲಟವಾಯಿತು. ಅನಂತನೂ ಜಗಣ್ಣನೊಡನೆ ಕಾಮಣ್ಣನಿಗೆ ಋಣಿಯಾದನು. ಮೂವರಲ್ಲಿಯೂ ಹೆಚ್ಚು ಗುರುತು ಆಯ್ತು, ಆದರೆ ಕಾಮಣ್ಣನ ಕ್ಯಾಂಪಿನಲ್ಲಿ ಇವರಿಬ್ಬರೂ ಸೇರಲಿಲ್ಲ. ಹರಟೆ ಹೋಗಿ ಪಠಣೆ ಆದೀತೆಂಬ ತಿಳಿವು ಇಬ್ಬರಲ್ಲಿಯೂ ನೆಲೆಗೊಂಡಿತ್ತು. ಜಗಣ್ಣನಿಗೆ ಅನಂತನ ಮುಂದಿನ ಎತ್ತುಗಡೆಯಿಂದ ಫ್ರೀಶಿಪ್ಪು ಬೇರೆ ದೊರೆಯಿತು. ಫೀಯಿಂದ ಬಿಡುಗಡೆಯಾಯಿತು. ಮುಂದೆ ಅಭ್ಯಾಸದಿಂದ ಕೊಟ್ಟಿದ್ದನ್ನು ಕಾಯ್ದು ಕೊಳ್ಳುವ ಕಡೆಗೆ ಜಗಣ್ಣನ ಗಮನವು ಹರಿಯಿತು. ಯಾವಾಗಲೂ ಅಭ್ಯಾಸ; ಅಭ್ಯಾಸವೊಂದೇ ಅವನ ಧ್ಯಾನವಾಯ್ತು.

ಕಾಮಣ್ಣನಿಗೆ ಜ್ಯೂನಿಯರ್ ವರ್ಷ ಆದರೂ ಎಷ್ಟೂ ಪುರಸತ್ತು ಇಲ್ಲದ ಗವ್ಹರ್ನರನ ದಿನಚರ್ಯೆ ಆದಂತೆ ಆಯ್ತು. ಮೊದಲನೇ ಟರ್ಮ ಮಳೆಗಾಲವಾದದ್ದರಿಂದ, ಟೇನಿಸೊಂದು ಆಡಲು ಬರುವಂತಿರಲಿಲ್ಲ. ಆದರೆ ಬ್ಯಾಡ್‌ಮಿಂಟನ್, ಪಿಂಗಪಾಂಗ್ ಆಟಗಳು ಇರುವವಲ್ಲವೇ? ಇವೆಲ್ಲ ಬೇಡವಾದಾಗ ಕ್ಲಾಸಿನಲ್ಲಿ ಹಾಜರಿಯೊಂದನ್ನು ಕೊಟ್ಟು ಬಂದು, ಕಾಮ ಣ್ಣನ ಕಂಪೂ ಎಲ್ಲ ಬಿಝಿಕ್ಕಿಗೆ ಕೂಡುತ್ತಿತ್ತು. ಚಹಾ ಸೋಡಾದಂಗ ಡಿಯ ಮಾಲಕರ ಭೆಟ್ಟಿ ದಿನಕ್ಕೆ ಎರಡು ಮೂರು ಸಾರೆ. ಅವರು ಕಾಮ ಣ್ಣನ ವಿಷಯದಲ್ಲಿ ತುಂಬಾ ಆದರವನ್ನು ತೋರಿಸುತ್ತಿದ್ದರು. ಕೊನೆಗೆ ಮಾನಪತ್ರವೊಂದನ್ನೂ ಕೊಡಬಹುದೆಂಬ ಲಕ್ಷಣಗಳಿದ್ದವು! ಕೂಡಲೇ ಕಾಲೇಜಿನ ಆಟದ ವಿಭಾಗಗಳಿಗೆ ಸೆಕ್ರೆಟರಿಗಳನ್ನು ಆರಿಸುವ ಕೋಲಾಹಲವು

ಎದ್ದಿತು. ಕಾಮಣ್ಣನು ಟೇನಿಸ್ಸಕ್ಕೆ ನಿಂತನು, 'ಆರಿಸಿ ಬರದಿದ್ದರೆ ವಿನಾಸೆ ಇದ್ದು ಸುಳ್ಳು' ಎಂಬ ಆವೇಶದಿಂದ ತನಗೆ ಮತಗಳದ್ದು ಗಟ್ಟಿಮಾಡಿ ಕೊಳ್ಳಲು ಹಗಲಿರುಳು ದುಡಿದನು.

ಒಮ್ಮೆ ಇಂಗ್ಲಿಶಿನ ಮೊದಲನೇ ತಾಸು ಮುಗಿದಮೇಲೆ, 'ಮತ ಕೊಡಿರಿ ದಯಮಾಡಿ' ಎನ್ನುವ ನಾಲ್ಕೈದು ಸುಂದರ ಕಾರ್ಡುಗಳನ್ನು ಬಂಗಾರದಕ್ಷರನಲ್ಲಿ ಅಚ್ಚುಗೊಳಿಸಿ, ವಿದ್ಯಾರ್ಥಿನಿಯರ ಕೋಣೆಗೆ ಹೋಗಿ ಕೊಟ್ಟು, ತನ್ನನ್ನು ಮರೆಯಬಾರದೆಂದು ಕಾಮಣ್ಣನು ಅವರಲ್ಲಿ ಮೊರೆ ಯಿಟ್ಟನು. ಉಳಿದವರು ಸುಮ್ಮನಿದ್ದರು. ಆದರೆ ಕಾಮಣ್ಣನ ಪ್ರಖ್ಯಾತಿಯನ್ನು ಕೇಳಿಬಲ್ಲ ಒಬ್ಬ ಬಿ. ಎ. ಕ್ಲಾಸಿನ ಚತುರೆಯು ಮೋಹಿ ಸುವ ಮುಗುಳ್ನಗೆ ನಕ್ಕು 'ನಾನು ವ್ಹೋಟು ಕೊಡಿಸುವೆ ಮಿಸ್ಟರ್ ದೇಸಾಯಿ' ಎಂದು ಬಾಗಿಲ ಇಕ್ಕಿಕೊಂಡಳು. ಆ ನಗೆಯು ಕಾಮಣ್ಣನ ಹೃದಯವನ್ನು ಸೆಳೆಯಿತು; ಬುದ್ಧಿಯನ್ನು ಕದ್ದಿತು. ಆರಿಸುವಿಕೆಯು ಆಯಿತು, ಕಾಮಣ್ಣನು ಆರಿಸಿ ಬರಲಿಲ್ಲ. ಮಿತ್ರರೆಲ್ಲ ನಕ್ಕಾಡಿದರು. 'ಕಾಮದಹನ ಆಯಿತು!' ಎಂದರು. ಕಾಮಣ್ಣನಿಗೆ ಅದಾವ ಕೊಂಕೂ ತಟ್ಟಲಿಲ್ಲ. ಅವನಿಗೆ ಬೇರೊಂದು ರತ್ನವು ಸಿಕ್ಕಂತಾಗಿತ್ತು, ಈಗೆಲ್ಲ ಮನಸ್ಸಿನಲ್ಲಿ 'ಲಲಿತಾ, ಲಲಿತಾ' ಎಂಬ ಧ್ಯಾನವೇ ಧ್ಯಾನ. ಮೊದಲಿ ಗಿಂತ ವೇಷಗಾರಿಕೆಗೆ ಈಗ ಹೆಚ್ಚು ಗಮನಕೊಟ್ಟು, ಅತ್ತರದ ಹನಿ ಗಳನ್ನು ಕೋಟಿಗೂ ಕರವಸ್ತ್ರಕ್ಕೂ ಸಿಂಪಡಿಸಿ ಆರ್ಧತಾಸು ಮೊದಲು ಹೋಗಿ ಸ್ತ್ರೀ ಬೆಂಚಿನ ಹಿಂದೆ ಕುಳಿತುಬಿಡುತ್ತಿದ್ದ.

ಕಾಮಣ್ಣನ ತಪಸ್ಸು ಗಂಟೆ ಆಗುವವರೆಗೆ ನಡೆದೇ ಇರುತ್ತಿತ್ತು. ಲಲಿತಾಬಾಯಿ ಬಂದೊಡನೆ ಸಹಚದೃಷ್ಟಿಯನ್ನು ಹಿಂದೆ ಚೆಲ್ಲಿ, ಸುಳ್ಳು ನಗೆ ನಗುತ್ತ ಓಸರಿಸಿಕೊಂಡು ಮುಂದೆ ಕೂಡಲು, ಅದೆಂಥ ಉಬ್ಬು ಕಾಮಣ್ಣನಿಗೆ! ಅಂದಿನ ತಪದ ಫಲವು ದೊರೆತಂತೆ ಆಗಿಬಿಡುತ್ತಿತ್ತು. ಕ್ಲಾಸಿನ ಲೆಕ್ಚರು ನಡೆದಾಗ ಕಾಮಣ್ಣನು ಏಕಲಕ್ಷ್ಯದಿಂದ ಆಲಿಸು ತ್ತಿದ್ದ—ಎಂದು ತೋರುತ್ತಿತ್ತು. ಆದರೆ ಲಲಿತಾಬಾಯಿಯು ತನ್ನ ಜೊತೆಗಾರ್ತಿಯಳ ಕೂಡ ಅಭ್ಯಾಸದ ಬಗ್ಗೆ ಗುಣಗುಣಿಸಲು, 'ಆಃ, ನನ್ನ ಇಂದಿನ ಈ ಅತ್ತರದ ವಾಸನೆ ಬಡೆಯಿತು ಕಾಣತದೆ. ನನ್ನನೆಷ್ಟು

ಹೊಗಳಿದರೂ ಸಾಲದು ಲಲಿತಾಗೆ!' ಎಂದುಕೊಳ್ಳುತ್ತಿದ್ದ ಕಾಮಣ್ಣ. ಆರಿಸುವಿಕೆ ಆದ ಒಂದೆರಡು ದಿನಗಳಲ್ಲಿ ಲಾಯಬ್ರರಿಯಲ್ಲಿ ಪುಸ್ತಕ ತೆಗೆದುಕೊಳ್ಳಲು ಬಂದಾಗ ಕಾರಕೂನನ ಟೇಬಲ್ಲಿಗೆ ಕಾಮಣ್ಣನೂ ನಿಂತಿದ್ದ. ಉಳಿದ ಹುಡುಗರು ಹೋಗಿದ್ದರು. ಕಾಮಣ್ಣ ಸಂತೋಷ ದಿಂದ ಹೊರೆಯೇರಿದನು. 'ಏನು ಲಲಿತೆಯು ಪ್ರೀತಿಸುವ ರೀತಿ! ನಾನು ಪುಸ್ತಕಕ್ಕೆ ಬಂದಾಗ ತಾನೂ ಬರುತ್ತಾಳೆ; ಮತ್ತೆ ಯಾರೂ ಇಲ್ಲದಾಗ ನೋಡಿ! ಸ್ಪಷ್ಟವಾಗಿ ಹೇಳಬಾರದೇಕೆ?' ಎಂದು ಯೋಚಿಸುತ್ತ ನಿಂತಿರಲು, ಅದನ್ನು ಕಂಡ ತಪ್ಪಿಗೆ ಲಲಿತಾಬಾಯಿಯು 'ಏನು ಮಿಸ್ಟರ್ ದೇಸಾಯಿಯವರೇ, ನಮಗೆ ಬಹಳ ಕೆಡಕೆನಿಸಿತು. ನೀವು ಆರಿಸಿ ಬರಲಿಲ್ಲ. ನನ್ನ ವ್ಹೋಟುಗಳೆಲ್ಲ ನಿಮಗೇ ಬಿದ್ದಿದ್ದವು.' ಎಂದಳು. ಕಾಮಣ್ಣನಿಗೆ ಹಿಗ್ಗಾಯಿತು. 'ಹೋಗಲಿ ಬಿಡಿರಿ. ನಿಮ್ಮ ವ್ಹೋಟು ಹಾಕಿದ್ದಕ್ಕೆ ಥ್ಯಾಂಕ್ಸ್' ಎಂದನು. ಅವಗೆಲ್ಲಿ ಆ ಮತಗಳ ಗೊಂದಲವು ಬೇಕಾಗಿತ್ತು? ಲಲಿತೆಯು ಮಾತಿನ ಅಮೃತ ದೊರೆತರೆ ಸಾಕೆನಿಸಿತು.

ಟರ್ಮಿನ ಕೊನೆವರೆಗೆ ಕಾಮಣ್ಣನ ಪ್ರೇಮಭ್ರಮೆಯು ಲೀಲೆ ಬೆಳೆಯುತ್ತ ಸಾಗಿತು. ಸ್ನೇಹಿತರೆಲ್ಲ ಅವನ ಹಿತೈಷಿಗಳೇ ಇದ್ದರು. 'ಹೊಡೀ ಕಾಮಣ್ಣಾ, ನಿನ್ನ ದೈವ ತೆರೆದದ. ಆ ಲಲಿತಾ ಈಗ **ರತಿ** ಅಂತ ಹೆಸರು ಬದಲು ಮಾಡಿಕೊಂಡಾಳಂತ, ನಿನ್ನ **ಕಾಮ** ಎಂಬ ಹೆಸರು ಕೇಳಿ' ಎಂದು ಉತ್ತೇಜನ ಕೊಟ್ಟರು. ಆದರೆ 'ಸ್ಪಷ್ಟವಾಗಿ ಹೇಳಬಾರ ದೇಕೆ? ಈ ಹೆಣ್ಣುಮಕ್ಕಳಲ್ಲಿ ನಾಚುವದೊಂದು ಬಲು ಖೋಡಿ ಸ್ವಭಾವ!' ಇದೊಂದೇ ಕಾಮಣ್ಣನ ತಕರಾರು. ಅವಳು ಪ್ರೀತಿಸುವಳೆಂಬ ಬಗ್ಗೆ ಉಳಿದ ಪ್ರಮಾಣಗಳಿಗೆ ಕೊರತೆ ಇದ್ದಿಲ್ಲ. ಹೆಚ್ಚುಕಡಿಮೆ ಹೊಟ್ಟೆಬೇನೆ ಹಚ್ಚಿಕೊಂಡಂತೆಯೆ ಆಯ್ತು. ಟರ್ಮಿನ ಕೊನೆ ಬಂತು. ಉಪಾಯವು ತೋಚಲಿಲ್ಲ. ಕಾಮಣ್ಣನ ಮೋರೆ ಸಣ್ಣದಾಯ್ತು, ಒಂದು ರಾತ್ರಿ ನಿದ್ದೆಗೆಟ್ಟು ಪ್ರೇಮವಿರಹದಿಂದ ಕಂಗೆಟ್ಟು ಉತ್ತಮವಾದ ಕವಿತೆಯೊಂದನ್ನು ಹೊರಪಡಿಸಿದನು. ಮೊದಲು ಇಂಗ್ಲಿಷಿನಲ್ಲಿ ಬರೆದು, ಕನ್ನಡದಲ್ಲಿಯೂ ತದ್ರೂಪವಾಗಿ ಬರೆದನು. ಅವನ ಪ್ರತಿಭೆಯು ಬಗ್ಗೆ ಅವನಿಗೇ ಅಚ್ಚರಿ ಯಾಯ್ತು. ಮರುದಿನ, ಯಾರಿಗೂ ಹೇಳದೆ ಅನಂತನ ಕಡೆಗೆ ಹೋಗಿ

ಅಂಗಲಾಚಿ ಬೇಡಿ ತನ್ನೆರಡೂ ಕವಿತೆಗಳನ್ನು ಹೇಗಾದರೂ ಮುದ್ರಿಸಿ ಕೊಡಬೇಕೆಂದನು. ಅನಂತನು ತನ್ನ ಗುರುತಿನ ಫೆಲೋ ಮಹಾಶಯನಿಗೆ ಬಿನ್ನವಿಸಲಾಗಿ ಕನ್ನಡ ಕವಿತೆಯೊಂದು ಕಾಲೇಜ ಮಿಸಲೆನಿಯಲ್ಲಿ ಅಚ್ಚಾಯಿತು, ಇಂಗ್ಲಿಶು ಹಾಗೇ ಉಳಿಯಿತು.

ಟರ್ಮಿನ ಅಂತ್ಯಕ್ಕೆ ಊರಿಗೆ ಹೊರಟ ಎಲ್ಲರ ಬಾಯಲ್ಲಿ ಆ ಕವಿತೆ, ಕವಿ, ಲಲಿತೆ ಮೊದಲಾದ ಸುದ್ದಿಯೇ ಸುದ್ದಿ. ಲಲಿತೆ ಅದನ್ನು ನೋಡಿ ಎಷ್ಟು ಹಿಗ್ಗುವಳೋ? ಎಂಬುದನ್ನು ಕಾಮಣ್ಣನಿಗೆ ಕಲ್ಪಿಸಲಿಕ್ಕೆ ಬರಲಿಲ್ಲ. ಆ ಬಗ್ಗೆಯೂ ಒಂದು ಕವಿತೆ ಬರೆದು ತನ್ನಲ್ಲಿ ಇಟ್ಟುಕೊಂಡನು. ಆ ಹಳೆಯ ಕತೆಯೊಳಗಿನ ಹಂಡೆಯು ಮರಿಗಳನ್ನು ಈದಂತೆ ಕಾಮಣ್ಣನ ಕವಿತಾಕಾಮಿನಿಯು ಮಕ್ಕಳನ್ನು ಕೊಡತೊಡಗಿದಳು. ಪತ್ರಿಕೆಯಲ್ಲಿ ಬಂದ ಕಾಮಣ್ಣನ ಕವಿತೆಯನ್ನು ಅನಂತ, ಜಗಣ್ಣ ಗಾಡಿಯಲ್ಲಿ ಓದಿದರು. ಉಳಿದವರಂತೆ ಕುಚೇಷ್ಟೆಯ ನಗೆ ನಗಲಿಲ್ಲ, ಕಾಮಣ್ಣನ ಬಗ್ಗೆ ಹಿರಿಮರುಕ ವೆನಿಸಿತು.

'ಜಗಣ್ಣಾ, ನೋಡಿದಿಯಾ ಈ ಕಾಲೇಜಿನ ಗಂಧರ್ವಲೋಕ? ಜಗತ್ತಿನ ಹುಡಿಯು ಇನ್ನೂ ಕಣ್ಣು ತುಂಬದ ಈ ಕಿನ್ನರರು ಮುಂದೆ ಹೇಗೆ ಬಾಳುವೆ ಮಾಡುವರೊ ತಿಳಿಯದು.'

'ಅದೆಲ್ಲ ನಿಜ; ಆದರೆ ಕಾಮಣ್ಣನಿಗೇನು ಚಿಂತೆಯಿದೆ ನಮ್ಮಂತೆ? ಅವನಿಗೆ ಜಗತ್ತು ಯಾವಾಗಲೂ ಗಂಧರ್ವಲೋಕವೆ.'

'ತಿಳಿಯುವದು, ಮುಂದೆ ತಿಳಿಯುವದು.' ಎನ್ನುತ್ತಲೆ ಅನಂತನು ಕವಿತೆಯನ್ನು ಕಣ್ಣುಮುಂದೆ ಹಿಡಿದು ಹೇಳಿದನು.

'ಜಗಣ್ಣಾ, ಬರೆಯುವಂತೆ ಬರೆದು ಒಳ್ಳೆಯದನ್ನಾದರೂ ರಚಿಸ ಬಾರದೆ ಇವನು? ಇಲ್ಲಿ ನೋಡು, **'ಲಲಿತೇ, ಮುಮುದಯಿತೇ, ಬಲು ಛಲಿತೇ, ನಿನಗೇ ನಾ ಮನಸೋತೆ'** ಎಂಥ ಪ್ರೀತಿಕಾವ್ಯವಿದು! ಇಲ್ಲಿ ಆ ಸ್ತ್ರೀಯ ಮೇಲಿನ ಅಕ್ಕರೆಗಿಂತ ಅಕ್ಷರಗಳ ಅಕ್ಕರೆ ಹೆಚ್ಚಾಗಿ ತೋರುತ್ತದೆ! ಜಗಣ್ಣಾ, ಈ ಹೊಸಗನ್ನಡದಲ್ಲಿ ಎಲ್ಲ ಹೊಸದು ಎಂದು ಕೇಳಿದೆಯಲ್ಲ. ಅದಕ್ಕೆ ನಮ್ಮ ಕಾಮಣ್ಣನಂಥ ಶೃಂಗಾರಕವಿಗಳು

ಪ್ರೇಮಗೀತೆಯ ಹೊಸ ಪ್ರಕಾರದ ಸೇರ್ಪಡೆ ಮಾಡಲಿರುವರು–ಪ್ರೇಮ ಭ್ರಮೆಯ ಶೃಂಗಾರಕಾವ್ಯ ಎಂದು ಕರೆ ಬೇಕಾದರೆ ಅದನ್ನು.'

'ಒಟ್ಟೇನು, ಅನಂತಾ. ಈ ಪ್ರೌಢಸ್ತ್ರೀಯರು ಇಂಥಲ್ಲಿ ಕಲಿಯದಿರುವದೇ ಲೇಸು.'

ಈ ತೆರನಾಗಿ ಮಾತನಾಡುತ್ತ ಇಬ್ಬರೂ ಗೆಲವೂರು ಕಂಡರು.

ಎರಡನೆಯ ಟರ್ಮಿನ ಆರಂಭ ಬಂದಿತು. ಕಾಮಣ್ಣನು ನಾಲ್ಕು ದಿನ ಹಬ್ಬಕ್ಕೆ ಹೋಗಿ ಬಂದವನು ತಿರುಗಿ ಧಾರವಾಡದಲ್ಲಿಯೇ ಇದ್ದ. 'ಲಲಿತೆಗೆ ಆ ತನ್ನ ಕವಿತೆಯು ಕೈಸೇರಿತೋ ಇಲ್ಲವೋ, ಮನಸ್ಸಿಗೆ ಎಷ್ಟು ಬಂದಿತು? ಏನು?' ಎಂದು ತಿಳಿದುಕೊಳ್ಳುವ ಲಾಲಸೆಯಿಕೆ ಹೆಚ್ಚಾಗಿ, ಒಂದೆರಡು ಸಲ ಲಲಿತಾಬಾಯಿಯಿರುವ ಮನೆಗೆ ಮುತ್ತಿಗೆ ಹಾಕಿದನು. ಕೊನೆಯಲ್ಲಿ 'ಅವಳು ಊರಲ್ಲಿಲ್ಲ' ಎಂದು ಗೊತ್ತಾಯಿತು. ನಿರಾಶಿತನಾಗಿ ಓಣಿ ಓಣಿ ತಿರುಗಿದನು, ಕಲ್ಪನೆಯಲ್ಲಿ ಅವಳೊಡನೆ ಕೆಲೆಯುತ್ತ ಹೊತ್ತು ನೂಕಿದನು. ಅನಂತ, ಜಗಣ್ಣ ಬಂದರು. ಸೂಚನೆಯಿಂದ ಕಾಮಣ್ಣನ ತಲೆಸೇರಿದ ಹುಚ್ಚನ್ನು ಹೊಡೆದೋಡಿಸಬೇಕೆಂದರು. ಸಾಧ್ಯವಾಗಲಿಲ್ಲ. 'ಆತ್ಮೀಯ ವಿಷಯದಲ್ಲಿ ಯಾರೊಬ್ಬರೂ ಕೈಹಾಕಬಾರದು' ಎಂದು ಅವನು ಬಜಾಯಿಸಿಬಿಟ್ಟನು.

ವಿದ್ಯಾರ್ಥಿಗಳೆಲ್ಲ ಒಬ್ಬೊಬ್ಬರಾಗಿ ಬಂದರು. ಕಾಮಣ್ಣನ ಕ್ಲಬ್ಬಿನ ಒಲೆಯನ್ನು ಮತ್ತೆ ಹೂಡಿದ್ದಾಯ್ತು. ಆದರೆ ಮೆಂಬರ ಜನರಲ್ಲಿ ಅನೇಕರು 'ಕಾಮಣ್ಣನು ಇನ್ನು ಜನರಲ್ ಸೆಕ್ರೆಟರಿ ಆಗುವ ಕಾರಣವಿಲ್ಲ, ಎಂದು ಅವನ ವಿರುದ್ಧವಾಗಿ ಬಂಡು ಹೂಡಿದರು. ಕಾಮಣ್ಣನು ಹೋದ ಟರ್ಮಿನಲ್ಲಿ ತನ್ನ ಟೋಳಿಯ ಕೂಡ ಮಾಡಿದ ಹಾವಳಿಯೇ ಅದಕ್ಕೆ ಕಾರಣ. ಅವರಿವರನ್ನು ಕರೆದು ಸೂಟಿಗೊಂದು ಫೀಸ್ಟು ಮಾಡಿಸಿ, ನಿತ್ಯವೂ ಚಪಾತಿಯ—ಚೇಂಜಿನ ದುಂದುಮಾಡಿ, ತಿಂಗಳಿಗೆ ತಲೆಗೆ ಮೂವತ್ತು ರೂಪಾಯಿಗಳವರೆಗೆ ಲೆಕ್ಕತಂದದ್ದನ್ನು ಮೆಂಬರರು ಸಹಿಸಲಿಲ್ಲ. ಹತ್ತು ಹದಿನೈದು ದಿನಗಳ ವರೆಗೆ ತಂಟೆ ನಡೆಯಿತು. ಕಾಮಣ್ಣನ ದುಂದು ಗಾರಿಕೆಯ ಡಂಗುರವು ಎಲ್ಲಕಡೆಗೆ ಹಬ್ಬಿತು. ಅದರಲ್ಲಿ ಜಗಣ್ಣನಿಗೆ ಪುಕ್ಕಟೆಯಾಗಿ ಹಾಕಿದ ಊಟವೂ ಒಂದು ಅವಾಂತರ ವಿಷಯವಾಯ್ತು.

ತಮ್ಮತಮ್ಮ ಅಭ್ಯಾಸದಲ್ಲಿ ಧುಮುಕಬೇಕು; ಸೆಕಂಡ ಟರ್ಮಿನಿಂದು ಬಂದ ಅನಂತಜಗನ್ನಾರ ಎದೆಗೆ ಮೊದಲಗಾಯವಾಯ್ತು. ಅಭ್ಯಾಸದಿಂದ ಲಕ್ಷ್ಯವು ಹಾರಿತು.

ಜಗನ್ನನಿಗಂತೂ 'ಹಂಗಿಸೂಟವನ್ನು ಕಾರಿ ಪ್ರಾಣಬಿಡಲೆ?' ಎನಿಸು ವಷ್ಟು ವ್ಯಥೆಯಾಯ್ತು. ಕಡೆಗೆ ಬಹುಮತದಿಂದ ಕಾಮಣ್ಣನು ಸೆಕ್ರೆಟರಿ ಪದವಿಯಿಂದ ತೆಗೆಯಲ್ಪಟ್ಟನು, ಬೇರೊಬ್ಬರು ಆರಿಸಿಬಂದರು. ಕಾಮಣ್ಣ ನಿಗೆ ಪ್ರೇಮದ ದುಃಖದಲ್ಲಿ ಹೊಸದುಃಖ ಬೆರೆತು, ಜೀವಬೇಡಾದವ ರಂತೆ ಕೋಣೆ ಹಿಡಿದನು. ಕಾಲೇಜಿನಲ್ಲಿ ಲಲಿತೆಯನ್ನು ನಿತ್ಯವಾಗಿ ಸಾಧ್ಯ ವಾದಷ್ಟು ನೋಡಲಿಕ್ಕೆ ಬರುತ್ತಿತ್ತೆಂಬದೊಂದೇ ಅವನಿಗಿದ್ದ ತೃಪ್ತಿ. ಇತ್ತ ಹೊಸ ಸೆಕ್ರೆಟರಿಯ ನೇತೃತ್ವದಲ್ಲಿ 'ಕ್ಲಬ್ಬಿನವರು ಜಗನ್ನನಿಗೆ ಕೆಲಸ ವಿಲ್ಲದೆ ಊಟಕ್ಕೆ ಹಾಕಲಾಗದು' ಎಂದು ನಿರ್ಣಯಿಸಿದರು. 'ದಿನವೂ ಬಡಿಸುವಂತಿದ್ದರೆ ಊಟಮಾಡಲಿ ಇಲ್ಲದಿದ್ದರೆ ಇಲ್ಲ' ಎಂದು ಗೊತ್ತಾಗಲು ಜಗನ್ನನು 'ಅನಂತಾ, ನನ್ನ ಹಣೆಬರಹದಲ್ಲಿ ಕಾಲೇಜಿಲ್ಲದೆ ನೀನು ಕರ ಕೊಂಡು ಬಂದಿ. ಅಂತೇ ಇವೆಲ್ಲ ನನ್ನನ್ನು ಮನೆಗೆ ನುಗಿಸಹತ್ತಿವೆ; ನಾನು ಹೋಗಿಬಿಡುವೆ' ಎಂದು ಹಟತೊಟ್ಟನು. ಸೀನಿಯರ್ ಬಿಯೆಯ ಉಸಿರುಸಾಲದ ಓದಿನಲ್ಲಿ ತೊಡಗಿದ್ದರೂ ಅನಂತನು ಸೈರಣೆಯಿಂದ ಜಗನ್ನನಿಗೆ ತಿಳಿಹೇಳಿ, ಬಡಿಸಿ ಊಟಮಾಡಲು ಒಪ್ಪಿಸಿದನು. ಸೆಕ್ರೆಟರಿಗೆ ಬಿನ್ನಹಮಾಡಿಕೊಂಡು ಮುಂದೆ ಮುಂದೆ ಕೆಲಸವು ಹಗುರಾಗುವಂತೆ ಅನುಗೊಳಿಸಿದನು. ವಾರದ ಪ್ರಕಾರ ಕ್ಲಬ್ಬಿಗೆ ಹೋಗುವದು ಈಗಲೂ ಸಾಧ್ಯವಿತ್ತು. ಆದರೆ ಅದರಲ್ಲಿ ಹೆಚ್ಚು ವೇಳೆ ಹೋಗಬಹುದೆಂದು ಅದರ ವಿಚಾರ ಬಿಡಲಾಯಿತು.

....ಕಾಮಣ್ಣನು ಕ್ಲಬ್ಬಿನಲ್ಲಿ ಆದ ಮಾನಭಂಗವನ್ನು ಟೆನಿಸ್‌ಆಟ ದಲ್ಲಿ ಮರೆತನು. ಆದರೆ ಪ್ರೇಮದ ದಳ್ಳುರಿಯನ್ನು ಹೇಗೆ ನಂದಿಸಬಲ್ಲ? ಕವಿತೆಯನ್ನು ಹೊಗಳಿ,ಹಿಗ್ಗಿನಿಂದ ತಬ್ಬಿಕೊಂಡು ಲಲಿತೆಯು, ತನ್ನ ಜೀವ ರಾಣಿ ಆಗಬಹುದೆಂದು ತಡೆದು ತಡೆದು ಬೇಸತ್ತನು. ಬರೀ ನೋಗಿನ ನಡಿಗೆ, ಹುಸಿನಗೆ ಅವನಿಗೆ ಸಾಕಾಗಿದ್ದವು. ಮಾತಾಡಿಸಬೇಕೆಂದು ಹಾತೊರೆದಾಗ ಹತ್ತಿರ ಯಾರಾದರೂ ಇದ್ದೇ ಇರುತ್ತಿದ್ದರು. ಕೊನೆಗೆ

ಒಂದು ದಿವ್ಯವಿಚಾರ ಬಂದಿತು. ಪ್ರಣಯಪತ್ರವೊಂದನ್ನು ತುದಿಸೊದ ಲಿಲ್ಲದೆ ಕಣ್ಣೀರುಗಳಲ್ಲಿ ತೋಯಿಸಿ ಬರೆದು ಅಟ್ಟಿದನು. ಎರಡುದಿನ ಗಳಲ್ಲಿ ಉತ್ತರ ಬರದಿದ್ದರೆ ಪ್ರಾಣಕ್ಕೆ ಅಪಾಯಮಾಡಿಕೊಳ್ಳಬಹುದೆಂದು ಹೆದರಿಸಿಯೂ ಇದ್ದನು. ಪ್ರೀತಿತತ್ತ್ವದ ಪರೀಕ್ಷಾಕಾಲವೇ ಒದಗಿತು. ಹಾದಿನೋಡಿದಂತೆ ಲಲಿತಾಬಾಯಿಯಿಂದ ಮಾರೋಲೆ ಬಂದಿತು ಮಾತ್ರ. ಅದೆಂಥ ಆಕಾಶಕ್ಕೆ ಹಾರುವ ಹಿಗ್ಗು ಕಾಮಣ್ಣನಿಗೆ! ಅದನ್ನು ಸಾವಿರಸಲ ಮುತ್ತಿಟ್ಟು ಅಪ್ಪಿಕೊಂಡನು. ತಾನೊಬ್ಬನೇ ಕೋಣೆ ಯೊಳಕ್ಕೆ ಕುಳಿತು ಒಡೆದು ಓದಿದನು. ಎರಡೇ ವಾಕ್ಯಗಳಿದ್ದವು.

'ಮಿಸ್ಟರ್ ದೇಸಾಯಿ, (ಡಿಯರ್ ಕೂಡ ಇಲ್ಲ) ಹೀಗೆ ಪತ್ರ ಬರೆ ಯುವದು ಮುಂತಾದ್ದು ಮಾಡಿದರೆ ನಿಮಗೆ ಶಿಕ್ಷೆ ಆದೀತು. **ನನಗೆ ಮದುವೆಯಾಗಿದೆ** '

ಕಾಮಣ್ಣನು ಹೌಹಾರಿದನು, ಹುಚ್ಚಾದನು, ಹಾಸಿಗೆಯುದ್ದ ಹೊರಳಾಡಿ ಹಲುಬಿದನು. ವಿದ್ಯಾರ್ಥಿಗಳಲ್ಲೆಲ್ಲ ಈ ಶೃಂಗಾರಚೇಷ್ಟೆಯ ಕೊನೆಯು ತಿಳಿದು, ಹೊಟ್ಟೆ ಹುಣ್ಣಾಗುವವರೆಗೆ ನಗದವರು ಒಬ್ಬರಿಲ್ಲ. ಅನಂತ ಜಗಣ್ಣರೂ ಇದನ್ನರಿತು ಕಸಿವಿಸಿಗೊಂಡು ತಮ್ಮ ಕೋಣೆಯಲ್ಲಿ ಮರಮರ ಮರುಗಿದರು.

'ನೋಡಿದೆಯಾ ಜಗಣ್ಣಾ, ನೀನು ಹೊಟ್ಟೆ ಹೊಟ್ಟೆ ಎನ್ನುವಿ. ಈ ಆಟ ಗೊತ್ತೇ ನಿನಗೆ?'

'ಎಲ್ಲಿಯದಪ್ಪಾ, ಪ್ರೇಮಗೀಮ ಬಾಳುರಿಯಲ್ಲಿ ಬಿದ್ದ ಬಡವರಿಗೆ ಏನು ಗೊತ್ತು? ಅದೆಲ್ಲಾ ಸ್ಮಶಾನದ ಭೂತಗಳ ಕುಣಿಯುವ ಅಪ್ಪುವ ಆಟದಂತೆ ನಮ್ಮ ಕಣ್ಣಿಗೆ!'

---

# ೧೧ನೆಯ ಕಿಡಿ

ಇಂಟರ್ ಪರೀಕ್ಷೆಯನ್ನು ತೀರಿಸಿ ಜಗಣ್ಣನು ಊರಹಾದಿ ಹಿಡಿದನು. ಅನಂತನು ಮಾತ್ರ ತನ್ನ ಬಿ. ಎ. ಪರೀಕ್ಷೆಗಾಗಿ ಪುಣೆಗೆ ಹೋಗ ಬೇಕಾದ್ದರಿಂದ ಅಭ್ಯಾಸಮಾಡುತ್ತ ಧಾರವಾಡದಲ್ಲಿಯೇ ಉಳಿದನು. ಅರ್ಥಶಾಸ್ತ್ರದಂಥ ಬಿಗಿಯಾದ ವಿಷಯದಲ್ಲಿ ಆನರ್ಸನ್ನು ಪಡೆಯುವದಲ್ಲದೆ ಆವನು ಮೊದಲನೇ ವರ್ಗಕ್ಕೂ ಗುರಿಯಿಟ್ಟಿದ್ದನು. ಜಗಣ್ಣನು ಹೋಗು ವಾಗ 'ಈ ಸಾರೆಯು ಪಾಸು ಥಳಮಳಿಸುತ್ತದೆ ಅನಂತಾ. ಪೇಪರು ನೆಟ್ಟಗೆ ಹೋಗಲಿಲ್ಲ' ಎಂದು ಸಪ್ಪಗಿನ ಮೋರೆಯಿಂದ ಹೋದ ನೆನಪೊಂದು – ಅವನ ಎಂಥ ಏಕಾಗ್ರ ಅಭ್ಯಾಸದಲ್ಲಿಯೂ – ಒಮ್ಮೊಮ್ಮೆ ಸುಳಿದು 'ಮಾಡಿದ್ದೆಲ್ಲ ವ್ಯರ್ಥವಾದೀತೇ?' ಎಂದೆನಿಸಿ ಬಿಡುತ್ತಿತ್ತು. ಉಳಿದ ಯಾವ ತೊಂದರೆಯೂ ಅವನ ಅಭ್ಯಾಸದ ಹಾದಿಗೆ ಬರಲಿಲ್ಲ.

ಜಗಣ್ಣನು ಊರುಕಂಡು ಹುರುಪುಗೇಡಿಯಂತೆ ತಿರುಗಿದನು. ಜೊತೆಗೆ ಅನಂತನಿಲ್ಲದ್ದರಿಂದ ಭಣಭಣ. ಮೇಲೆ ಪರೀಕ್ಷೆಯ ಸಲುವಾಗಿ ಹುಳುಹುಳು, ಎಲ್ಲಿ ನಪಾಸಾಗುವದೋ ಎಂಬ ಹಳವಂಡ. ದಿನವೂ ಪ್ರಶ್ನೆಯ ಕಾಗದಗಳನ್ನು ಇಟ್ಟುಕೊಂಡು ಯಾವದಕ್ಕೆ ಕನಿಷ್ಠವೆಂದರೆ ಎಷ್ಟು ಕೊಡಬಹುದೆಂಬ ಸರಾಸರಿ ನೋಡಿ, 'ಯಾಕೆ ಪಾಸಾಗಬಾರದು?' ಎನ್ನುತ್ತಿದ್ದ.' ಆದರೆ ಸಂಸ್ಕೃತದ ಒಂದು ಅರ್ಧದಲ್ಲಿ ಏನೂ ಸರಿಯಾಗಿ ಮಾಡಿಲ್ಲ, ನಪಾಸಾಗುವದೇ ನಿಶ್ಚಿತ' ಎಂದು ಇನ್ನೊಮ್ಮೆ ಕೆಡಕೆನಿಸಿ ಕೊಳ್ಳುತ್ತಿದ್ದ ಹೀಗೆ ಜೋಲುಮೋರೆಯಿಂದ ಹೆಚ್ಚು ಮಾತುಕತೆಯಿಲ್ಲದೆ ಅವನು ಇರುವದರ ಅರ್ಥವು ಮಾತ್ರ ಮನೆಯಲ್ಲಿ ಬೇರೆ ಆಗಿತ್ತು. ಗೋದವ್ವನು ಮೊದಲು ಅದರ ಇಂಗಿತವನ್ನು ಕಂಡುಹಿಡಿದಳು. ಜಗಣ್ಣನು ಹೊರಗೆ ಹೋದಾಗ ಒಮ್ಮೆ ಯಜಮಾನರ ಮುಂದೆ ಆಡಿ ತೋರಿಸಿದಳು.

'ಜಗಣ್ಣ ದೊಡ್ಡವ ಆದ. ಹುಡಿಗಿನ್ನ ಎಲ್ಲ್ಯಾರ ನೋಡಬೇಕು.' ಬಂಡೇರಾಯರು ಒಮ್ಮೆಲೆ ಅದಕ್ಕೆ ಕೆರಳಿದರು.

'ನಿನಗ ಹುಚ್ಚು ಹಿಡಿದsದ. ದಿನಕ್ಕದಿನಾ ಸಂಸಾರ ಹಿಡಿದು

ಹೋಗಬೇಕಾದರೆ ನನಗ ಕಣ್ಣೀರು ಕಪಾಳಕ್ಕ ಬರತಾವ. ಮ್ಯಾಲೆ ಅವನ ಮದುವೀ ಒಂದು ಹೂಡಂತೀದಿ!'

ಇಂಥ ಮಾತು ಕೇಳಿಕೇಳಿ ದಡ್ಡಾದ ಕಿವಿ ಗೋದವ್ವನದು. ಹೀಗೆ ಆಡಿದರೆ ವಾದಕ್ಕೆ ಬಹಳ ಕಳೆಯೇರುತ್ತಿತ್ತು. 'ಹೌದು, ಪ್ರತಿಯೊಂದಕ್ಕೂ ಹಿಂಗs ಹೆಡೀ ಬಡಿಯೋ ಕೆಲಸನೇ ನಿಮ್ಮದು? ನಾ ಅಂದದ್ದು ಏನು ಮಾಡಿಸಿಗೊಟ್ಟೀರಿ? ಇಲ್ಲಿಗೆ ಬಂದದ್ದು ಬಂದೀಸಿ, ಒಂದು ವಸ್ತ್ರ ಇಲ್ಲ, ಒಡವಿ ಇಲ್ಲ. ಮದುವ್ಯಾಗ ಇಡಿಸಿದ ಪಾಟ್ಲಿಗೋಟು ಸಹಿತ ಮಾರಿಬಂದಿರಿ—ನನ್ನ ಬಾಣಂತನದಾಗ. ನಿಮ್ಮ ಕೈಯಿಂದ ಒಂದು ಗುಂಜಿತೂಕ ಬಂಗಾರ ಕಂಡಿದ್ದರ ನನ್ನ ಆಣಿ. ಈಗ ಹುಡುಗನ ಮದುವೀ ಮಾಡಂದ್ರ ನಾ ಏನು ಅಂಥಾ ಅನ್ನೇವು ಮಾಡಿದ ಹಂಗ ಆತು?' ಗೋದವ್ವನ ಅಳುವು ಹಳ್ಳಬಂದಂತೆ ಬಂದಿತು. ಹಳ್ಳದಂತೆ ಬೇಗ ನಿಂತಿತು ಕೂಡ, 'ನಿನ್ನಂತೆ ಆಗಲಿ, ಆತಿಲ್ಲೊ. ಹುಡಿಗಿನ್ನ ನೀ ನೋಡಿ ಹೇಳು. ನಾ ಮದುವೀ ಮಾಡತೀನಿ' ಎಂದು ಕೇವಲ ಸಮಾಧಾನಕ್ಕಾಗಿ ಬಂಡೇರಾಯರು ಉತ್ತರಕೊಟ್ಟರು. ಗೋದವ್ವನು ಗದ್ದಳು. ಗುಡಿ ಗುಂಡಾರಕ್ಕೆ ಹೋದಾಗ ಹುಡಿಗೆಯ ಹುಡುಕಾಟವು ನಡೆಯಿತು. ಜಗಣ್ಣನೊಂದು ವರವೆಂದು ಗೆಲುವೂರು ತುಂಬೆಲ್ಲ ಸುದ್ದಿ. ಜಗಣ್ಣನಿಗೆ ಮಾತ್ರ ಮದುವೆಯಾದಮೇಲೆ ಗೊತ್ತಾಗುತ್ತಿತ್ತೋ ಏನೊ!

ಗೋದವ್ವನು ಜಯರಾಯನ ತಾಯಿಯ ಮುಂದೆ ಎಲ್ಲ ಸುದ್ದಿಯನ್ನಾಡಿ ಬಂದದ್ದು ಅವನಿಗೂ ಮುಟ್ಟಿತ್ತು. ಅವನ ಕೇಳಿಕೆಯಲ್ಲಿ ಎಷ್ಟೋ ಹುಡುಗ–ಹುಡಿಗೆಯರಿದ್ದರು. ಪಗಾರ ಇಲ್ಲದ ಏಜನ್ಸಿ ಕೆಲಸವನ್ನು ಮಾಡುತ್ತಿದ್ದ ಅವನು. ಉದ್ಯೋಗವಿಲ್ಲದೆ ಕುಳಿತಾಗ ಉಪಕಾರದ ಕೆಲಸವನ್ನು ಕೈಲಾದಷ್ಟು ಮಾಡಬೇಕೆಂದು ಅವನ ಸಂಘದ ಧ್ಯೇಯವೊಂದು. ಮನಸ್ಸಿನಲ್ಲಿ ಹೊಸದೊಂದು ಬ್ರಹ್ಮಗಂಟು ಹಾಕಿಕೊಂಡು ಒಂದುದಿನ ಜಗಣ್ಣನ ಮನೆಗೆ ಹೋದನು. 'ಏನು ಜಗರಾಯರು ನಮ್ಮನ್ನು ಯಾಕೆ ಮಾತಾಡಿಸತಾರೆ ಈಗ? ಸುಶಿಕ್ಷಿತರು ಆದರು. ಆಲ್ಲೇನರಿ ಗೋದೂಬಾಯರ' ಎನ್ನುತ್ತ ಮನೆಹೊಕ್ಕನು. 'ಏನು ನುಡತೀ ಹೋಗಪಾ ಸುಶಿಕ್ಷಿತಗಿರಿಯನ್ನು! ಈ ಸಾರೆ ಪರೀಕ್ಷಾ ಹಳಸಿಟ್ಟದ'

ಎಂದು ಜಗಣ್ಣನು ಖಿನ್ನನಂತೆ ಆಡಿದನು. 'ಹುಚ್ಚಾ, ಹಳೇ ಹುಚ್ಚಾ! ಊರಿಗೆ ಬಂದವ್ಯಾಲೆ ಪರೀಕ್ಷಾದ ಸುದ್ದಿ ತೆಗೀಬಾರದು ನೋಡು. ಆದ್ದು ಆತು. ಪಾಸಾದರ ಫೇಡೇ, ಇಲ್ಲದಿದ್ದರ ಮತ್ತ ಹೂ ಎಂದು ಚಕ್ಕಡೀ ಹೊಡೀಬೇಕು. ನಮ್ಮ ಬ್ರಿಜ್ ಆಟ ಒಮ್ಮೆ ನೋಡಿ ಆದರೂ ನೋಡು. ನೋತವರೂ ಗೆದ್ದವರ ಹಂಗs ತೊಡಿ ಚಪ್ಪರಿಸತಿರಬೇಕು.'

ಗೋದವ್ವನು ಈಗ ಅಡಿಗೆ ಮನೆಯಿಂದ ಪಡಸಾಲೆಗೆ ಬಂದಳು. ಮಾತನಾಡಿದಳು. 'ಜಯರಾಯಾ, ನೀ ಅನಾಯಾಸ ಬಂದಿ. ಇದೆಲ್ಲ ಪರೀಕ್ಷಾ ಅಲ್ಲ ಗಿರೀಕ್ಷಾ ಅಲ್ಲ. ನಮ್ಮ ಜಗಣ್ಣನ ಮದಿವೀ ಮಾಡೋದು ನಿನ್ನ s ಕೂಡೇದ ನೋಡು.'

ಜಗಣ್ಣನಿಗೆ ಹೊಸ ಧಕ್ಕೆ ತಟ್ಟಿತು. ಗೋದವ್ವನ ಈ ದಿವ್ಯಾಸ್ತ್ರಕ್ಕೆ ಬೇಗನೆ ಉತ್ತರ ಕೊಡಲು ಅವನಿಗೆ ಬರಲಿಲ್ಲ. 'ಆಗಿ ಹೋತು, ನನ ಗೊಂದು ಹತ್ತೇದ. ನೀವೊಂದು ನಡಸರಿ' ಎಂದಿಷ್ಟೇ ಆಡಿದನು. ಜಯರಾಯನು ತನ್ನ ಮಾತಿನ ಸಂದರ್ಭವು ಒದಗಿತೆಂದು 'ಹೌದು ಗೋದೂಬಾಯರೇ, ಅದೇ ಮಾತು ಆಡಲಿಕ್ಕೆ ಬಂದೀನಿ. ಬಂಡೇರಾಯರು ಎಲ್ಲಿದ್ದಾರೆ?' ಎನ್ನುತ್ತಿರಲು ಹಿತ್ತಲದಲ್ಲಿ ಊಟದೆಲೆಯ ಮಾಲೆಮಾಡುತ್ತಿದ್ದ ಬಂಡೇರಾಯರೂ ಅಲ್ಲಿಗೆ ಬಂದರು. ಜಯರಾಯನು ಆರಂಭಿಸಿದನು.

'ನನ್ನ ಹೆಂಡತಿಯ ಊರ ಹೆಣ್ಣು ಒಂದದೆ. ಕುಲಕರ್ಣಿಯ ಮಗಳು. ಹುಡುಗಿ ದಷ್ಟಪುಷ್ಟ ಅದೆ. ಕೆಲಸಬೊಗಸೆಗೆ ಹವಣಿ ಇದ್ದಾಳೆ. ಗೋದೂಬಾಯರೇ. ನೋಡಲಿಕ್ಕೆ ಸಾದಗಪ್ಪು, ಆದರೂ ಕಣ್ಣು ಮೂಗು ನೆಟ್ಟಗವೆ.'

ಈ ಮೊದಲಾದ ವರ್ಣನೆ ನಡೆಯಿತು. ಜಗಣ್ಣನಿಗೆ ತಡೆಯಲಿಲ್ಲ. 'ಸಾಕು ಮಾಡೋ ಜಯಾ' ಎಂದು ಅಬ್ಬರಿಸಿದನು, ಬೇಡಿಕೊಂಡನು. ಕನ್ಯಾಪುರಾಣವು ನಿಂದಿರಲಿಲ್ಲ. ಪ್ರಶ್ನೋತ್ತರಗಳು ನಡೆದವು. ಆ ವಿಷಯದ ಪ್ರತಿಯೊಂದು ನುಡಿಯು ಜಗಣ್ಣನಿಗೆ ಎದೆಯಲ್ಲಿ ಹಾರಿ ಹೊಡೆದಂತೆ ಅಳುಕಿಸಹತ್ತಿತು. ತಾನೇ ಎದ್ದು ಹೋಗುವದು ಒಳಿತೆಂದು 'ಅನಂತ ಬಂದಾನೇನು ನೋಡಿ ಬರತೀನಿ' ಎಂದು ಹೊರಟುಹೋದನು. ಅದರಿಂದ ಇನ್ನಿಷ್ಟು ಅರಾಮೆನಿಸಿ ಜಯರಾಯನು ಮದುವೆಯನ್ನು ಗೊತ್ತುಮಾಡಿ ಬಿಡಲಿಕ್ಕೇ ನಿಂತನು.

ಜೋಯಿಸರಿಗೆ ಪತ್ರಿಕೆ ತೋರಿಸಿ ಗುಣಗಳು ಕೂಡುತ್ತವೆಂದು ತಿಳಿದುಕೊಂಡದ್ದಾಯ್ತು. ಹುಡುಗಿಯನ್ನು ನಾಳೇ ಕರೆಸುವೆನೆಂದು ಜಯರಾಯನು ವಚನವಿತ್ತನು. ಸೊಸೆಯು ಬರುವಳೆಂಬ ಹುಚ್ಚು ಹಿಗ್ಗು ಗೋದವ್ವನನ್ನು ಮನಸ್ಸಿನಲ್ಲಿ ಕುಲುಕುಲು ನಗಿಸಿತು. ಆದರೆ ಬಂಡೇರಾಯರು ಜಯರಾಯನನ್ನು ಬೇರೆಡೆಗೆ ಕರೆದುಕೊಂಡು ಹೋಗಿ ತಮ್ಮ ಭಯವನ್ನು ಹೇಳಿದರು.

'ಜಯರಾಯಾ, ನೀನಾದರೋ ಮದುವೆಯನ್ನು ಗೊತ್ತು ಮಾಡ ಲಿಕ್ಕೆ ಕೂತಿ. ದುಡ್ಡಿಲ್ಲದ ನಾ ಏನು ತಲೀ ಮದುವಿಮಾಡತೀನಿ? ಆಕಿಗೆ ಏನಾದರೊಂದು ಹೇಳಿ ತಪ್ಪಿಸಿ ಬಿಡಪ್ಪಾ.'

" ಛೇ, ನೀವಿದರ ಕಾಳಜೀ ಮಾಡಬೇಡಿರಿ, ಬಂಡೇರಾವ. ನಿಮ್ಮ ಮದುವಿಯ ಖರ್ಚು, ದಾಗೀನಿ, ಎಲ್ಲಾದಕ್ಕೂ ಬರೂಹಂಗ ನಾ ವರದಕ್ಷಿಣಿ ಕೊಡತೀನಿ. ಮ್ಯಾಲೆ ಜಗಣ್ಣನಿಗೆ ಕಾಲೇಜ ಖರ್ಚಿಗೆ ಸಹಿತ ಉಳಿಸಬಹುದು."

ಇನ್ನು ಬಂಡೇರಾಯರಿಗೆ ಬೇಡೆನ್ನಲಿಕ್ಕೆ ಬಾಯಿ ಉಳಿಯಲಿಲ್ಲ.

ಅನಂತನು ಪರೀಕ್ಷೆಯುತ್ಕೃಷ್ಟವಾಯಿತೆನ್ನುತ್ತ ತಿರುಗಿ ಊರು ಸೇರಿದನು. ಅದನ್ನು ಕೇಳಿ 'ನಂದು ನಾಪಾಸಾದರೂ ಅಡ್ಡಿಯಿಲ್ಲ' ಎಂದು ಜಗಣ್ಣನು ಉತ್ಸಾಹಿತನಾಗಿ ಅನಂತನ ಕೂಡ ಬಾಯಿತುಂಬ ಮಾತಾಡಿದನು. ತನ್ನ ಮದುವೆಯ ಪ್ರಕರಣವು ಅಷ್ಟು ದೀರ್ಘಕ್ಕೆ ಹೋಗಲಿಕ್ಕಿಲ್ಲೆಂದು ಅವನ ನಂಬಿಗೆಯಿತ್ತು. ಆದರೆ ಮರುದಿನವೇ ಜಯರಾಯನು ಕನ್ಯೆಯನ್ನು-ಆಳು ಹಚ್ಚಿಕೊಟ್ಟು – ಕರೆಯಿಸಿ ಬಂಡೇ ರಾಯರಿಗೆ ತಿಳಿಸಿದನು. ಅವರು ಜಗಣ್ಣನಿಗೆ ಪೂರ್ವ ಸೂಚನೆ ಕೊಟ್ಟರು. ಅವನ ತಲೆ ತಿರುಗಿತು. 'ಏನು ಹುಡುಗಾಟಿಕೆ ನಡಿಸೀರಿ ಇದು ಅಪ್ಪ! ಹೊಟ್ಟೆಗೆ ದುಡಿಯುವ ಯೋಗ್ಯತೆ ಇಲ್ಲದ ನನಗೆ ಮದುವೆ ಮಾಡಿ ಏನು ಮಾಡಬೇಕಂತೀರಿ? ಹೆಂಡತಿಯೇನು ಗಳಿಸಲಿಕ್ಕೆ ಬರತಾಳೇ? ಹೀಗೆ ಮಾಡಿದರೆ ನಾನು ಎಲ್ಲಿಯಾದರೂ ಓಡಿ ಹೋಗತೇನಿ' ಎಂದು ಮುಂತಾಗಿ ಒದರಾಡಿದನು. 'ಅವ ಹಂಗ ಅಂತೀರತಾನ' ಎಂದು ಗೋದವ್ವನು ಅದಕ್ಕೆ ಸೊಪ್ಪು ಹಾಕಲಿಲ್ಲ. ಬಂಡೇರಾಯರು ವರದಕ್ಷಿಣೆಯ ಬಲಿಜೇನಿ ಮದುವೆಯಮಾತಿಗೆ ಕಟ್ಟಿಹಾಕ

ಬೇಕೆಂದರು. ಜಗನ್ನಾಸು 'ಬೇಕಾದ್ದು ಮಾಡಿಕೊಳ್ಳಿರಿ' ಎಂದು ಅನಂತ ಸಲ್ಲಿ ಹೋಗಿ ತನ್ನ ಗೋಳನ್ನು ತೋಡಿಕೊಂಡು ಕಂಬನಿಗರೆದನು.

ಹುಡಿಗೆ ಬಂದಮೇಲೆ ಕೂಡ ಎರಡುಮೂರುದಿನ ಹಾಗೇ ಸಾಗಿದವು. ಅನಂತನು ಬಂಡೇರಾಯ, ಜಯರಾಯರನ್ನು ಕಂಡು, ಜಗನ್ನಾನಿಗೆ ಈಗ ಮದುವೆಯ ಗುದ್ದಿಯನ್ನು ಬಿಗಿಯಬೇಡಿರೆಂದು ಅಲ್ಪರಿದು ಹೇಳಿದನು. 'ಹುಡುಗಿಯನ್ನು ನೋಡಲಿ, ಅದಕ್ಕೇನು ಬಂದದೆ?' ಎಂದು ಜಯರಾಯನು ಅದನ್ನಿಷ್ಟು ಮುಗಿಸಿ, ಮುಂದೆ ಮುಹೂರ್ತ ತೆಗಿಸಿ ಮದುವೆ ಹೂಡಿಯೇ ಬಿಟ್ಟನು. ಜಗನ್ನಾನ ತಲೆ ಕೆಟ್ಟಿತು. ಪರೀಕ್ಷೆಯ ಪರಿಣಾಮವು ಬೇರೆ ಸಮೀಪದಲ್ಲಿ. 'ಎಲ್ಲಿಯಾದರೂ ಹೋದರೇನು ಮಾಡುತ್ತಾರೆ?' ಎಂಬ ಹುಚ್ಚು ಹಂಚಿಕೆ ಎಳೆಯಿತು. ಆದರೆ ಅನಂತನು ಹಾಗೆ ಮಾಡಗೊಡಲಿಲ್ಲ. 'ಗೊತ್ತಾದ ಮದುವೆಯೆಂದರೆ, ಜಗನ್ನಾ, ಯಮಪಾಶವಿದ್ದಂತೆ. ಅದಕ್ಕೆ ಯಾಕೆ? ಏನು? ಎಂಬ ಪ್ರಶ್ನೆಯಿಲ್ಲ. ಹೊತ್ತುವೇಳೆಯಿಲ್ಲ, ಹೇಳುಕೇಳುವದಿಲ್ಲ. ಹೂ ಎಂದು ಕಣ್ಣು ಮುಚ್ಚುವದೊಂದೇ ಹಾದಿ' ಎಂದು ಹೇಳಿದನು.

ಇತ್ತ ಗೋದವ್ವನೂ ಮದುಕಿಯ ಸೋಗು ತಾಳಿ 'ಸೊಸೆಯೊಬ್ಬಾಕಿ ಕೈಗೆ ಬರದಿದ್ದರೆ ನನ್ನ ಕಡಿಂದ ಒಂದು ಕಸದಕಡ್ಡಿ ಕಿತ್ತಿ ಇಡಲಿಕ್ಕೆ ಬರುವದಿಲ್ಲ. ಜಗನ್ನಾ, ನನ್ನ ಮಾತುಕೇಳು! ಮದುವಿ ಮಾಡಿಕೋ' ಎಂದು ಹಟತೊಟ್ಟಳು. ಅವನು ಒಲ್ಲೆಂದಾಗ ಗಾಬರಿಮಾಡುವ ಉತ್ತರವನ್ನೇ ಕೊಡತೊಡಗಿದಳು. ಇಷ್ಟರಲ್ಲಿ ರಿಝುಲ್ಟು ಹೊರಬಿದ್ದು ಜಗನ್ನಾನು ಪಾಸೆಂದು ತಿಳಿಯಿತು. ಅವನಿಗೂ ಅನಂತನಿಗೂ ಎದೆ ಹಗುರಾಯ್ತು. ಇಂಥ ಸಮಯಕ್ಕೆ ಜಯರಾಯನು ಇಬ್ಬರನ್ನೂ ಕೂಡಿಸಿಕೊಂಡು 'ಇಲ್ಲಿ ಕೇಳಿರಿ, ಐನೂರು ವರದಕ್ಷಿಣೆ ಗೊತ್ತು ಮಾಡೀನಿ. ಮದುವಿಗೆ ಇನ್ನೂರು, ಬಹಳಾದರೆ ಮುನ್ನೂರು ಖರ್ಚು ಆಗತದೆ. ಉಳಿದದ್ದು ಇನ್ನು ಮೇಲೆ ಜಗನ್ನಾನಿಗೆ ಕಾಲೇಜ ಫೀ ಆಗಿ ಕಲಿಯಲಿಕ್ಕೆ ಸುಸೂತ್ರ ಆಗೋದಿಲ್ಲ ಏನು?' ಇತ್ಯಾದಿಯಾಗಿ ಮನವೊಲಿಸಿದನು. ಈ ಸಾರೆ ಇಂಟರದಲ್ಲಿ ಕಟಾಸಕಟಿಯಾಗಿ ಪಾಸಾಗಿದ್ದರಿಂದ ಬಿಎದಲ್ಲಿ ಮಾಫಿಯು ದೊರೆಯಲಾರದೆಂಬ ಅಂಜಿಕೆ ಅನಂತನಿಗೆ ತೋಚಿತು. ಅದನ್ನೆಲ್ಲ ಜಗನ್ನಾನಿಗೆ ತಿಳಿಸಿ

ಹೇಳಿ ಹಾಗೂಹೀಗೂ ಒಪ್ಪಿಗೆ ಪಡೆದನು. ಮದುವೆ ಎಲ್ಲ ಬಡವರ ಮದುವೆಗಳಂತೆ ಆಯ್ತು. ಜಯರಾಯನ ತಂಡದ ಓಡಾಟದಿಂದ ಅದಕ್ಕೆ ಸ್ವಲ್ಪ ಸಿರಿವಂತಿಕೆಯು ಕಳೆ ಬಂತು. ಅದರೊಡನೆ ಹಾಳು ಕಳೆಯೂ ಬಂತು. ಉಳಿಸಬೇಕೆಂದ ಒಂದು ಪೈಯೂ ಉಳಿಯಲಿಲ್ಲ, ಜಗಣ್ಣನಿಗೆ ಉಳಿದದ್ದೊಂದೇ: ಕರಿಮಣಿ ಕಟ್ಟಿದ ಕರಿಯ ಹೆಣ್ಣು!

ತನಗೆ ಬೇಕಾಗದೆ ಮದುವೆಯಾದದ್ದನ್ನು ನೋಡಿ, ತಾನು ಮುಳ್ಳು ಹಾಸಿಗೆಯ ಮೇಲೆ ಮಲಗಲಿಕ್ಕೇ ಹುಟ್ಟಿ ಬಂದಿರುವೆನೆಂದು ಜಗಣ್ಣನಿಗೆ ಮನದಟ್ಟಾಯಿತು. 'ಇದರಲ್ಲಿ ಪರೀಕ್ಷೆಯೊಂದು ಪಾಸಾಗಿದ್ದರೆ ನನಗೆ ಹುಚ್ಚೇ ಹಿಡಿಯುತ್ತಿತ್ತೋ ಏನೋ! ಅಂತೇ ದೈವವು ಅಷ್ಟು ಕೃಪೆ ಮಾಡಿತೆನ್ನಬೇಕು ನನ್ನ ಮೇಲೆ. ಇನ್ನೇನಿದೆ ಮುಗಿಯಿತು– ಕಾಲೇಜದ ಅವತಾರವು' ಈ ತರದಲ್ಲಿ ಯೋಚಿಸಿ ಅನಂತನಿಗೆ ತನ್ನ ಹೊಸ ನಿರ್ಣಯವನ್ನು ಅರುಹಬೇಕೆಂದು ಹೋಗುವಲ್ಲಿ ಅವನ ಫಲಿತಾರ್ಥವು ಅಂದು ಹೊರಬೀಳುವದಿತ್ತು. ಆ ನಿರೀಕ್ಷೆಯಲ್ಲಿ ಕುಳಿತ ಅನಂತನು ಬೇರೆ ಮಾತು ಆಡುವ ಮನಸ್ಸಿನ ಸ್ಥಿತಿಯಲ್ಲಿ ಇರಲಿಲ್ಲ. ಇಬ್ಬರೂ ತಾರಿನ ಹಾದಿಯನ್ನು ನೋಡುತ್ತ ಹುರುಪು ಗಾಬರಿಗಳ ನಡುವೆ ತೂಗಾಡುತ್ತ ಕುಳಿತರು.

ತಾರು ಬಂದಿತು, ಕೈ ನಡುಗಿಸುತ್ತ ಅನಂತ ಒಡೆದನು, ಸೆಕಂಡ ಕ್ಲಾಸ್ ಪಾಸ ಎಂದಿತ್ತು. ಹಾರೈಸಿದ ಫಸ್ಟ್ ಕ್ಲಾಸು ಹಾರಿ ಹೋಯಿತು. ಅನಂತನು ನ್ಯೈತಣ್ಣಗಾಗಿ ಹೌಹಾರಿ ತನ್ನ ಕೋಣೆ ಹೊಕ್ಕು ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡನು. ಜಗಣ್ಣನು ಹಿಂಬಾಲಿಸಿ ಬಂದು ಬಾಗಿಲ ಹಾಕಿ ಅನಂತನ ಕಾಲ್ಬಸೆಗೆ ಕುಳಿತನು. ಕೆಲಹೊತ್ತು ಇಬ್ಬರೂ ಸ್ತಬ್ಧರಾದರು. ಜಗಣ್ಣನು ಮೆಲ್ಲಗೆ ಹೆದರುತ್ತ ಹೇಳಿದನು 'ಅನಂತ' ಬಹಳ ಹಚ್ಚಿಕೊಳ್ಳಬೇಡ. ತಿಳಿದವನಿಗೆ ನಿನಗೆ ಹೇಳುವದಿದೆಯೆ?' ಅನಂತನು ದೊಡ್ಡ ಬಿಸಿಯುಸಿರು ಬಿಟ್ಟು 'ಹೋತು, ಕೈಬಿಟ್ಟು ಹೋತು. ಜಗಣ್ಣಾ, ಗಾಳಿಯಲ್ಲಿ ಗೋಪುರಗಳನ್ನು ಕಟ್ಟಬಾರದು, ಕಟ್ಟಿದರೂ ನಮ್ಮ ಪ್ರಾಣವನ್ನು ಅದರಲ್ಲಿ ಇಟ್ಟು ಪೂಜಿಸಬಾರದು.' ಎಂದು ಬಡಬಡಿಸುತ್ತಿರಲು ಕಣ್ಣಾಲಿಯು ಒಂದೆರಡು ಹನಿಗಳಿಂದ ಮಾತು ನಿಂತಿತು. ಇದರ ಸೋಂಕು ಜಗಣ್ಣನಿಗೆ ತಾಗದೆ ಇರಲಿಲ್ಲ. ಇಬ್ಬರೂ ಮಳೆ ಹೊಡೆದು ಕುಗ್ಗಿದ

ಬೆಳೆಯುಂತೆ ಗಪ್ಪುಗಾರಾದರು. ಇದೆಲ್ಲ ಪ್ರಕಾರವನ್ನು ಹೊರಗಿನಿಂದ ನೋಡಿದ ಕಾಸೀಮನು ಕುಬೇರರಾಯರ ಹತ್ತಿರ ಹೋಗಿ 'ಅನಂತಪ್ಪನವರದು ನಪಾಸು ಆತೋ ಏನ್ರಿ. ತಾರು ಬಂತು. ಮಾರೀ ಸಣ್ಣ ಮಾಡ್ಯಾರ' ಎಂದು ಸುದ್ದಿಬೀರಿದನು. ರಾಯರು ವ್ಯಾಕುಲರಾಗಿ ಅನಂತನಿದ್ದಲ್ಲಿ ಹೋಗಿ ಮಾತಾಡಿಸಿದರು ಅವನ ಸಣ್ಣಮೋರೆಯ ರಹಸ್ಯವು ತಿಳಿಯಿತು. 'ಹೋಗಲಿ ಬಿಡು, ಅದಕ್ಕೇಕೆ ಅಷ್ಟು ಗೋಳಾಡುತ್ತೀ? ಎಂ. ಎ. ಒಂದು ಅದ್ವಲಿಲ್ಲ' ಎಂದು ಸಂತಪಿಟ್ಟರು. ಆದರೂ ನಪಾಸಿಗಿಂತ ಹಿರಿದಾದ ಪರಾಭವವು ಬಂದಂತಾಗಿ ಅನಂತನು ಸೋತ ಕಲಿಯಂತೆ ಇದ್ದನು.

ನಾಕೈದು ದಿನಗಳು ಹೋದವು. 'ಆತಿನ್ನು ಇಬ್ಬರದೂ ಕಲಿಕೆ ತೀರಿತು. ಜಗಣ್ಣನ ಕೂಡ ದುಡಿದು ಗೆಳೆತನದ ಕಾವನ್ನು ತೋರಿಸೆಂದೇ ವಿಧಿಯು ಇದನ್ನೊಡ್ಡಿರಬೇಕು. ನೋಡೋಣ. ಈಗ ನಾ ಮನುಷ್ಯನಾದೆ' ಎಂದು ಮುಂತಾಗಿ ಹೊಸಹಾದಿಯಿಂದ ಅನಂತನು ವಿಚಾರ ನಡಿಸಿರಲು, ಧಾರವಾಡದಿಂದ ಪತ್ರ ಒಂದಿತು. 'ನಿನ್ನ ಫರ್ಸ್ಟ್ ಕ್ಲಾಸು ಹತ್ತೇ ಮಾರ್ಕ್ಸ್‌ಗಳಲ್ಲಿ ಹೋಗಿದೆ. ಕಾಲೇಜಕ್ಕೆ ನೀನೇ ಮೊದಲನೇ ನಂಬರು ಇರುವಿ' ಎಂದು. ಇದರಿಂದ ಫೆಲೋಶಿಪ್ಪಿನ ಖಾತ್ರಿ ಆಯಿತು. ಮತ್ತೆ ಆಸೆಯು ಹಸಿರು ಕೊರಡಿನಲ್ಲಿ ಕೊನರಿತು. ಧಾರವಾಡಕ್ಕೆ ಹೋಗಿ ಮುಂದೆ ಕಲಿಯಲೇ ಬೇಕೆಂದು ಎಲ್ಲರ ಒತ್ತಾಯವಾಯ್ತು. ಕಕ್ಕನು ಮಾತ್ರ ವಕೀಲಿಯಭ್ಯಾಸಕ್ಕೆ ಅವನನ್ನು ಕಳಿಸಬೇಕೆಂದು ಬಯಸಿದ್ದನು. ಆದರೆ 'ಎಂ. ಎ. ಆಗಲಿ' ಎಂದು ಅವನು ಆಗಲೇ ವಕೀಲಿಯ ಅಭ್ಯಾಸಕ್ಕಾಗಿ ಆಗ್ರಹಪಡಿಸಲಿಲ್ಲ.

ಅನಂತನು ಹೊರಡುವನೆಂಬದು ಗೊತ್ತಾಗಲು ಜಗಣ್ಣನು ತನ್ನ ಗೊತ್ತುವಳಿಯನ್ನು ತಿಳಿಸಲು ಹೋದನು. ಆದರೆ ಅನಂತನು ಮತ್ತೆ ತನ್ನ ಮೂಲ ಹಟದಿಂದ 'ಜಗಣ್ಣ, ನೀನೂ ಬರಲೇಬೇಕು ಕಾಲೇಜಿಗೆ. ಪಾಸಾಗಿ ಈಗ ಬಿಡುತ್ತಾರೇ?' ಎಂದು ಗಂಟು ಬಿದ್ದನು. ತೊಳಲಾಟ ಬೇಡವೆಂದು ಜಗಣ್ಣನು ಬೇಕಾದಷ್ಟು ಬೇಡಿಕೊಂಡನು. ಅನಂತನು

ಕೇಳಲಿಲ್ಲ. 'ನೀನು ಬರದಿದ್ದರೆ ನಾನೂ ಬಿಡಬೇಕು' ಎಂದನು ಇಬ್ಬರೂ ಕೊನೆಗೆ ಧಾರವಾಡಕ್ಕೆ ನಡೆದರು.

ಅನಂತನು 'ದಕ್ಷಿಣಾಫೆಲೋ' ಆಗಿ ತಿಂಗಳಿಗೆ ೩೦ ರೂಪಾಯಿಗಳ ಸಂಬಳಿಗನಾದನು. ಅವನಿಗೊಂದು ಪ್ರತ್ಯೇಕವಾದ ಕೋಣೆ ದೊರೆಯಿತು. ವಿದ್ಯಾರ್ಥಿಗಳ ವಸತಿಗೃಹದ ಮೇಲ್ವಿಚಾರಣೆಯು ಕೆಲಸವೂ ಬಿದ್ದಿತು. ಹೊಸಹೊಣೆಯಲ್ಲಿ ಹಿಂದಿನ ಅಳಲನ್ನು ನುಂಗಿಕೊಂಡನು. ಜಗಣ್ಣನಿಗೆ ತಾನು ಹೆಚ್ಚು ನೆರವಾಗಬಹುದೆಂಬ ವಿಚಾರವು ಮೈಯುಬ್ಬಿಸಿತು. ಅವನಿಗೆ ಇರುವ ಸ್ಥಳ, ಊಟ ಮೊದಲಾದ್ದರ ಏರ್ಪಾಡು ಮೊದಲಿಗಿಂತ ಲೇಸಾಗಿ ಆಯಿತು. ಫೀಯುಪ್ರಶ್ನೆಯು ಮತ್ತೆ ಎದ್ದಿತು. ಕಾಲೇಜಿನಿಂದ ಫ್ರೀಶಿಪ್ಪು ದೊರೆಯುವ ನೆಚ್ಚಿಗೆ ಅಡಗಿತ್ತು. ಮದುವೆಯಿಂದ ಕೊಡಿಸುವೆನೆಂದು ಗಟ್ಟಿಹೇಳಿದ ಜಯರಾಯನ ಗಂಟು ಸಿಗರೇಟು ಚುಟ್ಟಗಳಲ್ಲಿ ಸುಟ್ಟುಹೋಯ್ತು. 'ಯಾಕೆ ಜಯರಾಯರೇ, ಮುಂದೆ ಗತಿಯೇನು ಜಗಣ್ಣನದು?' ಎಂದು ಅನಂತನು ಮದುವೆ ತೀರಿದ ಮೇಲೆ ಕೇಳಿದ್ದನು. ಅದಕ್ಕೆ ಜಯರಾಯನ ಉತ್ತರವು ಸಿದ್ಧವೇ ಇತ್ತು. 'ಅದರ ಚಿಂತೆಯಾಕೆ ನಿಮಗೆ? ಸಾಲತೆಗಿಸಿ ಕೊಡತೀನಿ ನಾನು.' ಇದೆಲ್ಲ ಅಡ್ಡದಾರಿಯೆಂದು ಅದನ್ನಲ್ಲಿಗೇ ಬಿಟ್ಟಿದ್ದರು. ಮತ್ತೆ ವಿದ್ಯಾರ್ಥಿಗಳಿಗೆ ವಿನಂತಿಯೊಂದನ್ನು ಬರೆದು, ಜಗಣ್ಣನನ್ನು ಅನಂತನ್ನು ಓಡಾಡಿಸಿದನು.

ಒಂದು ಟರ್ಮು ದಾಟಿತು. ಇನ್ನೊಂದಕ್ಕೆ ಹಾಗೆ ಕೇಳುವದು ಸರಿತೋರಲಿಲ್ಲ. ಅರ್ಧ ತಾನು ಕೊಡಬೇಕೆಂದು ಮಾಡಿ, ಉಳಿದರ್ಧಕ್ಕೆ ಜಗಣ್ಣನನ್ನು ಊರಲ್ಲಿಯ ಕೆಲವು ಸದ್ಗೃಹಸ್ಥರ ಕಡೆಗೆ ಕಳಿಸಿದನು. ಒಬ್ಬಿಬ್ಬರು ಕೊಟ್ಟರು. ಕೆಲವರು 'ಆಗಬಾ ಈಗಬಾ' ಎಂದರು. ಹೆಚ್ಚು ಕೂಡಲಿಲ್ಲ. ಕೊನೆಗೆ ಒಬ್ಬರಲ್ಲಿ ಹೋಗಲು ದೊಡ್ಡ ಉಪನ್ಯಾಸಕ್ಕೆ ಆರಂಭವಾಯ್ತು. 'ನನಗೆ ತಲೆಚಿಟ್ಟು ಹಿಡಿದದೆ; ಈ ಫಂಡು, ದಾನ, ದೇಶಾವರಿ ಕೊಟ್ಟು. ಯಾರಿಗಂತ ಕೊಡಬೇಕು, ಯಾರಿಗೆ ಬಿಡಬೇಕು? ನಿಮಗೆ ಯಾಕೆ ಕೊಡಬೇಕರಪಾ? ಕಾಲೇಜದಲ್ಲಿ ಕಲಿತು ಏನು ನೀವು ಲೋಕೋದ್ಧಾರ ಮಾಡುವವರಿದ್ದೀರಿ? ನಾಕುವರ್ಷ ಚೈನೀಮಾಡಿ ಗೂಳಿಯಹಾಗೆ ಕೊಬ್ಬಲಿಕ್ಕೆ ನಿಮಗೆ ಕೊಡಬೇಕೇನು? ಹೀಗೆ ಬಾಣದ

ಮೇಲೆ ಬಾಣವನ್ನು ಎಸೆದರು. ಜಗಣ್ಣನು ಅಲ್ಲಿಂದ ಕಾಲ್ತೆಗೆದನು. ಹಿಂದಿನಂತೆ ಅಷ್ಟು ಅಪಾರಶೋಕವು ಆವರಿಸಿ ಬರಲಿಲ್ಲ. ಆ ಉಪನ್ಯಾಸದ ವಿಚಾರ ಮಾಡಿದನು. ಅವರ ಮಾತು ನಿಜವೆನಿಸಿತು. ತನ್ನ ಸ್ವಾರ್ಥದ ಸಲುವಾಗಿ ಈ ಭಿಕ್ಷೆಯನ್ನು ಯಾಕೆ ಬೇಡಬೇಕು? ತಾನು ಪ್ರೀತಿಸುವ ಜಗತ್ತು ಎಲ್ಲಿ ಹೋಯಿತು? ಎಂಬ ವಿಚಾರಗಳು ಬಂದವು. ದಿಙ್ಮೂಢನಾಗಿ ಕೋಣೆಗೆ ತಿರುಗಿದನು.

ಅಂದೇ ಸಂಜೆಗೆ ಭಾರತಕ್ಕೆ ಹೆಸರಾದ ತರುಣವೃಂದದ ಮುಂದಾಳೊಬ್ಬರು ಲೆಕ್ಚರುಕೊಡುವರೆಂದು ತಿಳಿಯಿತು. ಅನಂತ ಜಗಣ್ಣರು ಕೇಳಹೊರಟರು. ಹಾದಿಯಲ್ಲಿ ಟೆನಿಸ್ ವೇಷಧಾರಿ ಕಾಮಣ್ಣನುಬಂದನು. ಅವನಿಗಿನ್ನೂ ಜ್ಯೂನಿಯರದ ಜಂಬವು ಬಿಟ್ಟಿರಲಿಲ್ಲ, ಲೆಕ್ಚರಿಗೆಕರೆದರು. ಆಡಲಿಕ್ಕೆ ಹೋಗಬೇಕು, ಸಾರಿ '(Sorry)' ಎಂದು ರ್ಯಾಕೆಟ್ ಬೀಸುತ್ತ ಓಡಿದನು. 'ಆಯಿತು ಸೀನಿಯರಕ್ಕೆ ಬಂದರೂ ಕಾಮಣ್ಣನ ಜ್ಯೂನಿಯರ್ ಮೂರುನಾಲ್ಕು ವರ್ಷ ಕಾಣತದೆ' ಎನ್ನುತ್ತ ತಾವು ಹೋದರು. ಲೆಕ್ಚರು ಊರಹಾದಿಯಲ್ಲಿಯ ಮಗ್ಗುಲಿಗಿದ್ದ ಬಯಲಲ್ಲಿ ಇತ್ತು. ಟೊಪ್ಪಿಗೆಗಳ ಸಂತೆಯೇ ನೆರೆದಿತ್ತು. ಅಂಥ ಆ ಕಿಕ್ಕಿರಿದ ಸಭೆಯಲ್ಲಿ ಆ ವ್ಯಾಖ್ಯಾತರು ಗುಡುಗುಹಾಕಿದಂತೆ ಎರಡುತಾಸು ಮಾತಾಡಿದರು. ತರುಣರಲ್ಲಿ ಅಲ್ಲೋಲಕಲ್ಲೋಲವಾಯಿತು. ಅವರ ಮಾತು ಕಿವಿತುಂಬಿ ತಲೆತಿರುಗಿಸಿದವು.

"ತರುಣರೆಂದು ಕರೆಯುವ ನಿಮ್ಮ ಹೆಸರನ್ನು ಬದಲಿಸಿ ನಿಮಗೆ ಮುದುಕರೆಂದು ಯಾಕೆ ಕರೆಯಬಾರದು? ನರೆಗೂದಲು ಬಚ್ಚಬಾಯನ್ನು ಬಿಟ್ಟರೆ ನಿಮ್ಮಲ್ಲಿ ಮುದುಕರ ಲಕ್ಷಣಗಳು ಏನಿಲ್ಲ? ಹುರುಪುಗೇಡಿಗಳಾದ ಅಳದಕ್ಕಿಗಳೇ, ನಿಮ್ಮ ನಿರುದ್ಯೋಗ, ನಿಮ್ಮ ಡಿಗ್ರಿ, ನಿಮ್ಮ ಸುಖಸಾಧನ, ನಿಮ್ಮ ಪ್ರಿಯತಮೆ ಇವುಗಳ ವಿಚಾರದಲ್ಲಿಯೇ ತಿರುಗುವ ನಿಮಗೆ ಹೊರಗಿನ್ನ ಜಗತ್ತಿನ ಕಲ್ಪನೆ ಇದೆಯೆ? ಕೂಳಿಲ್ಲದೆ ಸಾಯುವ, ಅರಿವೆಯಿಲ್ಲದೆ ನಡುಗುವ ಹಿಂದುಸ್ಥಾನದ ಲಕ್ಷೋಪಲಕ್ಷ ಜನಕ್ಕಾಗಿ ಎಂದಾದರೂ ನಿಮ್ಮ ಅಂತಃಕರಣವು ಕರಗಿರುವದೇ? ನಿಮ್ಮ ಹೊಟ್ಟೆಯ ಪ್ರಶ್ನೆಯು

ದಿಗ್ಗಿಂದು ಇದಿರು ನಿಂತಾಗ ನಿಮ್ಮ ಅಣ್ಣತಮ್ಮಂದಿರ ಬಗ್ಗೆಯೂ ಸ್ವಲ್ಪಾದರೂ ಎಂದಾದರೂ ಯೋಚಿಸಿದ್ದೀರಾ? ಹೇಗೆ ಬಿ ಏ ಆಗಿ, ಎಲ್ಲಿ ಕೆಲಸ ನೋಡಿ, ತಣ್ಣಗೆ ಸುಂದರಪತ್ನಿಯೊಬ್ಬಳೊಡನೆ ಇದ್ದುಬಿಡಬೇಕೆಂದು ನಿಮ್ಮಲ್ಲಿ ಎಷ್ಟು ತರುಣರು ಕನಸುಮನೆ ಕಟ್ಟಿಲ್ಲ? ನಿಮ್ಮ ಶಿಕ್ಷಣವು ಸಾರ್ಥಕವಾಗಬೇಕಾದರೆ, ನಿಮ್ಮ ದೊಡ್ಡದೊಡ್ಡ ಮಾತು ಬೆಲೆಗೇಡಿ ಆಗದೆ ಬಾಳಬೇಕಾಗಿದ್ದರೆ, ನಿಮ್ಮ ಹೊಟ್ಟೆಯ ಪ್ರಶ್ನೆಯನ್ನು ರಾಷ್ಟ್ರದ ಹೊಟ್ಟೆಯ ಸಮಸ್ಯೆಯೊಡನೆ ಬೆರಿಸಿ ವಿಚಾರಿಸತೊಡಗಿರಿ. ಕಲಿಯುವದು, ಚಾಕರಿಯ ತಿರುಪ ಬೇಡುತ್ತ ತಿರುಗುವದು ಇದೊಂದೇ ಒಂದಾದ ದನಕರದ ದಾರಿಯನ್ನು ಬಿಟ್ಟುಕೊಡಿರಿ. ವಿಚಾರಿಗೆ ಧೈರ್ಯಶಾಲಿಗೆ ನೂರು ದಾರಿಗಳು ದೊರೆಯುತ್ತವೆ.''

ಲೆಕ್ಚರದ ಪರಿಣಾಮವು ಅನಂತ ಜಗನ್ನಾರ ಮೇಲೆ ಅತ್ಯದ್ಭುತವಾಯಿತು.'ಎಂಥಾ ಭಾಷಣವದು!' ಎಂದು ಉಳಿದ ಹುಡುಗರು ವ್ಯಾಖ್ಯಾತರ ಗುಣವರ್ಣನೆ ಮಾಡಿ, ಅದನ್ನಲ್ಲಿಯೇ ಮರೆತು ಹೋದರು. ಇವರ ವಿಚಾರವಾಹಿನಿಗೆ ಅಂದಿನಿಂದ ಬೇರೆ ಒತ್ತು ಬಂದಿತು.

ರಾತ್ರಿಯೂಟ ತೀರಿಸಿ ಮಲಗಲಿಕ್ಕೆ ಹೋಗುವಾಗ, ಇಬ್ಬರೂ ಎಷ್ಟೋ ಮಾತಾಡುತ್ತ ಬಯಲಲ್ಲಿ ನಿಂತಿದ್ದರು.

'ಅನಂತಾ, ಎಷ್ಟೆಂದರೂ ಸ್ವಾರ್ಥವು ಸುವಿಚಾರಿಯನ್ನೂ ಕಟ್ಟಿಹಾಕುವದಿಲ್ಲವೆ?'

'ಹೌದು, ಆದರೆ ಆ ಕಟ್ಟು ವಿಾರುವ, ಅದನ್ನು ಮುರಿದೊಗೆದು ರೆಕ್ಕೆಪಡೆದು ಹಾರುವ ಬಲವು ಇನ್ನೂ ನಮ್ಮಲ್ಲಿ ಬರಬೇಕು. ಆ ಕಾಲವೆಂದೊ!'

# ೧೨ನೆಯ ಕಿಡಿ

ಕುಬೇರರಾಯರ ಹತ್ತು ವರ್ಷದ ಗಳಿಕೆಯು ಇತ್ತೆಂದೇ ಕಾಂತಾ ಸಾನಿಯ ಮಾರುಗೈಯೂ ಎಲ್ಲವನ್ನೂ ದೋಚಲಿಲ್ಲ. ಆದರೆ ಈ ನಾಲ್ಕೈದು ವರುಷಗಳಲ್ಲಿ ಆಗುವ ಸುಲಿಗೆ ಆಗಿತ್ತು. ಬಕ್ಷೀಸಿನ ದೊಡ್ಡ ದೊಡ್ಡ ರಕಮು, ಅದಿಲ್ಲದಾಗ ಶಾಂತಾಬಾಯಿಯ ಮೈಮೇಲಿನ ಒಡವೆ, ತನ್ನ ಸ್ವಂತದ ಉಂಗುರ ಇವೆಲ್ಲ ಸಾನಿಯು ಹೊತ್ತಿಸಿದ ಕಾಮದ ಕಿಚ್ಚಿಗೆ ಆಹುತಿಯಾಗಿದ್ದವು. ಎಲ್ಲಕ್ಕೂ ಮಿಗಿಲಾಗಿ ರಾಯರ ಮನುಷ್ಯತ್ವವು ಸುಟ್ಟು ಬೂದಿಯಾಗಿತ್ತು; ಸಾನಿಗೆ ಬೇಕಾದ್ದು ಅದು. ಅವರು ಕೇವಲವಾಗಿ ಅವಳ ದಾಸರಾದರು; ಅವಳ ವಾಕ್ಯವೇ ವೇದವಾಯ್ತು ಅವರಿಗೆ. ಪಕ್ಷಕಾರರು ಒಬ್ಬೊಬ್ಬರಾಗಿ ಕೈಬಿಟ್ಟರು. ಬಸವಣ್ಣೆಯ ಅತೋನಾತ ಯತ್ನಗಳಿಂದ ಮನೆಯಖರ್ಚಿಗೆ ಹಣಬರುವಷ್ಟು ಮಾತ್ರ ಖಟ್ಲೆಯ ಫಾಯಿಲು ಇರುತ್ತಿತ್ತು.

ಮನೆಯಲ್ಲಿ ಶಾಂತಾಬಾಯಿ ಕಣ್ಣೀರು ಇಡದ ದಿನವಿಲ್ಲ. ಆಗ-ಈಗ ರಾಯರು ಎಷ್ಟೋ ಇರುಳುಗಳನ್ನು ಮನೆಯಲ್ಲಿ ಕಳೆಯುತ್ತಿದ್ದರೇನೋ ನಿಜ; ಆದರೆ ಅದು ಸಾನಿಯ ಸಂಗೀತದ ಚಟದ ಮೂಲಕ. 'ಇದಿರಿದಿರು ಬೇರುಬಿಡುತ್ತಿದ್ದ ವಿಷದ ಬಳ್ಳಿಯನ್ನು ಹೇಗೆ ಕಿತ್ತಲಿ! ಯಾರ ಮೊರೆ ಹೋಗಲಿ!' ಎಂಬ ಚಡಪಡಿಕೆಯ ವಿಚಾರಗಳಲ್ಲಿ ಶಾಂತಾಬಾಯಿ ಕ್ಷಯಹತ್ತಿದವರ ಹಾಗೆ ನವೆಯುತ್ತ ಸಾಗಿದಳು. ತಂದೆತಾಯಿಗಳು ಒಮ್ಮೆ ಬಂದು ಹೋದರು. ಹಿಂದಕ್ಕೆ ತಿಳಿಯದೆ ಹೋದ ರಹಸ್ಯವು ಈಗ ಒಡೆದು ತೋರಿತು. ಮಗಳ ಬಗ್ಗೆ ಮರುಗಿದರು. 'ಶಾಂತಾ, ನೀನೂ ನಮ್ಮೊಡನೆ ನಡೆದುಬಿಡು, ಅಂದರಾದರೂ ನಿನ್ನ ಗೋಳು ತಪ್ಪೀತು' ಎಂದರು. ಆಗಲಿ ಇದ್ದ ಸುಖವನ್ನು ಒಮ್ಮೆ ಸವಿದ ಆಕೆ 'ಹಾಗೆ ಬರಬೇಕಾದರೆ ನೀವು ನನ್ನನ್ನು ಕಂದಕದಲ್ಲಿ ನೂಕಿ ಊರಿಗೆ ಹೋಗಿರಿ.' ಎಂದು ಹೇಳಿದಳು. ನಿರುಪಾಯರಾಗಿ ಹೊಟ್ಟೆಯಲ್ಲಿ ಉರಿ ಮುಚ್ಚಿಕೊಂಡು ಊರತ್ತ ತೆರಳಿದರು.

ಅಡಿಗೆಯಾಕೆಯ ಸೂಚನೆಯಿಂದ ಮಂತ್ರಮಾಟದ ಕೆಲವು ಸಣ್ಣ ಉಪಾಯಗಳಾದವು. ಅಷ್ಟು ದೊಡ್ಡವಲ್ಲ, ಆದರಿಂದ ಒಂದು ಹೋಗಿ ಒಂದಾದೀತೆಂಬ ಅಳುಕು ಶಾಂತಾಬಾಯಿಗೆ ಇದ್ದೇ ಇತ್ತು. ರಾಯರಿಗೆ ಸಾನಿಯು ಪರವೂರಿಗೆ ಹೋಗಿ ತೀರ ಕಣ್ಮರೆಯಾದಾಗ, ತಮ್ಮ ಒಡತಿಯು ಸೊರಗಿಸ ಕಾರಣವೆಲ್ಲ ತಿಳಿಯುತ್ತಿತ್ತು. ತಮ್ಮ ಕಷ್ಟಕ್ಕೆ ಕುಳಿತು, ಶಾಂತ ವಾಗಿ ವಿಚಾರಿಸಿ 'ನಾನೆಂಥ ಪಾಪಿ!' ಎಂದು ಬೈದುಕೊಂಡು ಏಳುತ್ತಿದ್ದರು. ಆದರೆ ಸಾನಿಯ ಬರವಿನ ಚೀಟಿಯು ಅವರ ಬುದ್ಧಿಯನ್ನು ಹಿಚುಕಿ ಹಿಂದೊಗೆದು, ಅವರನ್ನು ಎತ್ತಿ ಒಯ್ಯುತ್ತಿತ್ತು. ಅಂಥ ದಿವ್ಯಪ್ರಭಾವ ವಿತ್ತು ಆ ನಾಲ್ಕು ಅಕ್ಷರಗಳಲ್ಲಿ!

ಒಮ್ಮೆ ಹದಿನೈದು ದಿನದ ಮೇಲೆ ತನ್ನ ಪ್ರಯಾಣ ತೀರಿಸಿ, ಸಾನಿಯು ಊರಿಗೆ ಬಂದು ರಾಯರಿಗೆ ಹೇಳಿಕಳಿಸಿದಳು. ಕಾಸೀಮನಿಂದ ಈ ಸುದ್ದಿಯು ಅಡಿಗೆಯಾಕೆಗೆ ತಿಳಿಯಿತು. ರಾತ್ರಿಯ ಡಿಗೆ– ಊಟ ಆದಮೇಲೆ, ಅವಳು ಬಚ್ಚಲ ಮನೆಯಲ್ಲಿ ಬಾಯಿಯವರನ್ನು ಕರೆದುಕೊಂಡು ಹೋಗಿ, ಕದ ಮುಚ್ಚಿ, ಕಳ್ಳ ದನಿಯಲ್ಲಿ ಒಂದರ್ಧ ತಾಸಿನವರೆಗೆ ಏನೇನನ್ನೋ ಹೇಳಿದಳು. ಶಾಂತಾಬಾಯಿಯು ಎಲ್ಲದಕ್ಕೆ 'ಹೂಂ' ಎಂದಳು. 'ಹಾಗೆ ಅದನ್ನ ಮಾಡರಿ ನೋಡತೀನಿ. ಹೆಂಗ ಹೋಗತಾರ ಅದು!' ಎಂದು ಮಾತು ಮುಗಿಸಿ ತಾನು ನಿತ್ಯದಂತೆ ಹೊರಟು ಹೋಗದೆ, ಅಡಿಗೆಮನೆಯಲ್ಲಿ ದೇವರ ಮಂಟಪದ ಮುಂದೆ ಅಡ್ಡಾದಳು. ಶಾಂತಾಬಾಯಿಯು ಬಚ್ಚಲದಲ್ಲಿ ಉಳಿದು ಸಾಬಾಣದಿಂದ ಉಜ್ಜಿ ಮುಖ ತೊಳೆದಳು. ತನ್ನ ಕೋಣೆಗೆ ಹೋಗಿ, ಡಾಳವಾಗಿ ಕಂದೀಲನ್ನಿಟ್ಟು, ಸರಿಯಾಗಿ ಕೂದಲು ಹಿಕ್ಕಿಕೊಂಡು ಅಡ್ಡ ಬೈತಲ ತೆಗೆದಳು. ಇದ್ದೆಲ್ಲ ವಸ್ತ್ರಗಳನ್ನು ಮೈಗೆ ತೊಡಿಸಿದಳು. ರುಳಿ ಪೈಜಣಗಳನ್ನೂ ಮರೆಯಲಿಲ್ಲ. ರಾಯರ ಒಳ್ಳೇ ಪ್ರೀತಿಯ ಕಂಠ ಹಾರವನ್ನು ಹಾಕಿಕೊಂಡಳು. ಜರದ ಟಿಬಿಕಿಗಳುಳ್ಳ ಕರಿಯ ಪತ್ತಲ ವನ್ನುಟ್ಟು, ಗುಲಾಬೀ ಕುಬಸವನ್ನು ತೊಟ್ಟು, ಕನ್ನಡಿ ನೋಡಿ ಎದ್ದಳು ರಾತ್ರಿ ಒಂಬತ್ತು ಹೊಡೆದು ಹೋಗಿತ್ತು. ಅಡಿಗೆಯಾಕೆಗೆ ಹೋಗೆಂದು ಹೇಳಿ, ತಾನು ಮೇಲಟ್ಟಕ್ಕೆ ಝುಣಝುಣರೆನ್ನುತ್ತ ಸಾಗಿದಳು.

ಬಾಯರ ಅಪ್ಪಣೆಯಂತೆ ಕಾಸೀಮನು ರಾಯರ ಕೋಣೆಯನ್ನು

ಸಿಂಗರಿಸಿ, ಊದಿನಕಡ್ಡಿಗಳಿಂದ ಮೂಲೆ ಮೂಲೆಯೂ ಕಣ್ತೆರೆದು ನೋಡು ವಂತೆ ಮಾಡಿದ್ದಳು. ರಾಯರು 'ಹೊರಡುವ ಹೊತ್ತಾಯಿತು' ಎಂದು ತಮ್ಮ ಕೋಟು ಹಾಕಿಕೊಂಡು, ಹೊರಕೋಣೆಯಿಂದ ಒಳಕೋಣೆಗೆ ಹೊಸ ರುಮಾಲು ತೆಗೆಯಲು ಹೋದರು. ತೆಗೆದು ಸುತ್ತಿದರು. ಅಂದಿನ ಅಲ್ಲಿಯ ಅಂದ, ಸುವಾಸನೆ ಯಾಕೋ ಹಿಡಿದು ನಿಲ್ಲಿಸಿದವು. ಮಂಚದ ಮೇಲೆ ಹಿಂಗೈಗಳ ಮೇಲೆ ಆಸರಾಗಿ ಕುಳಿತು 'ಏನು ಭಾರೀ ರಂಗಾಗಿದೆ ಇಲ್ಲಿ?' ಎಂದು ಗಾಳಿಯನ್ನು ಮೂಸಿದರು. ಪೈಜಣದ ರವ ಕೇಳಿಸಿತು. ಶಾಂತಾಬಾಯಿಯು ಬಂದು ಬಾಗಿಲು ಇಕ್ಕಿದಳು. ಮಂಚದ ತುದಿಗೆ ನಿಂತಳು. ಅದು ಯಾರು ಬಂದರು – ಎಂಬದು ರಾಯರಿಗೆ ಒಂದೆರಡು ನಿಮಿಷ ತಿಳಿಯಲಿಲ್ಲ. ಮೋಹದಿಂದ ಬಾಯಿ ತಪ್ಪಿ 'ಕಾಂತಾ!' ಎನ್ನುವ ದಕ್ಕೇ ಮೇಲೆತ್ತಿದ ಮೊಗವು ತಮ್ಮವಳದಾಯ್ತು. ಹುಚ್ಚಾಗಿ ತುಟಿ ಕಚ್ಚಿದರು, ಕೇಳಿದರು.

'ನೀನೇಕೆ ಇಷ್ಟು ಗುರುತು ಹತ್ತದಂತೆ ಆಗಿರುವಿ ಈವತ್ತು?'

'ನಿಮಗೆ ಹೊಸ ಗುರುತು ಆಗಬೇಕೆಂದು' ಶಾಂತಾಬಾಯಿ ಸಣ್ಣ ನಗೆ ನಕ್ಕಳು, ಹತ್ತಿರ ಹೋಗಿ ಕುಳಿತಳು.

ರಾಯರಿಗೆ ಪೇಚಾಟ ಬಂದಿತು, ಎದ್ದು ಎದ್ದು ಕುಳಿತರು. ಶಾಂತಾ ಬಾಯಿಯು ದೀನಮುದ್ರೆಯಿಂದ ಕೈಹಿಡಿದು ರಾಯರ ತೋಳ ಮೇಲೊ ರಗಿ 'ವಿಡಾ ಮಾಡಿ ಕೊಡಲೇನು?' ಎಂದಳು. ಈ ಜಾಲವು ಹಬ್ಬುವ ದೆಂದು ದಿಕ್ಕೆಟ್ಟು ರಾಯರು 'ಸಾಕು ಸರಿ' ಎಂದೆದ್ದು ಹೊರಟರು. 'ಎಲ್ಲಿಗೆ?' ಎಂದಳು. 'ನಿನಗೆ ಯಾಕೆ ಅದರ ಕಾರಭಾರ?' ಎಂದು ರಾಯರು ಬಾಗಿಲ ಬಳಿ ನುಗ್ಗಿದರು. ಶಾಂತಾಬಾಯಿಯು ದಿಗ್ಗನೆದ್ದು ಓಡಿ ಹೋಗಿ, ಗಟ್ಟಿಯಾಗಿ ಮೈಯಪ್ಪಿ 'ನೀವು ಹೋಗಬೇಡಿರಿ. ನಾನೇನು ತಪ್ಪು ಮಾಡೀನಿ? ಆ ಸಾನಿಗೆ ನಾ ಏನು ಕಡಿಮೆ ಇದ್ದೀನಿ' ಎಂದು ಬಿಕ್ಕಿ ಬಿಕ್ಕಿ ಅಳಲಿಕ್ಕೆ ತೊಡಗಿದಳು. ರಾಯರಿಗೆ ಈಗ ಈ ಹೊಸ ಮೋಡಿಯಾಟದ ಅರ್ಥವಾಯಿತು. ವಿಪರೀತ ಕೋಪ ಬಂದಿತು. 'ಬಸವಿಗಳ ಹಾಗೆ ಈ ಮೋಸ ಮಾಡಲಿಕ್ಕೆ ಬೇರೆ ಕಲಿತಿಯಾ?' ಎಂದು ನೂಕಿ ಬಾಗಿಲ ತೆರೆದು

ಸರಸರ ಇಳಿದರು. ಶಾಂತಾಬಾಯಿ ಅಸ್ತವ್ಯಸ್ತವಾಗಿ ಎಚ್ಚರದಪ್ಪಿ ಅಲ್ಲಿಯೇ ಬಿದ್ದಳು.

ರಾಯರು ಕೆಳಗಿಳಿದು ತಲೆಬಾಗಿಲು ಎಳೆದರು, ತೆರೆಯಲಿಲ್ಲ. ಮೂರು ನಾಲ್ಕು ಸಲ ಜಗ್ಗಿದರು, ಮೇಲೆ ಕೆಳಗೆ ನೋಡಿದರು, ಇನ್ನೂ ತೆರೆಯದು. ಅಷ್ಟರಲ್ಲಿ ಹೊರಗಿನ ಕೀಲಿ ಚಿಲಕಕ್ಕೆ ತಾಗಿದ ಸಪ್ಪಳವಾಯ್ತು. ಪಿತ್ತವು ಮತ್ತಿಷ್ಟು ತಲೆಗೇರಿತು. 'ಹಾ ! ಈ ಕುಚೇಷ್ಟೆ ಬೇರೆ ಮಾಡಿರುವಿಯಾ ? ನಿನ್ನ ಕೊಂದೇ ಬಿಡುವೆನು ಈಪತ್ತು' ಎಂದವರೇ ಮೇಲೆ ಹೋಗು ವದಕ್ಕೇ, ಅದೇ ಎಚ್ಚರ ಹೊಂದಿ ಹುಚ್ಚು ಸುರಿಯುವ ಬಾಯಿ ಬಿಡುತ್ತ ಶಾಂತಾಬಾಯಿ ಕುಳಿತಿದ್ದಳು. 'ಹೊರಗೆ ಕೀಲೀ ಯಾರು ಹಾಕಿದರು? ಹೇಳು. ಹೇಳದಿದ್ದರೆ ನಿನ್ನ ಪ್ರಾಣವನ್ನೆ ತಗೊಳ್ಳುವೆ ನೋಡು' ಎಂದರು. ಶಾಂತಾಬಾಯಿಯ ಶಾಂತಿ- ವಿವೇಕ ಸತ್ತು ಹೆಣವಾಗಿದ್ದವು. ದೆವ್ವನಂತೆ ಎದ್ದು ನಿಂತು ಹೇಳಿದಳು 'ನಾ ಹಾಕಿಸಿದೆ. ಏನು ಮಾಡತೀರಿ ಮಾಡರಿ.' ರಾಯರ ಏಟುಗಳು ಫಟ್‌ಫಟ್ಟೆಂದು ಬಿದ್ದವು. 'ಸಾಕಾತೆ ? ' ಎಂದವಳೆ ಆಕೆ ಕೆಳಗೆ ಇಳಿಯುತ್ತ ' ಇನ್ನು ಸಿಗುವದಿಲ್ಲ ನಿಮ್ಮ ಕೈಯಲ್ಲಿ. ಆ ಬಾವಿಯ ತಳವು ನಿಮ್ಮ ಈ ಕೋಣೆಗಿಂತ ತಣ್ಣಗಿದೆ' ಎಂದು ಗುಣಗುಣಿಸಿದಳು. ರಾಯರು ಕುರ್ಚಿಯ ಮೇಲೆ ಬಿದ್ದರು. ಎರಡು ನಿಮಿಷ ಓಡಿದವು. ಅವಳ ಮಾತಿನ ಭಯಂಕರ ಅರ್ಥವು ಹೊಳೆಯಿತು. 'ಅಯ್ಯೊ' ಎಂದು ಎದ್ದು ಹಿತ್ತಲಕ್ಕೆ ಓಡಿದರು. ಇನ್ನೊಂದು ನಿಮಿಷ ವಾದರೆ ಹಾರಿ ಬಿಡುತ್ತಿದ್ದ ಅವಳನ್ನು ಜುಲುಮೆಯಿಂದ ಹಿಡಿದು ತಂದು, ಕೋಣೆಯಲ್ಲಿ ಮಲಗಿಸಿದರು. ಬಹಳ ಹೊತ್ತು ತಲೆ ತಿಕ್ಕಿ, ದನಿಯಲ್ಲಿ ಮಿದುವು ತಂದು ' ನಾನಿಲ್ಲಿಯೇ ಮಲಗುವೆ ಆತೇ ? ' ಎಂದು ಕೋಟು ಬಿಚ್ಚಿದರು. ಸಾವಿನ ನಾಡಿಗೂ ಬದುಕಿಗೂ ನಡುವೆ ಶಾಂತಾಬಾಯಿ ಚೀಕುತ್ತ ಬಿದ್ದುಕೊಂಡಳು.

---

# ೧೩ನೆಯ ಕಿಡಿ

---

ಮರುದಿನ, ಜ್ಯೂನಿಯರದ ವರುಷ ಮುಗಿಸಿ ಅನಂತ, ಜಗಣ್ಣ ಗೆಲವೂರಿಗೆ ಬಂದರು. ಅನಂತನಿಗೆ ಮನೆಯು ಸದ್ದಡಗಿ ಸಪ್ಪಗಾದಂತೆ ತೋರಿತು. ನಾಕೈದು ವರ್ಷದ ಕನಕನೊಬ್ಬನು ಹರಿದ ವರ್ತಮಾನ ಪತ್ರದ ಚೂರಿಗೆ ದಾರಕಟ್ಟಿ, ಗಾಳಿಪಟವೆಂದು ಹಾರಿಸುತ್ತ, ಮೂಲೆಯಿಂದ ಮೂಲೆಗೆ ಓಡುತ್ತಿರುವನು; ಶಾಂತಾಬಾಯಿಯು ಜಡ್ಡಿನಿಂದ ಎದ್ದವರ ಹಾಗೆ ನೆರಳುತ್ತ ಜೋಲಿಹೊಡೆಯುತ್ತ ತಿರಗುತ್ತಿದ್ದಳು.

'ಯಾಕೆ, ಕಕ್ಕಿ, ಏನು ಆಗಿದೆ? ಮೈಯಲ್ಲಿ ನೆಟ್ಟಗಿಲ್ಲ ಏನು?' ಅನಂತ ಕೇಳಿದನು.

'ಮೈಯಲ್ಲಿಲ್ಲ, ಎಲ್ಲ್ಯಾ ಇಲ್ಲ' ಅವಳು ಉಸುರ್ಗರೆದಳು.

ಅನಂತನ ಸೂಕ್ಷ್ಮಬುದ್ಧಿಗೆ ಈ ಮಾತಿನ ಪರದೆಯಹಿಂದಿನ ಘೋರ-ಚಿತ್ರವು ಕಣ್ಣಮುಂದೆ ಕಟ್ಟದೆ ಇರಲಿಲ್ಲ. ಅವನೆಂದೋ ಕಕ್ಕನ ಭವಿಷ್ಯವನ್ನು ಮುಂಗಂಡಿದ್ದನು. ಆದರೆ ಕಕ್ಕಿಯು ಯಾಕೆ ಇದನ್ನು ತಾಳಬೇಕು? ಎಷ್ಟೆಂದು ತಾಳಬೇಕು? ತಾನು ಹಾಗೇ ನೋಡುವದಾದರೂ ಎಲ್ಲಿಯವರೆಗೆ? ಎಂಬ ವಿಚಾರಗಳು ಮಾತ್ರ ಈಗ ಅವನ ಸುತ್ತು ಮುಕುರಿದವು. ಏನಾದರೂ ಗೊತ್ತುಪಡಿಸಿದ ಹೊರತು ಅವನು ಹೆಜ್ಜೆ ಇಡಲಾರದಾದನು. ಕರ್ಮ, ಪ್ರಾರಬ್ಧ ಮೊದಲಾದ ಕೈಸೋತ ಜನರ ಪುಕ್ಕತತ್ತ್ವಗಳು ಅವನ ಬಿಸಿರಕುತದಲ್ಲಿ ಬಾಳಲಿಲ್ಲ, ಬೆಂದುಹೋದವು. 'ತಾನೇಕೆ ಕಕ್ಕನಿಗೆ ಹೇಳಿನೋಡಬಾರದು?' ಎಂದು ಬಲವಾಗಿ ಎನಿಸಿತು. ಆದರೆ ಕಕ್ಕನ ಮುಂದೆ ತಾನು ಯಾರು? ಎಂದು ಇನ್ನೊಮ್ಮೆ ಎನಿಸಿತು. ಜೀವ ಸಿಲ್ಲಲಿಲ್ಲ.

ಮೂರು ನಾಲ್ಕುದಿನ ತಡೆದನು. ರಾಯರ ರಾತ್ರಿಸಂಚಾರವು ಅಬಾಧಿತವಾಗಿ ಸಾಗಿತು. ಅದಕ್ಕೆ ಮೂಕಸಂಮತಿ ಇದ್ದಂತೆ ಮನೆಯಲ್ಲಿ ಎಲ್ಲ ನಡೆಯುತ್ತಿತ್ತು. ನಡುವಿನ ಅಟ್ಟದಲ್ಲಿ ತಾನು ಮಲಗುತ್ತಿದ್ದದರಿಂದ, ಮೇಲಟ್ಟದಲ್ಲಿ ಮಲಗುವ ಶಾಂತಾಬಾಯಿಯು ದಪ್‌ದಪ್ಪೆಂದು

ಕಾಲುಬಡಿಯುತ್ತಿರುವದು, ಧೊಪ್ಪನೆ ಹಾಸಿಗೆಯ ಮೇಲೆ ಬೀಳುವದು, ಮತ್ತೆ ಏಳುವದು—ಇವೆಲ್ಲ ಅವನಿಗೆ ತಿಳಿಯದೆ ಹೋಗಲಿಲ್ಲ. ತಾಳಲಾರ ದಾದನು. ಕಕ್ಕನು ಒಂದು ರಾತ್ರಿ ಊಟದನಂತರ ಹೊರಹೊರಡುವ ಸಿದ್ಧತೆಯಲ್ಲಿ—ಎಲೆಯಡಿಕೆ ಮೆಲ್ಲುತ್ತ—ಕುಳಿತಿರಲು ಅನಂತನು ತನ್ನ ಕೋಣೆಯಿಂದ ಕಕ್ಕನಲ್ಲಿಗೆ ಹೋಗಿ ಮೆಲ್ಲಗೆ ಹೇಳಿದನು.

'ಕಕ್ಕಾ, ನಾನು ತಿರುಗಿ ಧಾರವಾಡಕ್ಕೆ ಹೋಗಿಬಿಡುವೆ'

'ಅದೇಕೋ?' ರಾಯರು ಸಹಜವಾಗಿ ಕೇಳಿದರು.

'ನನಗಿಲ್ಲಿ ಅಭ್ಯಾಸ ಆಗಲೊಲ್ಲದು, ನೀವು ಮನೆಯಲ್ಲಿ ಇರುವ ದಿಲ್ಲ'

'ಸಣ್ಣ ಹುಡುಗನೇನೊ ಇನ್ನೂ? ಸೂಟಿ ಆದಮೇಲೆ ಹೋಗು' ರಾಯರು ಎದ್ದರು.

'ಒಲ್ಲೆ, ನಾನೊಲ್ಲೆ. ಕಕ್ಕಿಯೊಡನೆ ನೀವಿದ್ದರೆ ನಾನು··' ಎಂದು ಅನಂತನು ನಿಂತನು.

ರಾಯರಿಗೆ ಅವನ ಮಾತಿನ ದಿಕ್ಕು ತಿಳಿಯಿತು. 'ಸಲ್ಲದ್ದು ಮಾತಾಡಬೇಡ, ಮಲಕೋ ಹೋಗು' ಎಂದು ಜಬರಿಸಿದರು. ಅನಂತ ನಿಗೆ ಈಗ ಒತ್ತರಿಸಿ ವಾಣಿಬಂದಿತು. ಹಿರಿಯರಿಗೆ ಆಡುತ್ತಿರುವೆನೆಂಬ ಅರಿವು ಅಳಿಯಿತು.

'ಕಕ್ಕಾ, ನೀವು ಸಲ್ಲದ್ದು ಮಾಡಬೇಕೇನು? ಕಕ್ಕಿಯು ಯಾವ ತಪ್ಪಿಗೆ ಶಿಕ್ಷೆಕೊಡಲು ನೀವು ಆ ಸಾಸಿಯ ಮನೆಗೆ ಹೋಗುತ್ತೀರಿ? ಕಕ್ಕಿಯು ಸೊರಗಿ ಬೆಂಡಾದದ್ದು ನಿಮಗೆ ಕಾಣದೇ? ನೀವು ಹೋದಾಗ ಅವಳು ಹಿತ್ತಲದ ಬಾವಿಯಲ್ಲಿ ನುಗ್ಗಿದರೆ?'

ರಾಯರಿಗೆ ಮೊನ್ನಿನ ಸಂಗತಿಯು ನೆನಪಾಗಿ ಮೈನವಿರು ಎದ್ದು ತೋರಿತು.

'ಬಾವಿಯಲ್ಲಿ ನುಗ್ಗಿದರೆ ನಾನೇನು ಮಾಡಬೇಕು? ಅವಳಿಗೇನು ಧಾಡಿ ಆಗಿದೆ ಸಾಯಲಿಕ್ಕೆ?'

ರಾಯರು ಹೊಸತಿಲದ ಕಡೆ ನಡೆದರು. ತಾನಾಡುವದೆಲ್ಲ ಬೋರ್ಗಲ್ಲ ಮಳೆಯೆಂದು ಅನಂತನಿಗೆ ಈಗ ತೋರುತ್ತಿರಲು, ರಾಯರು

ಕೆಳಗಿಳಿಯುತ್ತ 'ಅನಂತಾ, ಬಿ. ಏ. ಆದೆನೆಂದು ನಿನಗೆ ತಿಳಿಯದ ಮಾತಿನಲ್ಲಿ ಅಧಿಕಪ್ರಸಂಗಿಯಂತೆ ಆಡಬೇಡ' ಎಂದು ಕೊನೆಮಾತು ಹೇಳಿದರು. ಅನಂತನು ಹೊಸತಿಲ ಬಳಿಯ ಮೆಟ್ಟಿಲಮೇಲೆ ನಿಂತು,ಕೆಳಗಿಳಿಯುತ್ತಿರುವ ರಾಯರಿಗೆ ಕೂಗಿ ಸಾರಿದನು! 'ಹಾಗಾದರೆ ನಾಳೆ ನಾನು ಧಾರವಾಡಕ್ಕೆ ಹೊರಟೆ.' 'ಘುಚ್ಚಾ!' ಎಂದು ತಿರುಗಿ ನೋಡಿ ರಾಯರು ಮುಂದರಿದರು.

ಕಕ್ಕಿಗೆ ಈ ಮಾತು ಕೆಳಗಿನಿಂದ ಕೇಳಿದವು. ಅದೇನೆಂದು ಅನಂತನಿಗೆ ಪ್ರಶ್ನೆಮಾಡಿದಳು. ಆತನು ನಡೆದದ್ದನ್ನೆಲ್ಲ ಹೇಳಿ ಕಕ್ಕಿಯ ಒಗ್ಗಿ ಕಳಕಳಿಯ ಮಾತಾಡಿ 'ಇಂಥ ನೆರಳು ನನಗೆ ಸಾಕು' ಎಂದನು. 'ಹಾಗೆ ನೀನೇಕೆ ಬಾಯಿ ಹಾಕಿದಿ? ಅನಂತಾ. ಅದು ಎಲ್ಲರ ಕೈಮೀರಿಹೋಗಿದೆ. ಅಡಿಗೆಯಾಕೆಯನ್ನು ನಂಬಿ ನಾನೂ ಏನೇನೋ ಮಾಡಿದೆ. ಎಲ್ಲಾ ಆಗದ ಮಾತು. ಜಗಣ್ಣನಿಂದ ಎಲ್ಲ ಮಸಲತ್ತು ಆದದ್ದೆಂದು ಆ ಬಡಪನ ಮೇಲೆ ತಪ್ಪುಹೊರಿಸಿ....'ಇಲ್ಲಿಗೆ ಶಾಂತಾಬಾಯಿಯ ಕೊರಳುಬ್ಬಿ ನರಬಿಗಿದವು '....ಅವನನ್ನು ಹೊರಗೆ ಹಾಕಿಸಲು ಕಾರಣ ಆದೆ. ಅದೇನು ಚಕ್ಕಂದ ನಿಲ್ಲಲಿಲ್ಲ. ಮುಖ್ಯ ನನ್ನ ನಸೀಬ. ನೀನೆಲ್ಲಾ ಹಚ್ಚಿಕೊಳ್ಳಬೇಡಿರಪ್ಪ. ನಿಮಗೆ ಅಕಲ್ಯಾಣ ಆದೀತು' ಅದ್ಭುತ ಶಾಳ್ಮೆಯ ದನಿಯಲ್ಲಿ ಶಾಂತಾಬಾಯಿ ಆಡಿದಳು. ಅನಂತನಿಗೆ ಅಮೃತ ಕುಡಿದಂತಾಯಿತು.

ಮರುದಿನ ತಾನು ಅಂದಂತೆ ಅನಂತನು ಧಾರವಾಡಕ್ಕೆ ತೆರಳಿದನು. ಜಗಣ್ಣನಿಗೆ ಎಲ್ಲ ತಿಳಿಸಿ, ಕಾಲೇಜಿನ ಆರಂಭಕ್ಕೆ ಅವನಿಗೆ ಬಾ ಎಂದು ತಾನು ನಡೆದನು. ಎಂ. ಎ ಕ್ಕಾಗಿ ಓದಬೇಕಾದ್ದು ಲಾಯಬ್ರರಿಯಲ್ಲಿ ಬಹಳ ಇದ್ದದ್ದೂ ನಿಜ. ಜಗಣ್ಣನ ಒಪ್ಪಿಗೆ ಸುಲಭವಾಗಿ ಸಿಕ್ಕಿತು. ಆದರೆ ಅನಂತನು ಹೋದ ವಾರದಲ್ಲಿಯೇ, ಜಗಣ್ಣನ ಸುತ್ತು ಹಬ್ಬಿದ ಮದುವೆಯ ಜಾಲವು ಇನ್ನಿಷ್ಟು ಬಿಗಿಯಾಗಿ ಮುಸುರಬಂದಿತು. ಅವನ ಹೆಂಡತಿ—ಅಂಬಕ್ಕ ಎಂದು ಅತ್ತೆಮನೆಯ ಹೆಸರು—ಮೈನೆರೆದ ಸುದ್ದಿ ಬಂದಿತು. ಓಕಳಿಯ ಪ್ರಸಾದ ದೊರೆಯಿತು ಜಯರಾಯನಿಂದ. ಮೈತೊಯ್ದು ಜಗಣ್ಣ ನಡುಗಿದನು, ಮುಂದಣ ಪರಿಣಾಮಕ್ಕೆ ಹೆದರಿ ನಡುಗಿ

ದಂತಾಯ್ತು. ಕೆಂಪುಕಲೆಯ ತಳಿಹಾಕಿದ ಅಂಗಿಯನ್ನೂ ಪೈಯನ್ನೂ ನೋಡಿಕೊಂಡನು. ತನ್ನ ಬಾಳುವೆಯ ಕಾಳಗದಲ್ಲಿ ಗಾಯಹೊಂದಿ ನೆತ್ತರ ಸಿಡಿದು, ತಾನು ಹೇಗಾಗುವೆನೆಂಬ ಚಿತ್ರವು ಅವನ ಇದಿರು ನಿಂತಿತು.

ಐದಾರು ದಿನ ಜಾರಿದವು. ಪ್ರಸ್ತದ ಮುಹೂರ್ತದ ಚರ್ಚೆ ನಡೆಯಿತು. 'ಎಷ್ಟು ಸ್ವಾಭಾವಿಕ ಅದೆಲ್ಲಾ' ಎನ್ನುವಂತಿತ್ತು—ಮಾವಿನ ಮರವು ಹೂಬಿಟ್ಟು ಕಾಯಾಗಿ ಹಣ್ಣಾದಷ್ಟು. ಮುಹೂರ್ತವನ್ನು ಗೊತ್ತುಪಡಿಸಿ, ಜಗಣ್ಣನಿಗೆ ಬಂಡೇರಾಯರು ಪೆಸರಿಗೆ ತಿಳಿಸಿದರು. ಅವನಿಗೆ ತಾಳುವದು ದುಃಸಾಧ್ಯವಾಯಿತು. ಒಡಲಲ್ಲಿ ಬ್ರಹ್ಮಾಂಡ ಕೋಪ ಕುದ್ದಿತು. 'ಅಪ್ಪಾ, ನಾ ಏನೆಂದು ನಿಮ್ಮ ಭ್ರಾಂತಿ ಆಗಿದೆ? ಕಲ್ಲೋ, ಮಣ್ಣೋ, ಗಾಣದೆತ್ತೋ? ಗಾಡಿಯ ಕೋಣವೇ? ನನ್ನ ಕೇಳದೆ ಎಲ್ಲ ಮಾಡುವಿರಲ್ಲ! ಅದಕ್ಕಿಂತ ನನ್ನ ಕೇಳದೆ ನನ್ನ ಕುತ್ತಿಗೆಯನ್ನು ಯಾಕೆ ಹಿಚುಕಬಾರದು?' ಬಂಡೇರಾಯರು ಗಾಬರಿಗೊಂಡರು. 'ಹಾಗನ್ನ ಬಾರದು ವಾಗತ್ಕ' ಎಂದು ಗೋದವ್ವನ ಸಮಾಧಾನಪುರಾಣವು ಆರಂಭವಾಯಿತು ಜಯರಾಯನು ಎಲ್ಲದರ ಸೂತ್ರಧಾರನಾದ್ದರಿಂದ ಜಗಣ್ಣನನ್ನು ಕೂಡಿಸಿಕೊಂಡು ಮನವೊಲಿಸಿದನು.

'ಜಗಣ್ಣಾ, ನಿನ್ನನ್ನು ಕೇಳಬೇಕಾಗಿತ್ತು ಖರೆ. ಆದರೆ ಇರುವದು ಇದೊಂದೇ ಚಲೋ ಮುಹೂರ್ತ. ಹಿಂದೆಮುಂದೆ ಇಲ್ಲ.' 'ಹೌದು, ಮುಂದೆ ಯಾಕೆ ಹಾಕಬಾರದು?' ಅಂತ ನೀನಂದೀ ಆದರೆ ಇಂಥಾ ಕೆಲಸಕ್ಕೆ ಹೈಗೈ ಆಗಬಾರದು ನೋಡು. ನಿಮ್ಮ ಗೋದವ್ವನವರಿಗೆ ಕೆಲಸಕ್ಕೆ ಜೋಡಿ ಒಬ್ಬರು ಬೇಡವೇ? ಮುದುಕರೆಷ್ಟು ದಿನ ದುಡಿಯಬೇಕು? ನೀನು ಮದುವೆಮಾಡಿಕೊಂಡು ಅವರಿಗೇನು ಉಪಯೋಗ?'

'ಹೌದಪ್ಪ, ಅವರಿಗೆ ಉಪಯೋಗ ಆಗಲಿಕ್ಕೇ ನನ್ನ ಮದುವೆ! ಅವರಿಗೆ ದುಡಿಯುವ ದಾಸಿಯಾಗುವ ಸೊಸೆಬೇಕೆಂದು ಮದುವೆ! ನಮಗೆ ಹೆಂಡತಿ ಬೇಕೆಂದಲ್ಲ! ಹಾಗೆ ಇದ್ದರೆ ನಾವೇ ಸೊಸೆ ಆಗಿಕೊಂಡು ಮನೆಯಲ್ಲಿ ಬೀಳುತ್ತೇವೆ, ಸೀರೆಯನ್ನುಟ್ಟುಕೊಂಡವಳೇ ಸೊಸೆಯೆಂದು ಯಾಕೆ?'

'ತಿಳಿದವನು ನೀನು ಹೀಗಂದರೆ ಹೇಗೆ ಜಗಣ್ಣಾ. ಎಲ್ಲಾ ಗೊತ್ತಾಗಿ ಹೋದ ಮೇಲೆ ಅಡ್ಡಗಾಲು ಹಾಕಬಾರದು ನೋಡು, ಮನೆತನಕ್ಕೆ ಭೂಷಣವಲ್ಲ.'

'ಒಳ್ಳೇಮಾತು, ಜಯಾ, ಇದು. ಕೇಳದೆ ಗೊತ್ತುಮಾಡಿ ಆ ಮೇಲೆ ಗೊತ್ತುಮಾಡಿದ್ದಕ್ಕೆ ಬಾಗು ಎನ್ನುವದು. ನಾನೂ ಅನಂತನಿದ್ದಲ್ಲಿ ಧಾರವಾಡಕ್ಕೆ ಹೋಗುವೆ'

'ಛೇ, ಹಾಗನ್ನಬೇಡ, ನನ್ನಾಣೆ. ನನ್ನಸಲುವಾಗಿ ಇದೊಂದಕ್ಕೆ ಒಪ್ಪು. ಇದರಿಂದ ನಿನ್ನ ಅಭ್ಯಾಸಕ್ಕೆ ಏನೂ ಅಡ್ಡಿಬರದಂತೆ ನಾನು ನೋಡಿಕೊಳ್ಳುವೆ, ಆತೇ? ಮುಗಿದ ಕೂಡಲೆ ನೀನು ಧಾರವಾಡಕ್ಕೆ ಜಿಗಿ'

ಈ ಮೊದಲಾಗಿ ತಲೆಕಟೆದನು. ಒಲ್ಲೆಂದಷ್ಟು ಜುಲುಮೆಯು ಒತ್ತು ಏರಿಬರುವದೆಂದು ಜಗಣ್ಣನು ಹೂಗೊಟ್ಟನು. ಮಂಗಲಕಾರ್ಯವು ಸಾಂಗವಾಯಿತು. ಜಗಣ್ಣನ ಸಂಸಾರದ ಸಣ್ಣಬಕ್ಕರೆಯಲ್ಲಿ ಒಂದು ಪಾಲು ಪಡೆಯಲು ಅಂಬಕ್ಕ ಒಬ್ಬಳು ಅತ್ತೆಮನೆ ಸೇರಿದಳು.

ಕಾಲೇಜಿನ ದ್ವಾರವು ಜೂನಕ್ಕೆ ಮತ್ತೆ ತೆರೆಯಲು, ಜಗಣ್ಣನು ಧಾರವಾಡಕ್ಕೆ ಪಯಣಬೆಳಸಿದನು. ಹೋಗುವಾಗ ಬಂಡೇರಾಯರು 'ಆತು ಇದೊಂದು ವರ್ಷ ಮುಗಿಸಿಬಿಡು. ನನ್ನ ಗಳಿಕೆ ಬತ್ತಿದ ಹಳ್ಳವಾಗಹತ್ತಿದೆ. ದೇವರ ಮರ್ಜಿ ಇದ್ದರೆ ನೌಕರಿ ಸಿಕ್ಕೀತು ನಿನಗೆ ಲಗೂನೆ' ಎಂದು ಉದ್ಗಾರ ತೆಗೆದರು. ಜಗಣ್ಣನಿಗೆ ಅದರ ಆಶಯವೆಲ್ಲ ತಿಳಿಯಿತು. 'ಆಗಲಿ' ಎಂದು ಧಾರವಾಡವನ್ನು ಕಂಡನು.

ಅನಂತನಿಗೂ ಅವನಿಗೂ ನಾಲ್ಕುದಿನ ಸುಖದುಃಖದ ಮಾತುಗಳಾದವು. ತನ್ನ ಫಲಶೋಭನ, ತಂದೆಯ ಸ್ಥಿತಿಗತಿ ಮೊದಲಾದ್ದನ್ನು ಬಣ್ಣಿಸಿ ಜಗಣ್ಣನು 'ಅನಂತಾ, ಇನ್ನು ಪಾಸಾಗಿ ನೌಕರಿಯ ಭಿಕ್ಷೆಗೆ ಹೊರಡಬೇಕು. ಕಾಡುಗಿಚ್ಚಿನ ಝಳವು ತಾಕತೊಡಗಿತು' ಎಂದು ಮುಗಿಸಲು, ಅನಂತನು 'ನೀನೊಬ್ಬನೇ ಯಾಕೆ ಜಗಣ್ಣಾ? ನಾನೂ ಕೂಡ ತೇಕಬೇಕು. ಕಕ್ಕನ ಅಟ್ಟದಮನೆ ಈ ಜೀವಕ್ಕೆ ಸಾಕಿನ್ನು' ಎಂದು ತನ್ನ ತೀರ್ಮಾನವನ್ನು ತಿಳಿಸಿದನು. ಇಬ್ಬರಿಗೂ ಸೀನಿಯರದ

ವರುಷವಾದ್ದರಿಂದ ಪುಸ್ತಕಗಳ ಸಖ್ಯವನ್ನು ಬೇಗವಮಾಡಿಕೊಂಡು, ಇಬ್ಬರೂ ಅಭ್ಯಾಸದಲ್ಲಿ ತಲ್ಲೀನರಾದರು. ಜಗಣ್ಣನ ಫೀ ಒಡಪು ಮತ್ತೆ ಮೊಗಸಿತು. ಕಕ್ಕನಿಂದ ಹಣ ಕೇಳಿ ತರಿಸಲಾಗದೆಂದು ಅನಂತನು ನಿಶ್ಚಯಿಸಿದ್ದ. ಅದರಿಂದ ತನ್ನ ಸಣ್ಣ ಸಂಬಳದಿಂದ ಜಗಣ್ಣನಿಗೆ ಅಷ್ಟು ಕೊಡುವಂತಿರಲಿಲ್ಲ. ಆದರೂ ಅಭ್ಯಾಸದ ವರುಷದಲ್ಲಿ ಜಗಣ್ಣನನ್ನು ವಿದ್ಯಾರ್ಥಿಗಳ ಕಡೆಗೆ ಓಡಾಡಿಸಿ ಹೊತ್ತುಗಳೆಯುವದು ಯುಕ್ತವಲ್ಲವೆಂದು ಅವನು ತಾನೇ ಪ್ರೊಫೆಸರಮಂಡಳಿಯ ಕಡೆ ಹೋಗಿ, ಅವರ ದಾನಧನ ವನ್ನು ತನ್ನದಕ್ಕೆ ಕೂಡಿಸಿ ಆತನ ಫೀಹಣದ ವ್ಯವಸ್ಥೆಮಾಡಿದನು. ಎಲ್ಲ ಆದಮೇಲೆ ಜಗಣ್ಣನು 'ಇಷ್ಟೆಲ್ಲ ನೀ ಮಾಡಿದ್ದಕ್ಕೆ, ಅನಂತಾ, ಇದೊಂದುವರುಷ ಸುಸೂತ್ರ ಪಾರಾಗಿ ಹೋದರೆ ಗೆದ್ದಂತಾಗುವದು.' ಎಂದನು. ಎಲ್ಲ ಆಗುವದೆಂದು ಅನಂತನು ಹುರಿಗೊಳಿಸಲು, ಇಬ್ಬರೂ ಮತ್ತೆ ಓದಿನ ಹೊಳೆಯಲ್ಲಿ ಇಡಿಮುಳುಗಿದರು. ಮೊದಲನೆಯ ಟರ್ಮು ತೀರಿ ಸೂಟಿ ಬಂದಿತು. ಅಭ್ಯಾಸದ ನೆವನದಿಂದ ಇಬ್ಬರೂ ಗೆಲವೂರಿಗೆ ಕಾಲಿಡಲಿಲ್ಲ. ಬರಬೇಕೆಂದು ರಾಯರಿಂದ ಅನಂತನಿಗೆ, ಗೋದವ್ವನಿಂದ ಜಗಣ್ಣನಿಗೆ, ಜೋರಾದ ಸಂದೇಶ ಬಂದವು. ಬರಲಾಗದೆಂದು ತಿಳಿಸಿ ಬಿಟ್ಟರು. ಎರಡನೆಯ ಟರ್ಮು ಉದಯಿಸಿತು. ಅಭ್ಯಾಸಕ್ಕೆ ತಡೆಯೆಂಬದೇ ಗೊತ್ತಿರಲಿಲ್ಲ. ಫೀಯ ವಿಚಾರವು ರಕ್ಕಸನ ಕೊನೆಯ ಕೊಡಲಿಯೇಟಿ ನಂತೆ ಏರಿಬಂತು. ಅದನ್ನೂ ದಿಗಿಲುಗೊಳಿಸುತ್ತ ಇರುವಾಗ, ಬಂಡೇ ರಾಯರಿಂದ ಕೈನಡುಗಿದ ಅಕ್ಷರಗಳಲ್ಲಿ ಕಾರ್ಡು ಒಂದು ಬಂದಿತು. 'ನಾನು ನಂಬಿದವರು ನನ್ನ ಹಾಳುಮಾಡಿದರು. ನನ್ನ ಹುಂಡೇಕಾರಿಯು ಹುಡಿಮಣ್ಣುಮುಕ್ಕಿತು' ಇದರಿಂದ ಆ ಕೊಡಲಿಯೇಟು ತಲೆಯ ಮೇಲೆ ಬಿದ್ದಂತೆಯೆ ಆಯಿತು. ಜಗಣ್ಣ ಪುಸ್ತಕಗಳನ್ನು ಬೀಸಾಡಿ ಗೆಲವೂರಿಗೆ ಹೊರಟನು. ಅನಂತನೂ ಕರುಳುಕೊರೆದಂತಾಗಿ ಬೆನ್ನು ಹತ್ತಿದನು.

# ೧೪ ನೆಯ ಕಿಡಿ

ಬಂಡೇರಾಯರು ಈ ಐದಾರು ವರುಷಗಳವರೆಗೆ ತಮ್ಮ ಋಣಾನುಬಂಧಿಕರನ್ನು ನಂಬಿ, ಹುಂಡೇಕಾರಿಕೆಯಲ್ಲಿ ಸೇರಿದ್ದರು. ಇವರು ಬರಿಗೈಯವರು; ಅವರು ರೊಕ್ಕಸ್ಥರು. ಆದರೆ ಬಂಡೇರಾಯರ ನಾಕೆಯ ನೌಕರಿಯು ಅಕಸ್ಮಾತ್ತಾಗಿ ಕೈಬಿಡಲು, ಆಗ ಅವರ ಬಗ್ಗೆ ಕನಿಕರಪಟ್ಟ ಆ ಸ್ನೇಹಿತರು ಅವರನ್ನು ತಮ್ಮಲ್ಲಿ ಕೆಲಸಗಾರರೆಂದು ತಕ್ಕೊಂಡರು. ಮುಂದೆ ಅವರ ದುಡಿತ, ಓಡಣ, ಪತ್ತು ಮೊದಲಾದವುಗಳನ್ನು ನೋಡಿ ಬರಬರುತ್ತ ಲಾಭದಲ್ಲಿ ಒಂದಾಣೆ, ಎರಡಾಣೆ ಹೀಗೆ ಪಾಲುಕೊಡುತ್ತನಾಗಿದರು. ಜಗನ್ನಾಥರಾಯರಿಂದ ಬಿಡುಗಡೆ ಹೊಂದಿದಾಗ, ಬಂಡೇರಾಯರ ಹುಂಡೇಕಾರಿಕೆಯು ಏರಿಕೆಯಲ್ಲಿತ್ತು. ಮುಂದೆ ಎರಡು ಮೂರು ವರುಷಗಳಲ್ಲಿ ಅವರ ಪಾಲು ನಾಲ್ಕಾಣೆಯಾಯಿತು. ಅಲ್ಲಿಗೆ ನಿಂತಿತು. ಜಗನ್ನಾಥ ಕಲಿಯಲಿಕ್ಕೆಂದು ಕಾಲೇಜಿನ ಯಾತ್ರೆ ನಡೆಸಿದಾಗ ಅವರಿಗೆ ಕೈಕೊಡುವಷ್ಟು, ಅದೇನು ಗಳಿಕೆ ಎಂದೂ ಆಗಲಿಲ್ಲ. ಮನೆಯ ವೆಚ್ಚದ ಮುರುಕಳಿ ಆಗುತ್ತಿತ್ತು ಇಷ್ಟೇ.

ಜಗನ್ನಾಥ ಕಡೆಯ ವರ್ಷಕ್ಕೆಂದು ಧಾರವಾಡಕ್ಕೆ ಹೋದತೊಟ್ಟು ಬಂಡೇರಾಯರ ಗ್ರಹಣವು ಮುಸುಕತೊಡಗಿತು. ಅದರ ಮುನ್ನೆರಳು ಅವರಿಗೆ ಕಂಡಿತ್ತು. ತಮ್ಮಲ್ಲಿ ಹಿರಿಯ ಪಾಲುಗಾರನು ಇಳಿವಯಸ್ಸಿನಲ್ಲಿ ಕೆಮ್ಮಿನ ಬೇನೆ ಹತ್ತಿ ಸತ್ತುಹೋದನು. ಅವನ ಮಗನು ತುಪ್ಪಸಕ್ಕರೆಯಲ್ಲಿ ಬೆಳೆದು ದೊಡ್ಡವನಾಗಿ, ಕೆಟ್ಟ ಸಹವಾಸದಿಂದ ತಂದೆಯ ಹೆಸರು ಮರೆಸುವಂತೆ ಕ್ಷುದ್ರವಿಚಾರಗಳ ತವರಾಗಿದ್ದನು. ತಂದೆಯ ಸೂತ್ರಗಳನ್ನೆಲ್ಲ ತನ್ನ ಕೈಯಲ್ಲಿ ತಕ್ಕೊಂಡು, ದಿನಸ ಕೆಲಸದಲ್ಲಿ ಬಂಡೇರಾಯರಿಗೆ ಏನಾದರೊಂದು ನಿಮಿತ್ತದಿಂದ ಕೆಣಕುವದನ್ನು ನಡೆಸಿದನು. ‘ಹಣವಿಲ್ಲ, ಗಂಟಿಲ್ಲ, ಪಾಲುಗಾರರಾಗಲಿಕ್ಕೆ ಇವರಿಗೇನು ಹಕ್ಕು?’ ಎಂದು ಅವನ ತಲೆಯಲ್ಲಿ ಹೊಕ್ಕಿತು. ಇನ್ನೊಬ್ಬ ಪಾಲುಗಾರನ ತಲೆತಿರುಗಿಸಿದನು. ಇಬ್ಬರೂ ಕೂಡಿ ಒಮ್ಮೆ ಬಂಡೇರಾಯರಿಗೆ ಹೇಳಿಬಿಟ್ಟರು.

'ನಿಮ್ಮ ದುಡಿತಕ್ಕೆ ಐದುರೂಪಾಯಿ- ತಿಂಗಳಿಗೆ-ಕೊಡುತ್ತೇವೆ. ಅದನ್ನು ತಗೊಂಡು ಇರತಿದ್ದರೆ ಇರಿ. ಪಾಲುಗೀಲು ಸುಳ್ಳು.' ಬಂಡೇರಾಯರ ಅಭಿಮಾನಕ್ಕೆ ಅಲಗಿನಿಂದ ಚುಚ್ಚಿದಂತಾಯ್ತು. 'ನಿಮ್ಮ ಪಾಲೂಬೇಡ, ಕಾರಕೂನಿಕೆಯೂ ಬೇಡ' ಎಂದು ಹೊರಟೆದ್ದು ಬಂದರು.

ಅದೇ ಮರುಳುಬಗೆಯಲ್ಲಿ ಅವರು ಕೂಡಲೇ ಜಗಣ್ಣನಿಗೆ ಕಾಗದ ಗೀಚಿದರು. ಜಗಣ್ಣ, ಅನಂತ ಮರುದಿನವೇ ಬಂದರು. ಮೊದಲೊಮ್ಮೆ ನೌಕರಿ ಹೋದಾಗಿನ ಹಾಹಾಕಾರವೇ ಮನೆಯಲ್ಲಿ ತಲೆಯೆತ್ತಿತ್ತು. ಬಂಡೇರಾಯರು ಅನ್ನ ನೀರಿಲ್ಲದೆ ಹಾಸಿಗೆ ಹಿಡಿದಿದ್ದಾರೆ. ಗೋದವ್ವನು ಹುಡುಗರಿಗಿಷ್ಟು ಮಾಡಿ ಹಾಕಿ, ಯಜಮಾನರ ತಲೆಗಿಂಬಿನ ದೆಸೆಗೆ ಕುಳಿತಿದ್ದಾಳೆ. ಜಗಣ್ಣನು ಬಂದೊಡನೆ ದನಿ ತೆಗೆದು ಅಳುವದಾಯ್ತು. ಜಗಣ್ಣನು ಅಷ್ಟು ಗಾಸಿಯಾಗಲಿಲ್ಲ, ಈ ವರೆಗಿನ ತಾಪತ್ರಯಗಳು ಅವನನ್ನು ಎಷ್ಟೋ ಗಟ್ಟಿ ಮಾಡಿದ್ದವು. ತಂದೆಯ ಹತ್ತಿರ ಹೋಗಿ, ತಲೆಯ ಮೇಲೆ ಕೈಯಾಡಿಸುತ್ತ 'ಅಪ್ಪ, ನೀವೇ ಹೀಗೆ ಮಲಗಿಕೊಂಡರೆ ಅವ್ವನ ಗತಿ ಏನಾಗಬೇಡ? ಊಟ ಮಾಡ ಏಳಿರಿ' ಎಂದರು. ಗೋದವ್ವನು 'ಎಲ್ಲಿಯ ಊಟವಪ್ಪಾ; ಬಾಯಲ್ಲಿ ಕಾಳು ನೀರು ಹಾಕಿಕೊಳ್ಳಲೊಲ್ಲರು' ಎಂದರು. ತಾಯಿ ಮಕ್ಕಳ ಮಾತು ಕೆಲಹೊತ್ತು ಸಾಗಿರಲು, ಬಂಡೇರಾಯರು ಬಿರ್ರನೆ ಮುಸುಕು ಹಾರಿಸಿ ಎದ್ದು ಕುಳಿತು, ಜಗಣ್ಣನ ಕೈಯನ್ನು ಅಮುಕಿ 'ಜಗಣ್ಣ, ನಾನು ಕೆಲಸ ಹೋದದ್ದಕ್ಕೆ ಹೊಟ್ಟೆಬೇನೆ ಹಚ್ಚಿಕೊಂಡಿಲ್ಲ. ನನ್ನ ಅಬ್ರು, ಅದನ್ನು ಕಳೆದರು' ಎಂದು ಕೆಳಬಾಗಿ ದೊಡ್ಡ ಉಸಿರು ಬಿಟ್ಟರು. ಮೆಲ್ಲಮೆಲ್ಲಗೆಜಗಣ್ಣನ ಮುಂದೆ ಆದ ಇತಿವೃತ್ತವನ್ನೆಲ್ಲ ಹೇಳಿದರು. ಅವನು ಧೈರ್ಯತಾಳಿ 'ಅಪ್ಪ, ಅದನ್ನು ಬಹಳ ಮನಸ್ಸಿಗೆ ಹಚ್ಚಿಕೊಳ್ಳಬೇಡಿರಿ. ನಾನಿದ್ದೇನೆ ಅಲ್ಲ. ಇನ್ನಾಯಿತು ನನ್ನ ಕಲಿಯೋದು. ನಿಮ್ಮ ಸಲುವಾಗಿ ಎಲ್ಲಿ ಬೇಕಲ್ಲಿ ಕತ್ತೆನಾಯಿಗಳ ಹಾಗೆ ದುಡಿದು ತಂದು ಹಾಕುವೆ. ಅವ್ವಾ, ಅಡಿಗೆ ಮಾಡು. ಅಪ್ಪನು ಊಟ ಮಾಡಲಿ' ಎನ್ನುವದರಿಂದ ಮನೆಯಲ್ಲಿ ಸ್ವಲ್ಪ ಉಲ್ಲಾಸದ ಗಾಳಿ ಬೀಸಿತು.

ಅನಂತನು ಬಂಡೇರಾಯರನ್ನು ಕಂಡುಬರಲಿಕ್ಕೆ ಹೋದನು. ಕಳಕಳಿಯ ಮಾತುಗಳಾದವು. 'ಇನ್ನೇನು ಜಗಣ್ಣನದು ನಾಲ್ಕು ತಿಂಗಳ

ಪ್ರಶ್ನೆ. ಪಿ. ಏ. ಒಂದು ಆಗಿ ಬಿಡಲಿ, ನೌಕರಿ ಹತ್ತುತ್ತದೆ. ಅಲ್ಲಿಂದ ಯಾವ ತ್ರಾಸವೂ ಇಲ್ಲ' ಎಂದು ಅನಂತನು ಸವಿಮಾತಿನಲ್ಲಿ ಸಮಾಧಾನವುಸುರುತ್ತಿರಲು ಜಗಣ್ಣನು ಸಿಟ್ಟಿನಿಂದ ಏರುದನಿಯಲ್ಲಿ ಹೇಳಿದ. 'ಅನಂತಾ, ಇನ್ನು ಆ ಕಾಲೇಜು, ಬಿ. ಏ; ಪರೀಕ್ಷೆ ಇವುಗಳ ಹೆಸರೆತ್ತಬೇಡ ದಯಮಾಡಿ. ನನ್ನ ಕಲಿಯೋದರ ಉದ್ಯಾಪನೆಯಾಯಿತು ಇನ್ನು. ಬೇಡ ಬೇಡ ಎಂದು ಪ್ರತಿ ಹೆಜ್ಜೆಗೆ ಗುಡುಗು ಹಾಕಿ ನನ್ನ ದೈವ ಹೇಳುತ್ತಿದ್ದರೂ, ಮತ್ತೆ ನಾನು ಡಿಗ್ರೀ ವಿದ್ಯೆಯ ಬೆನ್ನುಹತ್ತುವದು ಎಂಥ ಮರುಳುತನ! ಈಗಂತೂ ನನಗೂ ಪರೀಕ್ಷೆಗೂ ನಡುವೆ ಮೈಲುದ್ದ ಕೊರಕಲವೇ ಬಿದ್ದಿತು. ಇನ್ನು ಸಂಸಾರದ ಬಲಿ, ಬಾಳುವೆಯ ಕೂಲಿ-ಇವೇ ನನ್ನ ಪದವಿಗಳು. ಬೇರೆ ಪದವಿಯ ಆಸೆ ಮಾಡುವದು ಸಾಕು.'

ಈ ತರದ ಮಾತಿನ ಒಂದೊಂದು ಅಕ್ಷರವು ಅನಂತನ ಹೃದಯವನ್ನು ಹೆಚ್ಚೆಚ್ಚು ಮುರಿಗೆ ಹಾಕುವಂತೆ ನೋಯಿಸಿತು. 'ನಾಲ್ಕು ವರ್ಷಗಳ ಶ್ರಮವೆಲ್ಲ ಹುಸಿಯಾಗುವದಲ್ಲ, ಇದೇನು ಬಂದಿತು?' ಎಂದು ಮನಸ್ಸಿನಲ್ಲಿ ಕುದಿದನು. ಜಗಣ್ಣನಿಗೆ ಬೇರೆ ಹೊಸಹುರುಪು ಕೊಡುವ ಉತ್ತರ ಕೊಡಲು ಬಾಯಿ ಇಲ್ಲದಾಗಿತ್ತು. ಆದರೂ ಸ್ನೇಹಬಲದಿಂದ ಮುಂದರಿದು ಜಗಣ್ಣನಿಗೆ ಹೇಳಿದನು.

ಹಾಗೆ ಅನಬೇಡ. ಈ ಮೂರು ತಿಂಗಳ ಸಲುವಾಗಿ ನಾಲ್ಕು ವರ್ಷದ ಫಲವನ್ನು ಕಳಚಗೊಡುತ್ತಾರೇ ಕೈಯಿಂದ? ಕಾಲೇಜಕ್ಕೆ ನಾವಿಬ್ಬರೂ ಹೊರಡಲೇ ಬೇಕು.'

'ಅದೆಲ್ಲಾ ನಿರುಪಯೋಗಿ, ಅನಂತಾ. ಇನ್ನು ಜಗ್ಗಬೇಡ ನನ್ನನ್ನು. ನಾನು ಹೊರಡಲಾರೆ. ನನ್ನ ಕೈಲಿಂದ ಅಭ್ಯಾಸವು ಆಗದ ಮಾತು.'

'ನಾನು ಮಾಡುವೆ ನಿನ್ನ ಸಲುವಾಗಿ. ನೀನು ಬರದಿದ್ದರೆ ಕೇಳುವದಿಲ್ಲ.'

'ಇದೆಂಥ ಮಾತು, ಅನಂತಾ. ಇಲ್ಲಿ ಮನೆಯವರನ್ನು ಬೀದಿಯ ಬಯಲೊಳಗೆ ಬಿಟ್ಟು, ನಾನು ನಿನ್ನ ಕ್ಲಬ್ಬಿನ ಸವಿಯೂಟವನ್ನು ಕೆಚ್ಚಲಿಕ್ಕೆ ಬರಲೇ? ಅದು ನನಗೆ ಹೋಗುವದೇ?'

ಅನಂತನಿಗೆ ಇದು ದಾಟಲಾರದ ಕುತ್ತೆಂದು ತೋರಿತು, ತನ್ನಷ್ಟಕ್ಕೆ

ಕುಳಿತು ಎಷ್ಟೋ ಯೋಚಿಸಿದನು, ಬಗೆಹರಿಯಲಿಲ್ಲ. ಕಡೆಗೆ, 'ಯಾರಿಗೂ ಸೋಲದ ಬಾಳಿನ ಗೋಳೇ!' ಎಂದು ನೆನೆದು ಎದ್ದನು.

ಇಬ್ಬರೂ ಬಂದು ಹದಿನೈದು ದಿನಗಳಾದವು. ಅತ್ತ ಜಗಣ್ಣನ ಫೀ ವಿಷಯವು ಹಾಗೇ ನಿಂತಿತ್ತು. ಮೇಲೆ ಅವನು ತುಂಬಬೇಕಾದ ದಿನಗಳಲ್ಲಿ ಕೊರತೆಯಾದೀತೆಂಬ ಭಯ ಬೇರೆ. ಅಲ್ಲದೆ, ಇಬ್ಬರ ಅಭ್ಯಾಸವೆಲ್ಲಿಯೋ ಪಾತಾಳದ ಹಾವಿನ ಹೊಟ್ಟೆ ಸೇರಿತ್ತು. ಏನಾದರೊಂದು ನಿರ್ಣಯಿಸಿ ತಾನೊಬ್ಬನಾದರೂ ಮುಂದಾಗಿ ಹೋಗಿ, ಎಲ್ಲವನ್ನು ಓರಣಗೊಳಿಸಬೇಕೆಂದು ಅನಂತನು ಗಟ್ಟಿಮಾಡಿದನು. ಎರಡು ದಿನ ಚಿಂತಿಸಿ ಚಿಂತಿಸಿ ತಲೆ ಕಾದಿತು. 'ನನ್ನ ಗೊಡವೆ ಬೇಡ, ನೀನು ಹೋಗಯ್ಯ' ಎಂದು ಜಗಣ್ಣನು ಕಣ್ಣೀರು ತಂದು ಹೇಳಿ ಹೋದನು. ಆಗೊಂದು ಹಾದಿ ತೋಚಿತು. ಕೂಡಲೆ ಜಯರಾಯನ ಮನೆಗೆ ಓಡಿದನು.

ಜಯರಾಯನಿಗೆ ಬಂಡೇರಾಯರ ದುರ್ದಶೆಯು ಗೊತ್ತಾಗಿ ಹಳೆಯ ಮಾತಾಗಿತ್ತು. ಆದರೆ 'ಅದರಲ್ಲಿ ಏನಿದೆ? ಜಗಣ್ಣ ಪಾಸಾಗಿ ಕೆಲಸಕ್ಕೆ ಲಾಯಖಾಗಿ ಬರುತ್ತಾನೆ' ಎಂದು ಅವನು ಅಷ್ಟು ತಲೆ ಕೆದರಿರಲಿಲ್ಲ. ಸ್ನೇಹಿತರಿಬ್ಬರೂ ಬಂಡೇರಾಯರ ಕಾಗದದ ಮೇರೆಗೆ ಬಂದ ಸುದ್ದಿಯು ಅವನಿಗೆ ಗೊತ್ತಾಗಿರಲಿಲ್ಲ. ಅನಂತ ಹೋಗಿ ಎಲ್ಲ ಸುದ್ದಿಯನ್ನು ಹೇಳಿದಾಗ ಏನು ಗೋಳಾಟ ನಡೆದಿದೆಯೆಂಬದು ಅವನಿಗೆ ತಿಳಿಯಿತು. ಒಮ್ಮೆಲೆ ಅನಂತನನ್ನು ಕೂಡಿಕೊಂಡು ಜಗಣ್ಣನ ಮನೆ ಸೇರಿದನು.

'ಏನು ಬಂಡೇರಾಯರೇ, ಇಷ್ಟು ತಾಳದಿದ್ದರೆ ಹೇಗೆ ನಿಮ್ಮಂಥವರು? ನಿಮ್ಮ ಸಣ್ಣ ಗಳಿಕೆ ನಿಂತರೇನು ಆತು, ನಾಳೆ ಜಗಣ್ಣನು ದೊಡ್ಡ ಕೆಲಸ ಮಾಡಬಹುದು. ಅವನು ಕಾಲೇಜಕ್ಕೆ ಹೋಗಲಿ, ಕಳಿಸಿ ಬಿಡಿರಿ. ನೀವು ದುಃಖಿಸುತ್ತ ಕುಳಿತರೆ ಅವನ ಕಾಲಾದರೂ ಹೇಗೆ ಏಳಬೇಕು? ಜಗಣ್ಣಾ-ಅನಂತಾ ನೀನೂ-ಇಂದು ಹೊರಟು ಬಿಡಿರಿ' ಜಯರಾಯನ ಮಾತುಗಳಿಂದ ಸಂಸಾರವೆಲ್ಲ ಗೊಂಬೆಯಾಟ ಮಾತ್ರವೆಂದೂ ಸಂಸಾರದ ಸಂಕಟಗಳೆಂದರೆ ಗೊಂಬೆಯ ಮೈಗೆ ಮಣ್ಣು ಹತ್ತಿದಂತೆ ಸರಳ, ಸಣ್ಣ ವಿಷಯಗಳೆಂದೂ ಎನಿಸುತ್ತಿತ್ತು. ಆದರೆ ಇನ್ನೊಂದು ಕ್ಷಣಕ್ಕೆ ಆ ಗೊಂಬೆಯಾಟಕ್ಕಿಂತಲೂ ಈ ಇರುವಿಕೆಯ ಸೂಲಿ ಬೇರೆ ತರದ್ದು-ಎಂದೆನಿಸಿ,

ಜಯರಾಯನ ಮಾತು ವ್ಯವಹಾರದ ದೃಷ್ಟಿಯಿಂದ ಜೊಳ್ಳು—ಎಂದು ತೋರದೆ ಇರುತ್ತಿದ್ದಿಲ್ಲ. ಅನಂತನಿಗೆ ಕೊಟ್ಟ ಉತ್ತರವನ್ನೇ ಜಗಣ್ಣನು ಕೊಟ್ಟನು.

'ಕಾಲೇಜದ ಕಥೆ ಮುಗಿಯಿತು. ನನ್ನನ್ನು ಜುಲುಮೆ ಮಾಡ ಬೇಡ, ಜಯಾ. ನನಗೆ ಎಲ್ಲಿಯಾದರೂ ಕಸ ಉಡುಗುವ ಕೆಲಸವನ್ನು ಹಚ್ಚಿ ಕೊಟ್ಟರೂ ಬೇಕು ನೋಡು.'

'ಛೇ, ಮಾಡಿದ ಹೋಳಿಗೆ ತಿನ್ನದೆ ಚೆಲ್ಲಿದಂತೆ ಮಾಡುತ್ತಾರೇ? ಇಲ್ಲಿಯವರೆಗೆ ಕಲಿತದ್ದರ ಉಪಯೋಗವೇನು? ನೀನು ಕಲಿಯಲಿಕ್ಕೆ ಹೋಗು. ನೀನು ಬರುವವರೆಗೆ ನಾನು ಮನೆಯ ಕಾಳಜಿ ತಗೊಳ್ಳುವೆ. ಗೋದವ್ವಾ, ಇನ್ನು ಒಲೆಗೆ ರಜಾ ಕೊಡಿರಿ; ಎಲ್ಲರೂ ನಮ್ಮಲ್ಲಿಯೇ ಊಟಕ್ಕೆ ಬರ್ರಿ. ಬಂಡೇರಾಯರೇ, ನೀವಿದಕ್ಕೆ ಕಬೂಲ ಆಗಬೇಕು. ಒಲ್ಲೆನ್ನ ಬೇಡಿರಿ.'

ಹೀಗೆ ಮೂರು ನಾಲ್ಕು ತಿಂಗಳು ಮಾಡಲಿಕ್ಕೆ ಹೂ–ಎನ್ನಬೇಕೆಂದು ಅನಂತನೂ ಅದಕ್ಕೆ ಪುಷ್ಟಿ ಕೊಟ್ಟನು. ಆದರೆ ಬಂಡೇರಾಯರು, ಜಗಣ್ಣ ಒಪ್ಪೆಂದರೂ ಒಪ್ಪಲಿಲ್ಲ. 'ನಮಗೇನು ಧಾಡಿ ಆಗಿದೆ? ನೀರು ತರೋಣ, ಕಟ್ಟಿಗೆ ಹೊರೋಣ, ನಿನಗೆ ಬೇಡವಪ್ಪ ಇಲ್ಲದ ಭವಣೆ' ಎಂದು ನಡೆದಿತು.

ಮನ ಒಲಿಸುವ ಎಲ್ಲ ಉಪಾಯಗಳಿಗೂ ಅವರು ಮಣಿಯ ದಾದರು. ಆದರೆ ಬಂಡೇರಾಯರಿಗೆ 'ಜಗಣ್ಣನನ್ನು ತಿರುಗಿ ಕಲಿಯಲು ಕಳಿಸಲಿಕ್ಕೆ ಬೇಕು, ತಾವು ಹೇಗಿದ್ದರೂ ಕಳಿಸಬೇಕು' ಎಂಬ ದಾರ್ಢ್ಯವು ತಲೆದೋರಿತು ಅವನನ್ನು ಅಲ್ಲಿಗೇ ನಿಲ್ಲಿಸುವುದರಿಂದ ತಾವು ಕೆಲಸಗೇಡಿ ಅಲ್ಲದೆ ಅವನೂ ಆಗಬಹುದೆಂಬ ತಿಳಿವಳಿಕೆ ಅವರಿಗೆ ಬರಲಿಕ್ಕೆ ತಡವಾಗ ಲಿಲ್ಲ. ಅಂತೇ ಮಾತಾಡುತ್ತಲೆ ಏನೇನೋ ಲೆಕ್ಕ ಹಾಕಿ, ಜಯರಾಯ ನನ್ನು ಕುರಿತು ಕಡೆಗೆ ಬೇಡಿಕೊಂಡರು.

'ಜಯರಾಯಾ, ನಿನ್ನ ಮನಸ್ಸಿನಲ್ಲಿ ನಮಗೆ ಸಹಾಯ ಮಾಡುವ ದಿದ್ದರೆ ಒಂದು ಮಾಡು. ನಮ್ಮ ಸೊಸೆ ಅಂಬಕ್ಕನ ಕೈಯಲ್ಲಿಯ ಪಾಟ್ಲಿ ಗೋಟು ಕೊಡುತ್ತೇವೆ. ಒತ್ತಿ ಇಟ್ಟುಕೊಂಡು ನಮಗೆ ಈ ನಾಕು ತಿಂಗಳ ಪ್ರಪಂಚ ನಡೆಯುವ ಹಾಗೆ ನೂರಿನ್ನೂರರ ಸಾಲ ಕೊಡು.

ಹೆಚ್ಚೇನು ಬೇಡ. ಜಗಣ್ಣನ ಫೀಗೂ ಈ ಸಾರೆ ಅದರಿಂದ ಕೊಡೋಣ. ಅವನು ಹೋಗಲಿ, ಓದಲಿ, ದೇವರ ದಯದಿಂದ ಪಾಸಾಗಲಿ. ಮುಂದೆ ಆದದ್ದಾಗುತ್ತದೆ.'

'ಆಗಲಿ' ಕೂಡಲೇ ಜಯರಾಯನು ಸಂಮತಿ ತೋರಿದನು.

'ಏನೂ ಇಟ್ಟುಕೊಳ್ಳದೆ ಕೊಡಬಹುದು. ಆಯಿತೇ?'

ಗೋದವ್ವನು ಹೀಗಾದರೆ ಒಳಿತೆಂದು ಮನಸ್ಸಿನಲ್ಲಿ ಅಂದುಕೊಂಡಳು. ಆದರೆ ಒಡವೆಗಳನ್ನು ಇಟ್ಟುಕೊಂಡೇ ಕೊಡಬೇಕೆಂದು ಬಂಡೇರಾಯರು ಹಟ ತೊಟ್ಟರು. ಹಾಗೆ ಗೊತ್ತಾಯಿತು. ಜಗಣ್ಣನು ನಿರ್ವಾಹವಿಲ್ಲದೆ, ತಲೆಯಲ್ಲಾಡಿಸಿ ಒಪ್ಪಬೇಕಾಯಿತು. ಒಳಗಿನಿಂದ ಎಲ್ಲ ಮಾತುಕತೆ ಕೇಳುತ್ತಿದ್ದ ಅಂಬಕ್ಕನು ಕೈಯಿಂದ ಕೈಗೆ ಬಂಗಾರದೊಡವೆಗಳನ್ನು ನೋಡಿ ಮುಟ್ಟಿ, ನೆಲದ ಮೇಲೆ ಕಂಬನಿಯ ಸಣ್ಣ ಕೆರೆ ಕಟ್ಟಿದಳು.

....ಮೂರು ನಾಲ್ಕು ದಿನಗಳಲ್ಲಿ ಇಬ್ಬರೂ ಧಾರವಾಡಕ್ಕೆ ತೆರಳಿದರು. ಮತ್ತೆ ದುರ್ದೈವವು ತನ್ನ ಕಿಡಿಗಣ್ಣನ್ನು ಮುಚ್ಚಿಕೊಂಡಿತೆಂಬ ಸಂತಸವು ಅನಂತನಿಗೆ. ಜಗಣ್ಣನಿಗೂ ಹಾಗೇ ತೋರಿದ್ದರೂ ಅದು ಯಾವಾಗ ಆ ಕಣ್ಣು ತೆರೆಯುವದೋ, ಎಲ್ಲಿ ಏನಾಗಿ ತನಗೆ ಎಡರಾಗುವದೋ ಎಂಬ ಎದೆಗುದಿಯೊಂದು ಬೆಂಬತ್ತಿತ್ತು. ಊರಿಂದ ತಂದ ಹಣದಿಂದ ಫೀ ಕೊಡುವದಾಯ್ತು. ನಾತಾಳ ಸೂಟಿ ಬಂದಿತು. ಆಗ ದೊರೆತ ಬಿಡುವಿನಲ್ಲಿ, ಉಳಿದು ಹೋದ ವಾಚನವನ್ನೆಲ್ಲ ಮಾಡಿಕೊಂಡು, ಇಬ್ಬರೂ ಮತ್ತೆ ಯಥಾಪ್ರಕಾರವಾಗಿ ಪರೀಕ್ಷೆಯ ಬಕಾಸುರನಿಗೆ ನೀಡಬೇಕಾದ ಅನ್ನದ ರಾಶಿಯನ್ನು ತಲೆಯಲ್ಲಿ ತುಂಬಹತ್ತಿದರು. ಆಗೊಂದು ಈಗೊಂದು ಗೆಲವೂರಿಂದ ಪತ್ರ ಬರುತ್ತಿದ್ದವು. ಅವು ಬಂದರೆ ತಾರು ಬಂದಾಗ ಎದೆ ಒಡೆದು ನೀರಾಗುವಂತೆ ಜಗಣ್ಣನು ಗಾಬರಿಯಾಗುತ್ತಿದ್ದ. ಮುಂದೆ ಬರೀ ಕ್ಷೇಮದ ಪತ್ರವೆಂದು ತಿಳಿದು ಉಸ್ಸೆನ್ನುತ್ತಿದ್ದ. ಇದರಲ್ಲಿ ಓದು ಮೊದಲಿನಂತೆ ಒಂದೆ ಹಿಡಿತದಿಂದ ನಡೆಯಲಿಲ್ಲ. ಅನಂತನ ಅರ್ಥಶಾಸ್ತ್ರವನ್ನೇ ಬೀ. ಎ. ಯ ವಿಷಯವೆಂದು ಜಗಣ್ಣನು ತಕ್ಕೊಂಡಿದ್ದ. ಆದರಿಂದ ಅವನ ಟಿಪ್ಪಣೆಗಳು, ಪುಸ್ತಕಗಳು ಎಲ್ಲ ಪ್ರಯೋಜಕವಾದವು. ಪರೀಕ್ಷೆಯ ಫಾರ್ಮು ತುಂಬುವದಾಯ್ತು. ಮುಂದೆ ಕೆಲದಿನಗಳಲ್ಲಿ ಮತ್ತೆ ತೆಪ್ಪಗಿನ

ನೀರಿನಲ್ಲಿ ಹರಕು ತೂರಿದಂತೆ ಒಂದು ಕಾಗದ ತಲುಪಿತು. ಆದರೆ ಅದೇನು ಬಹಳ ಅಳುಕಿಸಲಿಲ್ಲ. ಬಂಡೇರಾಯರಿಗೆ ಸಣ್ಣಾಗಿ ಜ್ವರ ಬರುತ್ತಿದ್ದವಂತೆ.

ಪುಣೆಕ್ಕೆ ಹೋಗಿ ಪರೀಕ್ಷೆ ಕೊಡಬೇಕೆಂದು ಇಬ್ಬರೂ ಅಲ್ಲಿಗೆ ಹೋದರು. ಅನಂತನು ಎಲ್ಲ ವೆಚ್ಚವನ್ನು ತಾನೇ ನೋಡಿಕೊಳ್ಳುತ್ತಿದ್ದ. ಮೊದಲಿನ ಡಿಗ್ರೀ ಪರೀಕ್ಷೆಯಲ್ಲಿ ಮುಟ್ಟದ ತುತ್ತತುದಿಯನ್ನು ಇದರಲ್ಲಿ ಮುಟ್ಟಬೇಕೆಂದು ಅವನ ಅಭ್ಯಾಸವು ದಿನಕ್ಕೆ ಹತ್ತು ಹನ್ನೆರಡು ತಾಸು ಆಯಿತು. ಜಗಣ್ಣನ ಪರೀಕ್ಷೆ ಸನಿಯಕ್ಕೆ ಬಂದಿತು. ಗಾಬರಿ ಗಾಬರಿಯಲ್ಲಿ ಒಮ್ಮೆ ಚಳಿಜ್ವರ ಬಂದು ಹೋದವು. ಪರೀಕ್ಷೆ ಕೊನೆಗಂಡಿತು! 'ಇನ್ನು ಬೇಕಾದ್ದು ಆಗಲಿ!' ಎಂದು ಹಾರಿದ. ಮುಂದೆ ಕೂಡ ಅನಂತನ ಜೋಡಿಯಾಗಿ ಅಲ್ಲಿಯೇ ಇದ್ದು, ತನಗೆ ಪ್ರಾಣ ಕೊಟ್ಟವನ ಸೇವೆ ಮಾಡಿದಂತೆ ಮಾಡಿ, ಅವನು ಹಾರೈಸಿದ ಫರ್ಸ್ಟ್‌ಕ್ಲಾಸು ದೊರೆಯಲಿ—ಎಂದು ಪ್ರಾರ್ಥಿಸಿದ. ಅನಂತನ ಪರೀಕ್ಷೆಯೂ ತೀರಿತು. ಇಬ್ಬರೂ ಗೆಲವೂರಿಗೆ ಮರಳಿದರು.

ಜೂನ್ ೧೯೨೭ರಲ್ಲಿ ಗೆಲವೂರು ಗೆಳೆಯರಿಬ್ಬರಿಗೆ ನಿಜವಾಗಿ ಗೆಲವಿನ ಊರಾಗಿ ತೋರಿತು. ಜಗಣ್ಣನು ಬಿ. ಏ ಪಾಸ, ಅನಂತನು ಎಂ. ಏ ಫರ್ಸ್ಟ್‌ಕ್ಲಾಸ್! ಸ್ನೇಹವು ಮಾಡಿದ ಘೋರ ತಪಸ್ಸಿನ ಫಲವು ಸಿಕ್ಕಿತು. ಆದರೆ ಈ ಡಿಗ್ರೀ ಸ್ವರ್ಗವು ಏಳು ದಿನದ ನಹುಷಸ್ವರ್ಗವೆಂದೂ ಅಲ್ಲಿಂದ ಭೂಮಿಗೆ ಬೀಳುವಾಗ, ಕಾಗೆ ಹದ್ದು ಕುಕ್ಕುವಾಗ ಅದರ ಸುಖವು ತಿಳಿಯುವದೆಂದೂ ವರ್ತಮಾನಪತ್ರದ ಸಾಲುಸಾಲಿನಲ್ಲಿ ಅಡಗಿ ನಿಂತ ಕಾಲರಾಕ್ಷಸನು ಅವರಿಬ್ಬರಿಗೂ ಕೂಗಿ ಹೇಳಿದಂತಾಯಿತು.

# ೧೫ನೆಯ ಕಿಡಿ

---

ಕಾಮಣ್ಣನ ಬಿ. ಏ ನಪಾಸ್ ನಂಬರ ಎರಡು ಆಯಿತು. ಕಾಲೇಜಿಗೆ ನೇಮದಿಂದ ಹೋಗುವದೇನು ತಪ್ಪಲಿಲ್ಲ. ನಪಾಸಿನ ಸಲುವಾಗಿ ಕನಸಿನಲ್ಲಿ ಸಹ ಅವನು ಕಣ್ಣೀರು ಇಡಲಿಲ್ಲ. ಯಾಕೆ ಇಡಬೇಕು? ಪಾಸಾಗಿ ಪಡೆಯುವ ಸೌಭಾಗ್ಯವೇನು ? ಗರ್ಭಶ್ರೀಮಂತನಾದ ಅವನಿಗೆ ನೌಕರಿಯು ಬೇಕಾಗಿರಲಿಲ್ಲ. ಬೇಕಾದರೂ ಅದು ಸಿಗುವಂತಿರಲಿಲ್ಲ. ಅಂತೇ ಆ ಬಗ್ಗೆ ಅವನಂಥ ನಿಶ್ಚಿಂತಪುರುಷನು ಇನ್ನೊಬ್ಬನಿಲ್ಲ—ಎನ್ನುವಂತೆ ಇದ್ದನು. ಕಾಲೇಜಿಗೆ ಮತ್ತೆ ಜೂನದಲ್ಲಿ ಹೋದನು.....ಹಣವಿದ್ದವರು ಹಾಳುಮಾಡಲಿಕ್ಕೆಂದು ಮುಂಬೈಗೆ ತಾಜಮಹಾಲ್ ಹೊಟೆಲ್ಲಿಗೆ ಹೋಗುವಂತೆ.

ಈಗಾಗಳೆ ಅವನ ಈ ಕಲಿಕೆಯಲ್ಲಿ ಎಂಟು ಸಾವಿರದವರೆಗೆ ಖರ್ಚಾಗಿದ್ದವು. ಅವನ ತಂದೆಯ ದೇಸಗತಿಯು ಹೆಸರಿಗೆ ಮಾತ್ರ ಎಂಬದು ಅವನಿಗೆ ಅರಿವು ಬರಲಿಲ್ಲ. ಹೆಣ್ಣುಮಕ್ಕಳ ಮದುವೆ, ಖಟ್ಲೆ ಖೋಕಲೆ, ದಿನದ ತಿನ್ನಾಸಿಕೆ ಮೊದಲಾದವುಗಳ ಖರ್ಚಿನ ಬಾಬು ಬೆಳೆದು, ಒಕ್ಕಲತನದ ಅಲಕ್ಷ್ಯ, ಮಳೆಯ ಅವಕೃಪೆ ಮುಂತಾದ್ದರಲ್ಲಿ ಆದಾಯ ಕಡಿಮೆಯಾಗಿ, ಹತ್ತು ಸಾವಿರದ ಮೇಲೆ ದೇಸಾಯರು ಸಾಲತೆಗೆದಿದ್ದರು. ಅಲ್ಲದೆ, ಮಗನ ಮೇಲಿನ ಮೋಹದಿಂದ ಅವನು ಕೇಳಿದಂತೆ ಮನಿ-ಆರ್ಡರು ಕಳಿಸುತ್ತ, ಈ ಮೂರು ನಾಲ್ಕು ವರ್ಷಗಳಲ್ಲಿ ಮೇಲೈದು ಸಾವಿರದ ಕಡವನ್ನು ಅದಕ್ಕೆ ಕೂಡಿಸಿದರು. ಬಡ್ಡಿ ಸಹಿತವಾಗಿ ಅದೆಲ್ಲ ಇಪ್ಪತ್ತು ಸಾವಿರದ ಮನೆ ಸೇರುತಲಿತ್ತು. ಆದರೂ ದೇಸಗತಿಯ ಠೀವಿಯಲ್ಲಿ ಕಡ್ಡಿಯಷ್ಟು ಕೊರತೆ ಆಗುವಂತಿಲ್ಲ. ಅಂಥ ಮರುಳುದುಂದನ್ನು ನೋಡಿದರೆ 'ಎಲ್ಲಿಯೋ ದೇಶದ್ರೋಹದಿಂದ ದೊರೆತ ದೇಸಗತಿಯು ಕಾಣತದೆ, ಹರಿದು ಹೋಗಲಿಕ್ಕೆ ಬಂದ ರಾಡಿ ಹಳ್ಳ' ಎನ್ನುವಂತಿತ್ತು. ಆದರೆ ದೇಸಾಯರಿಗಾಗಲಿ ಅವರ ಸುತ್ತುಮುತ್ತಿನವರಿಗಾಗಲಿ ಈ ಚಿಂತೆಯೇ

ಇಲ್ಲ. ಏನಾದರೂ ಮಾತು ಹೊರಟಾಗ 'ಕಾಲದ ಕಿಮ್ಮತ್ತೇನು- ಐದಾರು ಸಾವಿರದ ಉತ್ಸವದ ಮುಂದೆ?' ಎಂಬ ಹೆಮ್ಮೆಯ ಹೇಳಿಕೆಗೆ ತಡವಿಲ್ಲ. ಇಂಥವರಲ್ಲಿ ಯೋಗಾಯೋಗದಿಂದ ಕುಬೇರರಾಯರ ಮಗ ಳಾದ ಪದ್ಮಿಯನ್ನು ಕಾಮಣ್ಣನಿಗೆ ಮದುವೆ ಮಾಡಿಕೊಡಬೇಕೆಂಬ ಆಲೋಚನೆ ಎದ್ದಿತು.

ಎಲ್ಲರಂತೆ ದೇಸಗತಿಯ ಮುಬ್ಬಿಗೆ ಬಿದ್ದು ರಾಯರು ನಾಲ್ಕು ಸಾವಿರ ವರದಕ್ಷಿಣೆಗೆ ಎಲ್ಲ ಗೊತ್ತುಮಾಡಬೇಕೆಂದರು. ಕಾಮಣ್ಣನು ಹುಡುಗಿಯನ್ನು ನೋಡಲಿಕ್ಕೆ ಬಂದಾಗ ಅನಂತನಿಗೆ ಇದೆಲ್ಲ ಮೊದಲ ನೆಯ ಸಾರೆ ಗೊತ್ತಾದದ್ದು. ಒಳ್ಳೇ ಸಿಂಗಾರಿಯನ್ನು ಬಯಸುವ ಕಾಮಣ್ಣನು ತಾನೇ ಒಪ್ಪಬಹುದೆಂದು ಅವನು ಅದಕ್ಕೆ ಮಹತ್ತ್ವ ಕೊಡಲಿಲ್ಲ. ಆದರೆ ಕಾಮಣ್ಣನ ಕಲ್ಪನೆಗಳೆಲ್ಲ ಬದಲಾಗಿದ್ದವು. 'ಮದುವೆ ಯಾದರೆ ಸಾಕು, ಪ್ರೀತಿ ಗೀತಿ ಹಿಂದುಗಡೆ ಮಾಡೋಣ' ಎಂಬ ತತ್ತ್ವಕ್ಕೆ ಇಳಿದಿತ್ತು - ಅವನ ಶೃಂಗಾರವು. ಆದರಿಂದ ಅವನು ಒಪ್ಪಿದನೆಂದೂ ರಾಯರೂ ಮೇಲಿನಂತೆ ಗೊತ್ತುಪಡಿಸಿದರೆಂದೂ ಅನಂತನಿಗೆ ತಿಳಿದು ಹೋಯಿತು; ಕಳವಳವಾಯಿತು. ಕಾಮಣ್ಣನ ಒಳಗತೆಯನ್ನೆಲ್ಲ ಬಲ್ಲ ಅವನು ರಾಯರಿಗೆ ಬಿನ್ನಹಮಾಡಿದನು: 'ಮದುವೆ ಮುರಿಯಿರಿ, ಈ ದೇಸಗತಿ ಹೊರಗಿನ ಥಳಕು' ಎಂದು ಬೇಕಾದಷ್ಟು ವಾದಿಸಿದನು. ನಿನಗೆ ತಿಳಿಯುವದಿಲ್ಲ ಹೋಗೆಂದು ರಾಯರು ಮದುವೆ ಹೂಡಿದರು. 'ಇದರಲ್ಲಿ ಕಾಮಣ್ಣನ ತಂಗಿಯನ್ನು ಕೊಟ್ಟು, ಅನಂತನ ಅಕ್ಕೋಕಾಳನ್ನು ಕಡೆಗಾ ಣಿಸಬೇಕೆಂದು ರಾಯರಿಗೆ ಹೊಳೆಯಿತು. ಕಾಮಣ್ಣನ ತಂದೆ ಕೇಳಿ ಖುಷಿ ಯಾದರು. 'ಫಸ್ಟ್ ಕ್ಲಾಸಿನ ರತ್ನ ಸಿಕ್ಕರೇನು ಕೇಳುತ್ತೀರಿ' ಎಂದರು. ಕಾಮಣ್ಣ ಬಹಳ ಓಡಾಡಿದ. ಅನಂತನು ಅಚಲನಾದನು. 'ನಾನು ಗಳಿಸುವವರೆಗೆ ನನ್ನ ಮದುವೆ ಸುಳ್ಳು' ಎಂದು ಎಲ್ಲ ಹಿರಿಯರಿಗೆ ಸಾರಿ ಹೇಳಿದನು. ತನಗೆ ಅಪಮಾನವಾಯಿತೆಂದು ರಾಯರು ಸಿಟ್ಟಾದರು. ಅನಂತನ ಮೇಲಿನ ಮಮತೆ ಬಿರಿಯಿತು. ಆಯಿತು, ಪದ್ಮಿಯೊಬ್ಬಳ ಮದುವೆ ಸಾಂಗವಾಯಿತು. ಹೊರಗಿನಿಂದ ಗ್ಯಾಸಬತ್ತಿ, ಬ್ಯಾಂಡು, ಬುಂದೆದುಂಡಿಗಳನ್ನು ನೋಡಿ ತಣಿದವರ ಕಣ್ಣಿಗೆ 'ಅಪರೂಪ ಉತ್ಸವ'

ಎನಿಸಿತು. ರಾಯರನ್ನು ಮಾತ್ರ ಸಾಲದ ಮಾರಿ ಗಟ್ಟಿಯಾಗಿ ಅಪ್ಪಿಕೊಂಡಳು !

ರಾಯರಿಗೆ ಅನಂತನಲ್ಲಿದ್ದ ಆಸ್ಥೆಯು ಕಡಿಮೆಯಾಗಿತ್ತು. ಆದರೂ ಅರ್ಧ ಮನಸ್ಸಿನಿಂದ ವಕೀಲಿಯ ಅಭ್ಯಾಸಕ್ಕೆ ಬೇಕಾದರೆ ಹೋಗೆಂದು ಆಗ್ರಹಪಟ್ಟರು. ಅವನೇನು ಒಪ್ಪಲಿಲ್ಲ. ಕೇಳಿದ್ದು ಮನಮುಟ್ಟಿ ಅಲ್ಲ-ಎಂಬದು ಅವನಿಗೆ ಗೊತ್ತು. ಇದಲ್ಲದೆ, ತನ್ನ ಎರಡು ವರ್ಷದ ಬೀಯಕ್ಕೆ ರಾಯರು ತಿಂಗಳಿಗೆ ಇಪ್ಪತ್ತು ಮೂವತ್ತರಂತೆ ಕೊಡಲಾರರೆಂದು ಅವನು ಕಂಡಿದ್ದನು. ಇದೂ ಅಲ್ಲದೆ, ತನ್ನ ಸುತ್ತು ಬೆಳೆಯುತ್ತಿರುವ ವಕೀಲರ ಬೇನಸದ ಬೇಗೆಯನ್ನು ನೋಡಿ ಕಳವಳ ಹೊಂದಿದ್ದನು. ಹುಲ್ಲಿಲ್ಲದ ಗದ್ದೆಯಲ್ಲಿ ಮೇಯಲಿಕ್ಕೆ ನಿಂತ ಸಾವಿರಾರು ಗೋಗಳಂತೆ ಕಾಣುವ ಹೊಸ ಪದವೀಧರರ ಹೊಲಬು ಅವನ ಎದೆ ನಡುಗಿಸಿತ್ತು. ಹೆಂಡಿರು ಮಕ್ಕಳಿಗೆ ಕಡಿಮೆ ಇಲ್ಲ. ದೊಡ್ಡಸ್ತಿಕೆಯ ರೀತಿ ನಡತೆಗಳನ್ನು ಬಿಡಲಾಗದು. ಆದಾಯ ಮಾತ್ರ ಪೂಜಿ. ಎಷ್ಟು ದುಡಿಯುವ ಶಕ್ತಿ, ಇಚ್ಛೆ ಇದ್ದರೂ ಪೂಜಿ ಎಂಬ ಅವಸ್ಥೆಯು ತೀರ ದಾರುಣವಾಗಿ ತೋರಿತು. ಈ ತೋರಿಕೆಯೊಡನೆ ಒಂದು ನಿಶ್ಚಯ ತಲೆಯೆತ್ತಿತು. 'ತನ್ನ ಸ್ಥಿತಿ ಏನಾದರೂ ಬೇಕು, ಮೊದಲು ಜಗಣ್ಣನು ಗತಿಗೆ ಹತ್ತುವಂತೆ ಅವಸರ ಪಡಬೇಕು' ಎಂದು ಅವನ ಕಡೆಗೆ ನಡೆದನು.

ಜಗಣ್ಣನು ದೀರ್ಘ ವಿಚಾರಗಳಲ್ಲಿ ಮುಳುಗಿ ಕುಳಿತಿದ್ದನು. 'ಕೈಗೆ ಸಿಕ್ಕ ಬಿ. ಏ. ಪದವಿಯನ್ನು ಹೇಗೆ ಖಾಸಗಾರನಂತೆ ಜಾಲ ಮಾಡಿ ಬೀಸಲಿ? ಯಾವ ಕಡೆಗೆ ಹೋಗಲಿ?' ಎಂಬ ತರದ ವಿಚಾರಗಳು ನಡೆದಿದ್ದವು. ಪಾಸಿನ ಉಕ್ಕು ಇಳಿದು ಭವಿಷ್ಯದ ಕಡೆಗೆ ನೋಟ ಹರಿದಿತ್ತು. ಏನೂ ಬಗೆಹರಿಯದೆ ಕುಳಿತಾಗ ಅನಂತ ಬಂದನು.

'ಏನು ಅನಂತಾ, ಪಾಸೆಲ್ಲಾ ಮಾಡಿದಿ. ಮುಂದಿನ ಬಗೆಯೇನು? ಈ ನಾಲ್ಕೈದು ವರ್ಷಗಳ ಹಿಂದೆ ಇದ್ದಂತೆ ಈಗ ಆಗಿರುವೆ. ದೊರೆತದ್ದೇನು?'

'ಏನೂ ದೊರೆಯುವದಿಲ್ಲ ಎಂದು ಗೊತ್ತಾದ್ದು.'

ಅನಂತನು ಸಮಸಗೆಮಾತಿನಿಂದ ಮೊದಲುಮಾಡಿದನು. ಮುಂದೆ ಸರಕಾರೀ ಶಿಕ್ಷಣಖಾತೆಗೊಂದನ್ನೂ ಆ ಜಿಲ್ಲೆಯ ಕಲೆಕ್ಟರರಿಗೊಂದನ್ನೂ

ಅರ್ಜೀ ಕಳಿಸುವದರ ಸಲುವಾಗಿ ಸಲಹೆಕೊಟ್ಟನು. ಬಂಡೇರಾಯರು ನಡುವೆ ಬಾಯಿಹಾಕಿ ' ಇವೆಲ್ಲಾ ಅರ್ಜಿಯಿಂದ ಆಗಲಾರವು, ಅನಂತಾ. ವಶೀಲೀ ಬೇಕು, ಸುವರ್ಣವೃಷ್ಟಿ ಬೇಕು. ಎರಡೂ ಇಲ್ಲದ ಇಲ್ಲಣ ನಾವು' ಎಂದು ಎದೆಗುಂದಿ ಆಡಿದರು. 'ಅರ್ಜಿಯಂತೂ ಹೋಗಲಿ' ಎಂದು ಕಳಿಸುವದಾಯ್ತು. ಕಾಲೇಜಿನಿಂದ ತರಿಸಿದ ಪ್ರಶಸ್ತಿಪತ್ರಿಕೆಗಳು ಜೋಡಿಸಲಾದವು. ಗೋದವ್ವನು ಹಣಮಪ್ಪನಿಗೆ ಪ್ರದಕ್ಷಿಣೆ ನಮಸ್ಕಾರ ಗಳನ್ನು ಜೋರುಮಾಡಿದಳು. ಅದರ ಫಲವೆಂದೋ ಏನೋ! ಅರ್ಜಿಗಳು ಮುಟ್ಟಿದ ಬಗ್ಗೆ ಅವರಿಂದ ಉತ್ತರ ಬಂದಿತು. ನೌಕರಿಯು ಸಿಕ್ಕಿತೆಂದೇ ಗೋದವ್ವನ ಭಾವನೆ ಮೊದಲಾಗಿ, ಮತ್ತೆ ಸುಳ್ಳಾಯಿತು.

ಮನೆಯ ಸಂಗ್ರಹಗಳು ತೀರತೊಡಗಿದವು. ಒಂದೂಟ, ಒಂದು ಉಪಹಾರದ ಕ್ರಮದಿಂದ ಕೆಲದಿನ ಸಾಗಿತು. ಜಗಣ್ಣ ಕಣ್ಣೀರಿನ ಪರಿ-ಷಿಂಚನಮಾಡದೆ ಉಣ್ಣದ ದಿನವಿಲ್ಲ. ಬಂಡೇರಾಯರು ಹುಚ್ಚಾದರು. ಅನಂತನಿಗೆ ನೋಡಲಾರದಂತಾಯಿತು. ಆಗೊಮ್ಮೆ ಜಯರಾಯ ಬಂದು ಯುಕ್ತಿ ಹೇಳಿದ. ಆ ಪ್ರಕಾರ ಗೋದವ್ವ ಹಾಗೂ ಹುಡುಗರನ್ನು ಬಹಳದಿನದ ಮೇಲೆ ಅವರ ತವರೂರಿಗೆ ಕಳುಹಿಕೊಟ್ಟದ್ದಾಯ್ತು. ಅಂಬಕ್ಕ ತವರುಮನೆಗೆ ಹೋಗಿದ್ದಳು. ಬಂಡೇರಾಯರು, ತಮ್ಮ ಹಳೆಯ ಮಿತ್ರನೊಬ್ಬ ಹಳ್ಳಿಯೊಂದರಲ್ಲಿ ಸಾಲೆಯ ಮಾಸ್ತರನಿರುವನೆಂದು ಅವ ನಲ್ಲಿ ಇರಲಿಕ್ಕೆ ಹೋದರು. ಜಗಣ್ಣನೊಬ್ಬನು ಜಯರಾಯನ ಅತಿಥಿ ಯಾಗಿ ಉಳಿದನು. ತಾನು ಕಲಿತ ಸಾಲೆಯವರಲ್ಲಿ ಬಿನ್ನವಿಸಿಕೊಂಡನು. ಅವರು ಹೇಳಿದರು: ಇದ್ದವರನ್ನೇ ತೆಗೆಯುವ ಪ್ರಸಂಗವಿದೆಯೆಂದು. ನಿತ್ಯವೂ ಗೆಳೆಯನಲ್ಲಿ ಉಣ್ಣುವದು, ಲಾಯಬ್ರರಿಯಲ್ಲಿ ಕುಳಿತು ಎಲ್ಲ ಪತ್ರಿಕೆಗಳನ್ನು ಚಾಳಿಸಿ, ಜಾಹೀರಾತುಗಳನ್ನು ನೋಡಿ, ಬಿ. ಏ ತರುಣನು ಬೇಕೆಂಬ ಪ್ರಕಟನೆಯಿದ್ದಲ್ಲೆಲ್ಲ ಅರ್ಜೀಬರೆಯುವದು ಜಗಣ್ಣನ ಉದ್ಯೋಗವಾಯ್ತು, ಬೇರೆ ಮಾಡುವದಾದರೂ ಏನು?

ಇತ್ತ ಅನಂತನು ಮೊದಲನೆಯ ವರ್ಗದಲ್ಲಿ ನಿಂತೂ ಅಭಾಗಿಯಾ ದನು. ಕಾಲೇಜಿನಲ್ಲಿ ಅಧ್ಯಾಪಕನಾಗಬೇಕೆಂದು ಅಲ್ಲಲ್ಲಿ ಅಲೆದು ಬಂದನು. ವ್ಯರ್ಥವಾಯಿತು. ಸರಕಾರೀ ಕಾಲೇಜುಗಳಲ್ಲಿ ಪರದೇಶಕ್ಕೆ ಹೋಗಿ

ಬಂದವರು ಮಾತ್ರ ಮಾರಾಟ ಆಗುತ್ತಿದ್ದರು. ಉಳಿದವರು ಯಾವ ಕ್ಲಾಸಿನಲ್ಲಿ ಉತ್ತೀರ್ಣರಾಗಿದ್ದರೂ ಬೆಲೆ ಬಾಳುತ್ತಿರಲಿಲ್ಲ. ಖಾಸಗೀ ಸಂಸ್ಥೆಗಳಲ್ಲಿಯಂತೂ ಅರ್ಥಶಾಸ್ತ್ರದ ಶಿಕ್ಷಕರ ಕೊರತೆ ಇದ್ದಿಲ್ಲ. ಕಡೆಗೊಮ್ಮೆ ಕಕ್ಕನು ಸೂಚಿಸಿದ ಪ್ರಕಾರ ಮಾಮಲೇದಾರಿಯು ಸಲುವಾಗಿ ಕಮಿಶನರಿಗೆ ಅರ್ಜಿಮಾಡಿದನು. ಅನಂತನಂಥ ಚುರುಕು ಹುಡುಗನಿಗೆ ಅದು ದೊರಕೀಯೇ ತೀರುವದೆಂದು ಎಲ್ಲರೂ ಅಭಿಪ್ರಾಯ ಪಟ್ಟರು. ಅವರ ಮನೋರಾಜ್ಯದಲ್ಲಿ ಅವನು ಕೆಲಕಾಲ ಮಾಮಲೇದಾರನಾಗಿ ಓಡಾಡಿದನು. ಅದರಂತೆ ಇದಿರುಭೆಟ್ಟಿಗಾಗಿ ಬೆಳಗಾಂವಿಯಿಂದ ಸರಕಾರದ ಕರೆ ಬಂದಿತು. ಬೂಟು ಚಣ್ಣದ ಸಾಹೇಬೀ ವೇಷಮಾಡಿಕೊಂಡು, ಗೊತ್ತಾದ ದಿನ ಹೋಗಿ ಹಾಜರಾದನು. ಸಾಹೇಬರು ಅವನ ನಡೆನುಡಿಗೆ ಮರುಳಾದರು; 'ಮುಂದೆ ತಿಳಿಸುತ್ತೇವೆ' ಎಂದು ಔಪಚಾರಿಕವಾಗಿ ಕೊನೆಗೈಯ್ಯುತ್ತ 'ನೀವು ಬ್ರಾಹ್ಮಣರಾಗಿ ಹುಟ್ಟಬಾರದಿತ್ತು!' ಎಂದು ಹಲ್ಲೊಳಗೆ ನಗೆನಕ್ಕರು. ಅನಂತನು ಎಲ್ಲ ತಿಳಿದುಕೊಂಡನು. 'ಮುಗಿಯಿತು' ಎಂದು ಹೊರಬಿದ್ದನು. ಪರಿಣಾಮವು ಪ್ರಕಟವಾಗಲು, ಅದರಲ್ಲಿ ಒಬ್ಬ ಬ್ರಾಹ್ಮಣೇತರ ಮರಾಠಾ, ಒಬ್ಬ ಮುಸಲ್ಮಾನ ಇದ್ದರು. ಆ ಪ್ರುಬೇಶನರಿಯೂ ಅನ್ಯರ ಪಾಲಾಯಿತು. ಗೆಲವೂರಲ್ಲಿ ಈ ಸುದ್ದಿಯನ್ನು ಕೇಳಿ ಮರುಗದವರಿಲ್ಲ.

ಇತ್ತ ಜಯರಾಯನು ಪ್ರಯೋಗಮಾಡಿದ ವಕೀಲೀ ಅಸ್ತ್ರದಿಂದ ಜಗಣ್ಣನಿಗೆ ಕಲೆಕ್ಟರರ ಭೆಟ್ಟಿಯಾಗಲು ಐದು ಮಿನಿಟಿನ ಸುವರ್ಣ ಸಂಧಿಯು ದೊರೆಯಿತು. ಹೆಸರು ದಸೆ ಕೇಳಿದ ಮೇಲೆ ಕಲೆಕ್ಟರ್ ಸಾಹೇಬರು ಥಡಥಡ ಬೈಯಲಿಕ್ಕೇ ಆರಂಭಿಸಿದರು. 'ದೇಶದಲ್ಲಿ ಇದ್ದ ಬುದ್ಧಿಯೆಲ್ಲ ನಿಮ್ಮಲ್ಲಿದ್ದು ನೀವು ಬ್ರಾಹ್ಮಣರು ನೌಕರಿಯ ಭಿಕ್ಷುಕರಾಗಿ ಬರಬೇಕೇ? ಹೊಸಹೊಸ ಕಾರಖಾನೆ ತೆಗೆಯಬೇಕು, ಹೊಲ–ತೋಟಗಳಲ್ಲಿ ದುಡಿಯಬೇಕು, ಅದಕ್ಕಾಗಿ ಸಾಹಸಮಾಡಬೇಕು. ಎಲ್ಲರೂ ಕಲಿತದ್ದೇ ಗಿಳಿಪಾಠ ಕಲಿತು, ಅರ್ಜೀ ಗೀಚುತ್ತ ಕುಳಿತರೆ ನಿಮ್ಮ ಕೆಲಸವಾಯ್ತೇನು?' ಎಲ್ಲದಕ್ಕೂ 'ಹೌದು ಖಾವಂದರೇ' ಎನ್ನುತ್ತ ಮೈ ಬೆವತ ಜಗಣ್ಣನು ದಿಕ್ಕು ತಪ್ಪಿ ನಿಂತನು. 'ಬ್ರಾಹ್ಮಣರಿಗೆ ಇನ್ನು ನೂರು ವರ್ಷ ನೌಕರಿ ಸಿಗುವದಿಲ್ಲ'

ಎಂದು ಭವಿಷ್ಯ ಹೇಳಿ, ಕಲೆಕ್ಟರಸಾಹೇಬರು ಅವನನ್ನು ಕಳಿಸಿದರು. ಅವನಿಗೆ ಯಾಕೆ ಹೋದೆನೋ– ಎನಿಸಿತು.

ಇಬ್ಬರೂ ಅದೇಬಗೆಯ ಅನುಭವಪಡೆದು ಒಮ್ಮೆ ಕೂಡಿದರು. ತಮ್ಮ ನೆನಪುಗಳನ್ನೆಲ್ಲ ಹೇಳುಕೇಳುವದಾದ ಮೇಲೆ ಜಗಣ್ಣನು ಬಹಳ ನಿರಾಶಿತನಾಗಿ 'ಹೋದಹೋದಲ್ಲಿ ಹೀಗೆ ಉತ್ತರ ಕೊಡುವದಾದರೆ ನಮ್ಮ ಗತಿಯೇನು ಅನಂತಾ?' ಎಂದು ಕೇಳಿದನು.

'ಗತಿಯೇನು? ನಮ್ಮ ಕಾಲಮೇಲೆ ನಿಲ್ಲಲಿಕ್ಕೆ ಕಲಿಯೋಣ?'

'ಅಲ್ಲ, ಅನಂತಾ, ಬ್ರಾಹ್ಮಣರಿಗೇ ಯಾಕೆ ಈ ದುಃಸ್ಥಿತಿಯು ಬಂದಿರಬೇಕು?'

'ಹಿಂದೆ ಒಮ್ಮೆ ಸುಸ್ಥಿತಿಯು ಬಂದು ಪೀಳಿಗೆಯು ಆಗಿಹೋಯಿತೆಂದು. ಆ ಕಾಲದಲ್ಲಿ ಬ್ರಾಹ್ಮಣರೆಂದರಾಯ್ತು–ಬೇಕಾದ ಕೆಲಸ. ಇಂಗ್ಲಿಶ್ ಬರದ ವಕೀಲರೂ, ಮ್ಯಾಟ್ರಿಕ್ ಆದ ಮಾಮಲೇದಾರ ಡೆಪ್ಯುಟಿಗಳೂ ಆಗ ಗಳಿಸಿ ಧನ್ಯರಾಗಲಿಲ್ಲವೇ? ಆಗಾದದ್ದು ನ್ಯಾಯ, ಈಗಿನದು ಅನ್ಯಾಯವೆಂದೇಕೆ?

'ಹೌದಪ್ಪಾ, ಅವರ ತಪ್ಪನ್ನು ನಾವು ಅನುಭೋಗಿಸಬೇಕೇ? ಕಲಿತು ಪಾಸಾಗಿಯೂ ಈ ಗತಿಯೇ?'

'ಹಾಗಲ್ಲ, ಜಗಣ್ಣ! ಇದು ಕೇವಲ ಜಾತಿಯ ಪ್ರಶ್ನೆಯಲ್ಲ. ರಾಜ್ಯ-ಕರ್ತರ ಆಟಗಾರಿಕೆಯಲ್ಲಿ ಹಾಗೆ ಆಗಿದ್ದೇನು ಸುಳ್ಳಲ್ಲ. ಆಳುಗಳಿಂದ ಕೆಲಸ ಮಾಡಿಸಿಕೊಳ್ಳುವ ಒಡೆಯನು ಒಬ್ಬರನ್ನು ಉಬ್ಬಿಸಿ ಇನ್ನೊಬ್ಬನನ್ನು ಬೀಳುಗಳೆದು,ತಾನು ಉಳಿಯುವ ಹಂಚಿಕೆಮಾಡುವದು ಸಹಜವೇ. ಆಳು ಆಳಾಗಿರುವವರೆಗೆ ಈ ಜೋಲಾಟವು ತಪ್ಪದು. ಆದರೆ ಮೂಲ ಪ್ರಶ್ನೆ ಬೇರೆಯೇ ಆಗಿದೆ.'

'ಅದೇನು?' ಜಗಣ್ಣ ಕಣ್ಣುಹಿಗ್ಗಿಸಿ ಕೇಳಿದನು.

'ಅದು ಜನಸಂಖ್ಯೆ! ಕಲಿತವರ ಸಂಖ್ಯೆ, ಒಂದೇ ಪಡಿಯಚ್ಚಿನಲ್ಲಿ ಕಲಿತವರ ಸಂಖ್ಯೆ ಮಿತಿಮೀರಿ ಹೆಚ್ಚುವದರಿಂದ ಉಂಟಾಗಿದೆ. ನಾಕು ಬೆರಳಿನ ಇಕ್ಕಟ್ಟಿನ ದಾರಿಯಲ್ಲಿ ನೂರುಮಂದಿ ಹಾಯಬೇಕೆಂದರೆ ಹೇಗೆ? ಉಸಿರುಕಟ್ಟದೇ? ತಿಕ್ಕಾಟವಾಗದೇ? ಅದೇ ನಮ್ಮೆದಿರು ಇಂದು

ನಡೆದಿದೆ. ನಾವೂ ಈ ಯಂತ್ರದ ತುತ್ತಾಗಿ ನಿಂತಿದ್ದೇವೆ, ಜಗಣ್ಣ. ಬೇರೆ ಹಾದಿ ಹುಡುಕಬೇಕು; ಆದರೆ ಹುಡುಕುವ ಜೀವದಾಸೆಯನ್ನೆ ಶಿಕ್ಷಣವು ಕಸಿದುಕೊಂಡು, ನಮ್ಮೆಲ್ಲರನ್ನೂ ನೌಕರಿಯ ಮನೆಯ ಮುಂದೆ ಮುಚ್ಚಿತೆರೆಯುದ ಉಕ್ಕಿನ ಬಾಗಿಲಕ್ಕೆ ತಲೆಘಟ್ಟಿಸಲು ಹಚ್ಚಿದೆ.'

ಇಬ್ಬರೂ ಕೆಲಹೊತ್ತು ಸ್ತಬ್ಧರಾದರು. ಡಿಗ್ರೀ ದೊರಕಿಸಿ ಮುಂದಿನ ಆಶ್ರಯಕ್ಕೆಂದು ಕಟ್ಟಿದ ಉಸುಬಿನ ಗೂಡುಗಳು ನೆಲಸಮನಾದದ್ದನ್ನು ನೋಡುತ್ತ ಕುಳಿತಂತೆ ಕುಳಿತರು.

ಕೆಲದಿನ ಹೋದವು. ದೀಪಳಿಗೆ ತೀರಿತು. ಅಲ್ಲಿಯ ಒಂದು ಇಂಗ್ಲಿಶ್ ಸಾಲೆಯಲ್ಲಿ ಒಬ್ಬ ಶಿಕ್ಷಕರು ಐದಾರು ತಿಂಗಳ ರಜೆಯಮೇಲೆ ಹೋದರು. ಅನಂತನನ್ನು ಆ ಸಾಲೆಯವರು ದುಂಬಾಲಬಿದ್ದು ಕರೆದರು. ಜಗಣ್ಣನ ಸಲುವಾಗಿ ಆತನು ಹವಣಿಸಿದನು. ಮೇಲಿನ ಈಯತ್ತೆಗಳಿಗೆ ಕಲಿಸುವ ಶಿಕ್ಷಕನು ಬೇಕೆಂದು ಸಾಲೆಯವರು ಅನಂತನೇ ಬೇಕೆಂದರು. ತಾನೊಬ್ಬನು ಮೊದಲು ಹೊಕ್ಕು ಮುಂದೆ ನೋಡೋಣ- ಎಂದು ಅನಂತನು ಒಬ್ಬ ಶಿಕ್ಷಕನಾದನು. ಜಗಣ್ಣನಿಗೂ ಅದರಿಂದ ಎದೆ ಹಗುರಾಯ್ತು. ತನ್ನ ಗೆಳೆಯನ ವಿದ್ಯೆಯ ತಕ್ಕ ಪ್ರತಿಫಲವು ದೊರೆಯದಿದ್ದರೂ ತಿಂಗಳಿಗೆ ನೂರು ರೂಪಾಯಿಗಳ ಈ ಸ್ಥಳವು ಸದ್ಯಕ್ಕೆ ಅಡ್ಡಿಯಿಲ್ಲ. ಎಂದುಕೊಂಡನು. ತನ್ನ ಸ್ವಂತದ ನೋವುಗಳನ್ನು ಮರೆಯಲಿಕ್ಕೆ ಸಿದ್ಧನಾದನು. ಆದರೆ ಅವೆಲ್ಲ ಇವನ ಮಾತು ಕೇಳಿ ನಡೆಯುತ್ತವೆ? ಬರುವ ದುಃಖದ ನೆರೆ ನುಗ್ಗಿ ಬರತೊಡಗಿತು. ತಮ್ಮ ಸ್ನೇಹಿತನ ಹಳ್ಳಿಯಿಂದ ಜಡ್ಡುಹಚ್ಚಿಕೊಂಡು, ಸೊರಗಿ ಸಿಬರುಕಡ್ಡಿಯಾಗಿ ಬಂಡೇರಾಯರು ಒಂದು ರಾತ್ರಿ ಬಂದರು. ಗುರುತುಹತ್ತುವಂತೆ ಇದ್ದಿಲ್ಲ. ಮಲೆನಾಡಿನ ಸೆರಗಿನ ಹಳ್ಳಿಯಲ್ಲಿಯ ಹವೆಯು ಅವರಿಗೆ ಚೆನ್ನಾಗಿ ಬಾಧಿಸಿತ್ತು.ಮಲೇರಿಯಾ ಜ್ವರವು ಮೈಯೊಣಗಿಸಿತ್ತು. ಮತ್ತೆ ಡಾಕ್ಟರಿಗೆ ತೋರಿಸಿ ಔಷಧದ ನಿತ್ಯಕ್ರಮ ಆರಂಭವಾಯಿತು. ಅನಂತನೇ ಒಳಹೊರಗಿನ ಖರ್ಚಿಗೆ ಕೊಟ್ಟನು. 'ಜಗಣ್ಣನಿಗೆ ಇನ್ನೂ ಎಲ್ಲಿಯೂ ಕೆಲಸದ ಲಕ್ಷಣವಿಲ್ಲ' ಎಂದು ಕೇಳಿ ಮೊದಲೇ ಸೋತುಹೋದ ಬಂಡೇರಾಯರು ತೀರ ಇಳಿದರು. ಜ್ವರ ಬಿಟ್ಟುಬಿಟ್ಟು ಬಂದವು, ನಿಲ್ಲಲಿಲ್ಲ. ಗೋದವ್ವ, ಅಂಬಕ್ಕ

ಇವರನ್ನು ಆರೈಕೆಗೆ ಕರಿಸಬೇಕಾಯ್ತು. ಮೊದಲಿನ ಎಲ್ಲ ಸಂಸಾರದ ರೂಪ ಬಂದಿತು; ಆದಾಯ ಕೇಳುವಂತಿಲ್ಲ.

ಜಗಣ್ಣನು ಬೇಸತ್ತು ಓಡಿಹೋಗುವೆನೆಂದ. ಮ್ಯುನಿಸೀಪಾಲಿಟಿ, ಬ್ಯಾಂಕು, ಪೋಸ್ಟು ಎಲ್ಲ ಕಡೆಗೆ ತನ್ನ ದೈನ್ಯವನ್ನು ತೋರಿಸಿಕೊಂಡು ಗದ್ಗದಿಸಿ 'ಹತ್ತುರೂಪಾಯಿಯ ನೌಕರಿಯನ್ನಾದರೂ ನನಗೆ ಯಾರಾದರೂ ಕೊಡಿರಪ್ಪ!' ಎಂದು ಹೇಳಿಕೊಂಡ. ಆಕ್ರೋಶಮಯವಾದ ಜಗತ್ತು ಅವನ ಪಾಲಿಗೆ ಮೂಕವಾಯ್ತು. ಅನಂತನು ಕೊನೆಗೆ ತನ್ನ ಸಾಲೆಯ ಕೆಲವು ಹುಡುಗರನ್ನು ಜಗಣ್ಣನ ಕಡೆಗೆ ಕಲಿಯುವಿಕೆಗೆ ಹೋಗುವಂತೆ ಮಾಡಿ,ಹತ್ತಿಪ್ಪತ್ತು ರೂಪಾಯಿಗಳ ಆದಾಯ ದೊರೆಯು ನಂತೆ ಏರ್ಪಡಿಸಿದ. ಜಯರಾಯನೂ ತನ್ನ ಮಗನನ್ನು ಕಳಿಸಿ ಮೊದಲೇ ಎರಡು ಮೂರು ತಿಂಗಳ ಮುಂಗಡವೆಂದು ಹದಿನೈದು ರೂಪಾಯಿ ಕಳಿಸಿದ. ಅಂತೂ ಚಕ್ಕಡಿಯು ತೂಕಡಿಸುತ್ತ ಹೆಜ್ಜೆ ಇಟ್ಟಿತು. ಇಂದಿನ ಗೋಳು ಮುಂದಿಗೆ ಬಿದ್ದೀತೆಂಬದರ ಹೊರತು ಬೇರೆ ಸುಖವು ಅದರಲ್ಲಿ ಕಾಣಲಿಲ್ಲ.

ಬಂಡೇರಾಯರ ಉರಿ ಈಗ ಸಿಂಕಂತೆ ತೋರಿತು. ಆದರೆ ಅರವತ್ತು ವರ್ಷದ ಸನಿಯಕ್ಕೆ ಬಂದ ಅವರ ಮೈಯಲ್ಲಿ ಹೆಚ್ಚು ಚಿಂತೆಗಿಂತೆ ತಾಳುವ ಹುರುಡು ಉಳಿಯಲಿಲ್ಲ. ಹೊರಗೆ ತಿಳಿಯದೆ ಒಳಒಳಗೆ ಸೊರಗುತ್ತ ಸಾಗಿದರು. 'ಜಗಣ್ಣಾ, ನಾನು ಹೋಗುವದರಲ್ಲಿ ಒಂದು ಕೆಲಸ ಹಿಡಿಯೋ, ನನ್ನಂತೆ ಆಗಬೇಡ' ಎಂದು ಒರಲಿದರು. ಅವನೇನು ಮಾಡಬೇಕು? ಪಾಸಾಗಿ ಎಂಟುಹತ್ತು ತಿಂಗಳಾದವು. ನಾಲ್ಕುದಿನದ ಕೂಲಿಗೆಲಸ ಹೇಳುವ ಪುಣ್ಯಾತ್ಮನು ಕೂಡ ಒಬ್ಬ ದೊರೆಯಲಿಲ್ಲ. 'ಎಂಥ ದೊಡ್ಡ ಜಗತ್ತು! ಎಷ್ಟು ಜನರು! ನನಗೆ ಒಬ್ಬರಿಲ್ಲ ನೆರವಾಗಲು' ಎಂದು ಒದರಿಕೊಂಡನು. 'ದಿನಕ್ಕೆ ಕೋಟಿ ನಾಣ್ಯಗಳನ್ನು ಎಣಿಸಿ ಹೂಳಿಡುವ ಕುಬೇರರೇ, ನನಗೆ ತಿಂಗಳಿಗೆ ಹತ್ತು ಕೊಟ್ಟರೆ ನಿಮ್ಮ ಮನೆಯಮುಂದಿನ ನಾಯಿಯಾಗಿ ಬೀಳುವೆನು' ಎಂದ.

ಆ ಕೂಗು ಯಾರನ್ನೂ ಮುಟ್ಟಲಿಲ್ಲ. ಮೇ ತಿಂಗಳ ಉರಿಬಿಸಿಲಲ್ಲಿ ಕಲಿಸಿಕೊಳ್ಳುವ ಹುಡುಗರು ಕೂಡ ಕೈಬಿಟ್ಟು ಕಣ್ಮರೆಯಾದಾಗ,

ಬಂಡೇರಾಯರು ಒಳಬೇನೆ ಬೆಳಸಿಕೊಂಡು ತಳಮಳದಿಂದ ಕಣ್ಣು ಮುಚ್ಚಿದರು.

---

# ೧೬ನೆಯ ಕಿಡಿ

---

ಹೊಳೆದಾಟುವಾಗ ಸೆಳವೇರಿ ಬಂದು ಮುಳುಗಿಸುತ್ತಿರಲು, ಮೇಲೆ ಬೆಂಕಿಯ ಮಳೆಯಾದರೆ ಏನಾಗದು? ಬಂಡೇರಾಯರ ಸಾವಿನಿಂದ ಜಗಣ್ಣನಿಗೆ ಅದಾಯಿತು. ಗಂಡನನ್ನು ಕಳೆದುಕೊಂಡ ಗೋದವ್ವನು ನೀರುನಿಡಿಯಿಲ್ಲದೆ ರಾತ್ರಿ ಹಗಲು ಹಲುಬಿದಳು. 'ಮಲೆನಾಡಿಗೆ ಯಾಕೆ ಹೋಗಿದ್ದರೇ ನಮ್ಮವ್ವ! ಅವರ ಪ್ರಾಣಕ್ಕೆ ಮುಳುವಾತು. ನನ್ನ ಕರಿಮಣಿ ಕಸುಗೊಂಡಿತು' ಎಂದು ಹಾಡಿಹಾಡಿ ಅತ್ತಳು. ಜಗಣ್ಣನ ದುಃಖವು ಅಳುವಿನ ಆರ್ಭಟವನ್ನು ಮೀರಿತ್ತು. ಮುಂದಿನವೆಲ್ಲ ಮಂಜು ಮಂಜಾಗುವಂತೆ ಕಣ್ಣಲ್ಲಿ ನೀರುತುಂಬಿ, ನರನರದಲ್ಲಿ ಕಳವಳವೆದ್ದು, ಮೂಕನಾಗಿ ಬೆಪ್ಪನಾಗಿ ಕೂಡುತ್ತಿದ್ದನು. ನಡುನಡುವೆ 'ಅಪ್ಪಾ!' ಎನ್ನಲು ಕೂಡ ಇಡಿಯಾಗಿ ಬರುತ್ತಿರಲಿಲ್ಲ. ಇದರಲ್ಲಿ, ಮನೆಯಲ್ಲಿ ಮಾಡಲಿಕ್ಕೆ ಅಂಬಕ್ಕ, ಹೊರಗಿನಿಂದ ಧೈರ್ಯಕೊಡಲಿಕ್ಕೆ ಅನಂತ, ಜಯರಾಯ, ಇಲ್ಲದಿದ್ದರೆ ಎಲ್ಲಿ ತಾಯಿಮಕ್ಕಳು ಜೀವಕ್ಕೆ ಅಪಾಯಮಾಡಿಕೊಳ್ಳುವರೋ— ಎನ್ನುವಂತೆ, ಬಂಡೇರಾಯರು ತೀರಿಕೊಂಡ ಹತ್ತುದಿನಗಳು ಹತ್ತುಯುಗಗಳಂತೆ ಹಗುರುನಡೆದವು. ಮುಂದೆ ಅನಂತನ ಮುಂದಾಳುತನದಿಂದ ಜಗಣ್ಣನ ಕೈಲಿ ಹನ್ನೆರಡು ದಿನದ ವಿಧಿಗಳು ಕೊನೆಗಂಡವು. ಗೋದವ್ವ ಶುದ್ಧಳಾದಳು. ಇದರೊಳಗೆ ಬಂಡೇರಾಯರ ಅಸ್ಥಿಗಳು ಕೃಷ್ಣಾನದಿಯ ಬುಡದಲ್ಲಿ ಯಾವಾಗಲೋ ಸರಳುತ್ತ ಬಿದ್ದಿದ್ದವು. ಅವರ ದೇಹವು ಬರಿಯ ಕಲ್ಪನೆಯ ತೆಳುಗೊಂಬೆಯಾಗಿ ಹೋಯಿತು.

ತಿಂಗಳೊಪ್ಪತ್ತು ಅನಂತನ ಉದಾರಸಹಾಯದಿಂದ ಉದರಪ್ರಶ್ನೆಯು ಮಾತೆತ್ತದಂತಾಗಿತ್ತು. ಆದರೆ ಮುಂದೊಮ್ಮೆ ದುಃಖವನ್ನು ನುಂಗಿ ನೀರ್ಕುಡಿದು ಹುಲಿಯಾಗಿ ಜಗಣ್ಣ ಎದ್ದನು. 'ಬಾ, ಏನೇನಾಗಿ

ಬರುವಿಯೊ ಬಾ! ಇನ್ನು ಹೆದರುವದಿಲ್ಲ' ಎಂದು ಆತನು ಪುಕ್ಕ ತನವನ್ನು ದೂರ ಎಸೆದನು. 'ಬಹಳಾದರೆ ಹಸಿವೆ ಹೆಚ್ಚಿಸಿ ಕೊಲ್ಲ ಬಹುದಲ್ಲವೆ? ಅದಾದರೆ ಎಲ್ಲ ತಣ್ಣಗೆ ಆಯಿತಲ್ಲ' ಎಂಬ ಅತಿ ಧೈರ್ಯವು ಅವನ ಹೊಸವೃತ್ತಿಯಲ್ಲಿ ಸೇರಿಕೊಂಡಿತು. ಮತ್ತೆ ಅರ್ಜಿಗಳನ್ನು ಬರೆದು ಹಿಂದುಸ್ಥಾನದ ಯಾವ ತುದಿಯೇ ಇರಲಿ, ಅಲ್ಲಿಗೆ ಅಟ್ಟತೊಡಗಿದನು. ಜಾಹೀರಾತು ಕೊಡುವವರು ತಮ್ಮ ಜನರನ್ನು ಗೊತ್ತುಪಡಿಸಿಯೇ ಹೆಚ್ಚಾಗಿ ಕೊಡುವರೆಂದು ಅವನಿಗೆ ತಿಳಿಯಲಿಲ್ಲ. ಒಮ್ಮೆ ತನ್ನ ಅರ್ಜಿ ಯೊಂದನ್ನು ಪೋಸ್ಟಿನ ಡಬ್ಬಿಯಲ್ಲಿ ಹಾಕಲಿಕ್ಕೆ ಹೋದಾಗ ಒಬ್ಬಿಬ್ಬರು ಹಳ್ಳಿಗರು ತಾರೊಂದನ್ನು ಅವನಿಂದ ಬರಿಸಿಗೊಂಡರು. ಒಂದಾಣೆಯನ್ನು ಕೊಡಲಿಕ್ಕೆ ಬಂದರು. ಆಗ ಅವನು ಮುಟ್ಟಲಿಲ್ಲ. ಆದರೆ 'ಆ ಉದ್ಯೋಗ ವನ್ನೇಕೆ ಮಾಡಬಾರದು?' ಎನಿಸಿತು. 'ಕಲಿತವರ ದುಃಖಗಳೆಲ್ಲ, ಸಣ್ಣ ಕೆಲಸವು ಕೆಟ್ಟಕೆಲಸವೆಂದು ತಿಳಿದುಕೊಂಡು ತಿರುಗುವದರಿಂದ ಆಗಿರ ಲಾರವೇ? ಕೂಲಿಮಾಡಿ ಎಷ್ಟು ಜನರು ಹಿತವಾಗಿಲ್ಲ? ಕಲಿತಮಾತ್ರಕ್ಕೆ ನಾವೇಕೆ ಅಂಥದನ್ನು ಮಾಡಬಾರದು? ಕಲಿತದ್ದರ ಉಪಯೋಗವೇ ನೆಂದೋ? ಹಾಗೇ ಕೊಳೆಯುತ್ತ ಇದ್ದರಾದರೂ ಏನು ಉಪಯೋಗ?' ಇತ್ಯಾದಿ ಬಗೆಯುತ್ತ ನಾಳೆನಿಂದ ಪೋಸ್ಟಿನ ಇದಿರು ಕುಳಿತು, ನಿರಕ್ಷರದ ಸಲುವಾಗಿ ಕಾರಕೂನಿಕೆಮಾಡಿ ಹೊಟ್ಟೆಹೊರೆಯಬೇಕೆಂದು ಗಟ್ಟಿಮಾಡಿ ದನು.

ಜೂನ್‌ತಿಂಗಳು ಅನಂತನಿಗೆ ಶುಭನುಡಿಯುತ್ತ ಬಂದಿತು. ಕಾಲೇ ಜಿನ ಜಾಗಕ್ಕೆಂದು ಅವನು ಹೋದ ವರುಷದಿಂದ ಮಾಡುತ್ತಿದ್ದ ಅರ್ಜಿ ಗಳಲ್ಲಿ ದಕ್ಷಿಣಹೈದರಾಬಾದಿಗೆ ಮಾಡಿದ್ದೊಂದು ಇತ್ತು. ಅಲ್ಲಿಂದ ಈಗ ಕರೆಯ ಹುಕುಮು ಕೈಸೇರಿತು. ನಿಜಾಮುಕಾಲೇಜಿನಲ್ಲಿ ಒಂದು ವರ್ಷದ ಮಟ್ಟಿಗೆ ಅರ್ಥಶಾಸ್ತ್ರದ ಅಧ್ಯಾಪಕನೆಂಬ 'ನೇಮಿಸುವಿಕೆ'ಯಾಯಿತು. ಕುಗ್ಗಿದ ಜೀವ ಹಿಗ್ಗಿದ ಹಾಗಾಯಿತು. ೧೫೦ ಹಾಲೀ ರೂಪಾಯಿಗಳ ಸಂಬಳವೆಂದರೆ ಕಡಿಮೆಯಾಗಲಿಲ್ಲ. ಕುಬೇರರಾಯರು ಸಂತೋಷದಿಂದ ಹೋಗೆಂದರು. ಜಗಣ್ಣನಿಗೆ ತನ್ನ ಈ ಸುದ್ದಿಯನ್ನು ತಿಳಿಸಲು ಅವನು ಹೊರಡುವಲ್ಲಿ ಜಗಣ್ಣನೇ ಅಲ್ಲಿಗೆ ಹಾಜರಾದನು. ಒಳ್ಳೇ ಗಂಭೀರ–

ಮುದ್ರೆಯಿಂದ ಅವನು 'ಅನಂತಾ, ನಾನು ನಿಶ್ಚಯಮಾಡಿದೆ, ನಾಳಿನಿಂದ ನನ್ನದೊಂದು ಸ್ವಂತದ ಹೋರೆಯನ್ನು ಹುಡುಕಿರುವೆ' ಎಂದು ಆ ಪೋಸ್ಟಿನ ಮುಂದಿನ ಕಾರಕೂನಿಕೆಯನ್ನು ಕುರಿತು ಹೇಳಲು ಒಡರಿಸಿದನು. ಅನಂತನು ಹುಚ್ಚುನಗೆ ನಕ್ಕು, ತನ್ನ ಹೊಸಹುದ್ದೆಯ ವಾರ್ತೆಯನ್ನು ಅರುಹಿ, ತನ್ನೊಡನೆ ಮೊಗಲಾಯಿಗೆ ಬರಬೇಕೆಂದು ವಿಧಿಸಿದನು. 'ಅದು ಸಾಧ್ಯವಿಲ್ಲ, ನೀನು ಹೋಗು, ಧನ್ಯನಾದೆ' ಎಂದು ಜಗಣ್ಣಾ ಹಟ ಹಿಡಿದನು. ಅನಂತನು ಅಷ್ಟಕ್ಕೆ ಬಿಡಲಿಲ್ಲ.

ನಾಲ್ಕೈದು ದಿನ ಚರ್ಚೆ ನಡೆಯಿತು. 'ಗೋದವ್ವ ಹಾಗೂ ಹುಡುಗರನ್ನು ಎಲ್ಲಿ ಬಿಡುವದು?' ಎಂಬದೊಂದು ಕಗ್ಗಂಟೇ ಆಯಿತು. ಆದರೆ ಜಗಣ್ಣಾನನ್ನು ಹಾಗೇ ಹಿಂದೆ ತೊರೆದು ಹೋದರೆ ಅವನಪಾಡೇನು? ಹೋಗಬೇಕಾದರೂ ಹೇಗೆ? ಅನಂತನು ಹೈದರಾಬಾದಕ್ಕೆ ಹೊರಡಲು ಎರಡೇ ದಿನಗಳುಳಿದವು. 'ನಿನಗಾಗಿ ಕನ್ಯೆಯನ್ನು ನೋಡಿ ಇಡತೇನೆ; ನಡುವಿನ ಸೂಟಿಯಲ್ಲಿ ಬಂದಾಗ ಮದುವೆಮಾಡಿಕೊಂಡು ಹೋಗು' ಎಂದು ಕುಬೇರರಾಯರು ಅವನಿಗೆ ಸೂಚನೆ ಕೊಟ್ಟರು. 'ನನ್ನ ಕೆಲಸವು ಕಾಯಂ ಆಗುವತನಕ ಅದರ ಉಸಾಬರಿ ಬೇಡ' ಎಂದು ಅನಂತನು ಉತ್ತರಕೊಡಬೇಕಾಗಿ ಬಂತು. ಅವನಿಗೆ ಹತ್ತಿದ್ದು ಈಗ ಜಗಣ್ಣನ ಚಿಂತೆ. ಕೊನೆಗೊಮ್ಮೆ ಹೀಗೇ ಮಾಡಬೇಕೆಂದು ನಿರ್ಧರಿಸಿ, ಜಗಣ್ಣನ ಮನೆಗೆ ಹೋಗಿ, ಗೋದವ್ವನವರಿಗೆ ನಯವಿನಯದಿಂದ ಹೇಳಿದನು. 'ನೋಡಿರಿ, ಜಗಣ್ಣನಿಗೆ ಇಲ್ಲಿಯಂತೂ ಆಧಾರವಿಲ್ಲ. ಮೊಗಲಾಯಿಯಲ್ಲಿ ಯತ್ನಮಾಡಿದರೆ ಏನಾದರೂ ಸಿಕ್ಕೀತು, ಒಂದು ತಿಂಗಳದಲ್ಲಿ ಎಲ್ಲಾ ಗೊತ್ತಾಗುತ್ತದೆ, ನನ್ನ ಉಳಿತಾಯದ ಸ್ವಲ್ಪ ಹಣ ಕೊಡುತ್ತೇನೆ. ಜಗಣ್ಣನ ತಮ್ಮ, ನಿಮ್ಮ ರಾಘು ಎಲ್ಲ ಸಾಮಾನು ಸಟ್ಟರು ತಂದು ಕೊಡುವನು. ಇಲ್ಲಿಯೇ ಇದ್ದುಬಿಡಿರಿ.'

ಗೋದವ್ವನವರಿಗೆ ಇದು ಒಪ್ಪಿತು. ಅನಂತನೆಂದರೆ ಹೆಚ್ಚುಕಡಿಮೆ ತಮ್ಮ ಹಣಮಪ್ಪನ ಅವತಾರವೆಂದೇ ಅವರು ತಿಳಿದಿದ್ದರು. 'ನಿನ್ನಂಥಾ ತಿಳಿವಳಿಕೆಯ ಹುಡುಗನನ್ನು ನಾನು ನೋಡಲಿಲ್ಲ, ಅನಂತಾ. ಅವರು ಹೋದಮೇಲೆ, ನೀನೇ ಜಗಣ್ಣನನ್ನು ಗತಿಗೆ ಹಚ್ಚುವವ ನೋಡು.

ದಿವಸಕಾಲ ಕಟ್ಟಿ ಬಂದವು, ಎಲ್ಲಿಯಾದರೂ ಒಂದು ನೌಕರಿ ಹಚ್ಚಿ ಕೊಟ್ಟು ಪುಣ್ಯಕಟ್ಟಿಕೊಳ್ಳಪ್ಪ' ಆವರ ಕಣ್ಣು ತುಂಬಿ ನಿಂತವು. ಅನಂತನ ಕರುಳು ಕಲುಕಿತು.

ಜಗಣ್ಣನನ್ನು ಕಟ್ಟಿಕೊಂಡು ಅನಂತ ಹೊರಟನು. ಗೋದವ್ವನವರು ಅಂಬಕ್ಕನನ್ನು ನಿರ್ವಾಹವಿಲ್ಲದೆ ತವರಿಗೆ ಕಳಿಸಿ, ತಾವು ಮನೆ ಹಿಡಿದರು. ಅನಂತನ ಪ್ರಯತ್ನಗಳಿಂದ ಜಗಣ್ಣನಿಗೆ ಕೆಲಸ ಸಿಕ್ಕ ಕಾಗದವು ಈವತ್ತು ಬಂದೀತೇ, ನಾಳೆ ಬಂದೀತೇ—ಎಂದು ಹಾದಿನೋಡುತ್ತ ಸಾಧ್ಯವಾದಷ್ಟು ಸ್ವಲ್ಪಖರ್ಚಿನಿಂದ ಇರಹತ್ತಿದರು. ಊಟಕ್ಕೆ ಎಲೆ ಕೊಳ್ಳುವಂತಿಲ್ಲ; ಊರಹೊರಗಿನ ಆಲದೆಲೆಗಳನ್ನು ರಾಘುವು ಜೋಲತುಂಬಿ ತರಲು ಅವನ್ನೇ ಹಚ್ಚಿ ಬಳಸುತ್ತಿದ್ದರು. ಬಕ್ಕರೆಯ ಊಟವೇ ಹೆಚ್ಚು. ಜಯರಾಯನ ಮನೆಯಿಂದ ಮಜ್ಜಿಗೆ ತಂದರಾಯ್ತು, ಹಾಲುಮೊಸರಿನ ಬೇರೆ ವೆಚ್ಚವಿಲ್ಲ. ಸಂಜೆಯಲ್ಲಿ ಕತ್ತಲೆಯಾಗುವ ಮೊದಲು ಮುಳುಗುವ ಸೂರ್ಯನ ಕೆಂಪುಸ್ವ್ಯಾಂಡಿನ ಬೆಳಕಿನಲ್ಲಿ, ರಾಘುವಿಗೂ ಆ ಎರಡು ಚಿಕ್ಕ ಹೆಣ್ಣುಹುಡುಗರಿಗೂ ಊಟಕ್ಕೆ ಹಾಕಿ, ಗೋದವ್ವ ತಾವು ಹಾಗೇ ಮಲಗುತ್ತಿದ್ದರು. ಅದರಿಂದ ಬೇಕಾದಾಗ ಇರುವ ಒಂದು ಚಿಮಣಿಯ ಹೊರತು ಬೇರೆ ದೀಪವಿಲ್ಲ. ಹೀಗೇ ಸ್ವಲ್ಪ ಎಣ್ಣೆಯಿಂದ ಪ್ರಣತಿ ಆರದೆ ಸಾಗಿತ್ತು. ಎಂದೋ ಒಮ್ಮೆ ಬೀಳಲಿರುವ ಎಣ್ಣೆಯ ಭರವಸೆಯಿಂದ ಉಳಿಯಿತು !

ಇತ್ತ ಅನಂತನು ಜಗಣ್ಣನ ಕೂಡ ಹೈದರಾಬಾದು ಸೇರಿದನು. ತನ್ನ ಕೆಲಸಕ್ಕೆ ಹಾಜರಾಗಿ ಬಂದನು. ಉರ್ದೂಭಾಷೆ ತಿಳಿಯುತ್ತಿದ್ದರೂ ಮಾತಾಡಲಿಕ್ಕೆ ಬಾರದ ಮೂಲಕ ಇಬ್ಬರದೂ ಬಾಯಿ ಕಟ್ಟಾಯಿತು. ಅದರೊಡನೆ ಅಲ್ಲಿಯ ನಿಯಮ ನಿರ್ಬಂಧಗಳಿಂದ ಹೊರಸೂಸುವ ಹುರುಪೂ ಕಟ್ಟಾಯಿತು. ಮಾತ್ರ ಆ ಭಾಷೆಯ ಮಾತುಗಾರಿಕೆಯಲ್ಲಿ ಮಿನುಗುವ ನುಣುಪು, ನಮ್ರತೆ ಅವರ ಮನಸ್ಸನ್ನು ಇಕ್ಕುಳಿಯಿಂದ ಸೆಳೆದವು. ಅಲ್ಲಿಯ ದಾಸ್ಯಕ್ಕೆ ಅದನ್ನು ಕಲಿಯಲೂ ಬೇಕಾಗಿದ್ದಿತು. ಇಬ್ಬರೂ ಕಲಿಯತೊಡಗಿದರು. ಒಂದು ತಿಂಗಳವರೆಗೆ ಜಗಣ್ಣನ ಬಗ್ಗೆ ಯಾವ ಎತ್ತುಗಡೆ ಮಾಡುವದೂ ಅನಂತನಿಗೆ ಸಾಧ್ಯವಾಗಲಿಲ್ಲ. ತನ್ನ

ಪ್ರಸ್ಥವನ್ನು ಮೊದಲು ಬೆಳೆಸಿದನು. ಕಾಲೇಜಿನಲ್ಲಿ ಅವನ ವಿದ್ವತ್ತೆಯ ಬಗ್ಗೆ ಒಳ್ಳೇ ಅಭಿಪ್ರಾಯಗಳು ಕೇಳಬಂದವು. ಸ್ವಲ್ಪಿದ್ದರೆ 'ಭಳಿರೆ' ಎನ್ನುವ ರಸಿಕಜನರವರು. ನಿಜವಾಗಿ ಜಾಣನಾದ ಅನಂತನ ವಿಷಯದಲ್ಲಿಯಂತೂ ಕೇಳುವದೇ ಬೇಡ. ಅಲ್ಲಿಯ ಕನ್ನಡ ಜನರ ಪರಿಚಯವು ಕ್ರಮೇಣ ಆಯಿತು. ಕನ್ನಡ ಸತ್ತ್ವವು ಇದೀಗ ಎದ್ದು ಅವರ ನಾಡಿಗಳಲ್ಲಿ ಕುಣಿಯುತ್ತಿದ್ದದ್ದು ಕಂಡಿತು. ಅದರೊಡನೆ ಅವರೂ ಬಂದಾದರು. ಆದರೆ ಜಗಣ್ಣನಿಗೆ ಕೆಲಸ ದೊರೆಯುವ ಬಗೆಯೇನು? ಸಂಸ್ಥಾನದಲ್ಲೆಲ್ಲ ಉರ್ದುವಿನ ಮುಖಾಂತರವಾಗಿ ಎಲ್ಲ ವಿಷಯಗಳನ್ನು ಕಲಿಸುವ ಪರಿಪಾಠವು ಆಗಲೇ ಆರಂಭವಾಗಿತ್ತು. ಯಾವದು ಜಗಣ್ಣನಿಗೆ ಬರುತ್ತಿದ್ದಿಲ್ಲವೋ ಅದು ಅಲ್ಲಿ ಮುಖ್ಯ. ಅನಂತನಿಗೆ ಘೋರ ಬಂದಿತು. ಆರ್ಜಿಯನ್ನು ನಿರರ್ಥಕವಾಗಿ ಕಳಿಸಬೇಕಾದರೂ ಯಾಕೆ?

ಇಷ್ಟರಲ್ಲಿ ಒಂದು ತಿಂಗಳ ಹಣವನ್ನು ಎರಡು ತಿಂಗಳ ವರೆಗೆ ಸಾಲುವಂತೆ ಮಾಡಿಕೊಂಡು 'ಇನ್ನು ನನ್ನ ಕೈ ಬರಿದಾಯಿತು. ಜಗಣ್ಣನನ್ನು ಲಗೂನೆ ಕಳಿಸಿರಿ. ಕೆಲಸ ಹತ್ತಿದ ಕಾಗದವನ್ನಾದರೂ ಹಾಕಿರಿ' ಎಂದು ರಾಘುವಿನಿಂದ ಬರೆಯಿಸಿದ ಗೋದವ್ವನವರ ಪತ್ರ ತಲುಪಿತು. ಜಗಣ್ಣನು ಹೊರಟುನಿಂತನು. 'ಅನಂತಾ, ಅಲ್ಲಿಯೇ ಏನಾದರೂ ಮಾಡುವೆ. ಜೀವ ಇಲ್ಲಿ ನಿಲ್ಲಲಾರದು, ಹೋಗಗೊಡು' ಎಂದನು. ಅನಂತನಿಗೆ ನಿಜವಾದ ದಿಗಿಲು ಬಿದ್ದಿತು. ಹೋಗೆನ್ನಲೂ ಆಗದು, ಇರೆನ್ನಲೂ ಬಾರದು. ಕಡೆಗೆ ಜಗಣ್ಣನ ನಿರಾಶೆಯನ್ನೆಲ್ಲ ಹೊಡೆದೋಡಿಸಿ 'ಇಲ್ಲಿ ಮಾಡುವ ಯತ್ನ ಮಾಡಿ, ಹಳಸಿದ ಮೇಲೆ ಹೋಗು. ಇಕೋ ಈ ಐವತ್ತು ರೂಪಾಯಿ ಕಳಿಸಿಕೊಡು, ಮತ್ತೆ ಕೆಲದಿನ ಇರಲಿ. ಬೇಕಾದರೆ ಅಂಬಕ್ಕನನ್ನೂ ಕರೆಯಿಸಿಕೊಳ್ಳೆಂದು ತಿಳುಪಿಸು' ಎಂದು ಹುರಿಗೊಳಿಸಿದನು. ಜಗಣ್ಣನು ಹೇಳಿದಂತೆ ಮಾಡಿ ಹೊರಟ ಕಾಲು ಜಗ್ಗಿಕೊಂಡು ನಿಂತನು.

ಹೈದರಾಬಾದ ಮುಲೂಖಿನ ಕನ್ನಡ ಜಿಲ್ಲೆಗಳಾದ ಕಲಬುರ್ಗ ರಾಯಚೂರುಗಳಲ್ಲಿ ಕನ್ನಡದಲ್ಲಿ ಇಲ್ಲವೆ ಇಂಗ್ಲಿಷಿನಲ್ಲಿ ಕಲಿಸುವದು ಶಕ್ಯವೆಂದು ಅಲ್ಲಿಯ ಮಾಸ್ತರಿಕೆಗಾಗಿ ಜಗಣ್ಣನಿಂದ ಅನಂತನು ಶಿಕ್ಷಣ

ಖಾತೆಗೆ ಅರ್ಜಿಕೊಡಿಸಿದನು. ತಾನು ಸಂಪಾದಿಸಿದ ಕೆಲವು ಹುದ್ದೇದಾರರ ಸ್ನೇಹಬಲದಿಂದ ಆ ಅರ್ಜಿಯು ವಿಚಾರಣೆಯಾಗಲೆಂದು ಅಲ್ಲಲ್ಲಿ ಹೇಳಿಸಿದನು. ಕೆಲಸವು ಬೇಗನೆ ನೆರವೇರೀತು........ಎಂದು ತೋರಿತು. ಅಲ್ಲಿಯ ನಡತೆಯ ಅಂತರಂಗವು ಅವನಿಗೆ ಗೊತ್ತಾಗಲಿಲ್ಲ. ಗೊತ್ತಾಗಲಿಕ್ಕೆ ನಾಲ್ಕುತಿಂಗಳು ಸಾಲಲಾರವು, ನಾಲ್ಕುವರ್ಷ ಕೂಡ ಕಡಿಮೆ. ಇದಿರಿಗೆ ಪರಮಾವಧಿ ಸ್ನೇಹದಿಂದ ಅಪ್ಪಿಕೊಂಡು 'ನಿಮ್ಮ ಕೆಲಸ ನಮ್ಮ ಕೆಲಸ' ಎಂದು ಬೇಕಾರಿಯ ಬಗ್ಗೆ ಸಹಾನುಭೂತಿ ತೋರಿಸಿದ ಆ ಅಧಿಕಾರಿಗಳಲ್ಲಿ ನೆನಪಿನಶಕ್ತಿ ಎಷ್ಟಿರುತ್ತದೆ—ಎಂಬವರ ನೆಲೆಯು ಅವನಿಗೆ ಹತ್ತಲಿಲ್ಲ. ಮಾತು ಮಾತ್ರ ಪೋಣಿಸಿದ ಮುತ್ತಿನಂತೆ; ಆಗುವ ಕೆಲಸ ಒಡೆದ ಸಿಂಪಿನಂತೆ! ಎಲ್ಲ ಕೃತಿಗಳ ಬುಡದಲ್ಲಿ ಹರಿಯುವ ಗುಪ್ತಗಂಗೆ ಒಂದು—ಅದು ಜಾತಿಭಾವನೆ; ಮೇಲೆ ಕಾಣುವ ಅಂತರಗಂಗೆ ಸರ್ವಹಿತದ ಸೊಗಸುಮಾತು. ದೇಶದ ತುಂಬ ಹಬ್ಬಿದ ಆ ಭಾವನೆ ಅಲ್ಲಿ ವಿಶೇಷವಾಗಿತ್ತು. ಅಲ್ಲದೆ ಜಗಣ್ಣನ ಜಾತಿಯ ಅಧಿಕಾರಿಗಳು ಅಲ್ಲಿದ್ದರೂ ಅವರಿಗೆ ಅಧಿಕಾರಿಗಳು ಎನ್ನುವದಕ್ಕಿಂತ ಹುಟ್ಟುಹೇಡಿಗಳೆನ್ನುವಂತೆ ಅವರಿದ್ದರು. ಅವರ ಬುಡದ ನೆಲವೇ ಅವರಿಗೆ ಭೂಕಂಪದಿಂದ ನಡುಗುವಂತೆ ತೋರುತ್ತಿತ್ತು. ಇನ್ನೊಬ್ಬನಿಗೆ ಮಾಡುವರೇನು?

ಅನಂತನಿಗೆ ಮೊದಲಿದು ತಿಳಿಯದೆ ಬಹಳ ಆಸೆಗಣ್ಣಿನಿಂದ ಶಿಕ್ಷಣ ಖಾತೆಯಿಂದ ಉತ್ತರವನ್ನು ಕಾದನು. ಏನೂ ಬರಲಿಲ್ಲ. ಅಭರವಸೆಯು ಆವರಿಸಿತು. ಹೈದರಾಬಾದಿನ ಇಂಗ್ಲಿಶ್ ಶಾಲೆಗಳಿಗೆಲ್ಲ ಜಗಣ್ಣನನ್ನು ಕರೆದುಕೊಂಡು ಹೋದನು. 'ಎಲ್ಲಿಯೂ ಏನೂ ತೆರವಿಲ್ಲ, ವಿದ್ಯಾರ್ಥಿಯಾಗಿ ಬಂದರೆ ಕೂಡ ತೆಗೆದುಕೊಳ್ಳುವಂತಿಲ್ಲ' ಎಂದರು. ಕೊನೆಗೆ ಅಲ್ಲಿಯ ಕೆಲವು ಕನ್ನಡಿಗರ ಸೂಚನೆಯ ಮೇರೆಗೆ ಒಂದು ಹೊಸ ಯೋಜನೆ ಜಗಣ್ಣನ ತಲೆ ಹೊಕ್ಕಿತು. ತಾಯ್ನುಡಿ ಕನ್ನಡವಿದ್ದ ಹುಡುಗರಿಗಾಗಿ ಒಂದು ಸಾಲೆಯನ್ನು ತೆಗೆದು, ಅಲ್ಲಿ ತಾನು ದುಡಿಯಬೇಕೆಂದು ನಿಂತನು. ಎಷ್ಟೋ ಕನ್ನಡಿಗರೇ ನಕ್ಕರು. ಆ ನಗೆಯು ಜಗಣ್ಣನನ್ನು ಮುಂದೂಡಿತು. ಸಾಲೆ ಎಂಟು ಹತ್ತು ಹುಡುಗರಿಂದ ಮೊಳಕೆಗೊಂಡಿತು. ಆದರೆ ಅವರು ಕೊಡುವ ಎರಡಾಣೆ ನಾಲ್ಕಾಣೆ ಫೀಯಿಂದ ಇವನ ಮುಂ

ದಿನ ಜೀವಿಕೆ ಹೇಗೆ ಸಾಗಬೇಕು? ಹಾಗೆಯೇ ಎಷ್ಟೋ ವರ್ಷದ ನಿಷ್ಠಾವು ಯತ್ನ ನಡೆಸಿದರೆ ಏನೋ ಆಗಬಹುದಿತ್ತು. ಆದರೆ ಇಂದು ಈ ಕ್ಷಣ ದೂರಿನಿಂದ ಕೂಗುತ್ತಿರುವ ತಾಯಿ, ಹೆಂಡತಿ, ತಂಗೆ ತಮ್ಮಂದಿರ ಒಡಲಿಗೇನು ಹಾಕಲಿ? ಎಂಬ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ. ಇಷ್ಟರಲ್ಲಿ ಊರಿಂದ ಕಾಗದ ಬಂತು.

'ಅಂಬಕ್ಕನನ್ನು ಕರಿಸೀನಿ. ನನಗೆ ಜಡ್ಡು ಆಗಿದೆ. ಕಳಿಸಿದ ರೂಪಾಯಿ ತೀರಿದವು. ಹೊರಟು ಬಾ, ಬಂದೇ ಬಾ.'

ಶಾಲೆಯನ್ನು ಕನ್ನಡ ಉತ್ಸಾಹಿಗಳ ವಶಕ್ಕೆ ಬಿಟ್ಟು, ಜಗಣ್ಣನು ಅನಂತನ ಅಪ್ಪಣೆ ಪಡೆದು, ಅವನ ಹಣದಿಂದ ಗೆಲವೂರಿಗೆ ಹೊರಟನು.

ಗೆಲವೂರಲ್ಲಿ ಗೋದವ್ವನವರಿಗೆ ಪ್ರತಿದಿನವನ್ನು ಕಳೆಯುವದೆಂದರೆ ಘನವಾಗಿತ್ತು. 'ನಿಮ್ಮ ಜಗಣ್ಣನಿಗೆ ಕೆಲಸ ಹತ್ತಿತೇನಿರೆ? ಅಂಬಕ್ಕನ್ನ ಯಾಕೆ ತವರಿಗೆ ಕಳಿಸಿದಿರಿ?' ಮುಂತಾಗಿ ಸಂಜೆಯ ಪುರಾಣಕ್ಕೆ ಬಂದ ಹೆಂಗಳೆಯರು ಕೇಳುವ ಪ್ರಶ್ನೆಯು, ಅವಳ ಸಮಾಧಾನವನ್ನೆಲ್ಲ ಹಿಚುಕಿ ಬಿಡುತ್ತಿತ್ತು. 'ಅವರನ್ನು ಕಳಕೊಂಡು ನಾ ಯಾಕೆ ಇದ್ದೀನಿ? ಹೀಗೇ ಹೋಗಿ ಗುಡಿಯ ಹಿಂದಿನ ಬಾವಿಯಲ್ಲಿ ಹಾರಿಕೊಳ್ಳಲೇ?' ಎನ್ನುತ್ತ ಆಕೆ ದೇವರಿಗೆ ಪ್ರದಕ್ಷಿಣೆಹಾಕುವಾಗ ನಾಕು ದೊಡ್ಡ ಹನಿ ಕಣ್ಣಿಂದ ಉದುರಿ ವಿಚಿತ್ರಶಾಂತಿಯನ್ನು ಮನಸ್ಸಿಗೆ ಕೊಡುತ್ತಿದ್ದವು. ಮತ್ತೆ ಎಲ್ಲವನ್ನೂ ನುಂಗಿಕೊಂಡು 'ಕರುಣಾಸಾಗರಾ, ನೀನೇ ಕಾಯಪಾ' ಎಂದು ದೇವರಿಗೆ ಬಾಗಿ ಹೋಗುತ್ತಿದ್ದಳು. ಜಗಣ್ಣನು ಬೇಗ ಬರದಾದನು. ಹಾಗೇ ಬಾ ಎನ್ನುವ ಪತ್ರಕ್ಕೆ ಅವನು ಸೊಪ್ಪು ಹಾಕಲಿಲ್ಲ. ಇಲ್ಲಿಗೇ ಕರೆಯಿಸಿಕೊಂಡು ಏನಾದರೂ ಉದ್ಯೋಗ ಹಚ್ಚಿಸೋಣವೆಂದು, ತನ್ನ ಜಡ್ಡಿನ ನೆವನಮಾಡಿ ಅಂಬಕ್ಕನನ್ನು ಕರೆಯಿಸಿ ಜಗಣ್ಣನಿಗೆ ಕಾಗದ ಹಾಕಿಸಿದಳು. ಆತ ಧಾವಿಸಿ ಬಂದನು. ಜಡ್ಡೆಂದರೆ ಇಲ್ಲದ ಗಾಬರಿ ಅವನಿಗೆ; ಜಡ್ಡು ಸಾವು ಒಂದೇಶಬ್ದಗಳಾಗಿದ್ದವು-ಅವನ ಕಿವಿಯೊಳಗೆ. ಆದರೆ ಅವನು ಹೋದಾಗ ಗೋದವ್ವನವರು ಒಲೆಯಮುಂದೆ ಕುಳಿತು ಮಧ್ಯಾನ್ಹದ ಬಕ್ಕರೆ ಬಡಿಯುತ್ತಿದ್ದರು. ಒಂದೆರಡುದಿನ ಸುಖದುಃಖದ ಮಾತುಗಳಾದವು. ಹೈದರಾಬಾದಿನಲ್ಲಿ ಏನೂ ಆಗದು—ಎಂದು ಜಗಣ್ಣನು

ತಾನು ಮನಗಂಡದ್ದನ್ನು ಒತ್ತಿಹೇಳಿದನು. 'ಹಾಗಿದ್ದರೆ ತಿರುಗಿ ಅಲ್ಲಿ ಹೋಗಲೇ ಬೇಡ' ಎಂದು ಗೋದವ್ವ ಗಂಟುಬಿದ್ದರು. ಜಗಣ್ಣನಿಗೂ ಅದೇ ಯೋಗ್ಯವೆಂದು ತೋರತೊಡಗಿತ್ತು. ಕೆಲವುದಿನ ಟಾಯಿಪ್ ಹೊಡೆಯುವದನ್ನು ಕಲಿಯಲಿಕ್ಕೆ ಓಡಾಡಿದನು. ಅದನ್ನೇ ಸಟ್ಟಗೆ ಕಲಿತು ಟಾಯಿಪಿಸ್ಟನ ಉದ್ಯೋಗವನ್ನು ಮಾಡಬೇಕೆಂದು ಲೆಕ್ಕಹಾಕು ತ್ತಿರುವಾಗ, ಅನಂತನ ಅತ್ಯಗತ್ಯದ ಪತ್ರವು ತಾರಿನಹಾಗೆ ಕರೆಯುತ್ತ ಬಂದಿತು.

'ಇಲ್ಲಿಯ ಶಿಕ್ಷಣಖಾತೆಯ ಡಾಯರೆಕ್ಟರರಿಂದ ಭೆಟ್ಟಿಯಾಗುವ ಹುಕುಮು ಬಂದಿದೆ ನಿನಗೆ, ಕೂಡಲೆ ಬಾ!'

ಜಗಣ್ಣನು ಹೈದರಾಬಾದಿಗೆಂದು ಹೊರಟನು. ಗೋದವ್ವನವರಿಗೂ ಆಶೆ ಚಿಮ್ಮಿತು, ಹೋಗಗೊಟ್ಟರು. ತಿಕೀಟಿಗೆ ಬೇಕಾಗುವಷ್ಟು ಹಣ ತಕ್ಕೊಂಡು ಸ್ಟೇಶನ್ನು ಕಂಡನು. ಒಂದು ರೂಪಾಯಿ ಖೊಟ್ಟಿಯೆಂದು ತಿಕೀಟಿನ ಮಾಸ್ತರನು ಹಿಡಿಯಲಿಲ್ಲ. ತಿರುಗಿ ಹೋಗುವ ಅವಕಾಶ ವಿರಲಿಲ್ಲ. ಹೈದರಾಬಾದಿಗೆ ಏಳೆಂಟು ಸ್ಟೇಶನ್ನು ಹಿಂದಿನ ಒಂದೂರ ತಿಕೀಟು ಪಡೆದು ಗಾಡಿ ಹತ್ತಿದನು. ಕೈಯಲ್ಲಿ ಒಂದು ಬಿಲ್ಲಿ ಉಳಿಯ ಲಿಲ್ಲ. ಗಾಡಿಯಲ್ಲಿ 'ಮುಂದೇನು ಗತಿ....?' ಎಂಬ ವಿಚಾರಗಳಲ್ಲಿ ತಲೆ ಕೆಟ್ಟಿತು. ತಿಕೀಟಿದ್ದ ಸ್ಟೇಶನ್ನಿಗೆ ಇಳಿದರೆ ಅಲ್ಲಿ ಇವನನ್ನು ಕೇಳಬೇಕು ಯಾರು? ಮುಂದೆ ಹೋದರೆ ಹೈದರಾಬಾದಿನಲ್ಲಿ ಏನಾದೀತು–ಎಂಬ ಎದೆ ನಡುಗು. 'ನಿರುದ್ಯೋಗವೇ, ನಿರ್ಧನತೆಯೇ, ನಿನಗೆ ನಮಸ್ಕಾರ!' ಎಂದನು. ಏನೇ ಆಗಲಿ ತನ್ನ ಫಾಜೀಗಟ್ಟೆಗೆ ಮುಟ್ಟಬೇಕೆಂದು ಗಾಡಿ ಯಲ್ಲಿ ಮುಸುಕು ಹಾಕಿ ಮಲಗಿದನು. ಬೆಳಿಗ್ಗೆ ಎಂಟಕ್ಕೇ ಗಾಡಿ ಹೈದರಾಬಾದಿಗೆ ಹೋಯಿತು. ತಿಕೀಟಿನವರು ಅವನನ್ನು ಹಿಡಿದು ಕೂಡಿಸಿದರು. ಹೆಚ್ಚು ಹಣ ಕೊಟ್ಟು ಹೋಗೆಂದರು. ಇವನು ಫಕೀರನಿಗಿಂತ ಫಕೀರನಾಗಿದ್ದನು. ಹುಚ್ಚಾದನು, ಗೋಳಿಟ್ಟು ಅತ್ತನು. ಕಡೆಗೆ ಅನಂತನ ವಿಳಾಸಕ್ಕೆ ಫೋನು ಮಾಡಿಸಿ, ಕರೆಸಿಕೊಂಡು ಕೊಡು ವದನ್ನು ಕೊಟ್ಟು ಪಾರಾದನು. ಮನೆಗೆ ಹೋಗುವಾಗ ಜಗಣ್ಣನು 'ಅನಂತಾ, ನೀನು ನಾಲ್ಕುವರ್ಷ ನನ್ನಿಂದ ಮಾಡಿಸಿದ ತಪಸ್ಸಿನ ಫಲ

ಇದು ನೋಡು ಬಿ. ಏದ ಪ್ರಾಪ್ತಿ ' ಎಂದನು. ಇಬ್ಬರೂ ಹೊರಸಕ್ಕು ಒಳಒಳಗೆ ಕೊರಗಿದರು.

ಡಾಯುರೆಕ್ಟರ್ ಸಾಹೇಬರ ಭೆಟ್ಟಿಯು ಲಾಭವೆಂದರೆ ನೂರು ಜನ್ಮದ ಪಾಪ ಕೂಡಿರಬೇಕು ! ಪುಣ್ಯವಲ್ಲ. ಯಾಕೆಂದರೆ ಅದರಿಂದ ದೊರೆಯುವ ಲಾಭವು ಅದೊಂದೇ. ಆದರೂ ಮನುಷ್ಯನ ಆಸೆ ಹಿರಿದು; ಅದಿಲ್ಲದಿದ್ದರೆ ಇಂದಿಗೆ ಇಪ್ಪತ್ತು ರೂಪಾಯಿಯ ಸಣ್ಣ ಹುದ್ದೆಗಾಗಿ ಸಾವಿರ ಅರ್ಜಿಗಳೂ ಸಾವಿರಾರು ಖಟಪಿಟಿಗಳೂ ಆಗುತ್ತಿದ್ದಿಲ್ಲ. ಜಗಣ್ಣನು ಮೊದಲು ತನ್ನ ಘೋತರದ ವೇಷದಲ್ಲಿ ಭೆಟ್ಟಿಗೆ ಹೊರಟು ನಿಂತನು. ಸುತ್ತುಮುತ್ತ ಲಿನವರು 'ಹೀಗೆ ಹೋದರೆ ನೀವು ಭಂಗೀ ಕೆಲಸ ಕೇಳಲಿಕ್ಕೆ ಬಂದೀರೆಂದು ಇಲ್ಲಿ ತಿಳಿಯುತ್ತಾರೆ' ಎಂದು ನಕ್ಕಾಡಿದರು. ಆಗಲಿ ಎಂದು ಅನಂತ ನಿಂದ ಅವನ ಪರದೇಶಿಯುಡುಪು ಹಾಕಿಸಿಕೊಂಡು, ಹೊಸಹುರುವು ಮೈಯಲ್ಲಿ ಬಂದಂತಾಗಿ ಜಗಣ್ಣ ನಡೆದನು. ತನ್ನ ಚೆಂಡಿಕೆ ಮುಚ್ಚಲಾಗಿ ಟೊಪ್ಪಿಗೆ ಹಾಕಿದನು. ಎರಡು ಮೂರು ದಿವಸಗಳವರೆಗೆ ಇವನಿಗೆ ಭೆಟ್ಟಿಯ ಅದೃಷ್ಟ ದೊರೆಯಲಿಲ್ಲ. ಕುಳಿತು ಕುಳಿತು ಬಂದನು. ಕಡೆಗೊಮ್ಮೆ ಹೊರಹೊರಟ ಡಾಯುರೆಕ್ಟರರು ಅವನ ಹೆಸರಿನ ಚೀಟಿಯನ್ನು ನೋಡಿ ತಮ್ಮ ಲಹರಿಯಲ್ಲಿ ಒಳಗೆ ಬರಹೇಳಿದರು.

ಹೆಸರುದೆಸೆ ಕೇಳುವದಾಯಿತು. 'ನೀವು ಮುಲ್ಕೀಯೇನು ?' ಎಂದು ಮುಖ್ಯವಾಗಿ ಕೇಳಿದರು. ಅರ್ಜಿಯಲ್ಲಿ ಬರೆದಂತೆ ಹೌದೆಂದು ಸುಳ್ಳಿನ ಪುನರುಕ್ತಿಯಾಯಿತು. ಸಾಹೇಬರು ನಂಬಲಿಲ್ಲ. 'ಹಾಗಿದ್ದರೆ ನೀವು ಬ್ರಿಟಿಶ್‌ದಲ್ಲಿ ಯಾಕೆ ಶಿಕ್ಷಣ ಹೊಂದಿದಿರಿ?' ಎಂದರು. ಜಗಣ್ಣನಿಗೆ ಇನ್ನೊಂದು ಅಸತ್ಯ ಹೇಳುವ ಸಕವಾಯತು ಅನಂತನಿಂದ ದೊರೆತಿತ್ತು. ಆದರೆ ಬೇಗನೆ ಅದು ಬಾಯಿಗೆ ಬರಲಿಲ್ಲ. ಮೈಬೆವತು 'ಯಾಕೆಂದರೆ........' ಎನ್ನುತ್ತ ತಡವರಿಸಿದನು. ಸಾಹೇಬರಿಗೆ ಖಾತ್ರಿಯಾಯಿತು. 'ನನಗೆಲ್ಲಾ ಗೊತ್ತಿದೆ. ನೀವು ಹೈದರಾಬಾದಿನ ಸರಹದ್ದಿನವರೆಂದು ವೇಷ ಹಾಕಿಕೊಂಡು ಬರುವಿರಿ. ಸುಶಿಕ್ಷಿತರಾಗಿ ಸುಳ್ಳು ಹೇಳಲಿಕ್ಕೆ ನಾಚಿಕೆಯಿಲ್ಲವೇ? ನಿಮಗೆ ಕೆಲಸ ದೊರೆಯಲಾರದು ಹೋಗಿರಿ. ಹೈದರಾಬಾದು ಹೈದರಾಬಾದಿಗಳ ಸಲುವಾಗಿ, ಹೊರಗಿನವರಿಗಲ್ಲ.' ಎಂದು ನುಡಿದು

ಬಿಟ್ಟರು. ಜಗಣ್ಣನಿಗೆ ಅಲ್ಲಿ ನಿಲ್ಲುವದು ಅಸಾಧ್ಯವಾಯಿತು. ಹೆಚ್ಚು ನಿಂತರೆ ನೆಲಕ್ಕೆ ಬೀಳಬಹುದೆಂದು ತಿರುಗಿದನು. ದುಃಖ ತುಂಬಿಕೊಂಡು ಅನಂತನಲ್ಲಿಗೆ ಹೋಗಿ 'ಸಾಕಾತು ಅನಂತಾ, ಭೂಮಿಯ ಮೇಲೆ ಇರುವದೇ ಸಾಕಾತು' ಎಂದು ಎಲ್ಲ ಹೇಳಿ ಮರಮರ ಮರುಗಿದನು. ಅಷ್ಟರಲ್ಲಿ ಅನಂತನ ಒಂದು ವರ್ಷದ ಕೆಲಸವು ಸಮಾಪ್ತಿಯಾಗಿ ಮೇ ರಜೆಯು ಇಣಿಕಿತು. ಮುಂದೆ ದೊರೆಯುವ ನೆಚ್ಚಿಗೆ ಇಲ್ಲದಾಗ, ಅಲ್ಲಿ ಇರುವದು ಯಾಕೆಂದು ಇಬ್ಬರೂ ಹೈದರಾಬಾದಿಗೆ ಹೊರತಾದರು. 'ಮುಂದೇನು? ಮುಂದೇನು?' ಎಂದೇ ಅವರು ಕುಳಿತ ಉಗಿಬಂಡಿಯು ಸಪ್ಪಳ ಮಾಡುವಂತೆ ತೋರಿತು.

---

## ೧೭ನೆಯ ಕಿಡಿ

---

ಎರಡನೆಯ ಆವರ್ತಿ ಬಿ. ಎ. ಯಲ್ಲಿ ನಪಾಸಿನ ಬರೆಬಿದ್ದ ಕಾಮಣ್ಣನು ಅಭ್ಯಾಸದಲ್ಲಿ ಮುಳುಗಬೇಕಾಗಿತ್ತು. ಕಾಲೇಜಿನ ರೋಮಾಂಚನ ಲೀಲೆಗಳೆಲ್ಲ ನಿಂತಿದ್ದವು; ಲಲಿತಾಬಾಯಿಯು ಎಂ. ಎ. ಆಗಿ ಮುಂಬೈಯಲ್ಲಿ ಗಂಡನೊಡನೆ ಇರಹೋದಳು. ಆದರೆ ಇನ್ನೂ ಕಾಮಣ್ಣನ ಅಭ್ಯಾಸದ ದೈವ ತೆರೆಯಲಿಲ್ಲ. ಕುಬೇರರಾಯರ ಪದ್ಮಾವತಿಯ ಸಂಗಡ ಆತನ ಮದುವೆ ನೆರವೇರಿತು. ಒಂದು ತಿಂಗಳಲ್ಲಿ ಮೈನೆರೆದು ಫಲಶೋಭನಕ್ಕಾಗಿ ಅವಳು ಅತ್ತೆಮನೆಯ ಮೆಟ್ಟಲನ್ನು ಏರಿದಳು. ಅಂದು ತನ್ನ ಕೋಣೆಯ ಸಂವರಣೆಗಾಗಿ ಕಾಮಣ್ಣನು ತನ್ನ ಪುಸ್ತಕ-ನೋಟುಬುಕ್ಕುಗಳನ್ನು ಬಿಗಿಯಾಗಿ ಕಟ್ಟಿ, ನಾಗವಂದಿಗೆಯ ಮೇಲೆ ಏರಿಸಿಟ್ಟನು. ಅಂದೇ ಅವು ಅವನಿಂದ ದೂರಾದವು; ಸುವಾಸನೆಯೆಣ್ಣೆ, ಊದಬತ್ತಿ, ಕಸ್ತೂರೀಗುಳಿಗೆ ಮೊದಲಾದವು ಮಾತ್ರ ಪುಸ್ತಕಗಳ ಕಪಾಟನ್ನು ಆಕ್ರಮಿಸಿ ಕುಳಿತವು. ಪ್ರೇಮದ ಮರುಳಾಟವು ಹೋಗಿ ನಿಜವಾದ ಬೇಟಕ್ಕೆ ಆರಂಭವಾಯಿತು. ಹೊಸ ರಾಜ್ಯದಲ್ಲಿ ಹೊಕ್ಕ ಮರುಳನಂತೆ ಕಾಮಣ್ಣನು ಸ್ವೇಚ್ಛಾಚಾರಿಯಾದನು. ಈಸುದಿನ ದೊರಕದ ವಸ್ತುವು ದೊರೆಯಿತೆಂಬಂತೆ ನಿತ್ಯವಿಲಾಸದಲ್ಲಿ ನಿಂತನು. 'ಅತ್ತೆ ಮಾವಂದಿರ ಮಾತು

ಕೇಳು, ಗಂಡನಿಗೆ ಹೊಂದಿಕೊಂಡು ಇರು' ಎಂದು ಮುಂಚೆಯಾಗಿ ಅತಿ ವಿನಯದ ಪಾಠಗಳನ್ನು ತಾಯಿಯಿಂದ ಕಲಿತುಬಂದ ಪದ್ಮಿಯು ಕಾಮಣ್ಣನು ಹೇಳಿದಂತೆ ಕೇಳುವ ಕರ್ಪೂರ ಗೊಂಬೆಯಾದಳು. ಆದರಿಂದ ಅತ್ತೆಗೆ ಅವಳ ಬಗ್ಗೆ ಅಕ್ಕರತೆ ಹುಟ್ಟಿತು. ಕಾಮಣ್ಣನಂತೂ ಅವಳನ್ನು ದೇವಿಯೆಂದು ಪೂಜಿಸಲೆಂದ. ಅವಳ ಅಸ್ತಿತ್ವವು ಈ ಪ್ರೇಮಪ್ರಶಂಸೆಗಳಿಗೆ ಬಲಿಯಾಗಿ ಹಾಳು ಬೀಳುತ್ತಿರುವದನ್ನು ಯಾರೂ ನೋಡಲಿಲ್ಲ.

ಪುಸ್ತಕಗಳ ಸ್ಪರ್ಶವಿಲ್ಲದೆ ಮೂರು ನಾಲ್ಕು ತಿಂಗಳು ಉರುಳಿದವು. ಅವುಗಳ ಮೇಲೆ ಕುಳಿತ ಧೂಳಿ ಒಂದು ಪದರಾಗಿದ್ದರೆ,ಆದರ ಹತ್ತು ಪದರು ಕಾಮಣ್ಣನ ತಲೆಯಲ್ಲಿ ನೆಲಗೊಂಡಿತೇನೊ! ಎಂದೂ ಅವನಿಗೆ ಗಟ್ಟಿಯಾಗಿ ಅಡದ ಅವನ ತಂದೆಯವರು ಈಗ ಅಭ್ಯಾಸದ ಬಗ್ಗೆ ಎಚ್ಚರ ಕೊಟ್ಟರು. ತೋರಿಕೆಯ ಓದು ನಡೆಯಿತು. ಅದೂ ಮಧ್ಯಾಹ್ನದಲ್ಲಿ ಊಟವಾದ ಮೇಲೆ, ನಿದ್ದೆ ಬರುವ ಮೊದಲು, ಮಂಚದ ಅರ್ಧ ಫೂಟು ಎತ್ತರ ಗಾದೆಯಲ್ಲಿ. ಗಟ್ಟಿಸಿ ನಾಲ್ಕು ಸಾಲು ಓದುವದರಲ್ಲಿ ಏಳೆಂಟು ಆಕಳಿಕೆಗಳು, ಅಲ್ಲಿಂದ ಕೆಳಗಣ್ಣು ಮೇಲಗಣ್ಣು, ಎದ್ದು ಎಚ್ಚರಾದಂತಾಗಿ ಮತ್ತೆ ಒಂದಿಷ್ಟು ಅರ್ಥ ತಿಳಿಯದ ಓದು; ಕಡೆಗೆ ಪುಸ್ತಕವನ್ನು ಮಗ್ಗುಲಲ್ಲಿ ಮಲಗಿಸಿ 'ಗೊರ್ ಗೊರ್' ಎಂಬ ನಿದ್ದೆ. ಪರೀಕ್ಷೆ ಎರಡು ಮೂರು ತಿಂಗಳುಳಿಯಿತು. ಅಕ್ಟೋಬರದ ಸಂಧಿಯನ್ನು ಮದುವೆಯ ಸಂಭ್ರಮದಲ್ಲಿ ಕಳೆದುಕೊಂಡದ್ದಾಗಿತ್ತು. ಈಗಿನದು ಏಪ್ರಿಲ್ ಪರೀಕ್ಷೆ. ಇನ್ನು ಹೆಚ್ಚು ಜತನದಿಂದ ಓದಬೇಕೆಂದು ಕಾಮಣ್ಣನು ಒಮ್ಮೆ ಮನಸ್ಸು ಮಾಡಿ, ತಾನೇ ಹೋಗಿ ಹೆಂಡತಿಯನ್ನು ಗೆಲವೂರಿಗೆ ಕಳಿಸಿ ಬಂದನು. ಅಲ್ಲಿಯೂ ಏಳೆಂಟು ದಿನ ಇದ್ದು ಪದ್ಮಿಯನ್ನು ಬಿಟ್ಟು ಬರಬೇಕಾದರೆ ಅವಳಿಗಿಂತ ಹೆಚ್ಚು ಅತ್ತು ತಿರುಗಿ ಬಂದನು.

ತನ್ನ ಸಾಮಾನು–ಸಟ್ಟರು ಸಹಿತ ಧಾರವಾಡಕ್ಕೆ ಹೋಗಿ ಒಂದು ಕೋಣೆ ಹಿಡಿದು ಕಾಮಣ್ಣನು ಅಭ್ಯಾಸದ ವ್ರತತೊಟ್ಟನು. 'ನಿನ್ನಿಂದ ವಾರಕ್ಕೊಂದು ಪ್ರೀತಿಯ ಪತ್ರ ಬಂದರೆ ಮಾತ್ರ ನಾನು ಪುಸ್ತಕ ಹಿಡಿಯುವೆ' ಪದ್ಮಾವತಿಗೆ ಹೇಳಿ ಬಂದಿದ್ದರಿಂದ ಆ ಪತ್ರದ ದಾರೀ ನೋಡುವದರಲ್ಲಿ ಶನಿವಾರ, ಆದಿತ್ಯವಾರಗಳು ಸವೆಯುತ್ತಿದ್ದವು. ಆದರೂ

ಒಂದೆರಡು ಪಠ್ಯಪುಸ್ತಕಗಳ ಎಷ್ಟೋ ಭಾಗವನ್ನು ಟಿಪ್ಪಣಿ ಪುಸ್ತಕಗಳ ನೆರವಿನಿಂದ ಒಂದೆರಡು ವಾರಗಳಲ್ಲಿ ತೀರಿಸಿದನು. ಅಷ್ಟರಲ್ಲಿ ಅವನು ಧಾರವಾಡಕ್ಕೆ ತಳವೂರಿದ ಸುದ್ದಿಯು ಅವನ ಸ್ನೇಹಿತಮಂಡಳಕ್ಕೆ ಗೊತ್ತಾಗಿ ಒಬ್ಬೊಬ್ಬರೆ ಅವನ ಸುತ್ತು ಮುಕುರಿದರು. ಆಗ್ರಹಪಡಿಸಿ ಸಿನೇಮಾ ನಾಟಕಗಳಿಗೆ ಎಳೆದರು. ಮುಂಜಾವೆಲ್ಲ ಟೇನಿಸ್ಸಿನಲ್ಲಿ ಹೋಗಹತ್ತಿತು. ಮಧ್ಯಾಹ್ನವೆಲ್ಲ ಹಾಳು ಹರಟೆಯಲ್ಲಿ. 'ರಾತ್ರಿ ಓದು' ಎಂದು ಸ್ನೇಹಿತರ ಉಪದೇಶವಾಯಿತು. ಸ್ಟೋ ಉರಿಸಿ, ಚಹಾ ಕುಡಿಯುತ್ತ ರಾತ್ರಿಯು ಓದು ನಡೆಯಿತು. ಪರೀಕ್ಷೆ ಆಯಿತು; ಕಾಮಣ್ಣನು ಹೆಸರಿಗೆ ಕುಳಿತನು. ಈ ಸಾರೆ ಅವನು ಪಾಸಾಗಲೇ ಬೇಕೆಂದು ಸಕ್ಕರೆ ಹಂಚುವದಕ್ಕಾಗಿ ಹಾತೊರೆದು ಕುಳಿತ ಅವನ ಊರವರು ಬೊಟ್ಟು ಕಚ್ಚಿದರು, ಅವನು ನಪಾಸಾದನೆಂದು.

ನಪಾಸಿಗೆ ಕಾಮಣ್ಣನು ವ್ಯೆಯುಂಡಪನಾದರೂ, ಪಾಸಾಗಲು ಹವಣಿಸಿಯೂ ಬಂದ ನಾಪಾಸು ಅವನ ಎದೆಯಿರಿಯಿತು. ಅದರ ದುಃಖದ ಅರಿವು ಈ ಸಾರೆ ಅವನಿಗೆ ಮೊದಲು ಆದದ್ದು. ಹಿಂದೆ, ನಾಪಾಸಾಗಿ ಗೋಳಿಟ್ಟು ಅತ್ತವರನ್ನು ನೋಡಿ,—ಇಲ್ಲವೆ ಆತ್ಮಹತ್ಯ ಮಾಡಿಕೊಂಡವರ ಕತೆ ಕೇಳಿ ಅವನು ಬಿದ್ದು ಬಿದ್ದು ನಕ್ಕವನು. ಈಗ ತಾನು ಅಳದಿದ್ದರೂ ಅದಕ್ಕೂ ಹೆಚ್ಚು ಉಮ್ಮಳವಾಯಿತು. ಅದರಲ್ಲಿ ಸುಶಿಕ್ಷಿತನೆಂಬ ಹೆಮ್ಮೆಯಿಂದ ಕುಬೇರರಾಯರ ಮಗಳನ್ನು ನಾಲ್ಕು ಸಾವಿರ ನಾಣ್ಯವೆತ್ತಿ ಮದುವೆಯಾದವನು ಹೀಗೆ ಹೆಂಡತಿಯಿದಿರು ಎಷ್ಟೆಂದು ಕೈಯೂರುವದು? ಅವನಿಗೆ ಜೀವ ಬೇಡಾಯಿತು. ಆದರೆ ಸುಖದ ವ್ಯೆಯು ತನ್ನ ಮದದಲ್ಲಿ ಬೇಗನೆ ಆ ಬೇಕು·ಬೇಡಗಳನ್ನು ಕಿತ್ತಿಹಾಕಿತು. ಮತ್ತೆ ತನ್ನ ಪ್ರಿಯ-ತಮೆಯನ್ನು ಕರೆಯಿಸಿ ತನ್ನ ಸುಖದುಃಖಗಳನ್ನೆಲ್ಲ ಹೇಳಿ, ಖುಷಿಯಲ್ಲಿ ಇರತೊಡಗಿದನು.

ಒಂದು ರಾತ್ರಿ ಗಟ್ಟಿಧೈರ್ಯಮಾಡಿ ಪದ್ಮಾವತಿಯು 'ನೀವು ನಿಮ್ಮ ಚಹಾ ಸಿಗರೇಟು ಬಿಡದಿದ್ದರೆ ನಿಮ್ಮ ಅಭ್ಯಾಸ ಆಗುವದಿಲ್ಲ.' ಎಂದು ಹೇಳಿದಳು. ಈ ಮಾತಿನ ಚುರುಕು ಅವನಿಗೆ ತಾಕದೆ ಇರಲಿಲ್ಲ. 'ಬಹಳ ದಿನದ್ದು, ಹೇಗೆ ಬಿಡಬೇಕು?' ಎಂದು ಅಳ್ಳುದಿಂದ ದೂರು

ಹೇಳಿಕೊಂಡನು. ' ನನ್ನ ಮಾತು ಕೇಳಿದರೆ ನಾನು ಬಿಡಿಸುವೆ ' ಎಂದಳು ಪದ್ಮಾವತಿ. ಅದರಂತೆ ಚಹದ ಹೊತ್ತಿಗೆ ಕೋಕೋ ಇಲ್ಲವೆ ಹಾಲು ಕೊಟ್ಟು, ಸಿಗರೇಟಿನ ರೊಕ್ಕವನ್ನೆಲ್ಲ ತನ್ನಲ್ಲಿ ಇಟ್ಟುಕೊಂಡು, ಒಂದೆರಡು ಯತ್ನ ಮಾಡಿದಳು. ಆದರೆ ನಡುವೊಮ್ಮೆ ಬೇನೆ ಬಿದ್ದ ತಂದೆಯ ಸಲು ವಾಗಿ ಡಾಕ್ಟರರನ್ನು ಕರೆಯಲು ಕಾಮಣ್ಣನು ಗದಗಿಗೆ ಹೋಗಬೇಕಾಗಿ ಬಂತು. ಅಂದು ಮೊದಲಿನ ದುಂದು ಮತ್ತೆ ಹಾರಾಡಿತು. ತಿರುಗಿ ಹಳ್ಳಿಗೆ ಬಂದ ಮೇಲೆಯೂ ಡಾಕ್ಟರರೊಡನೆ ಚಹ ಸಿಗರೇಟು ಯಥಾಪ್ರಕಾರ ವಾಗಿ ಆದವು. ಪದ್ಮಾವತಿಯದನ್ನು ನೋಡಿದಳು. ಆದರೆ ಹೆರವರ ಮುಂದೆ ಅದನ್ನು ತಡೆಯಬೇಕು ಹೇಗೆ ? ತರುವಾಯ ಸಹ ಅಷ್ಟು ಹಟ ತೊಟ್ಟು ಗಂಡನ ಚಟವನ್ನು ಗೆದೆಯಲು ಅವಳು ನಿಲ್ಲಲಿಲ್ಲ. ಅವಳ ಸಮ್ರ ಸ್ವಭಾವವು ಅದಕ್ಕೆ ಸಾಲದಾಗಿತ್ತು. ಚಟದ ಬಳ್ಳಿ ತೊಡರಿಕೊಂಡು ಬೆಳೆಯಿತು.

ಕಾಮಣ್ಣನ ಆ ತೊಡರುಬಳ್ಳಿಯನ್ನು ಕಿತ್ತಿ ಅವನನ್ನು ಹೊಸ ಮನುಷ್ಯನನ್ನಾಗಿ ಮಾಡಲು ಒಂದರ ಮೇಲೊಂದು ಬೇರೆ ಕೆಲವು ಉತ್ಪಾತಗಳೇ ಮನೆಯಲ್ಲಿ ಮುಖವೆತ್ತಿದವು. ಸಾಲದ ಹೃದ್ರೋಗ, ಮೊದಲಿನಿಂದಿದ್ದ ಮಧುಮೇಹ, ಮೇಲೆ ನಿತ್ಯದ ಅನಿಯಮಿತವಾದ ಊಟ-ಪಾಟ, ಇವುಗಳಿಂದ ಐವತ್ತುವರ್ಷಕ್ಕೆ ಹಣ್ಣಾಗಿ ಕಾಮಣ್ಣನ ತಂದೆ ಹಾಸಿಗೆ ಹಿಡಿದು, ತಿಂಗಳಲ್ಲಿ ತೀರಿಕೊಂಡರು. ಅಕಲ್ಪಿತವಾಗಿ ಬಂದ ದೇಸಾಯರ ಸಾವಿನ ಸಿಡಿಲೇಟನ್ನು ತಡೆಯಲಾರದೆ ವೈಧವ್ಯದ ಬಾಳಿಗೆ ಹೇಸಿ, ಅವರ ಹೆಂಡತಿಯೂ ಕೆಲದಿನಗಳಲ್ಲಿ ಕೆರೆ ಹಾರಿ ಸತ್ತಳು. ತಾಯಿ ತಂದೆಗಳಿಬ್ಬರೂ ಹೀಗೆ ಗತಿಸಿದ ಪ್ರಕಾರವು ಕಾಮಣ್ಣನನ್ನು ದಿಗಿಲಿನಿಂದ ಕಣ್ಣು ತಿರುಗಿಸಿತು. ಕುಬೇರರಾಯರು ಬಂದು ಸಮಾಧಾನಗೊಳಿಸಿ, ಅಳಿಯನ ದೇಸಗತಿಯನ್ನು ಉಳಿಸಿಗೊಳ್ಳಬೇಕೆಂದರು. ದೇಸಾಯರ ಅಣ್ಣ ತಮ್ಮಂದಿರು ಸಾಲ ಮುಟ್ಟಿಸುವ ನೆಪನದಿಂದ ಅರ್ಧ ಉತ್ಪನ್ನಕ್ಕೆ ಅರ ದಾಳ ಹಚ್ಚಿದರು. ಈಗ ಉಳಿದದ್ದು ಹತ್ತುಸಾವಿರ ಸಾಲ, ಎರಡು ಸಾವಿರ ಉತ್ಪನ್ನ. ಯಾವದು ಹೆಚ್ಚೋ ಅದನ್ನೆ ಲೆಕ್ಕಕ್ಕೆ ಹಿಡಿದು ಅಭಿ ಮಾನದಿಂದ ದೊಡ್ಡ ದೇಸಗತಿಯೆನ್ನಬೇಕಲ್ಲವೇ ? ಕಾಮಣ್ಣನಿಗೆ ಇಂಥ

ದೊಡ್ಡ ದೇಸಗತಿ ಉಳಿಯಿತು. ಮರ್ಯಾ ಬೇಡೆನಿಸಿಕೊಂಡು ಉಳಿಯಿತು. ತಮ್ಮ ಸಾಲವೂ ಸುಮಾರು ಅಷ್ಟೇ ಆದ ಕುಬೇರರಾಯರು ‘ನಿನಗಿನ್ನೂ ಹಿರಿಯರು ಮಾಡಿದ ಉತ್ಪನ್ನ ಇದೆ, ನಮಗೆ ಅದೂ ಇಲ್ಲ’ ಎಂದು ಮುಂತಾಗಿ ಅಳಿಯಂದಿರನ್ನು ಸಾಂತ್ವನ ಮಾಡಿ ಮರಳಿದರು.

ಕಾಮಣ್ಣನು ಈಗ ತಾನೆ ತಾನಾದನು. ಹೊಲ, ಮನೆ, ಗಾದಿ, ಲೋಪು ಎಲ್ಲ ಹಳೆಯ ಪ್ರಾಪ್ತಿ ಅವನಿಗೆ ಅಸಾಧ್ಯವಾದವು. ಹೊಸ ವಿಚಾರ ಪುಟಿಸಿದ್ದಿತು—ಅದರಲ್ಲಿ ಹಿಂದಿನ ಕಸರೆಲ್ಲ ತೊಳೆದು ಹೋಯಿತು. ಚೈನಿಯ ಬಗ್ಗೆ ಕರುಳಿನಲ್ಲಿಯೇ ತಾತ್ಸಾರ ಹುಟ್ಟಿತು. ಬರಲಿರುವ ಅಕ್ಟೋಬರದ ಪರೀಕ್ಷೆಗೆ ಕುಳಿತು ಪಾಸಾಗಿಯೇ ಬಿಡಬೇಕೆಂಬ ಸಂಕಲ್ಪವೂ ಒತ್ತಿ ಬಂದಿತು. ಪದ್ಮಾವತಿಗೆ ಅದನ್ನೆಲ್ಲ ಹೇಳಿ, ಅವಳನ್ನು ಕರೆದೊಯ್ದು ಗೆಲವೂರಲ್ಲಿ ಬಿಟ್ಟು, ತಾನು ಮುಂಬೈಗೆ ನಡೆದನು. ತನ್ನ ಹಿಂದೆ ಎಲ್ಲ ಜಾಡ್ಯದ ಚಿಹ್ನಗಳಿಗೆ ತಿಲಾಂಜಲಿ ಕೊಟ್ಟು ನಡೆದನು. ಈ ಮೂರು ತಿಂಗಳವರೆಗೆ ತೀರ ಒಡವನಂತೆ, ಕಾಲೇಜಿನಲ್ಲಿ ಕಂಡ ಆ ಜಮದಗ್ನಿ ( ಜಗಣ್ಣ ) ಯಂತೆ ಇದ್ದು, ಹಗಲು ರಾತ್ರಿ ಓದಿ ಪರೀಕ್ಷೆಯಿಳಿಯುವಂತೆ ಮಾಡಬೇಕೆಂದು, ಮುಂಬೈಯಲ್ಲಿ ಒಂದು ಸಾಧಾರಣ ಖರ್ಚಿನ ಖಾನಾವಳಿಯಲ್ಲಿ ಕೋಣೆ ಹಿಡಿದು ನಿಂತನು. ಹಿಂದಿನ ಸಂಸ್ಕಾರಗಳನ್ನು ಮೀರಿ ಇರುವದು ಅತಿ ಘೋರವಾಯಿತು; ಪಮ್ಮಿಯ ನೆನಪು ಬೆನ್ನಟ್ಟಿತು ಚಟಗಳು ಕೈಹಿಡಿದು ಜಗ್ಗಿದವು. ಆದರೂ ಅವನು ಸುದೈವದಿಂದ ಗಟ್ಟಿ ಹಿಡಿದನು. ೧೯೩೯ರ ಮಧ್ಯದಲ್ಲಿ ಕಡೆಗೊಮ್ಮೆ ಬಿ. ಎ. ಪಟ್ಟದಾನೆಯು ಅವನಿಗೆ ವಿಜಯಮಾಲೆ ಹಾಕಿತು.

ಅವನ ಸಂತೋಷದಲ್ಲಿ ರಾಯರೂ ಪದ್ಮಾವತಿಯೂ ಪಾಲುಗಾರರಾದರು. ಅಳಿಯನ ಆ ಸಂತೋಷವನ್ನು ಸವಿಯುವ ಸೊಗಸು ಶಾಂತಾಬಾಯರೊಬ್ಬರಿಗೆ ಉಳಿದಿರಲಿಲ್ಲ. ‘ಹಾಸ್ಯಂಡು ಬಿಸಿ ಒಗೆಯುವ’ ಬಾಳೆಲೆಯಂತಹ ಬಾಳುವೆ ಅವರದಾಗಿತ್ತು. ಅಂತವರೂ ಅಂದು ನಿಜವಾಗಿ ಹಿಗ್ಗಿ, ಸತ್ಯನಾರಾಯಣವನ್ನು ತಮ್ಮಲ್ಲಿಯೇ ಮಾಡಿಸಿದರು.

ಹೆಂಡತಿಯ ಕೂಡ ಕಾಮಣ್ಣನು ತಿರುಗಿ ತನ್ನ ಹಳ್ಳಿ ಸೇರಿದನು. ಮನೆಯಿತ್ತು, ಆಳು ಹೋಳುಗಳಿದ್ದವು, ಹಾಲು ಹೈನವಿತ್ತು, ಆದರೆ

ತಂದೆತಾಯಿಗಳಿಲ್ಲ, ಸುಖಶಾಂತಿಗಳಿಲ್ಲ. ರಣಗುಡುವ ಮನೆಯಲ್ಲಿ ನಿರ್ವಾಹವಿಲ್ಲದೆ ಅವನು ಇದ್ದನು. ಹಿಂದಿನಂತೆ ಅಪ್ಪುಗೈಪಚ್ಚಿ ಈಗ ಅವನಿಗೆ ಇರಲಾಗಲಿಲ್ಲ. ಮುಂದೇನೆಂಬ ವಿಚಾರವು ಬೆನ್ನೇರಿ ಕೆಣಕುತ್ತ ನಿಂತಿತು. ದೇಸಗತಿಯ ಬೆಲೆ ತಿಳಿದು ಹೋಗಿತ್ತು. ಸಾಲಕ್ಕೂ ಹೊಲಕ್ಕೂ ಜೋಡಿನಾಡಿದನು. ತನ್ನ ಉದರನಿರ್ವಾಹಕ್ಕಾಗಿ ಒಬ್ಬ ಕಾರಕೂನನ ಜಾಗ ಸಿಕ್ಕರೂ ಬೇಕೆಂದು ತನ್ನ ಬಿ. ಎ. ಪದವಿಯನ್ನು ಮುಂದೊಡ್ಡಿ, ನೌಕರಿ ಬೇಡುವ ನಾಕೈದು ಅರ್ಜಿಗಳನ್ನು ಅಲ್ಲಲ್ಲಿ ಅಟ್ಟಿದನು. ಕಲೆಕ್ಟರ ಕಚೇರಿಯಲ್ಲಿ ಉಮೇದವಾರಿಗಾಗಿ ಖಟಿಪಿಟಿ ಮಾಡಲೆಂದು ಒಮ್ಮೆ ಧಾರವಾಡಕ್ಕೇ ಹೋದನು. ಏನೂ ಸಾಧಿಸಲಿಲ್ಲ. ಉಸ್ಸೆಂದು ಹೋಗಿ ತನ್ನ ಪ್ರೀತಿಯ ಚಹದಂಗಡಿಯೊಂದರಲ್ಲಿ ಕುಳಿತಾಗ ಎಷ್ಟೋ ವಿಚಾರ ಬಂದವು.

'ನಾನು ಕಲಿತರೇನಾಯ್ತು ? ಈ ರಾಮಯ್ಯನಂತೆ ಉಪಹಾರ-ಗೃಹವನ್ನು ಯಾಕೆ ತೆರೆಯಬಾರದು ? ಇಲ್ಲವೆ ಹಜಾಮತಿಯ ಸಲೂನ್ ಆದರೂ ಯಾಕೆ ಬೇಡ ? ನಾವು ಸುಶಿಕ್ಷಿತರೆಂಬ ಹಮ್ಮಿನಲ್ಲಿ ಈ ಉದ್ಯೋಗಗಳಲ್ಲಿ ತೊಡಗದೆ ಇರುವದು ಒಳಿತೇ ?'

ಆ ವಿಚಾರಗಳು ಚಹದ ಹೊಗೆಯೊಡನೆ ಗಾಳಿಯಲ್ಲಿ ಕರಗಿದವು. ಮತ್ತೆಷ್ಟೋ ಹೊಸ ಹಂಚಿಕೆಗಳನ್ನು ತಲೆಯಲ್ಲಿ ಹಾಕಿಕೊಂಡನು. ಒಮ್ಮೆ ಇಡಿಯ ಊರೆಲ್ಲ ಅಂಗಡಿಯಿಂದ ಅಂಗಡಿಗೆ ತಿರುಗುತ್ತ, ಯಾವ ಕಾಯಕವು ತನ್ನ ದೃಷ್ಟಿಗೆ ಬೀಳದೆ ಉಳಿದಿದೆಯೆಂಬುದನ್ನು ನೋಡಿಕೊಂಡನು. ಎಷ್ಟೋ ಇದ್ದವು, ಅವುಗಳಲ್ಲಿ ಆಟಗಾರಿಕೆಯ ವಸ್ತುಗಳ ಅಂಗಡಿಯ ಕಲ್ಪನೆ ಅವನಿಗೆ ಮೆಚ್ಚಿತು, ಅದೇ ತನ್ನ ಗಮ್ಯವೆಂದು ಹರಿದಾಡಿದನು. ಗೆಳೆಯರ ಮುಂದೆ ಹೇಳಿದನು. ಅವರ ಚೇಷ್ಟೆಯ ಹುಚ್ಚುನಗೆಯಲ್ಲಿ ಅದೂ ಗತಪ್ರಾಯಿತು. ನೆಟ್ಟಗೆ ತನ್ನೂರು ಕಂಡನು. ಪದ್ಮಾವತಿಯು ಮೊದಲ ಬಸುರೆಂದು ತಿಳಿದೊಡನೆ ಅವಳನ್ನು ಕರೆತರಬೇಕೆಂದು ರಾಯರು ಕಾಮಣ್ಣನಿಗೆ ಕಾಗದ ಬರೆದರು. ಕೂಡಲೇ ಅವಳೊಡನೆ ಗೆಲವೂರಿಗೆ ಹೋದನು.

ಅದೇ ಹೈದರಾಬಾದಿನ ನಿಷ್ಫಲಯಾತ್ರೆಯನ್ನು ತೀರಿಸಿಕೊಂಡು

ಅನಂತ ಜಗಣ್ಣಾ ತಿರುಗಿ ಅಲ್ಲಿಗೆ ಬಂದಿದ್ದರು. ಮೇ ತಿಂಗಳ ಉರಿ- ಉಗ್ರ ಬಿಸಿಲು. ಕಾಲೇಜಿನ ಮೂವರು ಗೆಳೆಯರೂ ಕೂಡಿ ಕುಳಿತು ತಮ್ಮ ತಮ್ಮ ಕತೆ ಹೇಳುವಾಗ ಆ ಬಿಸಿಲೂ ಒಳಬಿಸಿಲೂ ಅಷ್ಟೇ ಆಗಿ ತೋರಿದವು. ಕಾಡುಗಿಚ್ಚು ಹಬ್ಬಿ ಕಾಡಿಗೆ ಕಾಡನ್ನು ಸುಡುತ್ತ, ಕೆಂಪು ನಾಲಿಗೆಯ ಕೋಟಿಗಳನ್ನು ಮುಂಚಾಚುತ್ತ ಎಲ್ಲ ಕಡೆಯಿಂದ ಮುತ್ತುವಾಗ ನಡುನಿಂತ ಮೂರು ಚಿಗರೆಗಳ ಬೆದರಿದ ನೋಟವು ಅವರ ಮುಖದಲ್ಲಿ ಇತ್ತು. ಕಾಮಣ್ಣನ ಬದಲುಗೊಂಡ ವೃತ್ತಿಯನ್ನು ತಿಳಿದು ಅನಂತ ಜಗಣ್ಣರಿಗೆ ಸಂತಸವಾಯ್ತು 'ಹೋಗಲಿ, ಕಾಮಣ್ಣ, ಎಲ್ಲರಿಗೂ ಈ ಬಾಳುರಿ ಬೆನ್ನು ಹತ್ತಿದೆ. ಇದೊಂದೇ ಈವತ್ತಿನ ಸಮಾಧಾನ. ನಾವೂ ಮುಂದೆ ಗತಿಯೇನು ....? ಎಂಬ ಸುಳಿಯಲ್ಲಿ ಸಿಕ್ಕಿರುವೆವು, ನೀನೂ ಸಿಕ್ಕಿರುವಿ ಹಾಗೇ ಇರೋಣ, ಉರಿ ಹೆಚ್ಚಲಿ, ನಮ್ಮಿಂದ ಹೊರಟೀತು ಉರಿಯನ್ನು ಸುಡುವ ಹೆಚ್ಚಿನ ಉರಿ!' ಅನಂತನು ಉಬ್ಬಿ ಆಡಿದನು. ಉಳಿದಿಬ್ಬರು 'ಆಗಲಿ' ಎಂದರು.

---

## ೧೮ನೆಯ ಕಿಡಿ

---

ಜಗಣ್ಣನು ಕೆಲಸವಿಲ್ಲದೆ ನಿಲ್ಲಲು ಉಪವಾಸದ ಘೋರಪ್ರಸಂಗಗಳು ಅವನ ಡಿಗ್ರಿಯನ್ನು ಅಣಕಿಸುತ್ತ ಹತ್ತಿರ ಬಂದವು. ಒಂದೆರಡು ಹುಡುಗರಿಗೆ ಓದು ಹೇಳಿ ಒಂದು ತಿಂಗಳು ಸಾಗಿಸಿದನು. ಅದೂ ನಿಂತಿತು. ಬೀಳಲಿಕ್ಕೆಂದು ಬಾಗಿ ನಿಂತ ಗೋಡೆಯ ಮೇಲೆ ಮಲಗಿದ ನಾಯಿಯ ಬಾಳುವೆ ಆಯಿತು ಅವನದು. ಯಾವ ಕ್ಷಣಕ್ಕೆ ನಿರ್ಗತಿಕತೆಯ ಮರಣವು ಆಡರುವದೋ ಹೇಳದಾಯಿತು. ಇದರಲ್ಲಿ ಅವನ ಹೆಂಡತಿ ಅಂಬಕ್ಕ ಗರ್ಭಿಣಿಯಾದಳು. ಗೋದವ್ವನ ಎದೆ ಗದಗದ ನಡುಗಿತು. ಕಾಳುಕಡಿ ತೀರಿದವು. ಅನಂತನು ತನ್ನ ತಂದೆಯ ಹೊಲದಿಂದ ಒಂದೆರಡು ಚೀಲ ಜೋಳ ತರಿಸಿ, ಜಗಣ್ಣನಲ್ಲಿಗೆ ಹಚ್ಚಿಕೊಟ್ಟು ಮತ್ತೆ ಒಂದು ತಿಂಗಳನ್ನು ಮುನ್ನೂಕಿದನು. ಗೋದವ್ವನು ಒಂದು ದಿನ ಬೆಳಿಗ್ಗೆ ಎದ್ದು ಹುಚ್ಚಿಯಂತೆ ಅಳುತ್ತ ಜಗಣ್ಣನಿಗೆ ಹೇಳಿದಳು 'ಸಾಕಾತು ಜಗಣ್ಣ; ನಾ

ಹೋಗಿ ಯಾರ ಮನಿಯಲ್ಲಾದರೂ ಅಡಿಗೆ ಹಿಡಿದು ನಿಮ್ಮ ಹೊಟ್ಟೆ ಬಟ್ಟೆಗೆ ತಂದು ಹಾಕತೇನಿ' ಇಷ್ಟೆನ್ನಲು ಆವಳ ಕೊರಳು ಬಿಗಿದು ಕೊಂಡಿತು. ಮುಂದಾಡದೆ ಹೊಸತಿಲ ಹೊರಗೆ ಹೊರಟಳು. ಜಗಣ್ಣನಿಗೆ ಇದೆಂಥ ಕರುಳು ಕಿತ್ತುವ ಕಳವಳವಾಗಿರಬೇಡ! 'ಅವ್ವಾ, ಇದೇನು ಹುಚ್ಚು ಹೂಡಿದಿ? ನನ್ನ ಕೈಲಾಗದಿದ್ದರೆ ಎಲ್ಲರೂ ಕೂಡಿ ಬಾವಿ ಬೀಳೋಣ. ಹಾಗೆ ಹೋಗಬೇಡ' ಎಂದು ಗೋದವ್ವನನ್ನು ಒಳಜಗ್ಗು ವದಕ್ಕೇ ಅಲ್ಲಿಗೆ ಜಯರಾಯನು ಬಂದು,ಆ ಪ್ರಸಕ್ತಿಯನ್ನು ತಿಳಿದು ತನ್ನ ನಡತೆಗೆ ವಿರುದ್ಧವಾಗಿ ನಿಜವಾಗಿಯೇ ಮರುಗಿದನು. ಒಮ್ಮೆಲೆ ಅವರೆ ಲ್ಲರನ್ನು ಕರೆದುಕೊಂಡು 'ಜಗಣ್ಣನಿಗೆ ನೌಕರಿ ಹತ್ತುವವರೆಗೆ ನಮ್ಮ ಮನೆಯಲ್ಲಿ ಇರ್ರಿ' ಎಂದು ತನ್ನ ಮನೆಯಲ್ಲಿ ಇರಹೇಳಿದನು. ಗೋದ ವ್ವನು ಒಲ್ಲೆಂದು ಜಿಗಿಹಿಡಿದಳು. ಜಯರಾಯ ಕೇಳಲಿಲ್ಲ. ಜಗಣ್ಣನ ಮನೆಗೆ ಕೀಲಿ ಬಿದ್ದಿತು. ಅವನ ಉದ್ಯೋಗದ ಶೋಧವು ಮತ್ತೆ ತರತರ ದಿಂದ ನಡೆಯಿತು.

ಇತ್ತ ಅನಂತನು ಕಕ್ಕನಲ್ಲಿ ಊಟಕ್ಕೆ ಕೊರತೆ ಇಲ್ಲದೆ ಇದ್ದ ನಾದರೂ ಆ ಇರವು ಬೇಕಾಗಿ ಇರಲಿಲ್ಲ. ವಕೀಲಿಯಭ್ಯಾಸಕ್ಕೆ ಹೋಗೆಂದು ರಾಯರು ಗಂಟುಬಿದ್ದರು. ನಾಲ್ಕೈದು ದಿನ ಅದರ ಊಹಾಪೋಹ ವಾಯ್ತು. ರಾಯರ ಆದಾಯವು ಎಷ್ಟು ಇಳಿದಿತ್ತು? ಸಾಲವೆಷ್ಟು ಏರಿತ್ತು? ಸಾನಿಯ ಸುಲಿಗೆಯ ಬಗೆಯೇನು? ಎಂತು? ಎಂಬುದೆಲ್ಲವನ್ನೂ ನೋಡಿ ನೋಡಿ ನೊಂದ ಅನಂತನು, ಅವರಿಂದ ತಿಂಗಳಿಗೆ ಮೂವತ್ತು ನಾಲ್ವತ್ತು ರೂಪಾಯಿಗಳ ತೆರಿಗೆ ತರಿಸಿ, ವಕೀಲಿಕಲಿಯುವ ವಿಚಾರಕ್ಕೆ ಒಲ್ಲೆಂದನು- ಇಷ್ಟು ಜಿಗಳಿಯಂತೆ ಮಾತು ಹಿಡಿದು ಆಡುವದು ರಾಯ ರಿಗೆ ಸೇರಲಿಲ್ಲ. 'ತಮಗೆ ಕಲಿಸುವದು ಸಾಧ್ಯವಿಲ್ಲ' ಎಂದು ಗೊತ್ತಾಗಿ ದ್ದರೂ ತಮ್ಮ ಮಾತನ್ನು ಅವನು ಅಲ್ಲಗಳೆಯುವದು ಅವರಿಗೆ ತಡೆಯ ದಾಯಿತು. ಬಹಳ ಕಿಡಿಕಿಡಿಯಾಗಿ ಹುಚ್ಚಾಪಟ್ಟೆಯಾಗಿ ಅನಂತನಿಗೆ ಒದರಾಡಿದರು. ಕಡೆಗೆ 'ಈಗಿನ ಹುಡುಗರಿಗೆ-ನಿಮಗೆಲ್ಲ-ಕುಳಿತು ಕೂಳು ತಿನ್ನುವ ದಡ್ಡುಬಿದ್ದಿದೆ.' ಎಂದರು.ಅನಂತನಿಗೆ ಈ ನುಡಿಯು ಬರ್ಚಿಯಾಗಿ ತಿವಿಯಿತು. 'ಹಾಗಾದರೆ ನಾನು ಹೊರಟೆ, ನಿಮ್ಮಲ್ಲಿ ಇನ್ನೊಂದು

ಕಾಳು ನೀರು ಕುಡಿಯಲಾರೆ. ಇಷ್ಟು ದಿನದ ಜೋಪಾಸಕ್ಕಾಗಿ ಎಂದಿಲ್ಲ ಒಮ್ಮೆ ನಿಮ್ಮ ರಿಣವನ್ನು ಮುಟ್ಟಿಸಬಲ್ಲೆ' ಎಂದು ಹೊರ ಬಿದ್ದನು. ಜಗಣ್ಣನಿಗೆ ಕೂಡ ತಿಳಿಸದೆ ತನ್ನ ತಂದೆಯು ಎರಡು ಹೊಲ ಗಳಿರುವ ಹಳ್ಳಿಗೆ ಹೋಗಿ, ಅಲ್ಲಿ ಕುಲಕರ್ಣಿಯು ಮನೆಯಲ್ಲಿ ಕೆಲಕಾಲ ನಿಂತನು.

ಅನಂತನ ಮೊದಲಿನ ಆಕಾಂಕ್ಷೆಗಳೆಲ್ಲ ಕಮರಿಹೋದವು. ಆ ಎರಡು ಹೊಲಗಳ ಒಕ್ಕಲಿಗನಾಗಿ ಇರುವದೇ ಸರಿಯಾದ ಹೊಲಬೆಂದು, ಅವನು ನೋಡಹೋದಾಗ ಒಮ್ಮೆ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು. ತಾನು ಎಂ. ಎ. ಫರ್ಸ್ಟ್ ಕ್ಲಾಸಿನ ಪದವೀಧರನೆಂಬ ಬಿಂಕವನ್ನು ಬೀಸಾಡಿ, ಕಂಬಳಿಗೆಳೆಯನಾಗಲು ಸಾಧನೆ ನಡೆಸಿದನು. ಒಕ್ಕಲತನದ ಎಲ್ಲ ಸಂಗತಿ ಗಳನ್ನು ತನಗೆ ತಿಳಿಸಬೇಕೆಂದು ಆಳುಹೋಳುಗಳನ್ನು ಗುರುಗಳನ್ನಾಗಿ ಮಾಡಿಕೊಂಡು ಓಡಾಡಿದನು. ಕುಲಕರ್ಣಿಗೆ ಇದರ ಸುಳುವು ಹತ್ತಿತು. ಅನಂತನನ್ನು ಮಾತಾಡಿಸಿ ನೋಡಿದನು 'ನಾನಿನ್ನುಮೇಲೆ ಅಪ್ಪನ ಹೊಲಗಳನ್ನು ಸಾಗು ಮಾಡುತ್ತ ಇಲ್ಲಿಯೇ ಇರುತ್ತೇನೆ. ನನಗೆ ನೆರ ವಾಗಬೇಕು' ಎಂಬ ಅನಂತನ ದೃಢನಿಶ್ಚಯದ ಉತ್ತರ ಬಂದಿತು. ಕುಲಕರ್ಣಿಯು ಸುತ್ತಲೂ ಕುಳಿತ ಹಳ್ಳಿಯ ಬಳಗದೊಡನೆ ಹೊಟ್ಟೆಹಿಡಿ ಸದೆ ನಕ್ಕನು. 'ಈ ಜಂಗಲೀ ಕೆಲಸಕ್ಕೆ ನೀವೇನು ಈಡಾದೀರಿ, ರಾಯರೇ. ಮಳೆಯಿಲ್ಲ, ಬೆಳೆಯಿಲ್ಲ. ಅದರಲ್ಲಿ ನಿಮ್ಮ ಹೊಲಗಳಂತೂ ನಟ್ಟು ಬೆಳೆದು ಹಾಳಾಗಿವೆ' ಎಂದು ಮುಂತಾಗಿ ಕುಲಕರ್ಣಿಯು ನಿರುತ್ಸಾಹದ ಉತ್ತರ ಕೊಟ್ಟನು.

ಇಷ್ಟರಲ್ಲಿ ರಾಯರು ತಮ್ಮ ಸಿಟ್ಟಿನ ಮಾತಿಗೆ ತಾವೇ ನಾಲಿಗೆ ಕಚ್ಚಿಕೊಂಡು, ಹಳಹಳಿಯಿಂದ ಅನಂತನನ್ನು ಹುಡುಕುತ್ತ ಬಂದು, ಅವ ನನ್ನು ಗೆಲವೂರಿಗೆ ಕರೆದೊಯ್ದರು. ಅಲ್ಲಿ ಸರಕಾರೀ ಇಂಗ್ಲಿಶ್ ಶಾಲೆ ಯಲ್ಲಿ ಪರೀಕ್ಷಣಕ್ಕೆ ಬಂದ ಇನ್‌ಸ್ಪೆಕ್ಟರರಿಗೆ ಅನಂತನು ಭೆಟ್ಟಿಯಾಗಿ ಅವರು ಮೆಚ್ಚಲು ಅರ್ಜಿಯೊಗೆದು, ಶಿಕ್ಷಕನ ಸ್ಥಳವನ್ನು ಸಂಪಾದಿಸಿ ಕೊಂಡನು. ಅನಂತನ ಈ ಲಾಭವು ತನ್ನ ಬಗ್ಗೆ ತೀರ ಹತಾಶನಾದ ಜಗಣ್ಣನಿಗೆ ಕೂಡ ಆನಂದದ ಪರಮಾವಧಿಯನ್ನು ತಂದಿತು.

ಜಗನ್ನಾಥನ ಸ್ವಂತದ ಹಾಡು ಅದೇ ಅಳುಂದಸಿಯಲ್ಲಿ ಸಾಗಿತ್ತು. ಜಯರಾಯನ ಆಧಾರವಿಲ್ಲದಿದ್ದರೆ ಯಾವ ಜೋಳಿಗೆಗುಂಟ ತನ್ನ ಪ್ಯಾತೇಲ ಬಹುದಾಗಿತ್ತೋ—ಎನ್ನುವವರೆಗೆ ಯೋಚಿಸಿ ಅವನು ಬೆಚ್ಚಿದನು. ತಾನು ಹಾದಿಗೆ ಹತ್ತಿದ ಅನಂತನು ಜಗನ್ನಾಥನನ್ನು ಎಲ್ಲಿ ತೊಡಗಿಸಬೇಕು—ಎಂಬ ಬಗ್ಗೆ ಅನೇಕ ಮಾರ್ಗಗಳನ್ನು ಕಲ್ಪಿಸಿದನು. ಒಂದೂ ಬಗೆಹರಿಯಲಿಲ್ಲ. ಅಷ್ಟೊತ್ತಿಗೆ ಹೊಸದಾಗಿ ಜನ್ಮತಾಳಿದ ಕರ್ನಾಟಕದ ವಿಮೆ ಇಳಿಸುವ ಕಂಪನಿಯವರು, ತಮಗೆ ಏಜಂಟರು ಬೇಕೆಂದು ಪ್ರಕಟಗೊಳಿಸಿದರು. ಅದಕ್ಕಾಗಿ ಅನಂತನ ಹೇಳಿಕೆಯಂತೆ ಜಗನ್ನಾಥನು ಮುಂದಾದನು. ಏಜನ್ಸಿಯು ದೊರೆಯಿತು. ಆದರೆ ಮೊದಲು ಏಜಂಟನು ವಿಮೆಯಿಳಿಸ ಬೇಕಲ್ಲವೇ ? ' ಈ ಪೇಚಾಟವೆಲ್ಲಿಯದು ನನಗೆ ? ' ಎನ್ನುತ್ತ ಜಗನ್ನಾಥನು ಹಿಂಜರಿದನು. ಅನಂತನ ಆಶ್ವಾಸನದಿಂದ ಹುರಿಗೊಂಡು ಮತ್ತೆ 'ಹೂಂ' ಎಂದು ಆ ಕೆಲಸಕ್ಕೆ ತಲೆಕೊಟ್ಟು ನಿಂತನು.

ಗೋದಮ್ಮನು ಅದೇನೊ ಕೆಲಸವು ಇದ್ದೊರಲ್ಲ ಮಗನಿಗೆ ಸಿಕ್ಕಿ ತೆಂದು ಸಂತೋಷ ಬಟ್ಟು ತನ್ನ ಮನೆಗೆ ಬರಬೇಕೆಂದಳು. ಆದರೆ ' ಈಗ ಸಿಕ್ಕ ಕೆಲಸವು ಪಗಾರದ್ದಲ್ಲ ' ಎಂದು ಹೇಳಿ ಅವಳನ್ನು ಜಯರಾಯನ ಮನೆಯಲ್ಲಿ ಇರಿಸುವದು ಬಲು ತಲೆನೋಯಾಯಿತು. ಅಂಬಕ್ಕನಿಗೆ ದಿನ ತುಂಬಿದ್ದರಿಂದ ಬಾಣಂತಿತನಕ್ಕೆ ತವರು ಮನೆಗೆ ಕಳಿಸಿದ್ದಾಯಿತು. ಕಳಿಸ ದಿದ್ದರೆ ಗತಿಯೇ ಇಲ್ಲ.

ವಿಮೆಯಿಳಿಸಿರೆಂದು ಕಂಡವರನ್ನು ಕೇಳುವ ಹೊಸ ಹೋರೆಯನ್ನು ಜಗನ್ನಾಥನು ಕೈಕೊಂಡನು. ಮೇಲೆ ತತ್ತ್ವದ ವೇಷ. ' ಹೆಂಡಿರು ಮಕ್ಕಳಿ ಗಾಗಿ ಹಣ ಉಳಿಸಲು ವಿಮೆಯಿಳಿಸುವದೊಂದೇ ಉಪಾಯ; ಜೀವನ ಸುಖ ಸಂರಕ್ಷಣಗಳಿಗೆ ವಿಮೆಯೆಂದರೆ ಉಮೆಯನ್ನು ವಶೀಕರಿಸಿದಂತೆ ' ಇತ್ಯಾದಿ ಜಿನುಗುವ ರೀತಿ; ಒಳಗೆ ಹೊಟ್ಟೆಯುರಿ. ' ನಾನು ನನ್ನ ಹೆಂಡಿರು ಮಕ್ಕಳ ಕೂಡ ಪ್ರಾಣ ಹಿಡಿದು ಈ ಹೊತ್ತು ಇರಬೇಕಾಗಿದೆ; ಅದಕ್ಕೆ ವಿಮೆಯಿಳಿಸಿ ನನಗೆ ತುತ್ತು ಅನ್ನ ನೀಡಿರಿ ' ಎಂಬದೇ ಅದರ ತಾತ್ಪರ್ಯ. ಅನಂತನು ಕೆಚ್ಚು ಕನ್ನಡಿಗನಾಗಿದ್ದರಿಂದ ಮೊದಲು ತಾನು ಇಳಿಸಿದನು. ಉಳಿದ ಒಬ್ಬಿಬ್ಬರ ಹೊರತು ಬೇರೆಯವರು ಬೇಗ ಸಿಗಲಿಲ್ಲ.

ಎಷ್ಟೋ ಕಂಪನಿಗಳೂ ಏಜಂಟರೂ ಹುಟ್ಟಿರುವಾಗ ಅವರ ಧಿಡೆಯನ್ನು ಮುರಿಯಲಾಗದೆ ಅವರಿಂದ ಹೇಗೆ ಸುರಕ್ಷಿತವಾಗಬೇಕು, ಮುಂದಿನ ಗತಿಯು ಒತ್ತಟ್ಟಿಗಿರಲಿ–ಎಂಬ ಚಿಂತೆಯಲ್ಲಿ ತೊಳಲುವ ಗೃಹಸ್ಥರು ಜಗಣ್ಣನಿಗೆ ದಾದು ಹಚ್ಚಿಸಗೊಡಲಿಲ್ಲ. ತಿಂಗಳ ಪಗಾರದ ಒಂದಾನೊಂದು ಕೆಲಸವು ಎಲ್ಲಿಯೂ ಸಿಕ್ಕಲಿಲ್ಲ. ಇನ್ಶ್ಯೂರನ್ಸದಲ್ಲಿ ಸಹ ಇವನ ಸದ್ಭಾದ ಇರುವಿಕೆಯ ಖಾತ್ರಿಯೇ ಇವನಿಗಾಗಲಿಲ್ಲ. ಅದನ್ನು ಹಿಡಿಯಬೇಕೊ ಬಿಡಬೇಕೊ ತಿಳಿಯದಾಯಿತು. ಅನಂತನೊಡನೆ ಮಾತಾಡುತ್ತ ಒಮ್ಮೆ 'ಹತ್ತು ವರ್ಷದ ಹಿಂದೆ ಅಪ್ಪನ ನಾಕೆಯ ನೌಕರಿ ಹೋದಾಗಿನದಕ್ಕೂ ಈಗಿನದಕ್ಕೂ ಭೇದವೇನು? ಅಂದಿನಿಂದ ಸಾವಿರಾರು ಗಳಿಗೆಗಳ ನೆತ್ತರ ಸುಟ್ಟು ಬೊಬ್ಬಿಟ್ಟರೂ ತಿಂಗಳಿಗೆ ಒಂದು ಬಿಲ್ಲಿಯನ್ನಾದರೂ ಗಟ್ಟಿಗಟ್ಟಿ ಪಗಾರವೆಂದು ಕೊಡುವ ಕೆಲಸ ಸಿಗದಾಯಿತು. ಅನಂತಾ, ಬಾಳುವೆಯೊಡನೆ ಜಿದ್ದುಕಟ್ಟಿ ಗೆಲ್ಲುವ ಹಮ್ಮು ಯಾರಿಗಿದೆ ಈ ಭೂಮಿಯಲ್ಲಿ?' ಎಂದು ಕೂಗಿ ಕೇಳಿದನು. ॥

---

## ೧೯ನೆಯ ಕಿಡಿ

---

೧೯೩೧ನೆಯ ಖಾನೇಸುಮಾರಿಯ ಕಾಲ. ಕೆಲಸವಿಲ್ಲದೆ ಅಲೆಯುವವರ ಅಂಕೆ ಹತ್ತುಪಟ್ಟು ಹಿಗ್ಗಿದೆ. ಅವರ ಮೋರೆಗಳೇನು ಹಿಗ್ಗಿಲ್ಲ. ಖಾನೇಸುಮಾರಿಯಲ್ಲಿ ಕೆಲಸಮಾಡುವ ಮುಂನೋಟವು ಅನೇಕರಿಗೆ ಇಲ್ಲ. ಸರಕಾರದ ಈ ಸೇವೆಯಿಂದ ಮುಂದೇನೂ ದೊರೆಯಲಾರದೆಂದು ಅವರು ಮನಗಂಡಿರಬೇಕು. ಮೊಳಕೆ ಮರವಾಗುವ ಬದಲು, ಇದ್ದ ಮರವೇ ಮೊಳಕೆಯಾಗುವ ಕೆಟ್ಟದಿನಗಳು ಅಡಿಯಿಟ್ಟವು. ಹತ್ತಿಪ್ಪತ್ತು ವರ್ಷದಿಂದ ಬಾಳುವೆಮಾಡುತ್ತ, ಬೆಳೆದ ಸಂಸಾರವನ್ನು ಬೆನ್ನಿಗೆ ಕಟ್ಟಿಕೊಂಡು ಇರುವ ಇಳಿವಯಸ್ಸಿನವರು ನೌಕರಿ–ಕತ್ತರಿಯಲ್ಲಿ ಹಾರಿಹೋದರು. ಕೆಲಸವಿಲ್ಲದವರು, ಕೆಲಸಹೋದವರು, ಕೆಲಸವಿದ್ದು ತಿಟಿಪಿಟಿ ಸಂಬಳದವರು ಎಲ್ಲರೂ ಕೂಡಿಯೆ ಹೊರಗಿನಿಂದ ಉರಿಹತ್ತಿದ

ಮನೆಯೊಳಗೆ ಸಿಕ್ಕುಬಿದ್ದು, ಹಾಹಾಕಾರವನ್ನೆಬ್ಬಿಸಿದರು. ಮೇಲೆ, ಖಾನೇಸುಮಾರಿಯ ನಂಬರುಗಳಿಗೆ ಚಳವಳಿಗಾರರ ಬಹಿಷ್ಕಾರದ ಡಾಂಬರು ಅಂಟಿಕೊಂಡಿತು. ಎಲ್ಲ ಕೂಡಿ, ಜುಲುಮೆಯ ಮದುವನ ಮದುವೆಯಂತ್ತೆ ಜನಗಣಸೆಯು ಸರಕಾರದ ಪುರೋಹಿತರಿಂದ ನಡೆಯಿತು.

ಜಗನ್ನಾಥನು ಈ ಸಾರೆ ಅದರಲ್ಲಿ ಮನಸ್ಸು ಹಾಕಲಿಲ್ಲ, ಹಾಕಬೇಕೆಂದರೂ ಪುರಸತ್ತು ಇರಲಿಲ್ಲ. ವಿಮೆಯುಳಿಸುವ ಜನರನ್ನು ಅರಸುತ್ತ ಅವನು ಊರೆಲ್ಲ ತಿರುಗುತ್ತಿದ್ದನು. ನಡುನಡುವೆ ತಾನು ಹಿಂದೆ ಯಾವ ಹಿರಿಹುರುಪಿನಿಂದ ಖಾನೇಸುಮಾರಿಯಲ್ಲಿ ದುಡಿದಿದ್ದನೋ ಅದನ್ನೆಲ್ಲ ನೆನಪಿಗೆ ತಂದು ನಿಡಿದಾದ ಉಸಿರುಬಿಡುತ್ತಿದ್ದನು.

ಇಷ್ಟರಲ್ಲಿ ಗೋದವ್ವನವರು ಜಯರಾಯನ ಮನೆಯಲ್ಲಿ ಹೆಚ್ಚು ದಿನ ಇರುವದು ಮಾನಕ್ಕೆ ಸಾಲದೆ, ತಮ್ಮ ಮನೆಗೆ ತಿರುಗಿ ಬಂದು ಒಲೆ ಹೂಡಿ ಕುಳಿತರು. 'ಇನ್ನೂ ನನಗೆ ನೇಮದ ಗಳಿಕೆ ದೊರೆಯತೊಡಗಿಲ್ಲ. ಮನೆಖರ್ಚನ್ನು ಹೇಗೆ ನೋಡಲಿ?' ಎಂದು ಜಗನ್ನಾಥನು ಚಿಂತೆಗೊಳಗಾದನು. ಆದರೆ ಗೋದವ್ವ ಕೇಳಲಿಲ್ಲ. ಜಯರಾಯನ ತಾಯಿ ಏನೇನೋ ಚುಚ್ಚುಮಾತು ಆಡಿದರಂತೆ. ಅವರಲ್ಲಿ ಒಂದು ಗುಟುಕು ನೀರು ಕುಡಿಯಲಾರೆನೆಂದು ಗೋದವ್ವ ಅತ್ತರು. ಜೀವದ ಸುತ್ತು ಬಂದಿತು. ಕೈಯಲ್ಲಿದ್ದ ನಾಲ್ಕೈದು ರೂಪಾಯಿಗಳಿಂದ ಅಕ್ಕಿ ಬೇಳೆ ತಂದು 'ಹೋಗುವಷ್ಟು ಹೋಗಲಿ' ಎಂದು ಚಕ್ಕಡಿಯನ್ನು ದೂಡಿದನು. ಮುಂದಿನ ವಿಚಾರಮಾಡುವ ಬುದ್ಧಿಯನ್ನೇ ಮೊಂಡುಮಾಡಬೇಕೆಂದು ಕಷ್ಟಬಟ್ಟನು. ಬುದ್ಧಿ ಕೇಳುವದೇ? ಆ ಹಾದಿಯಿಂದಲೇ ಹೋಗಿ ಅವನಿಗೆ ಹುಚ್ಚು ಹಿಡಿಸುವ ವಿಚಾರಕ್ಕೆ ಎಳೆಯುತ್ತಿತ್ತು.

ಇಂಗ್ಲಿಷ್ ಐದನೆಯ ಈಯತ್ತೆಯಲ್ಲಿದ್ದ ಆತನ ತಮ್ಮ, ರಾಘು ಹಿಂದಿನ ಪರೀಕ್ಷೆಯಲ್ಲಿ ಏರಿ ಮಾರ್ಕುಗಳನ್ನು ಪಡೆಯದೆ ಗ್ರೇಸಿನಿಂದ ಪಾಸಾದ್ದರಿಂದ, ಅವನ ಮಾಫಿಯು ರದ್ದಾಗಿತ್ತು. ಆದರೂ ಮುಂದೆ ನೆಟ್ಟಗೆ ಓದಿ, ಪ್ರಗತಿಯನ್ನು ತೋರಿಸಿದರೆ ಹೋದ ಮಾಫಿಯು ಹೊರಳಬಹುದೆಂಬ ಆಸೆಯಿಂದ ಅವನ ಮಾಸ್ತರರು ಕ್ಲಾಸಿನಲ್ಲಿ ಕೂಡಿಸಿಕೊಳ್ಳುತ್ತಿದ್ದರು. ಏಳೆಂಟು ತಿಂಗಳ ಫೀಹಣವು ಕೊಡದೆ ಹಾಗೇ ಉಳಿಯಿತು.

ಆಗ ಹೆಡಾಮಾಸ್ತರರಿಂದ ಎಚ್ಚರಿಕೆ ಬರಲು, ಇದೇ ಹೊತ್ತಿನಲ್ಲಿ ಕ್ಲಾಸಿನ ಮಾಸ್ತರಿಂದ ಒಂದು ಪತ್ರ ತಕ್ಕೊಂಡು, ಬಿಕ್ಕಿಬಿಕ್ಕಿ ಅಳುತ್ತ ರಾಘುವು ಅಣ್ಣನಕಡೆಗೆ ಬಂದನು. 'ಮಾಸ್ತರರು ಬಹಳ ಬೈದರು, ಫೀ ತಗೊಂಡು ಬಂದು ಕ್ಲಾಸಿನಾಗ ಕಾಲಿಡು ಅಂದರು' ಎಂದು ತನ್ನ ಅಳುವಿನ ನಡುವೆ ಅಕ್ಷರನುಂಗುತ್ತ ಹೇಳಿದನು. ಕಿಸೆಯಲ್ಲಿ ಐದು ಆಣೆ ಕೂಡ ಸರಿಯಾಗಿ ಇಲ್ಲದ ಜಗನ್ನನು ಇಪ್ಪತ್ತೈದು ರೂಪಾಯಿಗಳನ್ನು ಎಲ್ಲಿಂದ ಕೊಡಬೇಕು? 'ಸಾಲಿ ಸಾಕಿನ್ನ. ಮನಿಯೊಳಗೆ ಬೀಳು' ಎಂದು ನಿರ್ವಾಹವಿಲ್ಲದೆ ಆಕ್ಕಸದಿಂದ ಆಡಿದನು.

ಮುಂದೆ ಮೂರುನಾಲ್ಕು ದಿನಗಳಲ್ಲಿಯೆ ಹಡೆದೆವ್ವ ಗುಡಿಗೆ ಹೋಗಿಬಂದು, ಗಂಡುಮಗುವಿನೊಡನೆ ಅಂಬಕ್ಕ ಗೆಲವೂರಿಗೆ ಬಂದಳು. ತೌರುಮನೆಯವರು ಹಳ್ಳಿಗರಾದರೂ ಎಷ್ಟೋ ಸೋಸಿನಿಂದ ತೊಟ್ಟಿಲ ಬಟ್ಟಲ ಮಾಡಿಕೊಂಡು ಜಗನ್ನನ ಮನೆಯಲ್ಲಿ ಕಾಲಿಟ್ಟರು. ಹೆತ್ತ ನಿಬ್ಬಣವಾಗಬೇಕು; ಹೋಳಿಗೆತುಪ್ಪದ ಊಟವಾಗಬೇಕು; ತಾಸೆ ಬಜಂತ್ರಿಯ ಸಪ್ಪಳವು ಚಿಕ್ಕೆಗಳ ಕಿವಿಮುಟ್ಟಿ ಎಲ್ಲರ ಕಣ್ಣಲ್ಲಿ ನಡುವಂತೆ ತಾಯಿಮಕ್ಕಳ ಮೆರವಣಿಗೆಯಾಗಬೇಕು. ಗೋದವ್ವನವರಿಗೆ ಮೊಮ್ಮಗನನ್ನು ಕಂಡ ಸಂಭ್ರಮದಲ್ಲಿ ಉಳಿದ ಚಿಂತೆಗಳು ಕೆಲಹೊತ್ತು ಅಡಗಿದವು. ಮನೆತುಂಬ ಗೊಂದಲವೇ ಎದ್ದಿತು. ಜಗನ್ನನು ಇದನ್ನು ನೋಡಿ ಸ್ತಬ್ಧನಾದನು. ಅವನ ಸೈರಣೆಯು ಕೆರೆಯೊಡೆಯುಬಂದಿತ್ತು. 'ಈಗ ಯಾರು ಬಾ ಎಂದಿದ್ದರು?' ಎಂದು ಹಾಗೆ ಹೀಗೆ ಒದರಾಡಿದನು. ಅದಾವದನ್ನೂ ಕೇಳದೆ ಗೋದವ್ವ ಮೊದಲು ಕೂಸನ್ನು ತಂದು ಅವನ ತೊಡೆಯ ಮೇಲಿಟ್ಟು 'ಮಗನ್ನ ನೋಡು ಜಗಣ್ಣ. ಅಪರೂಪವಾಗಿ ಹುಟ್ಟೇದ' ಎಂದರು. ಹೇಳಿದ್ದಕ್ಕೆ ನೋಡಿದನು, ಬಾಯಿತೆಗೆದು ಕಣ್ಣು ಮುಚ್ಚಿ ಚೀರಹತ್ತಿತು. 'ತಗೊಳ್ರಿ, ಸಾಕು. ನನ್ನ ದುಃಖಗಳನ್ನೆಲ್ಲ ಗಂಟು ಕಟ್ಟಿ ಮಾಡಿದ ಪಾಪದ ಮುದ್ದೆಯಂತೆ ಹುಟ್ಟಿದೆ!' ಎಂದು ತಿರುಗಿ ಕೊಟ್ಟನು. ಜಯರಾಯನ ಜುಲುಮೆಯಿಂದ ಒಂದು ದಿವಸದಲ್ಲಿ—ಸೊಗಸಿಲ್ಲದೆ—ಹೆತ್ತ ನಿಬ್ಬಣ ತೀರಿ ಬೀಗರು ತಿರುಗಿದರು. ಜಗನ್ನನ ಪ್ರಪಂಚವು ಬೆಳೆಯಿತು.

ತನ್ನ ಯಜಮಾನರಿಗೆ ಏನೋ ನೌಕರಿ ಹತ್ತಿದೆಯೆಂದು ಯಾರಿಂದಲೋ ಕೇಳಿ, ಗಂಡಸುಮಗನ ತಾಯಿಯಾದ ಅಂಬಕ್ಕ ಒಳ್ಳೇ ಉಬ್ಬಿನಲ್ಲಿದ್ದಳು. 'ತನಗೆ ಸೀರೆ ಬೇಕು, ಕುಪ್ಪಸಕ್ಕೆ ಖಣಬೇಕು, ಮೊದಲಿನವೆಲ್ಲ ಹರಿದಿವೆ' ಎಂದು ರಾತ್ರಿಗೊಮ್ಮೆ ಗಂಡನ ಭೆಟ್ಟಿಯಾದಾಗ ಜಿಕೀರು ಮಾಡುತ್ತಿದ್ದಳು. 'ಹೂ. ಹೂ.' ಎನ್ನುತ್ತ ಜಗಣ್ಣ ಮುಂದೆ ಹಾಕಿದನು. ಕೊನೆಗೊಮ್ಮೆ 'ನನ್ನ ಪಾಟ್ಲಿಗೋಟು ತಂದುಕೊಡಿರಿ—ಬತ್ತೀ ಇಟ್ಟದ್ದು' ಎಂದು ಅಬ್ಬರಿಸಿ ಕೇಳಿದಳು ಜಗಣ್ಣನಿಗೆ ತಡೆಯದಾಯಿತು, ಒಳ್ಳೆಯವಳು ಗಂಟುಬಿದ್ದಿ. ನನಗೊಂದು ಹತ್ತಿದೆ—ನಿನಗೊಂದು, ಮೊದಲು ಹೊಟ್ಟೆಗೆ ತಿನ್ನಲಿಕ್ಕೆ ಇಲ್ಲ, ನೀನು ವಸ್ತ್ರಹಾಕಿಕೊಂಡು ಮೆರೆಯಬೇಕೆನ್ನುವಿ. ನಿನ್ನ ಪಾಟ್ಲಿಗೋಟು ಮಾರಿಹೋದವು. ಜಯರಾಯನ ಸಾಲ ತೀರಿಸಲಿಕ್ಕೆ' ಎಂದನು. ಅಂಬಕ್ಕ ರೊಯ್ಯೋ ಎಂದು ಅಳತೊಡಗಿದಳು. ಜಗಣ್ಣನಿಗೆ ಎದ್ದು ಓಡಿಹೋಗಬೇಕೆನ್ನಿಸಿತು.

ಮುಂದೊಂದು ದಿನ, ಏಮೆಯಿಳಿಸುವ ಪುಣ್ಯವಂತರನ್ನು ದೊರಕಿಸಬೇಕೆಂದು ಮನೆಮನೆ ತಿರುಗಿ,ಬಿಸಿಲಲ್ಲಿ ಮುಖಬಾಡಿಸಿಕೊಂಡು, ಯಾರೂ ಒಪ್ಪದಿರಲು ತಿರುಗಿ ಮನೆಸೇರಿ, ಜಗಣ್ಣ ಪಡಸಾಲೆಯಲ್ಲಿ ಕುಳಿತಿದ್ದನು. ಒಳಗಿನಿಂದ ಗೋದವ್ವ ತಡವರಿಸುತ್ತ ಬಂದು ಅವನ ಮುಂದೆ ಕುಳಿತು ಸೆರಗುಮುಚ್ಚಿ ಅಳಹತ್ತಿದರು. 'ಏನು? ಯಾಕೆ?' ಎನ್ನುತ್ತ ಜಗಣ್ಣನು ಹುಚ್ಚುಗಾಬರಿಹೊಂದಿದನು. ಎಷ್ಟೊತ್ತಿನಮೇಲೆ ಹೇಳಿದರು: 'ಹುಡುಗಿ ಮೈನೆರೆಯಿತು, ಮದವೀ ಕಾಣಲಿಲ್ಲ. ಅವರು ಹೋದರು, ನಾ ಒಬ್ಬಾಕಿ ಎಂದು ಕಣ್ಣುಮುಚ್ಚತೀನೇನೊ' ಈ ಮೊದಲಾಗಿ ಒಂದು ಕಂಬನಿಗೊಂದು ಮಾತು ಹೊರಬಿದ್ದಿತು.

ಜಗಣ್ಣನ ಹಿರಿತಂಗಿ, ಯಮುನೆ, ಹದಿನಾಲ್ಕು ವರ್ಷ ತುಂಬಿ ಬೆಳೆದು ನಿಂತಿದ್ದಳು. ಈಗ ಮೈನೆರೆದದ್ದು ಅವಳ ಆರೋಗ್ಯಕ್ಕೆ ತುಂಬುಕಳೆ ಬಂದ ಲಕ್ಷಣವೇ ಅಲ್ಲವೇ? ಆದರೆ ಮದುವೆಯಾಗದೆ ನೆರೆತದ್ದು ಗೋದವ್ವನವರ ಅಪಾರದುಃಖಕ್ಕೆ ಕಾರಣವಾಯ್ತು. ನಿಜವಾದ ಜಗತ್ತಿನ ದುಃಖಗಳಲ್ಲಿ ರೂಢಿಯದೊಂದು ಬೆರೆತು ಹೊಳೆಗೆ ನೆರೆಬಂದಂತಾಯ್ತು. ಎಲ್ಲರಂತೆ ಮುಚ್ಚಿ ನೀರುಹಾಕುವ ಪರಂಪರೆಯನ್ನು ಗೋದವ್ವ ಪಾಲಿಸ

ಬೇಕೆಂದರು. ಅವಳಿಗೆ ಹೋದಲ್ಲಿ ವರನೋಡಿ, ಬರುವ ಚೈತ್ರದಲ್ಲಿ ಅಕ್ಕೀಕಾಳು ಹಾಕೆಂದು ಜಗಣ್ಣನಿಗೆ ಚಿಟುಗುಮುಳ್ಳಾಡಿಸುವದನ್ನೂ ನಡೆಸಿದರು.

ಜಗಣ್ಣನಿಗೆ ಅಂದಾದ ಸುಖಕವೇದನೆಯನ್ನು ದೇವರೇ ಬಲ್ಲ. ಸಂಜೆಯವರೆಗೆ ಮುಸುಗುಹಾಕಿ ಮಲಗಿಕೊಂಡನು. ಕೆಟ್ಟಕೆಟ್ಟ ಕನಸು ಹಿಂಡುಗಟ್ಟಿ, ಬರುವ ನಿದ್ದೆ ಮುಸುಕಿತು. ಹೊರಟ ಉಗಿಬಂಡೆಯನ್ನು ತಪ್ಪಿಸಿಕೊಂಡಂತೆಯೂ, ಹತ್ತಿದ ಗಾಡಿಯಿಂದ ಕೆಳಗೆ ಧುಮುಕಿದಂತೆಯೂ, ಹುಲಿ ಕರಡಿಗಳ ಬಾಯಿಗೆ ಸಿಕ್ಕು ಸಾಯದಂತೆಯೂ—ಇನ್ನೂ ಬೇರೆಯಾದ ಕನಸುಗಳೂ ಸುಳಿದವು. ಕೊನೆಗೊಂದು ಹಿರಿಗನಸು ತೋರಿಕೊಂಡಿತು.

'ಎಲ್ಲಕಡೆಗೂ ಮಬ್ಬು; ನಡುವೆ ನೆಲದಿಂದ ಗಾಳಿಯಿಂದ ಉರಿನಾಲಿಗೆಗಳು ಎದ್ದು ಒಂದುಕಡೆಗೆ ಕೂಡಿದವು, ದೊಡ್ಡ ಉರಿಗೊಂಡವಾಯ್ತು. ಮಬ್ಬುಗತ್ತಲೆಯೊಳಗಿಂದ ಹೆಂಡಿರುಮಕ್ಕಳನ್ನು ಕಟ್ಟಿಕೊಂಡು, ಎಲ್ಲದಿಕ್ಕಿನಿಂದ ಗಂಡಾಳು ಆ ಉರಿಯಕಡೆ ನುಗ್ಗಿದವು. ಎಲ್ಲರ ಬಾಯಲ್ಲಿ 'ಹಾಹಾ' ಎಂಬ ಕೂಗು. ಹೊಟ್ಟೆಹೊಟ್ಟೆ ಬಡಿಯುವ ಕೈಗಳಿಗೆ ಆಸರಿಲ್ಲ. ಕೈಗೆ ನಿಲುಕುವಂತಿದ್ದ ಪ್ರತಿಯೊಂದು ಉರಿನಾಲಿಗೆಯಮೇಲೆ ಊಟದ ಒಂದು ಹೋಳಿಗೆ ತುತ್ತು; ಪಡೆಯಲೆಂದು ಬೆಂದು ಕೈಚಾಚಿದಂತೆ ನಾಲಿಗೆಯು ಮೇಲೇರಿ ಮುಗಿಲುಮುಟ್ಟಿ ತಿರುಗುತ್ತಿತ್ತು. ಹೋದವರೆಲ್ಲ ಸುಟ್ಟು ಕಪ್ಪಾದರೂ ಸಾಯಲಿಲ್ಲ. ಉರಿಹೊಕ್ಕು ಆ ತುತ್ತಿನಾಸೆಯಿಂದ ಹೆಣಗಿದರು. ಒಂದು ಅಗಳು ಬಾಯಲ್ಲಿ ಬೀಳಲು ಅಷ್ಟಕ್ಕೆ ಬಾಯಚಪ್ಪರಿಸಿ ಮತ್ತೆ ಹೆಣಗಾಡಿದರು. ಜಗಣ್ಣನು ತಾನೂ ತನ್ನ ಮನೆಮಂದಿಯೊಡನೆ ಅಲ್ಲಿ ಓಡಿದನು, ಆ ಜನದಂತೆ ಉರಿಯೊಡನೆ ಗುದ್ದಾಡಿದನು. ಬೇಡಿದ್ದು ದೊರೆಯಲಿಲ್ಲ. ಮುಖವು ಕಪ್ಪಿಟ್ಟಿತು. ಮಬ್ಬಿನಾಚೆಗೆ ಇದ್ದ ಕೆರೆಯೊಂದು ಕಾಣಿಸಿತು 'ಸಾಕಾತು, ಪಾರಾದೆವು' ಎಂದು ಘೋಷವಾಗಿ ಒರಲುತ್ತ ಅಲ್ಲಿ ಹಾರಿಕೊಂಡರು, ಗೋದವ್ವ ಅವರನ್ನು ಕೂಡಿದರು. ಜಗಣ್ಣನಿಗೆ ಅಲ್ಲಿ ಹೋಗಲಾಗಲಿಲ್ಲ; ಉರಿನಾಲಿಗೆಯ ಮೇಲಿನ ತುತ್ತಿನ ಬೆನ್ನುಹತ್ತಿ ಮುಗಿಲವರೆಗೆ ಹೋಗಿ ನೆಲಕ್ಕೆ ಬಿದ್ದನು.'

ಈಗ ಎಚ್ಚರಾಯಿತು, ಗಾಬರಿಹೊಡಿದು ಎದ್ದು ಕುಳಿತನು. ಅದೇ ಟಪಾಲಿನವನು ಬಂದು ವಿಮೆಯ ಕಂಪನಿಯ ಪತ್ರವೊಂದನ್ನು ಕೊಟ್ಟು ಹೋದನು. 'ನಿಮ್ಮಿಂದ ಎರಡುಮೂರು ತಿಂಗಳಾದರೂ ಹೆಚ್ಚು ಕೆಲಸವಾಗಲಿಲ್ಲ. ಏಜನ್ಸಿಯನ್ನು ಇನ್ನೊಬ್ಬರಿಗೆ ಕೊಡಬೇಕಾಗುತ್ತದೆ' ಎಂದು ಅದರಲ್ಲಿತ್ತು. ನಿರಾಶೆಯ ನಾಡಿಗೆ ಈಗ ನೂರುಮೈಲಿನ ವೇಗ ಬಂದಿತು. ವೇಗವೇಗೋ ಕೋಟು ಸಿಗಿಸಿಕೊಂಡು, ಬೀದಿಯಲ್ಲಿ ಬಿದ್ದನು. ಕತ್ತಲೆಯಾಗಿತ್ತು. ಎಲ್ಲಿಗೆ ಹೋಗಬೇಕೆಂಬುದು ತಿಳಿಯದೆ ವಾಚನಾಲಯಕ್ಕೆ ಹೋದನು. ಅಲ್ಲಿ ಕೂಡ ಅವನ ಕಣ್ಣಿಗೆ ಬಿದ್ದ ಸುದ್ದಿಗಳಲ್ಲಿ ಕೆಲಸವಿಲ್ಲದೆ, ತಂದು ಹಾಕದೆ, ವಿಷನುಂಗಿದವರ, ಉರಲು ಹಾಕಿಕೊಂಡವರ ಸುದ್ದಿಗಳೇ ಹೆಚ್ಚಾಗಿದ್ದವು. ಆಯ್ತು, ತನಗೂ ಅದೇ ರಾಜೋಪಾಯವೆಂದು ಹೊರಹೊರಡುವಲ್ಲಿ ಅನಂತ ಬಂದು ನಮಾಧಾನದ ಸಾವಿರಮಾತು ಹೇಳಿ ಮನೆಮುಟ್ಟಿಸಿ ಹೋದನು. ತಾಳ್ಮೆ ತಪ್ಪಿದ ಜೀವ....ಇನ್ನೂ ಹಾಗೇ ಕುದಿಯುತ್ತಿತ್ತು.

ಅಂದೆಯೇ ಫೇಬ್ರುವರಿ ೨೬ನೆಯ ತಾರೀಖು; ಖಾನೇಸುಮಾರಿಯ ಕಡೆಯ ರಾತ್ರಿ. ಊಟಮಾಡದೆ ಹೊರಳುತ್ತ ಬಿದ್ದ ಜಗನ್ನಾಥನಿಗೆ ಜನಗಣನೆಯವರು ತನ್ನ ಮನೆಗೆ ಬರಲು ಅದರ ನೆನಪು ಉಕ್ಕೇರಿ ಬಂದಿತು. ಕೂಡಲೇ ಇಲ್ಲದ ಹುಚ್ಚು ಉತ್ಸಾಹ ತುಂಬಿಕೊಂಡು 'ಈ ಜಗತ್ತಿನಲ್ಲಿ ಖಾನೇಸುಮಾರಿಯನ್ನು ನಾನು ಮಾಡುವೆ. ಯಾರೂ ಎಂದೂ ಮಾಡದಂತೆ ಮಾಡುವೆ!' ಎಂದು ಹೊರಟಿದ್ದನು. ಊರೆಲ್ಲ ಓಣಿ ಓಣಿ ಸುತ್ತಾಡಿದನು. ರಾತ್ರಿಯ ಸದ್ದಿನಲ್ಲಿ ಅಲ್ಲಲ್ಲಿ ಅಳುವ, ಒದರುವ ಸ್ವರಗಳು ಕೇಳುತ್ತಿದ್ದವು. ಅವನ್ನು ಕಿವಿದುಂಬಿ ಕೇಳಿ 'ಇವು ನನ್ನ ಜನಗಣನೆಯಲ್ಲಿ ಬರುವವು. ಆ ಸದ್ದು ಸುಳ್ಳು ಸದ್ದು. ಇದು ಜಗತ್ತು, ಇದು ಜಗತ್ತು!' ಎಂದು ಸಾಗಿದನು. ತಾನು ಹಿಂದೆ ಖಾನೇಸುಮಾರಿಗೆ ಒಪ್ಪಿಸಿಕೊಂಡ ಬೀದಿಯನ್ನೇ ಹೊಕ್ಕನು. ಹಿಂದಿನದೆಲ್ಲ ಅಚ್ಚಳಿಯದೆ ನೆನಪಾಯಿತು. ಕಡೆಯದಾದ ಕುಬೇರರಾಯರ ಮನೆಯಮುಂದೆ ನೋಡುನೋಡುತ್ತ ಒಂದು ಮೂಲೆಗೆ ನಿಂತನು. ಬಾಗಿಲು ತೆರೆಯಿತು. ಹೊರಗೆ ನಿಂತ ಎಕ್ಕಾಗಾಡಿಯಲ್ಲಿ ಬಟ್ಟೆ ಎಲುಬಿನ ಹಂದರವಾದ ಶಾಂತಾ

ಬಾಯಿ ಕಾಲೆಳೆಯುತ್ತ, ಬಿಟ್ಟುಬಿಟ್ಟು ಅಳುತ್ತ ಬಂದು ಕುಳಿತಳು. ಹಿಂದೆ ಬಸವಣ್ಣ ನಡೆದನು. ಬಾಗಿಲಲ್ಲಿ ನಿಂತ ರಾಯರು 'ಹೋಗಿನ್ನು ಹಡೆದವ್ನೇಲೆ ಬೇಕಾದರೆ ಕರೆಸುವೆ' ಎಂದು ಬಾಗಿಲಹಾಕಿಕೊಂಡರು. ಮೇಲಟ್ಟದಲ್ಲಿ ನಿಂತ ಕಾಂತಾಸಾನಿಯವರು ಬಾಯಿತುಂಬಿದ ವೀಳ್ಯದ ಕೆಂಪುರಸವನ್ನು ಕೆಳಗೆ ಉಗುಳಿ ಒಳಗೆ ಮಾಯವಾದರು.

ಜಗಣ್ಣನ ನೋವು ನೂರುಮಡಿಯಾಯ್ತು. ಹುಚ್ಚನಂತೆ ಅಳುತ್ತ ನೆಲಕ್ಕೆ ಕುಸಿಬಿದ್ದನು. 'ರಾಯರ ಪ್ರಪಂಚವು ಕೊನೆಗೆ ಏನಾಯ್ತು? ಸಾಸಿಯ ಪಾಲು!.... ಜಗತ್ತಿನ ಮೇಲೆ ಬೇಕು··ಎಂದು ಇರುವವ ರೆಷ್ಟು ಜನ? ನಾನು ಹಿಂದೆ ತಿಳಿಯದೆ ಪ್ರತಿಜ್ಞೆಮಾಡಿದ್ದೆ' ಎಂದು ಮುಂತಾಗಿ ಬಡಬಡಿಸುತ್ತ ತನ್ನ ಮನೆಕಂಡನು. ಗೋದವ್ವ, ಅಂಬಕ್ಕ ಇನ್ನೂ ಎದ್ದು ಕುಳಿತಿದ್ದರು. 'ಬಾಗಿಲ ತೆಗೆ ಅವ್ವಾ' ಎಂಬ ಅವನ ಧ್ವನಿ ಕೇಳಿ ಗೋದವ್ವ ಧಾವಿಸಿ ಬಂದು 'ಎಲ್ಲಿ ಹೋಗಿದ್ದೆಯೋ ನಮ್ಮಪ್ಪ' ಎನ್ನುತ್ತ ಅಗಳಿ ತೆರೆದು ಜಗಣ್ಣನನ್ನು ಗಟ್ಟಿಯಾಗಿ ಅಮುಚಿ ಅಪ್ಪಿಕೊಂಡರು. ಹಾಲಿಲ್ಲದೆ ಅಳುವ ಕೂಸನ್ನು ಬಿಟ್ಟುಬಂದು ಅಂಬಕ್ಕ ಹೌಹಾರಿ ಅಲ್ಲಿಯೇ ಕಂಬಕ್ಕೆ ನಿಂತಳು. ತಾಯಿ ಕೇಳಿದಳು.

'ಎಷ್ಟು ಹುಡುಕಬೇಕು ಜಗಣ್ಣ, ಎಲ್ಲಿ ಹೋಗಿದ್ದಿ?'

'ನಾನೆಲ್ಲಿ ಹೋಗತೀನಿ? ಯಾಕೆ ಹುಡುಕಿದಿರಿ?'

'ಕೆಟ್ಟ ದಿನಸಗಳಪ್ಪ, ಎಲ್ಲಿಯಾದರೂ ಬಾವಿ ಕೆರೆ....' ಗೋದವ್ವನವರ ನಾಲಿಗೆ ಸೆಳೆಯಿತು.

ಜಗಣ್ಣ ವಿಕಾರವಾಗಿ ಒದರಿ ಹೇಳಿದನು. 'ನಾನೆಲ್ಲಿ ಸಾಯಲಿಕ್ಕೆ ಹೋಗುವೆ? ನಿಮ್ಮನ್ನು ಬಿಟ್ಟು ಎಲ್ಲಿಗೆ ಹೋಗುವೆ? ಸಾಯುವದಿಲ್ಲ. ಆವತ್ತು ಅಪ್ಪನ ನೌಕರಿ ಹೋದಾಗ ಇದೇರಾತ್ರಿ ಸಾಯಲಿಲ್ಲ. ಇವತ್ತು ನನಗೆ ನೌಕರಿ ಇಲ್ಲ ಎಂದು ಸಾಯುವದಿಲ್ಲ. ಇರೋದು ಇದೇ ಸಾಯೋದು, ಇದೇ ಸಾಯೋದು'

ಕೂಸಿನ ಅಳುವಿನಲ್ಲಿ ತಾಯಿ ಅಜ್ಜಿಯರ ಅಳುಸರ ಕೂಡಿಕೊಂಡು ಮನೆಯನ್ನು ತುಂಬಿ ಹೆಚ್ಚಾದವು. ಕೆಲನಿಮಿಷ ಅದನ್ನು ನೋಡಿ

ಒಂದಿಷ್ಟು ಕೂಡ ಕಣ್ಣೀರಿನ ದ್ರವವೊಡೆಯದ ಬಿರುಸಿನಿಂದ ಜಗನ್ನಾನು ತನ್ನಷ್ಟಕ್ಕೆ ಅಂದುಕೊಂಡನು.

'ತಿಳಿಯಿತು. ಒಬ್ಬಿಬ್ಬರಿರಬಹುದು—ಮರಣವೊಂದು ಜ್ವಾಲೆ ಎಂದು ತಿಳಿದು ತಪ್ಪಿಸಿ ಜೀವನಶಾಂತಿಯನ್ನು ಪಡೆಯುವವರು, ಒಬ್ಬಿಬ್ಬರು ಮಾತ್ರ. ಆದರೆ ಅನೇಕರು—ಅಸಂಖ್ಯರು ನಾವೆಲ್ಲ ಜೀವನ-ಜ್ವಾಲೆಯನ್ನು ತಪ್ಪಿಸಿ ಮರಣಶಾಂತಿಯನ್ನು ಬೇಡುತ್ತೇವೆ. ಅದು ದೊರೆಯದೆ ಸತ್ತಂತೆ ಇರುತ್ತೇವೆ! ಇದು ನಿಜ. ಇದೇ ಜಗತ್ತಿನ ನನ್ನ ಖಾನೇಸುಮಾರಿ!!!'

ನಮ್ಮ ಮಾಲೆಯ ಕುಸುಮಗಳು

# ೧ ಸುದರ್ಶನ

ಕ್ರೌ. ಅ. ೧೪೫ ಪುಟಗಳು ಬೆಲೆ ಹನ್ನೆರಡು ಆಣೆ

ಲೇಖಕರು:– **ಆನಂದಕಂದ**

ಈ ಸಾಮಾಜಿಕಕಾದಂಬರಿಯ ವಿಷಯದಲ್ಲಿ ಮೈಸೂರಿನ ಪ್ರಬುದ್ಧ ಕರ್ಣಾಟಕವು ಹೀಗೆ ಹೇಳುವುದು:–

" ಪುಸ್ತಕದಲ್ಲಿ ಎಲ್ಲಿಯೇ ಆಗಲಿ, ದುರ್ಬಲವಾದ, ನಿರಸವಾದ ಅಥವಾ ಮಂಕಾದ ಒಂದು ಪ್ರಕರಣವಿಲ್ಲವೆಂದರೆ ಅತಿಶಯೋಕ್ತಿಯಲ್ಲವೆಂದು ಈ ಅವಲೋಕನಕಾರನ ಭಾವನೆಯು "

ಬೆಂಗಳೂರಿನ ಕ. ಸಾ. ಪರಿಷತ್ಪತ್ರಿಕೆಯು ಹೀಗೆ ಅಭಿಪ್ರಾಯಪಡುವುದು.

" ಲೇಖಕರು ಸಹಜವಾದ ಕವಿಯೆಂಬುದನ್ನು ಅವರ ವರ್ಣನೆಗಳು ತಪ್ಪದೆ ತೋರಿಸುತ್ತವೆ. ಭಾಷೆಯು ಲಲಿತವಾಗಿಯೂ ಮನೋಹರವಾಗಿಯೂ ಇದೆ. ಮುದ್ರಣವು ಅಂದವಾಗಿದೆ. "

# ೨ ನವಿಲುಗರಿ

ಕ್ರೌ, ಅ. ೧೫೦ ಪುಟಗಳು ಬೆಲೆ ಹನ್ನೆರಡು ಆಣೆ.

ಲೇಖಕರು:– ಬೇರೆ ಬೇರೆ ಕತೆಗಾರರು

ಹತ್ತು ಕತೆಗಳಿಂದ ಕೂಡಿದ ಈ ಪುಸ್ತಕದ ಬಗೆಗೆ ಬೆಂಗಳೂರಿನ ಕ. ಸಾ. ಪರಿಷತ್ ಪತ್ರಿಕೆಯು ಹೀಗೆ ಹೇಳುತ್ತದೆ:–

**'ಸಂಪಾದಕರು ಕರ್ಣಾಟಕದ ನಾನಾಪ್ರಾಂತಗಳ ಪ್ರಸಿದ್ಧಪಂಡಿತರನ್ನು ಕಲೆಹಾಕಿ, ಅವರವರಿಗೆ ಸ್ವಭಾವಜನ್ಯವಾದ ರೀತಿಯಲ್ಲಿ ಅವರಿಂದ ಕತೆಗಳನ್ನು ಬರೆಯಿಸಿ, ಅವೆಲ್ಲವನ್ನೂ ಒಂದೇ ಕಡೆಯಲ್ಲಿ ಕೊಟ್ಟಿರುವುದು ಕನ್ನಡಭಾಷೆಗೆ ಬಹಳ ಉಪಕಾ ಮಾಡಿದಂತಾಯಿತೆಂದು ಭಾವಿಸುತ್ತೇವೆ. ಏಕೆಂದರೆ ಕರ್ಣಾಟಕದ ನಾನಾ ಪ್ರಾಂತಗಳ ಕನ್ನಡಭಾಷೆಯ ಸ್ವರೂಪವನ್ನು ಹೋಲಿಸಿ ಗ್ರಂಥಸ್ಥಭಾಷೆಯ ಏಕೀಕರಣವು ನಡೆಯಬೇಕೆಂಬುದನ್ನು ಆಲೋಚಿಸಲು ಇಂತಹ ಗ್ರಂಥಗಳಿಂದ ಅವಕಾಶದೊರೆತಂತಾಗುವುದು'**

ಬಳ್ಳಾರಿಯ '**ನವಸಂದೇಶ**'**ವು** ಎನ್ನುವುದೇನೆಂದರೆ:–

**" ವಿವಿಧ ಬಣ್ಣಗಳ ಹಲವೊಂದು ಭಾಗಗಳು ಒಟ್ಟಾಗಿಸೇರಿ ನವಿಲುಗರಿಗೆ ಒಂದು ಹೊಸ ಸೊಗಸನ್ನು ಕೊಡುವಂತೆ, ಈ ಕಥೆಗಳು ಒಂದೊಂದು ಗುಣದಿಂದ ಕೂಡಿದ್ದು,**

ಒಟ್ಟಿನಲ್ಲಿ ಸಮಾಜದ ಒಂದೊಂದು ಚಿತ್ರವನ್ನು ಹೃದಯಂಗಮವಾಗಿ ತೋರಿಸುತ್ತವೆ. '

**ವಿ. ಸೂ:-** ಮದ್ರಾಸ್ ಸ್ಕೂಲ್‌ಬುಕ್ಸ್ ಲಿಟರೇಚರ್ ಸೊಸೈಟಿಯವರಿಂದ **'ಸುದರ್ಶನ' 'ನವಿಲುಗರಿ'**ಗಳು ಬಹುಮಾನವನ್ನು ಪಡೆದಿವೆ.

## ೩ ತ್ರಿಪುರದಹನ

ಕ್ರಾ. ಅ. ೧೫೦ ಪುಟಗಳು ಬೆಲೆ ಹನ್ನೆರಡು ಆಣೆ

ಲೇಖಕರು:- **ಶ್ರೀ. ಎಂ. ಎ. ದೊರೆಸ್ವಾಮಿ ಅಯ್ಯಂಗಾರ್**
M. A. B. L

ಬೆಂಗಳೂರಿನ ಸುಬೋಧ ಪತ್ರಿಕೆಯು ಈ ಗ್ರಂಥದ ವಿಷಯದಲ್ಲಿ ಅಭಿಪ್ರಾಯ ಪಡುವುದೇನೆಂದರೆ:-

'ಈ ಬಗೆಯ ಕಥಾರಚನೆಯು ನಮ್ಮಲ್ಲಿ ಹೊಸದು. ವಿಚಾರವಂತರು ನಮ್ಮ ಪೌರಾಣಿಕ ಸಮಸ್ಯೆಗಳನ್ನು ಈ ದೃಷ್ಟಿಯಿಂದ ತೆಗೆದುಕೊಂಡು, ಗುಣಗಳ ಉತ್ಕರ್ಷಾಪಕರ್ಷಗಳು ಜಗತ್ತಿನ ಸುಖದುಃಖಗಳಿಗೆ ಹೇಗೆ ಕಾರಣವಾಗುವುವೆಂಬುದನ್ನು ವಿಮರ್ಶಿಸುತ್ತ ಹೋದರೆ, ಅದರಿಂದ ಹೆಚ್ಚು ಪ್ರಯೋಜನವಾಗುವುದು. '

**ಮೈಸೂರು ಸರಕಾರದ ವಿದ್ಯಾಭ್ಯಾಸದ ಇಲಾಖೆಯವರು ಈ ಗ್ರಂಥವನ್ನು ಎಲ್ಲ ಪಾಠಶಾಲೆಗಳ ವಾಚನಾಲಯಗಳಿಗಾಗಿ 'ಮಂಜೂರ್' ಮಾಡಿದ್ದಾರೆ.**

## ೪ ಬಾಳುರಿ ಅಥವಾ ಜೀವನಜ್ವಾಲೆ

ಕ್ರಾ. ಅ. ೧೫೫ ಪುಟಗಳು ಬೆಲೆ ಹನ್ನೆರಡು ಆಣೆ

ಲೇಖಕರು:- **ಪ್ರೊ. ರಂ. ಶ್ರೀ. ಮುಗುಳಿ** M. A. B. T.

ಇಂದಿನ ನಿರುದ್ಯೋಗದ ಸಮಸ್ಯೆಯನ್ನು ಇದ್ದಕ್ಕಿದ್ದಂತೆ ಚಿತ್ರಿಸಿ ತೋರಿಸಿದ ಸಾಮಾಜಿಕ ಕಾದಂಬರಿಯಿದು. ಇದರಲ್ಲಿ ಬರುವ ಪ್ರತಿಯೊಂದು ಪ್ರಮುಖ ಪಾತ್ರಗಳೂ ಒಂದೊಂದು ಬಗೆಯಿಂದ ಬಾಳಿನ ಉರಿಯಲ್ಲಿ ಬೆಂದು ಗೋಳಿಡುವವರೇ, ಜಗಣ್ಣ, ಅನಂತ, ಜಯರಾಯ ಕಾಮಣ್ಣ ಈ ನಾಲ್ಕು ಪಾತ್ರಗಳೆಂದರೆ ಇಂದಿನ ತರುಣ ಜನತೆಯ ಪ್ರತಿನಿಧಿಗಳು.

## ೫ ಬ್ರಾಹ್ಮಣರ ಹುಡುಗಿ

(ಅಚ್ಚಿನಲ್ಲಿದೆ)

ಶ್ರೀ. ಆರ್. ವ್ಯಾಸರಾವ್ ಬೆಂಗಳೂರು

ಆಧುನಿಕ ಬಂಗಾಲಿ ಸಾಹಿತ್ಯದಲ್ಲಿ, ಕಾದಂಬರೀಪ್ರಪಂಚದಲ್ಲಿ ಹೆಚ್ಚು ಹೆಚ್ಚಾಗಿ ಕೇಳಬರುವ ಹೆಸರೆಂದರೆ ಶ್ರೀ ಶರಚ್ಚಂದ್ರ ಚಟ್ಟೋಪಾಧ್ಯಾಯರವರದು. ಅವರು ಬರೆದ 'ಬಾಮುನೇರ ಮೇಯೇ' ಎಂಬ ಕಾದಂಬರಿಯನ್ನು ಅನುಸರಿಸಿ ಬರೆದುದಿದು. ಇದರಲ್ಲಿಯ ಪಾತ್ರಗಳ ಸ್ವಭಾವಪರಿಪುಷ್ಟಿಯನ್ನು ಕಂಡು ಅನುಭವಿಸಿದ ವಾಚಕರು ಮೆಚ್ಚಿ ತಲೆದೂಗದಿರಲಾರರು.

## ನಮ್ಮ ಬಿಡಿಮುತ್ತುಗಳು

೧

## ಕಣ್ಮರೆಯಾದ ಕನ್ನಡ

ಕ್ರಾ. ೮. ೧೨೫ ಪುಟಗಳು　　　　ಬೆಲೆ ಹನ್ನೆರಡು ಆಣೆ

ಲೇಖಕರು:- **ಶ್ರೀ. ಶಂ. ಬಾ. ಜೋಶಿ**

ಎಲ್ಲರೂ ಓದಿ ವಿಚಾರ ಮಾಡಬೇಕಾದ ಗ್ರಂಥ. 'ಮೂಲ ಕರ್ಣಾಟಕವು ಎಲ್ಲಿ?' ಎಂಬುದನ್ನು ಬೇರೆ ಬೇರೆ ದೃಷ್ಟಿಗಳಿಂದ ಸಪ್ರಮಾಣವಾಗಿ ವಿವೇಚಿಸಲಾಗಿದೆ. ಸಂಶೋಧನಾ ಪ್ರಪಂಚದಲ್ಲಿ ಒಂದು ನೂತನ ಕ್ರಾಂತಿಯನ್ನೇ ಉಂಟು ಮಾಡುವ ಪುಸ್ತಕ.

ಇದರ ವಿಷಯದಲ್ಲಿ ಬೆಂಗಳೂರಿನ ಸುಪ್ರಸಿದ್ಧ ವಿದ್ವನ್ಮಣಿಗಳಾದ **ಶ್ರೀಮಾನ್ ಡಿ. ವಿ. ಗುಂಡಪ್ಪನವರು** ಗ್ರಂಥಕರ್ತರಿಗೆ ಬರೆದಿರುವುದೇನೆಂದರೆ:-

**'ತಾವು ಮಾಡಿರುವ ಕೆಲಸವು ಬಹು ಬೆಲೆಯುಳ್ಳದೆಂದು ನನಗೆ ತೋರುತ್ತದೆ. ತಮ್ಮ ಸಿದ್ಧಾಂತಗಳು ನನ್ನ ಬುದ್ಧಿಗೆ ತೋಚಿದ ಮಟ್ಟಿಗೆ ಸಾಧುವಾಗಿರುವಂತೆ ಕಾಣುತ್ತದೆ. ಅದಕ್ಕೆ ತಾವು ಕೊಟ್ಟಿರುವ ಪ್ರಮಾಣಗಳು ಬಲವಾಗಿವೆ.'**

# ನಮ್ಮ ಪೋಷಕರು ಮತ್ತು ಸಹಾಯಕರು

ನಮ್ಮ ಗ್ರಂಥಮಾಲೆಗೆ ಪೋಷಕರಾಗಿಯೂ ಸಹಾಯಕರಾಗಿಯೂ ನೆರವಿತ್ತು ನಮ್ಮನ್ನು ಪ್ರೋತ್ಸಾಹಿಸಿದ ಮಹನೀಯರಿಗೆ ನಾವು ತುಂಬ ಕೃತಜ್ಞರು. ಇದರಂತೆಯೇ ಅಭಿಮಾನಿಗಳಾದ ಕನ್ನಡಿಗರೆಲ್ಲರೂ ಪೋಷಕರಾಗಿಯೊ, ಸಹಾಯಕರಾಗಿಯೊ, ಚಂದಾದಾರರಾಗಿಯೊ ಮಾಲೆಯನ್ನು ಪ್ರೋತ್ಸಾಹಿಸಬೇಕಾಗಿ ವಿನ್ನಹ.

**ಪೋಷಕರು**

೧. ಶ್ರೀ. ಚಂದರಗಿ ಗೋವಿಂದರಡ್ಡಿಯವರು ಧಾರವಾಡ ೧೦-೦-೦

೨. ,, ಬಳ್ಳಾರಿ ವೀರಭದ್ರಪ್ಪನವರು, ವರ್ತಕರು
ಗದಗ ೧೦-೦-೦

೩. ,, ತಿಪರಾಶಿ ಗೋವಿಂದಗೌಡರು ಜಮೀನುದಾರರು
ಉಗುರಗೊಳ್ಳ ೧೦-೦-೦

೪. ,, ಸಿ. ಸಿ. ಅಬಕಾರ ವರ್ತಕರು ಬನಹಟ್ಟಿ ೮-೮-೦

**ಸಹಾಯಕರು**

೧ ಶ್ರೀ. ಎಸ್. ಎಸ್. ಕೊಯಿಮತ್ತೂರು, ರಿಟಾಯರ್ಡ್
ಕಲೆಕ್ಟರ್ ಧಾರವಾಡ ೫-೦-೦

೨ ಶ್ರೀ. ಜಿ. ವ್ಹಿ. ಜೇವೂರ ಐ. ಸಿ. ಎಸ್. ಡೈರೆಕ್ಟರ್
ಜನರಲ್ ೫-೦-೦

೩ ಪ್ರೊ. ಎಸ್. ಎಸ್. ಬಸವನಾಳ M. A.
ಕೆ. ಎಲ್. ಇ. ಕಾಲೇಜು ಬೆಳಗಾಂವಿ ೫-೦-೦

೪ ಪ್ರೊ. ಎ. ಟಿ. ಸಾಸನೂರ M. A.
ಕರ್ನಾಟಕ ಕಾಲೇಜು ಧಾರವಾಡ ೫-೦-೦

೫ ಪ್ರೊ. ವ್ಹಿ. ಕೆ. ಗೋಕಾಕ M. A.
ಫರ್ಗ್ಯೂಸನ್ ಕಾಲೇಜು ಪುಣೆ ೫-೦-೦

೬ ಪ್ರೊ. ರಂ. ಶ್ರೀ. ಮುಗಳಿ M. A. B. T.
ವಿಲಿಂಗ್ಡನ್ ಕಾಲೇಜು ಸಾಂಗಲಿ ೫-೦-೦

೭ ಡಾ. ಎಸ್. ಸಿ. ನಂದೀಮಠ M. A. PHD.
ಪ್ರಿನ್ಸಿಪಾಲ್ ಕೆ. ಎಲ್. ಇ. ಕಾಲೇಜು ಬೆಳಗಾಂವಿ ೫-೦-೦

೮ ಶ್ರೀ. ಜಿ. ಜಿ. ಹುಲಕುಂದ ಬಿ. ಎ. ಎಲ್ ಎಲ್. ಬಿ.
ವಕೀಲರು ಅಥಣಿ ೫-೦-೦
೯ ,, ದಾತಾರ ಬಳವಂತರಾಯರು ಬಿ. ಎ.
ವಕೀಲರು ಬೆಳಗಾಂವಿ ೫-೦-೦
೧೦. ,, ಎಸ್. ವಿ. ಅಡ್ಡಣಗಿ ಬಿ. ಎ. ಎಲ್ ಎಲ್. ಬಿ.
ವಕೀಲರು ಬೆಳಗಾಂವಿ ೫-೦-೦
೧೧. ,, ಅಶ್ವತ್ಥರಾವ ಮಹಿಷಿ, ವಕೀಲರು ಶಿರಹಟ್ಟಿ ೫-೦-೦
೧೨ ,, ನಾರಾಯಣರಾವ ಜೋಶಿ ಬಿ. ಎ. ಎಲ್ ಎಲ್. ಬಿ
ವಕೀಲರು ಬೆಳಗಾಂವಿ ೫-೦-೦
೧೩ ,, ಎಮ್. ಎಸ್. ಬ್ಯಾಳಿ ಬಿ. ಎ. ಎಲ್ ಎಲ್. ಬಿ.
ವಕೀಲರು ಬೆಳಗಾಂವಿ ೫-೦-೦
೧೪ ,, ಆರ್. ಎ. ಜಹಾಗೀರದಾರ್ ಎಂ. ಎ. ಎಲ್ಎಲ್ ಬಿ
ಹೈಕೋರ್ಟ ವಕೀಲರು ಮುಂಬಯಿ ೫-೦-೦
೧೫. ,, ಮಧ್ವರಾವ ಕಬ್ಬೂರ್ ಎಂ ಎ ಎಲ್ಎಲ್ ಬಿ.
ವಕೀಲರು ಧಾರವಾಡ ೫-೦-೦
೧೬ ,, ಎನ್ ಆರ್ ಕುಲಕರ್ಣಿ ಎಂ ಎ ಎಲ್ ಎಲ್ ಬಿ
ವಕೀಲರು ಬೈಲಹೊಂಗಲ ೫-೦-೦
೧೭ ಡಾ. ಕಮಲಾಪೂರ ಕಾಂತರಾಯರು M. B.B.S.
ಧಾರವಾಡ ೫-೦-೦
೧೮ ಡಾ. ಎಚ್. ಆರ್. ತೆರಗೊಂಡಿ L. C. P. S. ಬೆಳಗಾಂವಿ ೫-೦-೦
೧೯ ದಿವಂಗತ ಆರ್. ಪಿ. ಪಂಡಿತ M. A. LL. B.
ಅಸಿಸ್ಟಂಟ್ ಕಮೀಶನರ್ ಬೆಳಗಾಂವಿ ೫-೦-೦
೨೦ ಶ್ರೀ. ಗುಂಜೀಕರ ಧೀರೇಂದ್ರರಾಯರು ಬಿ. ಕಾಮ್
ಸದರ್ನ್ ಮರಾಠಾ ಬ್ಯಾಂಕ್ ಧಾರವಾಡ ೫-೦-೦
೨೧ ,, ಮೋಹನರಾವ ಕರೀಕಟ್ಟಿ ಬಿ ಎ ಸಬ್‌ರಜಿಸ್ಟ್ರಾರ್
ಬೆಳಗಾಂವಿ ೫-೦-೦
೨೨ ,, ಪಿ. ಕೆ. ಎಸ್. ರಾವ್ ರಂಗೂನ್ ೫-೦-೦
೨೩ ,, ಎಸ್ ವಿ ಗಿಡ್ಡನವರ ಬಿ ಎ. ಮ್ಯು. ಚೀಫ್ ಆಫೀಸರ
ಗುಳೇದಗುಡ್ಡ ೫-೦-೦

೨೪ ,, ಎಂ ರಾಮಚಂದ್ರನ್ ಬಿ. ಎ. ಬಿ. ಟಿ.

ಅಡ್ಮಿನ್‌ಸ್ಟ್ರೇಟಿವ್ ಆಫೀಸರ್ ಡಿ. ಎಲ್. ಬಿ ಬೆಳಗಾಂವ ೫-೦-೦

೨೫ ,, ಜಿ. ಜಿ. ಬೀಳಗೀಕರ ಸಿಗ್ನಲ್ಲರ್ ಭುಸಾವಳ ೫-೦-೦

೨೬ ,, ಬಿ. ಎನ್. ಕುಲಕರ್ಣಿ ಮುಗದ ಫಾರ್ಮ್ ೫-೦-೦

೨೭ ,, ಎಚ್. ವರದಾಚಾರ್ಯರು ಗೊರೂರು ೫-೦-೦

೨೮ ,, ಶಾಮರಾವ ಗಜೇಂದ್ರಗಡ ಬಿ. ಎ. ವಿಜಾಪುರ ೫-೦-೦

೨೯ ,, ಮನೋಹರರಾವ ದೇಶಪಾಂಡೆ ಬಿ. ಎ.

ಎಸ್. ಟಿ. ಸಿ. ಹೈಸ್ಕೂಲ್ ಹೆಡ್‌ಮಾಸ್ತರ್ ಅಥಣಿ ೫-೦-೦

೩೦ ,, ಎಚ್. ಬಿ. ಕೊಣ್ಣೂರ ಎಂ ಎ ವಿಜಾಪುರ ೫-೦-೦

೩೧ ,, ಆರ್. ಬಿ. ಅಭ್ಯಂಕರ್ ಬಿ ಎ ಎಲ್ ಎಲ್ ಬಿ

ವಕೀಲರು ಮಿರಜಿ ೫-೦-೦

೩೨ ,, ಬಿ. ಡಿ. ಅಕ್ಕಿ ಬಿ ಎ ಎಲ್ ಎಲ್ ಬಿ ವಕೀಲರು

ವಿಜಾಪುರ ೫-೦-೦

೩೩ ,, ಅಪ್ಪಯ್ಯ ಕುಲಕರ್ಣಿ ಗದಗ ೫-೦-೦

೩೪ ಶ್ರೀಮಂತ ಕೆ ಎಸ್ ಸರ್‌ದೇಸಾಯಿ ರಕ್ಕಸಗಿ ೫-೦-೦

೩೫ ಶ್ರೀ. ವಾಮನರಾವ ಮಾಸ್ತರರು ವಿಶ್ವಗುಣಾದರ್ಶ

ನಾಟಕ ಮಂಡಳಿ ೫-೦-೦

೩೬ ,, ಜಿ ಎಸ್ ಮಂಜುನಾಥಯ್ಯಾ ಕಾಫಿಪ್ಲಾಂಟರ್

ಸುಂಟಿಕೊಪ್ಪಲು ಕೊಡಗು ೫-೦-೦

೩೭ ,, ಕಲ್ಲಪ್ಪಾ ಸೋಮಪ್ಪಾ ಗುಂಜಾಳ, ವರ್ತಕರು

ಧಾರವಾಡ ೫-೦-೦

೩೮ ,, ಮಳಯೆ ಗೋವರ್ಧನರಾಯರು ಧಾರವಾಡ ೫-೦-೦


೩೯ ,, ಪ್ರಲ್ಹಾದ ಕೃ. ಕಡ್ಲಬಾಳ ಹೊಸಪೇಟೆ,

ದಕ್ಷಿಣಾಫೆಲೊ ಕರ್ಣಾಟಕ ಕಾಲೇಜು ಧಾರವಾಡ ೫-೦-೦

೪೦ ,, ಲಕ್ಷ್ಮಣ ಜಿ. ಮಕ್ತಾಲಿ ಫರ್ಗ್ಯೂಸನ್

ಕಾಲೇಜ್ ಪುಣೆ ೫-೦-೦

೪೧ ,, ದೇವರಮನೆ ಆನಂದರಾಯರು ಧಾರವಾಡ ೫-೦-೦


PEARLITE
VANISHING CREAM
The magic beauty of this Cream is its invisibility to the naked-eye and the Natural tone imparted to the skin.
Manufactured by the makers of the Famous Mysore Sandal Soap
GOVT. SOAP FACTORY
BANGALORE

# ಕಾಫಿ! ಚಂಚಲ ಬತ್ತಿ!! ಕುಂತಲಾಯಿನ್ !!

**ಪ್ರಿಯಬಾಂಧವರೇ,**

ತೆರಪಿಲ್ಲದೇ ಮಳೆ ಸುರಿಯುತ್ತಿರುವಾಗ ಬಿಸಿಬಿಸಿ ಕಾಫೀ ಬೇಕಲ್ಲವೇ? ಹಾಗಾದರೆ ರುಚಿಯಲ್ಲಿಯೂ, ಸುವಾಸನೆಯಲ್ಲಿಯೂ ಮಿಗಿಲಾದ ಮತ್ತು **ಶ್ರೀಕೃಷ್ಣ**ನಂತೆ ಎಲ್ಲರಿಗೂ ಅತಿ ಪ್ರಿಯಕರವಾದ **"ಶ್ರೀಕೃಷ್ಣ ಕಾಫಿಪುಡಿ"**ಯನ್ನೇ ಯಾವಾಗಲೂ ಕೊಳ್ಳಿರಿ. ಅಗ್ಗದ ಬಲೆಗೆ ಬಿದ್ದು ಕೀಳುಪುಡಿಯನ್ನು ಕೊಳ್ಳಬೇಡಿರಿ.

ನಿಮ್ಮ **ದಿಪಾವಳಿ ಹಬ್ಬಹುಣ್ಣಿವೆ**ಗಳಲ್ಲಿ ಬೇಕಾದ ಸುವಾಸನೆಯ ಸುರಿಮಳೆಯನ್ನು ಬೀರುವ **ಚಂಚಲ ಊದಬತ್ತಿ**ಗಳು ನಮ್ಮಲ್ಲಿಯೂ ಬೇರೆ ಎಲ್ಲ ಸ್ಟೇಶನರ ಅಂಗಡಿಗಳಲ್ಲಿಯೂ ಸಿಗುತ್ತವೆ.

Sir **P. C. Roy** KT. T. C. I. E. ಇವರಿಂದ ಶಾಸ್ತ್ರೀಯ ರೀತಿಯಿಂದ ಪರಿಶೋಧಿಸಲ್ಪಟ್ಟು ಸರ್ಟಿಫಿಕೇಟ್ ಪಡೆದಂಥ ಮತ್ತು **ಕವಿಸಾರ್ವಭೌಮ RABINDRANATH TAGORE** ಇವರಿಂದ ಹೊಗಳಲ್ಪಟ್ಟ **ಕುಂತಲಾಯಿನ್** ಹೇರ್ ಆಯಿಲನ್ನೇ ಉಪಯೋಗಿಸಿರಿ. ಇದು ಮಿದುಳಿನ ಎಲ್ಲ ವಿಕಾರಗಳನ್ನು ಹೋಗಲಾಡಿಸುತ್ತದೆ. ಮತ್ತು ಕೂದಲದ ಬೆಳವಣಿಗೆಗೆ ಸಹಕಾರಿಯಾಗಿರುತ್ತದೆ.

**Agents & Stockist**

**K. P. KULKARNI & CO.,**

Market Road, DHARWAR

---

# ಅರುಣೋದಯ

ಬೆಳಗಾಂವಿಯಲ್ಲಿ ಹೊರಡುವ ಉತ್ತಮ ತರಗತಿಯ ವಾರಪತ್ರಿಕೆಯು ಕನ್ನಡಿಗರೆಲ್ಲರೂ ಚಂದಾದಾರರಾಗಿ ನೆರವಾಗಬೇಕು. ವಾ. ಚಂ. ೨-೧೪-೦

ಸಂಪಾದಕ ಅರುಣೋದಯ

ಬೆಳಗಾಂವಿ